ಶುಕ್ರವಾರ, ನವೆಂಬರ್ 1, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 303 | ಪುಟ 20
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹83,790 (ಬೆಂಗಳೂರು)	₹1.02 ಲಕ್ಷ (ಬೆಂಗಳೂರು)	84.07

ಸಿನಿಮಾ ಪುರವಣಿ
‘ನಮ್ಮಿಂದ ಇಂಡಸ್ಟ್ರಿಯಲ್ಲ, ಇಂಡಸ್ಟ್ರಿಗೆ ನಾವು’ ‘ಬಘೀರ’ ಚಿತ್ರದ ನಾಯಕ ನಟ ಶ್ರೀಮುರಳಿ ಮಾತು

ಗ್ಯಾರಂಟಿ ವಿಫಲವಾದರೆ 10 ವರ್ಷ ವನವಾಸ–ರಾಜ್ಯ ನಾಯಕರಿಗೆ ಎಐಸಿಸಿ ಅಧ್ಯಕ್ಷ ಎಚ್ಚರಿಕೆ

‘ಶಕ್ತಿ’ ಪರಿಷ್ಕರಣೆ: ಖರ್ಗೆ ಅಸಹನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಕ್ತಿ’ ಯೋಜನೆ ಪರಿಷ್ಕರಣೆ ಕುರಿತ ಡಿ.ಕೆ. ಶಿವಕುಮಾರ್ ಮಾತಿಗೆ ಅಸಹನೆ ವ್ಯಕ್ತಪಡಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗೆ ಎಚ್ಚರಿಕೆ ನೀಡಿದರು.

ಈ ಬೆನ್ನಲ್ಲೇ, ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ನಾಯಕರು ಸರ್ಕಾರದ ನಡೆಯ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಇಂದಿರಾ ಗಾಂಧಿ ಪುಣ್ಯ ಸ್ಮರಣೆ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್ ಜನ್ಮದಿನದ ಅಂಗವಾಗಿ ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅಕ್ಕಪಕ್ಕದಲ್ಲಿ ಕುಳಿತಿದ್ದರು. ‘ಶಕ್ತಿ ಯೋಜನೆ’ ಮರುಪರಿಶೀಲನೆ ಕುರಿತು ನೀಡಿದ್ದ ಹೇಳಿಕೆ ಪ್ರಸ್ತಾಪಿಸಿದ ಖರ್ಗೆಯವರು, ‘ಐದು ಗ್ಯಾರಂಟಿಗಳಲ್ಲಿ ಒಂದು ಗ್ಯಾರಂಟಿ ಕೈಬಿಡುತ್ತೇವೆ ಎಂದು ನೀನೇನೋ ಹೇಳಿರುವೆ’ ಎಂದು ಶಿವಕುಮಾರ್ ಅವರನ್ನು ಪ್ರಶ್ನಿಸಿದರು.

> **ಶಕ್ತಿ ಯೋಜನೆ ಪರಿಷ್ಕರಣೆ ಪ್ರಸ್ತಾವವಿಲ್ಲ. ‘ಹಣ ಕೊಟ್ಟು ಪ್ರಯಾಣಿಸಲು ಸಿದ್ಧರಿದ್ದೇವೆ’ ಎಂಬ ಕೆಲವರ ಅನಿಸಿಕೆಗಳನ್ನು ಶಿವಕುಮಾರ್ ಪ್ರಸ್ತಾಪಿಸಿದ್ದಾರಷ್ಟೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

9ನೇ ಪುಟ ನೋಡಿ

ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ಗ್ಯಾರಂಟಿ’ ನಿಲ್ಲಿಸುವ ಪ್ರಶ್ನೆಯೇ ಇಲ್ಲ’

‘ಶಕ್ತಿ ಸೇರಿದಂತೆ ಯಾವುದೇ ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸುವ ಪ್ರಶ್ನೆಯೇ ಇಲ್ಲ. ನಾನು ಬುಧವಾರ ನೀಡಿದ್ದ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ, ತಿರುಚಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಆರ್ಥಿಕವಾಗಿ ಸದೃಢರಾಗಿರುವವರು, ಐ.ಟಿ, ಬಿ.ಟಿ ಉದ್ಯೋಗಿಗಳು, ಎಂಎನ್‌ಸಿ ಕಂಪನಿಗಳ ಸಿಬ್ಬಂದಿ ಸೇರಿದಂತೆ ಅನೇಕ ಮಹಿಳೆಯರು ತಮಗೆ ಬಸ್‌ಗಳಲ್ಲಿ ಉಚಿತ ಪ್ರಯಾಣದ ಅಗತ್ಯ ಇಲ್ಲ ಎಂದಿದ್ದಾರೆ. ಈ ವಿಚಾರದ ಬಗ್ಗೆ ನಾನು ಸಚಿವರ ಜತೆ ಚರ್ಚೆ ಮಾಡುತ್ತೇನೆ ಎಂದಷ್ಟೆ ಹೇಳಿದ್ದೆ’ ಎಂದು ವಿವರಿಸಿದರು.

‘ಈ ಯೋಜನೆ ಸೌಲಭ್ಯ ಬೇಡ ಎಂದು ಹೇಳುವವರಿಗೆ ಬಲವಂತ ಮಾಡಲು ಸಾಧ್ಯವೇ? ಅವರ ಸಂಖ್ಯೆ ಶೇಕಡಾ 7ರಿಂದ ಶೇ 8ರಷ್ಟು ಇರಬಹುದು’ ಎಂದರು.

9ನೇ ಪುಟ ನೋಡಿ

‘ಗ್ಯಾರಂಟಿ ಸ್ಥಗಿತಕ್ಕೆ ಕಳ್ಳನಿಗೆ ಪಿಳ್ಳೆನೆವ’

‘ಲೋಕಸಭಾ ಚುನಾವಣೆ ಬಳಿಕ ‘ಗ್ಯಾರಂಟಿ’ ಇರಲ್ಲ ಎಂದು ನಾವು ಹೇಳಿದ್ದೆವು. ಈಗ ಅದರ ಮೊದಲ ಹೆಜ್ಜೆಯನ್ನು ಸರ್ಕಾರ ಇರಿಸಿದೆ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗ್ಯಾರಂಟಿ’ ಯೋಜನೆಗಳ ಪೈಕಿ ‘ಶಕ್ತಿ’ ಮತ್ತು ಪಡಿತರ ಯೋಜನೆಗಳು ಟುಸ್ ಪಟಾಕಿಯಾಗಲಿವೆ. ಡಿ.ಕೆ.ಶಿವಕುಮಾರ್ ಅವರಿಗೆ ಮಹಿಳೆಯರು ಫೋನ್ ಕರೆ ಮಾಡಿ ಯೋಜನೆ ಬೇಡವೆಂದು ತಿಳಿಸಿದ್ದಾರಂತೆ. ಕಳ್ಳನಿಗೆ ಪಿಳ್ಳೆ ನೆವ ಎಂಬಂತೆ ಶಕ್ತಿ ಯೋಜನೆ ರದ್ದುಪಡಿಸಲು ಈ ರೀತಿ ಕಾರಣ ಹೇಳುತ್ತಿದ್ದಾರೆ’ ಎಂದರು.

9ನೇ ಪುಟ ನೋಡಿ

‘ಗ್ಯಾರಂಟಿ ನಿಲ್ಲಿಸಲು ಮೊದಲ ಹೆಜ್ಜೆ’

ಚನ್ನಪಟ್ಟಣ: ‘ಶಕ್ತಿ ಯೋಜನೆಯನ್ನು ನಿಲ್ಲಿಸಿ ಎಂದು ಮಹಿಳೆಯರು ಡಿ.ಕೆ.ಶಿವಕುಮಾರ್ ಅವರ ಕನಸಿನಲ್ಲಿ ಬಂದು ಕೇಳಿದ್ದರೇ? ಅಥವಾ ದೇವರು ಬಂದು ಹೇಳಿದ್ದರೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ಇಲ್ಲಿನ ತಿಟ್ಟಮಾರನಹಳ್ಳಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಐದು ಗ್ಯಾರಂಟಿ ಯೋಜನೆಗಳನ್ನು ಒಂದೊಂದಾಗಿ ನಿಲ್ಲಿಸಲು ಇದು ಮೊದಲ ಹೆಜ್ಜೆ ಅಷ್ಟೇ. ಇನ್ನು ಕೆಲವೇ ದಿನಗಳಲ್ಲಿ ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಯುವ ನಿಧಿ ಕಾರ್ಯಕ್ರಮಗಳನ್ನು ನಿಲ್ಲಿಸಲಿದ್ದಾರೆ. ಅದಕ್ಕೆ ಮರು ಪರಿಶೀಲನೆ ಎಂಬ ಪೀಠಿಕೆ ಹಾಕಿದ್ದಾರೆ’ ಎಂದರು.

ಜಯ ಹೇ ಕರ್ನಾಟಕ ಮಾತೆ...

‘ಕರ್ನಾಟಕ’ಕ್ಕೆ ಸುವರ್ಣ ಸಂಭ್ರಮದ ಕ್ಷಣ. ಇಡೀ ಕನ್ನಡ ನಾಡನ್ನು ಪ್ರತಿನಿಧಿಸುವಂತಹ ಹೆಸರಿಡಲು ನಿರ್ಧರಿಸಿದಾಗ 1973ರ ನವೆಂಬರ್ 1ರಂದು, ಆಗ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರು ಕರ್ನಾಟಕ ನಾಮಫಲಕವನ್ನು ಸಾಂಕೇತಿಕವಾಗಿ ಅನಾವರಣ ಮಾಡಿದ ಅಪೂರ್ವ ಚಿತ್ರವಿದು. ಆ ವೇಳೆ, ರಾಜ್ಯಪಾಲರಾಗಿದ್ದ ಮೋಹನ್‌ಲಾಲ್ ಸುಖಾಡಿಯಾ, ಶಿಕ್ಷಣ ಸಚಿವರಾಗಿದ್ದ ಎ.ಆರ್. ಬದರಿನಾರಾಯಣ, ಬೆಂಗಳೂರಿನ ಮೇಯರ್ ಆಗಿದ್ದ ಅನಂತ ನಾರಾಯಣ ಅವರಿದ್ದರು. ಸುವರ್ಣ ಸಂಭ್ರಮದ ತಿಟ್ಟತ್ತಿ ತಿರುಗಿ ನೋಡಿದಾಗ ಕಂಡ ಐವತ್ತು ಮೈಲಿಗಲ್ಲುಗಳ ನೋಟವನ್ನು ‘ಪ್ರಜಾವಾಣಿ’ ಇಂದಿನ ಸಂಚಿಕೆಯಲ್ಲಿ ದಾಖಲಿಸಿದೆ

ಚಿತ್ರ: ಪ್ರಜಾವಾಣಿ ಆರ್ಕೈವ್ಸ್

ವಿಶೇಷ ಪುಟ 14

‘ಸೇನೆ ವಾಪಸ್ ಕೆಲವೆಡೆ ಪೂರ್ಣ’

ಇಟಾನಗರ (ಪಿಟಿಐ): ಭಾರತ ಮತ್ತು ಚೀನಾ ನಡುವೆ ಮೂಡಿದ ಸಹಮತದ ಆಧಾರದಲ್ಲಿ, ವಾಸ್ತವ ಗಡಿ ನಿಯಂತ್ರಣ ರೇಖೆಯ (ಎಲ್‌ಎಸಿ) ಬಳಿ ಕೆಲವು ಕಡೆಗಳಲ್ಲಿ ಎರಡೂ ದೇಶಗಳ ಯೋಧರ ವಾಪಸಾತಿ ಪ್ರಕ್ರಿಯೆಯು ‘ಬಹುತೇಕ ಪೂರ್ಣಗೊಂಡಿದೆ’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಗುರುವಾರ ತಿಳಿಸಿದರು.

ರಾಜನಾಥ ಸಿಂಗ್

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಯ ಅನಾವರಣ ಹಾಗೂ ಮೇಜರ್ ರಾಲೆಂಗನಾವೋ ‘ಬಾಬ್’ ಖಟಿಂಗ್ ಶೌರ್ಯ ವಸ್ತುಸಂಗ್ರಹಾಲಯದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

‘ಎಲ್‌ಎಸಿಯ ಕೆಲವು ಸ್ಥಳಗಳ ವಿಚಾರವಾಗಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಭಾರತ ಮತ್ತು ಚೀನಾದ ಸೇನಾ ಅಧಿಕಾರಿಗಳು ಹಾಗೂ ರಾಜತಾಂತ್ರಿಕ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆಯುತ್ತಿವೆ. ಇದರ ಪರಿಣಾಮವಾಗಿ, ಪರಸ್ಪರರ ರಕ್ಷಣೆಗೆ ಸಂಬಂಧಿಸಿ ಸಹಮತವೊಂದು ಮೂಡಿತು’ ಎಂದು ಅವರು ಹೇಳಿದರು.

‘ಈ ಸಹಮತದ ಆಧಾರದಲ್ಲಿ ಸೇನಾಪಡೆಯ ಯೋಧರನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆಯು ಬಹುತೇಕ ಪೂರ್ಣಗೊಂಡಿದೆ. ಸೇನೆಯ ವಾಪಸಾತಿಯ ಆಚೆಗೂ ಹೆಜ್ಜೆ ಇರಿಸುವ ಉದ್ದೇಶ ನಮಗೆ ಇದೆ. ಆದರೆ, ಅದಕ್ಕೆ ತುಸು ಹೆಚ್ಚು ಕಾಯಬೇಕು’ ಎಂದರು.

ಪ್ರತಿಕೂಲ ವಾತಾವರಣದ ಕಾರಣಕ್ಕೆ ಸಿಂಗ್ ಅವರಿಗೆ ತವಾಂಗ್‌ಗೆ ತೆರಳಲು ಸಾಧ್ಯವಾಗಲಿಲ್ಲ. ಹೀಗಾಗಿ ಅವರು ಪ್ರತಿಮೆಯನ್ನು ಮತ್ತು ವಸ್ತುಸಂಗ್ರಹಾಲಯವನ್ನು ಅಸ್ಸಾಂನ ತೇಜಪುರದಿಂದ ಆನ್‌ಲೈನ್ ಮೂಲಕ ಉದ್ಘಾಟಿಸಿದರು.

8ನೇ ಪುಟ ನೋಡಿ

ಭಾರತ, ಚೀನಾ ಯೋಧರಿಂದ ಸಿಹಿ ವಿನಿಮಯ

ವಾಸ್ತವ ಗಡಿ ನಿಯಂತ್ರಣ ರೇಖೆಯ ಹಲವು ಕಡೆಗಳಲ್ಲಿ ಭಾರತ ಮತ್ತು ಚೀನಾದ ಯೋಧರು ಗುರುವಾರ, ದೀಪಾವಳಿ ಹಬ್ಬದ ಪ್ರಯುಕ್ತ ಸಿಹಿ ವಿನಿಮಯ ಮಾಡಿಕೊಂಡರು.

ಸಂಘರ್ಷಕ್ಕೆ ಕಾರಣವಾಗಿದ್ದ ಡೆಮ್‌ಚೋಕ್ ಮತ್ತು ಡೆಪ್ಸಾಂಗ್ ಬಯಲು ಪ್ರದೇಶಗಳಲ್ಲಿ ಎರಡೂ ಕಡೆಯ ಯೋಧರ ವಾಪಸಾತಿ ಬುಧವಾರ ಪೂರ್ಣಗೊಂಡಿದೆ. ಇದಾದ ಮಾರನೆಯ ದಿನ, ಎರಡೂ ದೇಶಗಳ ಯೋಧರು ಪರಸ್ಪರ ಸಿಹಿ ತಿನಿಸು ವಿನಿಮಯ ಮಾಡಿಕೊಂಡರು. ಸಿಹಿ ವಿನಿಮಯ ನಡೆದಿದೆ ಎಂಬ ಸಂಗತಿಯನ್ನು ಭಾರತೀಯ ಸೇನೆಯ ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

ಸ್ಪೇನ್ ಪ್ರವಾಹ ಮೃತರ ಸಂಖ್ಯೆ 158ಕ್ಕೆ

ವ್ಯಾಲೆನ್ಸಿಯಾ, ಬರಿಯೋ ಡಿ ಲಾ ಟೊರ್ರೆ (ಎಎಫ್‌ಪಿ, ಎಪಿ): ಭಾರಿ ಮಳೆಯಿಂದಾಗಿ ಸ್ಪೇನ್‌ನಲ್ಲಿ ಭೀಕರ ಪ್ರವಾಹ ಸಂಭವಿಸಿದ್ದು, ಮೃತಪಟ್ಟವರ ಸಂಖ್ಯೆ 158ಕ್ಕೇರಿದೆ. 11

‘ನಗರ ನಕ್ಸಲರ ಮುಖವಾಡ ಕಳಚಿ’

ಏಕ್ತಾನಗರ್ (ಪಿಟಿಐ): ‘ನಕ್ಸಲರ ಕೃತ್ಯ ಅಂತ್ಯವಾಗುತ್ತಿದೆ. ಆದರೆ, ನಗರ ನಕ್ಸಲರ ರೂಪದಲ್ಲಿ ಹೊಸದಾಗಿ ತಲೆ ಎತ್ತುತ್ತಿದೆ. ದೇಶ ವಿಭಜನೆಯ ಕನಸು ಕಾಣುತ್ತಿರುವ ‘ನಗರ ನಕ್ಸಲ’ರ ಜಾಲವನ್ನು ಜನರೇ ಗುರುತಿಸಿ, ಅವರ ಮುಖವಾಡ ಕಳಚಬೇಕು’ ಎಂದು ಪ್ರಧಾನಿ ಕರೆ ನೀಡಿದರು. 15

ಪಟಾಕಿ ಸ್ಫೋಟ: ಒಬ್ಬ ಮೃತ

ಏಲೂರು (ಆಂಧ್ರಪ್ರದೇಶ) (ಪಿಟಿಐ): ಆಂಧ್ರ ಪ್ರದೇಶದ ಏಲೂರಿನಲ್ಲಿ ದ್ವಿಚಕ್ರ ವಾಹನವೊಂದರಲ್ಲಿ ಸಾಗಿಸುತ್ತಿದ್ದ ಪಟಾಕಿಗಳು ಹಠಾತ್ತನೆ ಗುರುವಾರ ಸ್ಫೋಟಗೊಂಡಿವೆ. ಸ್ಫೋಟದಿಂದಾಗಿ ಒಬ್ಬ ಮೃತಪಟ್ಟಿದ್ದು, ಮೂರು ಮಂದಿ ಗಾಯಗೊಂಡಿದ್ದಾರೆ.

‘ದೀಪಾವಳಿ ಹಬ್ಬಕ್ಕೆಂದು ಪಟಾಕಿಗಳನ್ನು ಚೀಲದಲ್ಲಿ ಕೊಂಡೊಯ್ಯುವಾಗ ದ್ವಿಚಕ್ರವಾಹನ ಗುಂಡಿಗೆ ಇಳಿಯಿತು. ಆಗ ಬ್ಯಾಗ್‌ನಲ್ಲಿದ್ದ ‘ಈರುಳ್ಳಿ ಬಾಂಬ್’ ಪಟಾಕಿ ಇದ್ದಕ್ಕಿದ್ದಂತೆ ಸ್ಫೋಟಿಸಿದೆ. ವಾಹನ ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಸ್ಫೋಟದ ತೀವ್ರತೆಗೆ ದೇಹವು ಛಿದ್ರಗೊಂಡಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಿಂಬದಿ ಸವಾರ ಹಾಗೂ ಸ್ಫೋಟಗೊಂಡ ವೇಳೆ ರಸ್ತೆ ಬದಿ ನಿಂತಿದ್ದ ಇಬ್ಬರಿಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಫೋಟಕ್ಕೆ ಸಂಬಂಧಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಸ್ಫೋಟದ ವೇಳೆ ದಟ್ಟ ಹೊಗೆ ಆವರಿಸಿದ ದೃಶ್ಯಾವಳಿಗಳು ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಅಲ್ಲಿದ್ದ ಜನರು ಸ್ಫೋಟದ ಬಳಿಕ ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ.

ಆಂಧ್ರಪ್ರದೇಶದ ಏಲೂರಿನಲ್ಲಿ ದ್ವಿಚಕ್ರ ವಾಹನದಲ್ಲಿ ಸಾಗಿಸುತ್ತಿದ್ದ ಪಟಾಕಿ ಹಠಾತ್ತನೆ ಸ್ಫೋಟಗೊಂಡ ಬಳಿಕ ಜನರು ತಮ್ಮ ಪ್ರಾಣರಕ್ಷಣೆಗೆ ಓಡಿದರು –ಪಿಟಿಐ ಚಿತ್ರ

ನನ್ನ ತಪ್ಪೇನು ನಿಖಿಲ್ ಕಣ್ಣೀರು

ಚನ್ನಪಟ್ಟಣ: ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪ್ರಚಾರದ ಅಬ್ಬರ ಗುರುವಾರ ಜೋರಾಗಿತ್ತು. ನಿಖಿಲ್ ಪರ ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಬಿ.ಸಿ.ಪಾಟೀಲ ಸೇರಿದಂತೆ ಪಕ್ಷದ ನಾಯಕರು ಪ್ರಚಾರ ನಡೆಸಿದರು. 9

‘ಶಾ ವಿರುದ್ಧ ಕೆನಡಾ ಆರೋಪ ಕಳವಳಕಾರಿ’

ವಾಷಿಂಗ್ಟನ್ (ಪಿಟಿಐ): ಸಿಖ್ ಪ್ರತ್ಯೇಕತಾವಾದಿಗಳನ್ನು ಗುರಿಯಾಗಿಸುವ ಸಂಚಿನಲ್ಲಿ ಭಾರತದ ಗೃಹ ಸಚಿವ ಅಮಿತ್ ಶಾ ಅವರ ಕೈವಾಡ ಇದೆ ಎಂದು ಕೆನಡಾ ಮಾಡಿರುವ ಆರೋಪ ಅತ್ಯಂತ ಕಳವಳಕಾರಿಯಾಗಿದೆ ಎಂದು ಅಮೆರಿಕ ಬುಧವಾರ ಪ್ರತಿಕ್ರಿಯಿಸಿದೆ.

‘ಈ ವಿಷಯಕ್ಕೆ ಸಂಬಂಧಿಸಿದಂತೆ ಕೆನಡಾ ಸರ್ಕಾರದ ಜತೆ ಸಮಾಲೋಚನೆ ಮುಂದುವರಿಸುತ್ತೇವೆ’ ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯೂ ಮಿಲ್ಲರ್ ತಮ್ಮ ದೈನಂದಿನ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೆನಡಾದ ರಾಷ್ಟ್ರೀಯ ಭದ್ರತಾ ಸಮಿತಿ ಮುಂದೆ ಮಂಗಳವಾರ ಹಾಜರಾಗಿದ್ದ ಕೆನಡಾದ ವಿದೇಶಾಂಗ ವ್ಯವಹಾರಗಳ ಉಪ ಸಚಿವ ಡೇವಿಡ್ ಮಾರಿಸನ್ ಮತ್ತು ರಾಷ್ಟ್ರೀಯ ಭದ್ರತೆ ಮತ್ತು ಗುಪ್ತಚರ ಸಲಹೆಗಾರರಾದ ನಥಾಲಿ ಡ್ರೋಯಿನ್, ಈ ಕುರಿತು ಗೋಪ್ಯ ಮಾಹಿತಿ ಸೋರಿಕೆ ಆಗಿದ್ದನ್ನು ದೃಢಪಡಿಸಿದ್ದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ದೆಹಲಿ: ವಾಯು ಗುಣಮಟ್ಟ 'ಅತಿ ಕಳಪೆ'

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಗಾಳಿಯ ಗುಣಮಟ್ಟವು ಗುರುವಾರವೂ 'ಅತಿ ಕಳಪೆ' ಮಟ್ಟದಲ್ಲಿದೆ. ಬೆಳಿಗ್ಗೆ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯೂಐ) 330 ಇತ್ತು. ದೀಪಾವಳಿ ಹಬ್ಬದ ಕಾರಣ ಈ ಪ್ರಮಾಣ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಆನಂದ್ ವಿಹಾರ್‌ನಲ್ಲಿ ವಾಯು ಗುಣಮಟ್ಟವು 'ತೀರಾ ಕಳಪೆ' ಮಟ್ಟದ-ಲ್ಲಿತ್ತು. ನಗರದ ಇತರ 38 ನಿಗಾ ಕೇಂದ್ರಗಳಲ್ಲಿಯೂ ಗಾಳಿಯ ಗುಣಮಟ್ಟ 'ಅತಿ ಕಳಪೆ' ಇರುವುದಾಗಿ ವರದಿಯಾಗಿದೆ.

PVR - INOX CINEMAS {DIRECTORS CUT, FORUM REX WALK, 9:30, 12:55, 3:30, 6:45, 9:30 p.m. | NEXUS FORUM MALL, KORMANGALA, 8:35, 9:25, 11:55, 12:30, 3:40, 6:30, 7:05, 10:30 p.m. | ORION MALL, YESHWANTPUR, 8:40, 9:40, 12:05, 12:45, 3:30, 3:55, 6:55, 10:20 p.m. | VAISHNAVI SAPPHIRE MALL, TUMKUR ROAD, 8:55, 12:20, 7:05, 10:30 p.m. | VEGA CITY MALL, 8:30, 9:15, 12:10, 3:35, 6:55, 10:30 p.m., IN ATMOS : 12:15, 3:15, 10:10 p.m. | MSR REGALIA, 8:50, 12:15, 3:40, 7:05, 10:30 p.m. | PHOENIX MARKET CITY, K.R. PURAM, 8:50, 12:15, 2:25, 3:40, 5:50, 7:05, 10:30 p.m. | BHARTIYA CITY, 9:10, 12:20, 3:50, 7:05, 10:30 p.m. | GT WORLD MALL, 9:00, 3:15, 10:00 p.m. | AURA PARK SQUARE, WHITEFIELD ROAD, 12:00, 6:35, 10:00 p.m. | SPIRIT MALL, 9:00, 3:55, 10:30 p.m. | VR MALL, WHITEFIELD ROAD, 8:30, 11:30, 12:00, 2:35, 3:25, 6:05, 6:50, 9:30, 10:15 p.m. | GLOBAL MALL, NAYANDALLI, 9:00, 11:50, 6:35, 10:00 p.m. | FALCON CITY MALL KANAKAPURA ROAD, 9:00, 9:40, 12:25, 12:50, 3:40, 6:45, 7:05, 10:30 p.m. | UPTOWN OMR MALL, 9:00, 3:35, 10:10 p.m. | SUPERPLEX FALCON CITY | PHOENIX MALL OF ASIA,12:20, 6:55 p.m., IN ATMOS : 8:35, 9:05, 11:45, 12:30, 3:10, 3:55, 6:35, 6:50, 10:00, 10:30 p.m. | MANTRI MALL, 9:00, 7:05 p.m., IN ATMOS : 12:15, 3:25, 10:10 p.m. | CENTRAL MALL, J.P.NAGAR, 9:20, 12:45, 6:45 p.m. | GARUDA MALL, 9:10, 12:35, 3:55, 6:35, 10:00 p.m. | SWAGATH MALL, 12:35, 10:20 p.m. | BROOKFIELD MALL, 9:00, 3:35, 10:10 p.m. | LIDO, 12:20, 6:55 p.m. | VALUE MALL, 9:05, 12:30, 3:45, 7:05, 10:30 p.m. | GALLERIA MALL, RMZ YELAHANKA, 9:05, 12:30, 7:05 p.m., IN ATMOS : 10:20 p.m.| GARUDA, YELAHANKA, 9:00, 3:35, 10:10p.m. | SBR HORIZON, SEEGEHALLI, 9:00, 12:25, 3:35, 6:45, 10:10 p.m.} | CINEPOLIS CINEMAS {ROYAL MEENAKSHI MALL, 9:30, 10:00, 12:30, 3:55, 7:05, 10:10, 10:25 p.m. | ETA MALL, BINNY MILL,9:00, 9:30, 12:10: 3:35, 6:45, 7:00, 10:10, 10:25 p.m. | EAST ORION MALL, 9:35, 12:30, 7:05, 10:30 p.m. | SHANTINIKETAN, 8:30, 9:20, 11:55, 2:50, 3:55, 6:15, 6:45, 10:10, 10:30 p.m. | SJR SPECTRUM MALL, 9:20, 12:20, 3:44, 4:05, 6:55, 10:30 p.m. | LULU MALL (TRD), 8:30, 9:10, 11:40, 12:30, 3:45, 7:05, 10:20 p.m. | LULU MALL (VIP), 9:45, 4:25, 10:30 p.m.} | GOPALAN CINEMAS {ARCADE MALL, 9:45 p.m. | LEGACY MALL, 4:30, 7:30, 10:30 p.m. | GRAND MALL, 11:00, 4:00, 9:45 p.m. | SIGNATURE MALL, 1:30, 6:45 p.m. | INNOVATION MALL, 4:30, 7:30, 10:00 p.m.} | INNOVATIVE {MARATHHALLI, 10:00, 12:45, 3:00, 7:00, 9:45 p.m.} | CINEPHILE {HSR LAYOUT, 10:00, 1:00, 4:15, 10:00 p.m.} | MIRAJ CINEMAS {SUNKADAKATTE, 5 SHOWS} | MOVIE TIME {DAVANGERE, 10:00, 7:30 p.m. | BELLARY, 10:00, 4:30, 7:00, 10:30 p.m. | RR NAGAR, 10:00, 4:00, 6:45, 10:30 p.m.} | NEW FANGLED MULTIPLEX {12:00, 3:15, 6:45, 9:15, 10:15 p.m.} | SRINIVASA THEATRE {SG PALYA, 1:15, 4:15, 7:15 p.m.} | PRASANNA THEATRE {DAILY 2 SHOWS} | SANTOSH RPC LAYOUT {DAILY 3 SHOWS} | VINAYAKA THEATRE {VARTHUR, 7:30 p.m.} | VAISHNAVI VYBHAVI {DAILY 3 SHOWS} | VYBHAV THEATRE {1:15, 4:15, 7:00 p.m.} | KAMAKYA THEATRE {1:30, 4:30, 7:30 p.m.} | RADHAKRISHNA CHITRAMANDIRA {10:30 p.m.} | SRI RAMA THEATRE {RAMANAGARA, TOTAL 3 SHOWS} | NARTHAKI THEATRE {KG ROAD, DAILY 5 SHOWS} | SIDDALINGESHWARA {1:30, 7:30 p.m.} | VENKATESWARA {KENGERI, 8:30 p.m.} | BALAJI {CHIKKALSANDRA, 7:30 p.m.} | ROCKLINE {1:00, 4:00, 9:45 p.m.} | KINO CINEMAS {4:30, 10:30 p.m.} | V CLASS CINEMAS {1:30, 4:30, 7:30 p.m.} | SHANKARNAG {1:45, 7:30 p.m.} | MAHADESHWARA {DAILY 2 SHOWS} | RAVI THEATRE {SARJAPURA, 9:45 p.m.} | PVR - INOX CINEMAS {FIZA MALL, MANGALORE, 9:15, 12:40, 6:40, 10:05 p.m. | FORUM MALL, MYSORE, 9:05, 3:40, 6:35, 10:15 p.m. | GARUDA MALL, MYSORE, 9:00, 3:45, 10:30 p.m. | CENTRAL, MANIPAL, 9:15, 3:45, 10:30 p.m. | SATYAM MALL, MYSORE, 8:55, 12:00, 6:45 p.m. | S MALL, TUMKUR, 8:45, 12:10, 6:45, 10:10 p.m. | CENTRO MALL MYSORE, 9:10, 3:45, 10:20 p.m.} | CINEPOLIS {CITY CENTRE MALL, MANGALORE, 9:20, 12:30, 3:55, 7:05, 10:30 p.m.} | BHARATH CINEMAS {MANGALORE, 10:15, 1:30, 4:15, 7:30, 10:30 p.m. | MANIPAL, 10:30, 1:30, 4:30, 7:30, 10:30 p.m. | KUNDAPUR, 10:15, 1:15, 7:15, 10:00 p.m. | PADUBIDRE, 4 SHOWS | PUTTUR, 10:15, 4:30, 7:30 p.m. | SHIMOGA, 5 SHOWS | UDUPI, 4:30, 10:15 p.m.} | DRC CINEMAS {MYSORE, 4 SHOWS} | JAI BHARATH {TUMKUR} | TRINETRA THEATRE {Davanagere} | VASANTHA THEATRE {Davanagere} | NATARAJ COMPLEX {Bellary} | LAKSHMI THEATRE {Hospet} | CINE GALAXY {SURATKAL, 11:00, 4:45, 7:00, 10:00 p.m.} | VISION CINEMA {MYSORE, 4 SHOWS} | SRI BALAJI DELUXE THEATRE {MYSORE, TOTAL 3 SHOWS} | SANGAM {MYSORE, TOTAL 4 SHOWS} | SAHYADRI {HASSAN, TOTAL 4 SHOWS}

SCAN THIS QR CODE & BOOK YOUR TICKETS ON bookmyshow

FARNAZ

ಮನೆ ಮುಂದೆ ಬಣ್ಣ ಬಣ್ಣದ ರಂಗೋಲಿ, ಹೂವುಗಳಿಂದ ಅಲಂಕರಿಸಿ ಹಬ್ಬಕ್ಕೆ ಸ್ವಾಗತ

ಮಹಾನಗರ ಬೆಳಗಿದ ದೀಪಗಳ ಹಬ್ಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಗಳ ಹಬ್ಬ ದೀಪಾವಳಿ ನಗರದಲ್ಲಿ ಗುರುವಾರ ಆರಂಭವಾಯಿತು. ನರಕ ಚತುರ್ದಶಿಯ ದಿನ ಮನೆಗಳನ್ನು ದೀಪಗಳಿಂದ, ಹೂವುಗಳಿಂದ ಅಲಂಕರಿಸಿ, ಮನೆ ಮುಂದೆ ಬಣ್ಣ ಬಣ್ಣದ ರಂಗೋಲಿ ಹಾಕಿ ಹಬ್ಬಕ್ಕೆ ಸ್ವಾಗತ ನೀಡಲಾಯಿತು. ಎಣ್ಣೆ ಸ್ನಾನ ಮಾಡಿ, ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು.

ಗುರುವಾರ ಮೊದಲ ದಿನವಾಗಿದ್ದು, ಶುಕ್ರವಾರ ಕರಿ ದಿನ. ಮೊದಲ ದಿನ ಎಣ್ಣೆಸ್ನಾನ, ಪೂಜೆ ಪುನಸ್ಕಾರಗಳಿಗೆ ಒತ್ತು ನೀಡಿದರೆ, ಎರಡನೇ ದಿನ ಲಕ್ಷ್ಮೀ ಪೂಜೆ ನಡೆಸಲಾಗುತ್ತದೆ. ಮೂರನೇ ದಿನ ಬಲಿಪಾಡ್ಯಮಿ ಆಚರಿಸಲಾಗುತ್ತದೆ.

ಕಂದೀಲು ಆಕಾರದ ಆಕಾಶ ಬುಟ್ಟಿಗಳು, ಕೋಮಲ್ ಡಿಸೈನ್, ಗುಲಾಬ್ ರಂಗೀಲಾ, ಚಂದ್ರನ ಆಕಾರದ ಆಕಾಶ ಬುಟ್ಟಿ ಹೀಗೆ ನಾನಾ ತರಹದ ಆಕಾಶ ಬುಟ್ಟಿಗಳನ್ನು ನಗರದ ಮನೆ ಮನೆಗಳಲ್ಲಿ ನೇತು ಹಾಕಿ ಅದಕ್ಕೆ ವಿದ್ಯುತ್ ದೀಪದ ಬೆಳಕು ಹರಿಸಲಾಗಿತ್ತು.

ಗುರುವಾರ ಕತ್ತಲು ಆವರಿಸುತ್ತಿದ್ದಂತೆ ಮಣ್ಣಿನ ಹಣತೆಗಳನ್ನು ಹಚ್ಚಲಾಯಿತು. ದೇವರ ಮಂಟಪಗಳಿಗೆ ಹೂವು, ಬಾಳೆ ಕಂದುಗಳಿಂದ ವಿಶೇಷ ಅಲಂಕಾರ ಮಾಡಿ ಪೂಜಿಸಲಾಯಿತು.

ಕೆಲವರು ಆಯುಧ ಪೂಜೆ ಸಂದರ್ಭದಲ್ಲಿ ವಾಹನಗಳಿಗೆ ಪೂಜೆ ಮಾಡದೇ ದೀಪಾವಳಿಯಲ್ಲಿ ಪೂಜೆ ಮಾಡುವ ಸಂಪ್ರದಾಯ ಇಟ್ಟುಕೊಂಡಿದ್ದು, ಅವರು ಗುರುವಾರ ವಾಹನಗಳನ್ನು ಸ್ವಚ್ಛಗೊಳಿಸಿ ಅಲಂಕಾರ ಮಾಡಿ, ಕುಂಬಳಕಾಯಿ ಒಡೆದು ಪೂಜೆ ಸಲ್ಲಿಸಿದರು. ಕೆಲವರು ಈ ಪೂಜೆಯನ್ನು ಶುಕ್ರವಾರ ಇಟ್ಟುಕೊಂಡಿದ್ದು, ಗುರುವಾರ ವಾಹನಗಳನ್ನು ತೊಳೆದಿಟ್ಟರು.

ಕೆಲವು ಮನೆಗಳಲ್ಲಿ ಗುರುವಾರವೇ ಲಕ್ಷ್ಮೀ ಪೂಜೆ ನಡೆದರೆ, ವ್ಯಾಪಾರಿ ಕುಟುಂಬಗಳಲ್ಲಿ ಶುಕ್ರವಾರ ಪೂಜೆ ನಡೆಯಲಿದೆ. ಅದಕ್ಕಾಗಿ ಅಂಗಡಿಗಳನ್ನು ಹೂವು, ವಿದ್ಯುತ್ ದೀಪಗಳಿಂದ ಅಲಂಕರಿಸಿದರು.

ದೀಪಾವಳಿ ಹಬ್ಬದ ಅಂಗವಾಗಿ ನಗರದವಿಲ್ಸನ್ ಗಾರ್ಡನ್‌ನಲ್ಲಿ ನಿವಾಸಿಗಳು ಗುರುವಾರ ರಾತ್ರಿ ಪಟಾಕಿ ಸಿಡಿಸಿ ಸಂಭ್ರಮಿಸಿದರು (ಎಡಚಿತ್ರ) ಹಬ್ಬದ ನಿಮಿತ್ತ ಜನರು ಬಾಳೆದಿಂಡು ಖರೀದಿಸಿದರು ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಪಟಾಕಿ ಅವಘಡ: ನಾಲ್ಕು ಮಕ್ಕಳಿಗೆ ಗಾಯ

ಬೆಂಗಳೂರು: ನಗರದಲ್ಲಿ ಗುರುವಾರ ಸಂಭವಿಸಿದ ಪಟಾಕಿ ಅವಘಡದಲ್ಲಿ ನಾಲ್ಕು ಮಕ್ಕಳ ಕಣ್ಣಿಗೆ ಗಾಯವಾಗಿದೆ.

ಪಟಾಕಿ ಸಿಡಿಯಲ್ಲಿಲ್ಲವೆಂದು ಪರಿಶೀಲಿಸಲು ಹತ್ತಿರ ಹೋದ ವೇಳೆ ಸಿಡಿದು ಹತ್ತು ವರ್ಷದ ಬಾಲಕನ ಕಣ್ಣಿಗೆ ಗಾಯವಾಗಿದೆ. ಮತ್ತೊಂದು ಪ್ರಕರಣದಲ್ಲಿ ಪಟಾಕಿ ಸಿಡಿದು ಎಂಟು ವರ್ಷದ ಬಾಲಕನ ಕಣ್ಣಿಗೆ ಗಾಯವಾಗಿದ್ದು, ದೃಷ್ಟಿ ಮರುಸ್ಥಾಪನೆ ಕಷ್ಟವಾಗಿದೆ. ಪರೀಕ್ಷಾ ವರದಿ ಬಂದ ಬಳಿಕ ಶಸ್ತ್ರಚಿಕಿತ್ಸೆ ಮಾಡಲಾಗುವುದು. ಮೂರು ವರ್ಷದ ಹೆಣ್ಣು ಮಗುವಿನ ಕಣ್ಣಿಗೂ ಗಾಯವಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ ಎಂದು ಶಂಕರ ಕಣ್ಣಿನ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ಗಾಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಸಹಾಯವಾಣಿ ಸಂಖ್ಯೆ 080-69038900, 9739883996 ಕರೆ ಮಾಡಬಹುದು.

ಪಟಾಕಿ ಸಿಡಿತ ವೇಳೆ ಗಾಯಗೊಂಡಿರುವ ಎಲ್‌.ಆರ್. ನಗರದ ಐದು ವರ್ಷದ ಬಾಲಕನಿಗೆ ಮಿಂಟೊ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಪಟಾಕಿ ಸದ್ದು: ಗುರುವಾರ ಬೆಳಿಗ್ಗೆಯಿಂದಲೂ ನಗರದಲ್ಲಿ ಪಟಾಕಿ ಸದ್ದು ಜೋರಾಗಿತ್ತು. ರಾತ್ರಿ ವಿವಿಧ ಪೂಜೆಗಳ ಬಳಿಕ ಮಕ್ಕಳ ಜೊತೆಗೆ ಯುವಕರು, ವಯಸ್ಕರೂ ಸೇರಿಕೊಂಡು ಪಟಾಕಿ ಸಿಡಿಸಿದರು.

ಮಳೆಯ ಸಿಂಚನ: ಗುರುವಾರ ನಗರದಲ್ಲಿ ಅಲ್ಲಲ್ಲಿ ಸಾಧಾರಣ ಮಳೆಯಾಗಿದೆ.

ಉದ್ಯಾನ, ವೃತ್ತ 'ದತ್ತು'ಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಉದ್ಯಾನಗಳು, ರಸ್ತೆ ವಿಭಜಕಗಳು ಹಾಗೂ ವೃತ್ತಗಳನ್ನು ಖಾಸಗಿ ವ್ಯಕ್ತಿಗಳು ಅಥವಾ ಸಂಘ–ಸಂಸ್ಥೆಗಳು ದತ್ತು ಪಡೆಯಬಹುದು.

ಬಿಬಿಎಂಪಿ ವ್ಯಾಪ್ತಿಯಲ್ಲಿ 1,280 ಉದ್ಯಾನಗಳು, ವೃತ್ತ, ರಸ್ತೆ ವಿಭಜಕಗಳನ್ನು ಪಾಲಿಕೆ ವತಿಯಿಂದ ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಲಾಗುತ್ತಿದೆ. ಇವುಗಳನ್ನು 'ನಮ್ಮ ಬೆಂಗಳೂರು ನನ್ನ ಕೊಡುಗೆ' ಮತ್ತು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಗೆ (ಸಿಎಸ್‌ಆರ್) ಯೋಜನೆಯಡಿಯಲ್ಲಿ ದತ್ತು ನೀಡಲು ಉದ್ದೇಶಿಸಲಾಗಿದೆ. ಇದರ ವಿವರಗಳನ್ನು https://www.bbmp.gov.in ಮೂಲಕ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೊದಲ ಹಂತದಲ್ಲಿ ಅರ್ಜಿ ಸಲ್ಲಿಸಿದ ಆರು ವಿವಿಧ ಸಂಸ್ಥೆಗಳಿಗೆ ಈಗಾಗಲೇ ಉದ್ಯಾನ ಮತ್ತು ರಸ್ತೆ ವಿಭಜಕಗಳನ್ನು ದತ್ತು ನೀಡಲಾಗಿದೆ. ಇದೀಗ ಮತ್ತೊಮ್ಮೆ ಅರ್ಜಿ ಆಹ್ವಾನಿಸ-ಲಾಗಿದ್ದು, ನ.15ರೊಳಗೆ ಮನವಿ ಸಲ್ಲಿಸಬಹುದು. ಮಾಹಿತಿಗೆ 9535015189 ಸಂಪರ್ಕಿಸಬಹುದು.

'ಟಾಕ್ಸಿಕ್' ಸೆಟ್ ಹಾಕಿದ್ದು ಕೆನರಾ ಬ್ಯಾಂಕ್ ಜಾಗ: ಎಚ್‌ಎಂಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟಾಕ್ಸಿಕ್ ಸಿನಿಮಾ ಚಿತ್ರೀಕರಣ ನಡೆದಿರುವ ಜಾಗಕ್ಕೂ ನಮಗೂ ಸಂಬಂಧವಿಲ್ಲ' ಎಂದು ಎಚ್‌ಎಂಟಿ ಹೇಳಿದೆ.

ಈ ಸಂಬಂಧ ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಎಚ್‌ಎಂಟಿ, 'ಸಿನಿಮಾ ಚಿತ್ರೀಕರಣಕ್ಕೆ ಸೆಟ್ ಹಾಕಿರುವ ಜಾಗವು ಕೆನರಾ ಬ್ಯಾಂಕ್‌ನದ್ದು ಮತ್ತು ಈಗಲೂ ಅದರ ಸುಪರ್ದಿಯಲ್ಲೇ ಇದೆ' ಎಂದು ವಿವರಿಸಿದೆ. ಜತೆಗೆ ಚಿತ್ರೀಕರಣ ನಡೆದಿರುವ ಜಾಗದ ಉಪಗ್ರಹ ಚಿತ್ರದ ಮೇಲೆ 'ಕೆನರಾ ಬ್ಯಾಂಕ್‌ನ ಸ್ವತ್ತು' ಎಂದು ಬರೆದು ಪೋಸ್ಟ್‌ಗೆ ಲಗತ್ತಿಸಿದೆ.

ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಸೆಟ್‌ನ ಜಾಗಕ್ಕೆ ಈಚೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದರು. 'ಎಚ್‌ಎಂಟಿಗೆ ನೀಡಲಾಗಿದ್ದ ಜಾಗವನ್ನು ಅಕ್ರಮವಾಗಿ ಕೆನರಾ ಬ್ಯಾಂಕ್‌ಗೆ ಮಾರಾಟ ಮಾಡಲಾಗಿದೆ. ಬ್ಯಾಂಕ್ ಆ ಜಾಗವನ್ನು ಸಿನಿಮಾ ಚಿತ್ರೀಕರಣಕ್ಕೆ ಬಾಡಿಗೆಗೆ ನೀಡಿದೆ. ಅಲ್ಲಿದ್ದ ಮರಗಳನ್ನು ಕಡಿಯಲಾಗಿದೆ. ಈ ಬಗ್ಗೆ ತನಿಖೆ ನಡೆಸಿ' ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ, 'ಎಚ್‌ಎಂಟಿ ಜಾಗಕ್ಕೆ ರಾಜ್ಯ ಅರಣ್ಯ ಸಚಿವರು ಅತಿಕ್ರಮ ಪ್ರವೇಶ ಮಾಡಿದ್ದಾರೆ' ಎಂದಿದ್ದರು. ಆದರೆ ಎಚ್‌ಎಂಟಿ ಈಗ ಇದು ತನ್ನ ಜಾಗವೇ ಅಲ್ಲ ಎಂದು ಹೇಳಿದೆ.

'ನೆಹರು ವಿರುದ್ಧ ಪ್ರಕರಣ ದಾಖಲಿಸುತ್ತೀರಾ?'

'ಎಚ್‌ಎಂಟಿ ಕಾರ್ಖಾನೆಯನ್ನು ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಉದ್ಘಾಟಿಸಿದ್ದರು. ಅವರ ಕಾಲದಲ್ಲೇ ಕಾಂಗ್ರೆಸ್ ಎಚ್‌ಎಂಟಿಗೆ ಈ ಜಾಗ ನೀಡಿತ್ತು. ಈಗ ನೆಹರು ವಿರುದ್ಧ ಪ್ರಕರಣ ದಾಖಲಿಸುತ್ತೀರಾ? ಅಂದಿನ ಕಾಂಗ್ರೆಸ್ ಮುಖ್ಯಮಂತ್ರಿ ವಿರುದ್ಧ ಪ್ರಕರಣ ದಾಖಲಿಸುತ್ತೀರಾ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ತಮ್ಮ ಕುಟುಂಬದಿಂದ ಎಚ್‌ಎಂಟಿಗೆ 65 ಎಕರೆ ನೀಡಿದ್ದೆವು, ಆ ಜಾಗದಲ್ಲಿ ಅರಣ್ಯ ನಾಶವಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ. ಅರಣ್ಯ ಭೂಮಿ ಎಂದು ಗೊತ್ತಿದ್ದೂ ಎಚ್‌ಎಂಟಿಗೆ ನೀಡಿದ್ದು ಕಾಂಗ್ರೆಸ್. ಅದರ ವಿರುದ್ಧವೇ ಭೂಕಬಳಿಕೆ ಆರೋಪ ಮಾಡಬೇಕಾಗುತ್ತದೆ. ಕುಮಾರಸ್ವಾಮಿ ಅವರನ್ನು ಗುರಿ ಮಾಡಲು ಹೀಗೆಲ್ಲ ಮಾಡಬಾರದು' ಎಂದರು.

ಬಿ.ಇ ತರಗತಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ನಗದು ಪುರಸ್ಕಾರ ನೀಡಿದರು

'ತಲಾ ಆದಾಯದಲ್ಲಿ ಭಾರತಕ್ಕೆ 133ನೇ ಸ್ಥಾನ: ಕಳವಳಕಾರಿ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಭಾರತವು ವಿಶ್ವದಲ್ಲಿ 5ನೇ ದೊಡ್ಡ ಆರ್ಥಿಕತೆ ಹೊಂದಿದ ರಾಷ್ಟ್ರವಾಗಿ ರೂಪುಗೊಂಡಿದ್ದರೂ ತಲಾದಾಯದಲ್ಲಿ 133ನೇ ಸ್ಥಾನ ಹೊಂದಿರುವುದು ಆತಂಕಕಾರಿ ಬೆಳವಣಿಗೆ' ಎಂದು ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದ-ನಾಥ ಸ್ವಾಮೀಜಿ ಹೇಳಿದರು.

ಬಿಜಿಎಸ್‌ಐಟಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪ್ರಥಮ ಬಿ.ಇ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

'ಭಾರತ, ಅಪಾರ ಯುವ ಮಾನವ ಸಂಪನ್ಮೂಲವನ್ನು ಹೊಂದಿದೆ. ಈ ಸಂಪನ್ಮೂಲವನ್ನು ಬಳಸಿಕೊಂಡು ಎಲ್ಲಾ ರಂಗಗಳಲ್ಲೂ ಅಭಿವೃದ್ಧಿ ಸಾಧಿಸಬೇಕಾದ ಜರೂರಿದೆ' ಎಂದು ಅಭಿಪ್ರಾಯಪಟ್ಟರು.

ಡಾ. ಜಗದೀಶ್ ಗೋಪಾಲನ್ ಮಾತನಾಡಿ, 'ಜ್ಞಾನಾರ್ಜನೆ ನಿರಂತರ ಪ್ರಕ್ರಿಯೆ. ಜಾಗತಿಕ ಬೇಡಿಕೆಗಳಿಗೆ ಅನುಗುಣವಾಗಿ ನಮ್ಮನ್ನು ನಾವು ಅಣಿಗೊಳಿಸಿಕೊಂಡರೆ ಯಾವುದೇ ರಂಗದಲ್ಲೂ ಯಶಸ್ಸು ಪಡೆದುಕೊಳ್ಳಲು ಸಾಧ್ಯವಾಗುತ್ತದೆ' ಎಂದರು.

'ವಿಜ್ಞಾನ ವಿಷಯ ಹಣ ಮಾಡುವ ವಿಭಾಗವಲ್ಲ. ಆಸಕ್ತ ವಿದ್ಯಾರ್ಥಿಗಳು ಈ ವಿಷಯದಲ್ಲಿ ತೊಡಗಿಕೊಂಡರೆ ಉತ್ತಮ ಸಾಧನೆ ಮಾಡಬಹುದು' ಎಂದು ಪ್ರೊ.ಕೆ.ಎನ್.ಗಣೇಶ್ ಹೇಳಿದರು.

ಇದೇ ವೇಳೆ ಬಿ.ಇ ತರಗತಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಯಿತು.

ಟಾಟಾ ಕನ್ಸಲ್ಟೆನ್ಸಿ ಕೇಂದ್ರೀಯ ಮುಖ್ಯಸ್ಥ ಸುನೀಲ್ ದೇಶಪಾಂಡೆ ಮಾತನಾಡಿದರು. ಬಿಜಿಎಸ್ ಮತ್ತು ಎಸ್.ಜೆ.ಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ನಟ ವಿರಾಟ್, ನಟಿ ತಪಸ್ವಿನಿ ಪೂಣಚ್ಚ, ಪ್ರಾಂಶುಪಾಲ ಮಹೇಂದ್ರ ಪ್ರಶಾಂತ್, ಅಮರ್‌ನಾಥ್ ಇದ್ದರು.

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

೬೯ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭ ೨೦೨೪

ದಿನಾಂಕ : ೦೧-೧೧-೨೦೨೪, ಶುಕ್ರವಾರ
ಸಮಯ : ಬೆಳಿಗ್ಗೆ ೯.೦೦ ಗಂಟೆಗೆ
ಸ್ಥಳ : ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣ, ಬೆಂಗಳೂರು

ಧ್ವಜಾರೋಹಣ ಹಾಗೂ ರಾಜ್ಯೋತ್ಸವ ಸಂದೇಶ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ವಿಶೇಷ ಆಹ್ವಾನಿತರು
ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಕೇಂದ್ರ ಸಚಿವರು, ಭಾರತ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕು. ಶೋಭಾ ಕರಂದ್ಲಾಜೆ
ಮಾನ್ಯ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಮತ್ತು ಕಾರ್ಮಿಕ ಹಾಗೂ ಉದ್ಯೋಗ ರಾಜ್ಯ ಸಚಿವರು, ಭಾರತ ಸರ್ಕಾರ

ಗೌರವಾನ್ವಿತ ಅತಿಥಿಗಳು
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
ಶ್ರೀ ಯು. ಟಿ. ಖಾದರ್ ಫರೀದ್
ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

ಪ್ರಾಸ್ತಾವಿಕ ನುಡಿ
ಶ್ರೀ ಎಸ್. ಮಧು ಬಂಗಾರಪ್ಪ
ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅಧ್ಯಕ್ಷತೆ
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಸಮಾರಂಭದಲ್ಲಿ ರಾಜ್ಯ ಸಚಿವ ಸಂಪುಟದ ಎಲ್ಲಾ ಮಾನ್ಯ ಸಚಿವರುಗಳು, ಸಂಸದರು, ಶಾಸಕರು (ವಿಧಾನಸಭೆ ಮತ್ತು ವಿಧಾನ ಪರಿಷತ್), ನಿಗಮ ಮಂಡಳಿ ಅಧ್ಯಕ್ಷರುಗಳು ಹಾಗೂ ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ನಾಡಿನ ಸಮಸ್ತ ಜನತೆಗೆ ೬೯ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು".
- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ



PVR - INOX CINEMAS {DIRECTORS CUT, FORUM REX WALK | NEXUS FORUM MALL, KORMANGALA | ORION MALL, YESHWANTPUR | VAISHNAVI SAPPHIRE MALL, TUMKUR ROAD | VEGA CITY MALL | MSR REGALIA | PHOENIX MARKET CITY, K.R. PURAM | BHARTIYA CITY | GT WORLD MALL | AURA PARK SQUARE, WHITEFIELD ROAD | SPIRIT MALL | VR MALL, WHITEFIELD ROAD | GLOBAL MALL, NAYANDALLI | UPTOWN OMR MALL | SUPERPLEX FALCON CITY | MALL OF ASIA | MANTRI MALL | CENTRAL MALL, J.P.NAGAR | GARUDA MALL | SWAGATH MALL | BROOKFIELD MALL | LIDO | VALUE MALL | GALLERIA MALL, RMZ YELAHANKA, | GARUDA, YELAHANKA | SBR HORIZON, SEEGEHALLI} | CINEPOLIS CINEMAS {ROYAL MEENAKSHI MALL | ETA MALL, BINNY MILL | EAST ORION MALL | SHANTINIKETAN | SJR SPECTRUM MALL | LULU MALL (TRD) | LULU MALL (VIP)} | GOPALAN CINEMAS {ARCADE MALL | LEGACY MALL | GRAND MALL | SIGNATURE MALL | INNOVATION MALL} | INNOVATIVE {MARATHHALLI} | KINO CINEMA {SEEGEHALLI} | CINEPHILE {HSR LAYOUT} | ROCKLINE CINEMA MALL {JALAHALLI CROSS} | MIRAJ CINEMAS {SUNKADAKATTE} | MOVIE TIME {YGR SIGNATURE MALL, RR Nagar} | BALAJI {CHIKKALSANDRA} | V CINEMAS {RAMAMURTHY NAGAR} | NEW FANGLED MULTIPLEX & Other Cinemas.

FARNAZ

ವಿಮಾನ ಅಪಘಾತ ಪೈಲಟ್ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳ ಹಿಂದೆ ಜಕ್ಕೂರು ವಾಯು ನೆಲೆಯಲ್ಲಿ ನಡೆದಿದ್ದ ವಿಮಾನ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಪೈಲಟ್ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

'ನನ್ನ ವಿರುದ್ಧದ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಪೈಲಟ್ ಆಕಾಶ್ ಜೈಸ್ವಾಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

'ದೂರಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿಲ್ಲ. ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಅಡಿಯಲ್ಲಿ ಕ್ರಿಮಿನಲ್ ದೂರು ದಾಖಲಿಸುವುದೆಂದರೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲೇ ದಾಖಲಿಸಿದಂತೆ. ಹಾಗಾಗಿ, ಅರ್ಜಿದಾರ ಪೈಲಟ್ ವಿರುದ್ಧ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರು ಮತ್ತು ಈ ಸಂಬಂಧ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಅಪರಾಧ ದಾಖಲಿಸಲು ತೆಗೆದುಕೊಂಡಿರುವ ತೀರ್ಮಾನವನ್ನು ರದ್ದುಪಡಿಸಲಾಗುತ್ತಿದೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: 2022ರಲ್ಲಿ ಜಕ್ಕೂರು ನಿಲ್ದಾಣದಲ್ಲಿ ಏಪ್ರಿಲ್ 17ರಂದು 'ಅಗ್ನಿ ಏರೋ ಸ್ಪೋರ್ಟ್ಸ್ ಅಡ್ವೆಂಚರ್ ಅಕಾಡೆಮಿ ಪ್ರೈವೇಟ್ ಲಿಮಿಟೆಡ್ ಕಂಪನಿ'ಯ ವಿಮಾನ ಟೇಕ್ ಆಫ್ ಆಗುವಾಗ ಅಪಘಾತಕ್ಕೆ ಒಳಗಾಗಿತ್ತು. ಘಟನೆಯಲ್ಲಿ ಯಾವುದೇ ರೀತಿಯ ಅಪಾಯ ಮತ್ತು ಪ್ರಯಾಣಿಕರಿಗೆ ತೊಂದರೆಯಾಗಿರಲಿಲ್ಲ. ಈ ಸಂಬಂಧ ಜಕ್ಕೂರು ಏರೋಡ್ರಮ್ ಕಾರ್ಯ-ದರ್ಶಿಯಾಗಿದ್ದ ಆರ್. ಬಸವರೆಡ್ಡೆಪ್ಪ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ದೂರಿಗೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯ ಅಪರಾಧ ಪ್ರಕರಣ ದಾಖಲು ಮಾಡಿಕೊಂಡಿತ್ತು.

28 ಸಹಾಯಕ ಎಂಜಿನಿಯರ್‌ಗಳಿಗೆ ಪ್ರಥಮ ಆದ್ಯತೆ; ಒಂದು ವರ್ಷದ ಗುತ್ತಿಗೆ

ಬಿಡಿಎಗೆ ಹೊರಗುತ್ತಿಗೆಯಡಿ 345 ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 28 ಸಹಾಯಕ ಎಂಜಿನಿಯರ್‌ಗಳು ಸೇರಿದಂತೆ ಒಟ್ಟು 345 ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಮುಂದಾಗಿದೆ.

ಸಹಾಯಕ ಎಂಜಿನಿಯರ್‌ಗಳಿಗೆ ತಿಂಗಳಿಗೆ ₹45 ಸಾವಿರ ವೇತನ ನಿಗದಿ ಮಾಡಲಾಗಿದ್ದು, 28 ಜನರನ್ನು ಏಜೆನ್ಸಿ ಮೂಲಕ ಹೊರಗುತ್ತಿಗೆಯಲ್ಲಿ ನೇಮಿಸಿಕೊಳ್ಳಲಾಗುತ್ತದೆ. ವಕೀಲರ ಹುದ್ದೆಗೆ ಏಳು, ಕಂದಾಯ ವಿಷಯಗಳ ಸಲಹೆಗಾರರ ಹುದ್ದೆಗೆ ಒಬ್ಬರು, ಹಣಕಾಸು ವಿಭಾಗದ ಹಿರಿಯ ಸಲಹೆಗಾರರ ಗ್ರೇಡ್ 1-2 ಹುದ್ದೆಗೆ ಇಬ್ಬರು, ಕಿರಿಯ ಸಲಹೆಗಾರರ ಗ್ರೇಡ್ 1-2 ಹುದ್ದೆಗೆ ಇಬ್ಬರು, ಸಲಹೆಗಾರರು, ಕಿರಿಯ ಸಲಹೆಗಾರರು ಹುದ್ದೆಗೆ ತಲಾ ಒಬ್ಬರು, ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಒಂಬತ್ತು, ಮಾರುಕಟ್ಟೆ ಸಹಾಯಕ ಹುದ್ದೆಗೆ ಇಬ್ಬರು, ಸೆಕ್ಯುರಿಟಿ ಸೂಪರ್‌ವೈಸರ್ ಹುದ್ದೆಗೆ ಒಂಬತ್ತು, ಸೆಕ್ಯುರಿಟಿ ಗಾರ್ಡ್ ಹುದ್ದೆಗೆ 219, ಸೆಕ್ಯುರಿಟಿ ದಳದ ಚಾಲಕ ಹುದ್ದೆಗೆ ಏಳು, 'ಡಿ' ಗುಂಪಿನ 56 ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ನಿರ್ಧರಿಸಲಾಗಿದೆ.

ಸೆಕ್ಯುರಿಟಿ ಹಾಗೂ 'ಡಿ' ಗುಂಪಿನ ಹುದ್ದೆಗಳಿಗೆ ಮಾತ್ರ ಇಎಸ್‌ಐ, ಪಿಎಫ್ ಸೌಲಭ್ಯವನ್ನು ನೀಡಲಾಗುತ್ತದೆ ಎಂದು ಟೆಂಡರ್ ಮಾಹಿತಿಯಲ್ಲಿ ತಿಳಿಸಲಾಗಿದೆ. 345 ಹುದ್ದೆಗಳಿಗೆ ಪ್ರತಿ ವರ್ಷ ₹9.91 ಕೋಟಿಯನ್ನು ವೇತನವಾಗಿ ಬಿಡಿಎ ಪಾವತಿಸಬೇಕಾಗುತ್ತದೆ. ಅಧಿಕಾರಿಗಳು, ಸಿಬ್ಬಂದಿಯನ್ನು ಒದಗಿಸುವ ಏಜೆನ್ಸಿ, ಪ್ರತಿ ಹುದ್ದೆಗೆ ತಿಂಗಳಿಗೆ ₹479 ಅನ್ನು ಸೇವಾ ಶುಲ್ಕವಾಗಿ ಪಡೆಯಲಿದೆ.

'ಹೊರಗುತ್ತಿಗೆ ಆಧಾರದಲ್ಲಿ ನೇಮಕವಾಗುವ ಎಂಜಿನಿಯರ್‌ಗಳಿಗೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. ಯಾವುದೇ ರೀತಿಯ ತಪ್ಪಾದರೆ ಅವರ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಗುತ್ತಿಗೆ ಅಥವಾ ಹೊರ ಗುತ್ತಿಗೆಯಲ್ಲಿ ನೇಮಕ ಮಾಡಿಕೊಳ್ಳಬಾರದು' ಎಂದು ನಾಗರಿಕ ಸಂಘ–ಸಂಸ್ಥೆಗಳು ಆಗ್ರಹಿಸುತ್ತಲೇ ಇವೆ. ಈ ಮಧ್ಯೆಯೇ, 345 ಸಿಬ್ಬಂದಿಯನ್ನು ಬಿಡಿಎ ಹೊರಗುತ್ತಿಗೆಯಲ್ಲಿ ಒಂದು ವರ್ಷಕ್ಕಾಗಿ ನೇಮಿಸಿಕೊಳ್ಳಲಿದೆ. ಇದಕ್ಕಾಗಿ ಟೆಂಡರ್ ಪ್ರಕ್ರಿಯೆಯನ್ನೂ ಆರಂಭಿಸಲಾಗಿದೆ.

'ಸೌಲಭ್ಯ, ಹೊಣೆಗಾರಿಕೆ ಕಡಿಮೆ'

'ಬಿಡಿಎ ಕಾಯ್ದೆ ಹಾಗೂ ನಿಯಮಗಳಂತೆ ಗುತ್ತಿಗೆ ಅಥವಾ ಹೊರ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಕಾಯಂ ನೇಮಕಾತಿ ಮಾಡಿಕೊಳ್ಳಲು ಹಲವು ರೀತಿಯ ಪ್ರಕ್ರಿಯೆಗಳನ್ನು ಮಾಡಬೇಕಿದೆ. ಅದಲ್ಲದೆ ಪ್ರಾಧಿಕಾರ ಹಲವು ಸೌಲಭ್ಯಗಳನ್ನು ನೀಡಬೇಕಾಗುತ್ತದೆ, ಹೊಣೆಗಾರಿಕೆಯೂ ಹೆಚ್ಚಾಗುತ್ತದೆ. ಹೀಗಾಗಿ, ಅವುಗಳಿಂದ ಮುಕ್ತವಾಗಲು ಹೊರಗುತ್ತಿಗೆಗೇ ಹೆಚ್ಚು ಒತ್ತು ನೀಡಲಾಗುತ್ತಿದೆ' ಎಂದು ಹೆಸರು ಬಹಿರಂಗಗೊಳಿಸಲು ಇಚ್ಛಿಸದ ಬಿಡಿಎ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಯಾವ ಹುದ್ದೆ

- ವಕೀಲರ ಹುದ್ದೆಗೆ ಏಳು
- ಕಂದಾಯ ವಿಷಯಗಳ ಸಲಹೆಗಾರರ ಹುದ್ದೆಗೆ ಒಬ್ಬರು
- ಹಣಕಾಸು ವಿಭಾಗದ ಸಲಹೆಗಾರರ ಹುದ್ದೆಗೆ ಇಬ್ಬರು

ವಕೀಲಿಕೆ ಸನ್ನದು: ದಾಖಲೆ ನೋಂದಣಿ

ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನಲ್ಲಿ (ಕೆಎಸ್‌ಬಿಸಿ) ಈ ಬಾರಿ 2,103 ಎಲ್‌ಎಲ್‌ಬಿ ಪದವೀಧರರು ಸನ್ನದು ನೋಂದಣಿ ಮಾಡಿಸಿಕೊಳ್ಳುವ ಮೂಲಕ 64 ವರ್ಷಗಳ ಇತಿಹಾಸದಲ್ಲಿ ಹೊಸ ದಾಖಲೆ ಬರೆದಿದ್ದಾರೆ.

'ಕಾನೂನು ಪದವಿ ಹೊಂದಿರುವ ಪದವೀಧರರ ವಕೀಲಿಕೆ ಸನ್ನದು ನೋಂದಣಿ ಇದೇ 22ರಂದು ಕೆಎಸ್‌ಬಿಸಿ ವತಿಯಿಂದ ನಡೆಯಿತು. ಈ ಬಾರಿ ದಾಖಲೆಯ ನೋಂದಣಿ ಆಗಿದೆ. ಈ ಪದವೀಧರರಲ್ಲಿ ಶೇ 40ರಷ್ಟು ಮಹಿಳೆಯರು ಮತ್ತು ಉಳಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪುರುಷರು ನೋಂದಣಿ ಮಾಡಿಸಿ ಕೊಂಡಿದ್ದಾರೆ' ಎಂದು ಕೆಎಸ್‌ಬಿಸಿ ನೋಂದಣಿ ಸಮಿತಿ ಸದಸ್ಯ ವಕೀಲ ಎಸ್.ಹರೀಶ್ ತಿಳಿಸಿದ್ದಾರೆ.

'ನ್ಯಾಯಾಂಗ, ಕಾರ್ಪೊರೇಟ್ ಮತ್ತು ಸರ್ಕಾರಿ ವಲಯಗಳಲ್ಲಿ ವಕೀಲರಿಗೆ ಹೆಚ್ಚಿನ ಅವಕಾಶಗಳು ಲಭ್ಯವಾಗುತ್ತಿರುವ ಕಾರಣ ಯುವ ಸಮೂಹ ಈ ಕ್ಷೇತ್ರದತ್ತ ಒಲವು ತೋರುತ್ತಿದೆ' ಎಂದು ಹರೀಶ್ ಹೇಳಿದ್ದಾರೆ. ವಕಾಲತ್ತಿಗೆ ಸಹಿ ಮಾಡಿ ಕೋರ್ಟ್‌ಗಳಲ್ಲಿ ಹಾಜರಾಗಲು ಅವಶ್ಯವಾದ ಅಖಿಲ ಭಾರತ ವಕೀಲರ ಪರೀಕ್ಷೆ (ಎಐಬಿಇ) ಶೀಘ್ರವೇ ನಡೆಯಲಿದೆ.

ಶಾಸಕ ಎಸ್‌.ಆರ್‌.ವಿಶ್ವನಾಥ್ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಅಭಿನಂದಿಸಿದರು

ಬಿಜೆಪಿ ಸದಸ್ಯತ್ವ ಅಭಿಯಾನ ಯಲಹಂಕ ದೇಶಕ್ಕೆ ಪ್ರಥಮ

ಪ್ರಜಾವಾಣಿ ವಾರ್ತೆ

ಯಲಹಂಕ: ಕ್ಷೇತ್ರದಲ್ಲಿ 2.13 ಲಕ್ಷಕ್ಕೂ ಹೆಚ್ಚು ಜನರನ್ನು ಬಿಜೆಪಿ ಸದಸ್ಯರನ್ನಾಗಿ ನೋಂದಾಯಿಸಿರುವ ಮೂಲಕ ದೇಶದಲ್ಲೇ ಯಲಹಂಕ ಮೊದಲ ಸ್ಥಾನದಲ್ಲಿರುವುದು ಅತೀವ ಸಂತಸ ತಂದಿದೆ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ಬಿಜೆಪಿ ದೇಶದಾದ್ಯಂತ ಕೈಗೊಂಡಿರುವ ಸದಸ್ಯತ್ವ ಅಭಿಯಾನದಲ್ಲಿ ಯಲಹಂಕ ವಿಧಾನಸಭಾ ಕ್ಷೇತ್ರವು ದೇಶಕ್ಕೆ ಪ್ರಥಮ ಸ್ಥಾನ ಪಡೆದಿದೆ. ಈ ಹಿನ್ನೆಲೆಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ನೇತೃತ್ವದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ಪಕ್ಷಕ್ಕೆ ಸದಸ್ಯರಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ವಿಶೇಷವಾಗಿ ಯುವಕರು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ಪಡೆಯುತ್ತಿದ್ದಾರೆ ಎಂದರು.

'ಸದಸ್ಯತ್ವ ಅಭಿಯಾನದ ಆರಂಭದಲ್ಲಿ ಕನಿಷ್ಠ 2 ಲಕ್ಷ ನೂತನ ಸದಸ್ಯರನ್ನು ನೋಂದಾಯಿಸಿ ಕೊಳ್ಳಬೇಕೆಂಬ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ನಿರೀಕ್ಷೆಗೂ ಮೀರಿ ಕ್ಷೇತ್ರದಲ್ಲಿ ನೋಂದಣಿ ಆಗಿದ್ದು, ಕಾರ್ಯಕರ್ತರು ಮನೆಮನೆಗೆ ತೆರಳಿ ಜನರ ಜೊತೆಗೆ ಸಂಪರ್ಕ ಸಾಧಿಸಿ, ನಿಸ್ವಾರ್ಥ ಸೇವೆ ಮಾಡಿದ್ದರಿಂದ ಈ ಸಾಧನೆ ಮಾಡಲು ಸಾಧ್ಯವಾಯಿತು' ಎಂದರು.

ರಾಜ್ಯಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ಪಿ.ರಾಜೀವ್, ವಿಧಾನ-ಪರಿಷತ್‌ನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್, ಮಾಜಿ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಉಪಸ್ಥಿತರಿದ್ದರು.

ಸಪ್ನ ಬುಕ್ ಹೌಸ್®
ಭಾರತದ ಅತಿದೊಡ್ಡ ಪುಸ್ತಕ ಭಂಡಾರ
'ಓದಿನ ಅರಮನೆ ತೆರೆದಿದೆ ಓದುಗ'
ಒಳಗೆ ಬಂದೊಮ್ಮೆ ನೋಡು,
ಕನ್ನಡದಿಲ್ಲಿ ಕನ್ನಡಿಸುತ್ತಿರುವುದ
ನೋಡಿ ನೀನು ಹಾಡು
ಕನ್ನಡ ರಾಜ್ಯೋತ್ಸವದ ಪ್ರಯುಕ್ತ
ಕನ್ನಡ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ
01.11.2024 ರಿಂದ 30.11.2024 ರವರೆಗೆ

ಕನ್ನಡ ಪುಸ್ತಕಗಳಿಗೆ ಶೇ. 10% ರಿಂದ ಶೇ. 25% ರಿಯಾಯಿತಿ*
ರೂ. 500/- ರ ಮೇಲ್ಪಟ್ಟ ಕನ್ನಡ ಪುಸ್ತಕಗಳ ನಿವ್ವಳ ಖರೀದಿಗೆ
ಸದಸ್ಯತ್ವ ಕಾರ್ಡು ವರ್ಷಪೂರ್ತಿ ಶೇ. 10% ರಿಯಾಯಿತಿ
* T & C apply
ಇಂದು ಗಾಂಧಿನಗರದ ಸಪ್ನ ಬುಕ್ ಹೌಸ್‌ನಲ್ಲಿ ರಾಜ್ಯೋತ್ಸವದ
ಪ್ರಯುಕ್ತ ಪುಸ್ತಕ ಜಾತ್ರೆ
ಕನ್ನಡ ಬರಹಗಾರರ ಸಮ್ಮಿಲನ
ಸಮಯ : ಬೆಳಗ್ಗೆ 10 ಗಂಟೆಗೆ ದಯವಿಟ್ಟು ಬನ್ನಿ
R.O. 3ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು – 560 009, ದೂರವಾಣಿ: (080) 4011 4455
E-mail: customercare@sapnaretail.com
ಶಾಖೆಗಳು
ಗಾಂಧಿನಗರ ದೂ: 40114455 | ಸದಾಶಿವನಗರ ದೂ: 46578999 | ಜಯನಗರ ದೂ: 49066700 | ಇಂದಿರಾನಗರ ದೂ: 40455999 | ಕೋರಮಂಗಲ ದೂ: 40839999 | ಆರ್.ಆರ್. ನಗರ ದೂ: 24499999
ರಾಯಲ್ ಮೀನಾಕ್ಷಿ ಮಾಲ್ (ಬನ್ನೇರುಘಟ್ಟ ರಸ್ತೆ) ದೂ: 42566299 | ಎಲಿಮೆಂಟ್ಸ್ ಮಾಲ್ (ನಾಗವಾರ ಜಂಕ್ಷನ್) ದೂ: 9148872111 | ದಿ ಗ್ಯಾಲರಿಯಾ ಮಾಲ್ (ಯಲಹಂಕ) ದೂ: 9606014561/62 | ಎಚ್.ಎಸ್.ಆರ್. ಲೇಔಟ್ ದೂ: 22289999
ಹಾಗೂ
ಮೈಸೂರು | ಮಂಗಳೂರು | ಹುಬ್ಬಳ್ಳಿ | ಧಾರವಾಡ | ಕಲಬುರಗಿ | ಬೆಳಗಾವಿ | ಹಾಸನ | ದಾವಣಗೆರೆ
ಕೊಯಮತ್ತೂರು: ಆರ್.ಎಸ್.ಪುರಂ, ಪ್ರೋಜೋನ್ ಮಾಲ್ | ಈರೋಡು | ನವದೆಹಲಿ
India's Largest Book Mall sapnaOnline.com
Choose from a wide range of :
| Books | Stationery | Gadgets & Accessories | Gifts | Toys & Sports | Art & Craft |
| Office Supplies | Food & Chocolates | ಕನ್ನಡ ಪುಸ್ತಕಗಳು |

MAKE IN INDIA
Sujay®
ಸುಜಯ್ ಇರಿಗೇಷನ್ಸ್ ಪ್ರೈ. ಲಿ.
ಭಾರತೀಯ ರೈತರ ಜೀವನಾಡಿ
ಇವರಿಂದ ನಾಡಿನ ಸಮಸ್ತ ಜನತೆಗೆ
ದೀಪಾವಳಿ ಹಾಗೂ
ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು
Drip Irrigation | Sprinkler | HDPE Pipe

✔ ಕಳೆದ 3 ದಶಕಗಳಿಂದ ರೈತರ ಅಚ್ಚುಮೆಚ್ಚಿನ ವಿಶ್ವಾಸಾರ್ಹ ಸೂಕ್ಷ್ಮ ನೀರಾವರಿ ಸಂಸ್ಥೆ (ಹನಿ ನೀರಾವರಿ ಮತ್ತು ತುಂತುರು ನೀರಾವರಿ)
✔ ಅತ್ಯುತ್ತಮ ಗುಣಮಟ್ಟ, ಸುದೀರ್ಘ ಬಾಳಿಕೆ, ಯೋಗ್ಯಬೆಲೆಯ ಉಪಕರಣಗಳು.
✔ ವಿವಿಧ ಬೆಳೆಗಳಿಗೆ ಸೂಕ್ತವಾದ ವಿವಿಧ ನೀರಾವರಿ ಉಪಕರಣಗಳು.
✔ ಕರ್ನಾಟಕ ಸರ್ಕಾರದ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯಿಂದ ಕೇಂದ್ರ ಪುರಸ್ಕೃತ ಸಹಾಯ ಧನಕ್ಕೆ ಮಾನ್ಯತೆ.
✔ ಸುಜಯ್ ಸೂಕ್ಷ್ಮ ನೀರಾವರಿ ಅಳವಡಿಸಿ, ನಿರಂತರ ಉತ್ತಮ ಫಸಲು ಮತ್ತು ಲಾಭ ಗಳಿಸಿ.
SCAN TO KNOW ABOUT YOUR REQUIREMENTS
SCAN TO KNOW MORE ABOUT OUR PRODUCTS
ಉತ್ತಮ ಗುಣಮಟ್ಟ, ದೀರ್ಘ ಕಾಲ ಬಾಳಿಕೆ, ಯೋಗ್ಯಬೆಲೆಗೆ,
ರೈತರ ಪ್ರಥಮ ಆಯ್ಕೆ ಸುಜಯ್ ಸೂಕ್ಷ್ಮ ನೀರಾವರಿ ಉಪಕರಣಗಳು.
Sujay®
ಸುಜಯ್ ಇರಿಗೇಷನ್ಸ್ ಪ್ರೈ. ಲಿ.
(ISO 9001:2015 ಪ್ರಮಾಣೀಕೃತ ಕಂಪನಿ)
ನಂ. 86, ಮುಖ್ಯ ರಸ್ತೆ, ಪೇಟೆಚನ್ನಪ್ಪ ಎಸ್ಟೇಟ್, ಕಾಮಾಕ್ಷಿಪಾಳ್ಯ, ಬೆಂಗಳೂರು – 560 079
ದೂರವಾಣಿ: +91 - 80 - 2348 8779 / +91 - 80 - 232 83686
E-Mail: sujayirrigation@gmail.com / jayant@sujayirrigations.com

HONDA
ದೀಪಾವಳಿಯ ಹಾರ್ದಿಕ ಶುಭಾಶಯಗಳು

Shine 100
Special offer
10 Years Warranty^
Valid till 30th Nov. '24
ಮುಂಗಡ ಪಾವತಿ ₹1100*
ಕ್ಯಾಶ್‌ಬ್ಯಾಕ್ ₹5000#
₹66600 ಎಕ್ಸ್ ಶೋರೂಂ ಬೆಲೆ (ಕರ್ನಾಟಕ)
Scan for Instant Booking**
ಹೆಚ್ಚಿನ ಮಾಹಿತಿಗಾಗಿ 7230032200 ಗೆ ಮಿಸ್ಡ್ ಕಾಲ್ ಕೊಡಿ
IDFC FIRST Bank Bank*/Credit Card# | HDFC BANK Credit Card# | TATA CAPITAL Two Wheeler Loans* | Chola Enter a better life*
ಡೀಲರ್ ವಿವರಗಳಿಗಾಗಿ QR ಕೋಡ್ ಅನ್ನು ಸ್ಕ್ಯಾನ್ ಮಾಡಿ
ವೀಡಿಯೋದ ಆನಂದ ಪಡೆಯಲು ದಯವಿಟ್ಟು QR Code ಸ್ಕ್ಯಾನ್ ಮಾಡಿ
#Cashback Offer available on all Honda two-wheeler models for EMI transactions made using HDFC Bank credit cards & IDFC First Bank credit cards through Pine Labs machines only. #Customers can avail 5% Instant cashback, up to a maximum of Rs. 5000. #Valid on one transaction per card/order during the offer period. #Cashback offer valid until 30th November 2024. #The scheme is available in select outlets only. *Approval of the loan is at the sole discretion of the financiers, and additional documentation may be required. *The interest rates, down payment, and tenure options are based on the financier's assessment of the applicant's credit profile. *The offers/features may be modified or withdrawn at any time without prior intimation. *Offer valid until 30th November 2024. ^3 years of standard and 7 years of free extended warranty only on Shine 100. ^This scheme is offered by Authorised Main Dealers and Associate Dealers. ^Offer valid until 30th November 2024. Product shown in the picture may vary from actual product available in the market. Accessories shown in the picture are not part of standard equipment. **Instant online booking facility available at seleted Dealership only.
Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.
For Bulk/Institutional enquiries, please write us at: institutionalsales@honda2wheelersindia.com

ಮಧು ಬಂಗಾರಪ್ಪ ಅವರ ಜತೆಗೆ ಎಚ್.ವಿಶ್ವನಾಥ್, ಪ್ರಕಾಶಕರಾದ ದಾಮಿನಿ ಸತೀಶ್ ಹಾಗೂ ಸೃಷ್ಟಿ ನಾಗೇಶ್ ಚರ್ಚಿಸಿದರು

ಪುಸ್ತಕಗಳ ಬೆಲೆ ಪರಿಷ್ಕರಣೆ: ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ತಿನ ಸದಸ್ಯ ಎಚ್.ವಿಶ್ವನಾಥ್ ನೇತೃತ್ವದಲ್ಲಿ ಪ್ರಕಾಶಕರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ನಗರದಲ್ಲಿ ಮಂಗಳವಾರ ಭೇಟಿ ಮಾಡಿ, ಪುಸ್ತಕಗಳ ಪುಟಗಳ ಬೆಲೆ ಪರಿಷ್ಕರಣೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳ ಖರೀದಿಗೆ ಸಂಬಂಧಿಸಿದಂತೆ ಚರ್ಚಿಸಿದರು.

‘ಪುಸ್ತಕ ಪ್ರಕಟಣೆ ವೆಚ್ಚ ಗಗನಕ್ಕೇರಿದೆ. ಆದರೆ, ಸಗಟು ಖರೀದಿಯಲ್ಲಿ ಮಾತ್ರ ಹಳೆಯ ದರವನ್ನೇ ನಿಗದಿಪಡಿಸಲಾಗಿದೆ. ಹೆಚ್ಚಿರುವ ಕಾಗದ, ಮುದ್ರಣ ಬೆಲೆ, ಸರಕು ಮತ್ತು ಸೇವಾ ತೆರಿಗೆಯಿಂದ (ಜಿಎಸ್‌ಟಿ) ಪ್ರಕಾಶನ ರಂಗ ತತ್ತರಿಸಿದೆ. ಆದ್ದರಿಂದ ಪುಸ್ತಕದ ಪುಟಗಳ ಬೆಲೆಯನ್ನು ಪರಿಷ್ಕರಿಸಬೇಕು. ಈ ಹಿಂದೆ 2017ರಲ್ಲಿ ಕನ್ನಡ ಪುಸ್ತಕಗಳ ಪರಿಷ್ಕರಣೆ ಮಾಡಿದ್ದು, ಏಳು ವರ್ಷಗಳಿಂದ ಬೆಲೆ ಪರಿಷ್ಕರಿಸಿಲ್ಲ. ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳ ಖರೀದಿ ಪ್ರಕ್ರಿಯೆಯನ್ನು ಸಕಾಲಕ್ಕೆ ನಡೆಸಬೇಕು’ ಎಂದು ಪ್ರಕಾಶಕರು ಸಚಿವರಿಗೆ ಮನವಿ ಮಾಡಿಕೊಂಡರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಮಧು ಬಂಗಾರಪ್ಪ, ‘ಬೆಲೆ ಪರಿಷ್ಕರಣೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಜತೆಗೆ ಸಭೆ ನಡೆಸಿದ್ದೇನೆ. ಕನ್ನಡ ಪುಸ್ತಕಗಳ ಖರೀದಿಗೆ ಯಾವುದೇ ಲೋಪ ಬಾರದಂತೆ ನೋಡಿಕೊಳ್ಳಲಾಗುವುದು’ ಎಂದರು.

‘ರಾಜ್ಯೋತ್ಸವ ಪ್ರಶಸ್ತಿಗೆ ಕಡೆಗಣನೆ’

ಬೆಂಗಳೂರು: ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡುವಾಗ ಸಂಗೀತ ಸಾಧಕರು, ಅಂಗವಿಕಲ ಸಾಧಕರನ್ನು ಕಡೆಗಣಿಸಲಾಗಿದೆ ಎಂದು ಸಂಗೀತ ಕಲಾವಿದರ ವೇದಿಕೆ, ಅಂಗವಿಕಲರ ಸಮಿತಿ ಸಹಿತ ವಿವಿಧ ಸಂಘಟನೆ ಅಸಮಾಧಾನ ವ್ಯಕ್ತಪಡಿಸಿವೆ.

ಸುಗಮ ಸಂಗೀತ, ಹಿಂದೂಸ್ತಾನಿ ಸಂಗೀತ, ಕರ್ನಾಟಕ ಶಾಸ್ತ್ರೀಯ ಸಂಗೀತ, ಗಮಕ ಮುಂತಾದ ಕ್ಷೇತ್ರಗಳನ್ನು ಗುರುತಿಸದೇ ಇರುವುದು ಆಘಾತಕಾರಿ. ಈ ಕ್ಷೇತ್ರಗಳ ಸಾಧಕರು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧರಾಗಿದ್ದಾರೆ. ಕನ್ನಡ ನಾಡಿನ ಘನತೆಯನ್ನು ಎತ್ತಿ ಹಿಡಿದಿದ್ದಾರೆ. ಇಂಥ ಸಾಧಕರನ್ನು ಕಡೆಗಣಿಸಿರುವುದು ಖಂಡನೀಯ ಎಂದು ಸುಗಮ ಸಂಗೀತ ಪರಿಷತ್ತು ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ತಿಳಿಸಿದ್ದಾರೆ.

21 ಬಗೆಯ ಅಂಗವೈಕಲ್ಯಗಳಿವೆ. ಅದರಲ್ಲಿ ಒಂದೆರಡು ಅಂಗವೈಕಲ್ಯಗಳನ್ನು ಹೊರತುಪಡಿಸಿ ಉಳಿದ ಅಂಗವಿಕಲತೆ ಹೊಂದಿರುವವರು ವಯಸ್ಸಾದಂತೆ ದೈಹಿಕ ಸಾಮರ್ಥ್ಯವನ್ನು ಕಳೆದುಕೊಂಡು ನಿಸ್ತೇಜರಾಗುತ್ತಾರೆ. ಹಾಗಾಗಿ ಅಂಗವಿಕಲರ ಸಾಧನೆಗೆ 60 ವರ್ಷ ವಯೋಮಿತಿ ನಿಗದಿ ಮಾಡಬಾರದು ಎಂದು ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಆದರೂ ವಯೋಮಿತಿ ಸಡಿಲಿಸದೇ ಅನ್ಯಾಯ ಮಾಡಿದ್ದಾರೆ. 60 ವರ್ಷ ದಾಟಿರುವ ಬೀದರ್‌ನ ಅಂಧ ಜಾನಪದ ಕಲಾವಿದರೊಬ್ಬರನ್ನು ಮಾತ್ರ ಗುರುತಿಸಿ ಕಣ್ಣೊರೆಸುವ ತಂತ್ರ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿಯ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ದೂರಿದ್ದಾರೆ.

ಪೊಲೀಸರ ಕಾರ್ಯಾಚರಣೆ • ಲಕ್ಷಾಂತರ ರೂಪಾಯಿ ಮೌಲ್ಯದ ಗಾಂಜಾ ವಶ

ಗಾಂಜಾ ಮಾರಾಟ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತ್ಯೇಕ ಸ್ಥಳಗಳಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಜಾಲ ಭೇದಿಸಿರುವ ರಾಮಮೂರ್ತಿನಗರ, ಬಸವನಗುಡಿ ಹಾಗೂ ಸಂಪಿಗೆಹಳ್ಳಿ ಠಾಣೆಯ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಗಾಂಜಾ ಮಾರಾಟ ಮಾಡುತ್ತಿದ್ದ ಫ್ರೇಜರ್‌ಟೌನ್ ನಿವಾಸಿ ವಾಸೀಂ ಪಾಷಾ(45) ಹಾಗೂ ರಾಮಮೂರ್ತಿ ನಗರದ ನಿವಾಸಿ ಹರೀಶ್ (24) ಎಂಬುವವರನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹1 ಲಕ್ಷ ಮೌಲ್ಯದ 2 ಕೆ.ಜಿ 182 ಗ್ರಾಂ. ಗಾಂಜಾ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ‘ಠಾಣಾ ವ್ಯಾಪ್ತಿಯ ಕೆ.ಆರ್. ಪುರ ರೈಲ್ವೆ ನಿಲ್ದಾಣದ ಬಳಿ ಪೊಟ್ಟಣಗಳಲ್ಲಿ ಗಾಂಜಾ ತುಂಬಿ ಮಾರಾಟ ಮಾಡುತ್ತಿದ್ದರು. ಅಲ್ಲಿ ಆರೋಪಿಗಳನ್ನು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

ಗಾಂಜಾ ಮಾರಾಟ ಮಾಡುತ್ತಿದ್ದ ಶಾಮಣ್ಣ ಗಾರ್ಡನ್‌ನ ಬಾಪೂಜಿ ನಗರದ ನಿವಾಸಿ ಅರ್ಬಾಜ್ ಶೇಕ್ (29) ಎಂಬಾತನನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ 3 ಕೆ.ಜಿ 590 ಗ್ರಾಂ. ಗಾಂಜಾ, ಮೊಬೈಲ್ ಫೋನ್, ಕೃತ್ಯಕ್ಕೆ ಬಳಸಿದ ಆಟೊವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಆರೋಪಿ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

ಸಂಪಿಗೆಹಳ್ಳಿ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಎಜಿಬಿಜಿ ಮೈದಾನದ ಬಳಿ ಹೆಗ್ಡೆ ನಗರದ ನಿವಾಸಿ ತಾಜ್‌ಮುಲ್ ಶರೀಫ್‌ನನ್ನು(32) ಬಂಧಿಸಿದ್ದಾರೆ.

ಆರೋಪಿಯಿಂದ 1ಕೆ.ಜಿ 32 ಗ್ರಾಂ. ಗಾಂಜಾ, ಮೊಬೈಲ್ ಹಾಗೂ ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಸಾರಾಯಿಪಾಳ್ಯದ ವ್ಯಕ್ತಿಯಿಂದ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ಹೆಚ್ಚಿನ ಬೆಲೆಗೆ ಶರೀಫ್ ಮಾರಾಟ ಮಾಡುತ್ತಿದ್ದ. ಸಾರಾಯಿಪಾಳ್ಯದ ನಿವಾಸಿ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ವಾಸೀಂ ಪಾಷಾ

ಹರೀಶ್

ಕಾರು ಅಡ್ಡಗಟ್ಟಿ ಗಾಜು ಪುಡಿಮಾಡಿದ ದುಷ್ಕರ್ಮಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯ ಕಸವನಹಳ್ಳಿಯ ಮಾರಮ್ಮ ದೇವಸ್ಥಾನದ ಬಳಿ ಬುಧವಾರ ರಾತ್ರಿ ಕಾರೊಂದನ್ನು ಅಡ್ಡಗಟ್ಟಿ ಗಾಜು ಪುಡಿ ಮಾಡಿದ್ದ ಪ್ರಕರಣದ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

‘ಆರೋಪಿ ಕೃಷ್ಣಮೂರ್ತಿ(24) ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಚಿಕ್ಕನಾಯಕನಹಳ್ಳಿಯಲ್ಲಿ ನೆಲಸಿರುವ ಐ.ಟಿ ಕಂಪನಿ ಉದ್ಯೋಗಿ ಅನೂಪ್ ಜಾರ್ಜ್(39) ಅವರು ಪತ್ನಿ ಹಾಗೂ ಇಬ್ಬರು ಮಕ್ಕಳ ಜತೆಗೆ ದೀಪಾವಳಿ ಹಬ್ಬದ ಖರೀದಿಗೆಂದು ಕಾರಿನಲ್ಲಿ ಬರುತ್ತಿದ್ದರು. ಕಸವನಹಳ್ಳಿ ಬಳಿ ದುಷ್ಕರ್ಮಿಗಳು ಕಾರು ಅಡ್ಡಗಟ್ಟಿದ್ದರು. ಅನೂಪ್ ಅವರು ಕಾರು ನಿಲ್ಲಿಸಿ ವಿಚಾರಿಸಿದ್ದರು. ಅಷ್ಟರಲ್ಲಿ ಕಲ್ಲಿನಿಂದ ಹಿಂದಿನ ಗಾಜು ಪುಡಿ ಮಾಡಿದ್ದರು. ಹಿಂಬದಿಯ ಸೀಟಿನಲ್ಲಿ ಕುಳಿತಿದ್ದ ಇಬ್ಬರು ಮಕ್ಕಳಿಗೆ ಗಾಯವಾಗಿದೆ. ಐದು ವರ್ಷದ ಮಗುವಿನ ತಲೆಗೆ ಪೆಟ್ಟು ಬಿದ್ದಿದೆ’ ಎಂದು ಮೂಲಗಳು ತಿಳಿಸಿವೆ.

‘ಮುಂದೆಯೇ ಮತ್ತೊಂದು ವಾಹನ ಚಲಿಸುತ್ತಿತ್ತು. ಅವರು ವಾಹನ ನಿಲುಗಡೆ ಮಾಡದೇ ತೆರಳಿದರು. ನಮ್ಮ ಕಾರು ಅಡ್ಡಗಟ್ಟಿ ಕೃತ್ಯ ಎಸಗಿದರು’ ಎಂದು ಅನೂಪ್ ಪ್ರತಿಕ್ರಿಯಿಸಿದ್ದಾರೆ.

ಜನ್ಮದಿನಾಚರಣೆ: ಗಾಳಿಯಲ್ಲಿ ಗುಂಡು ಹಾರಿಸಿ ಸಂಭ್ರಮ

ಬೆಂಗಳೂರು: ಸ್ನೇಹಿತನ ಜನ್ಮದಿನಾಚರಣೆಗೆ ತೆರಳಿದ್ದ ವ್ಯಕ್ತಿಯೊಬ್ಬ ಪಿಸ್ತೂಲ್‌ನಿಂದ ಗಾಳಿಯಲ್ಲಿ ಗುಂಡು ಹಾರಿಸಿ ಆತಂಕ ಮೂಡಿಸಿದ್ದ ಘಟನೆ ಜಯನಗರದಲ್ಲಿ ಇತ್ತೀಚೆಗೆ ನಡೆದಿದೆ.

ಈ ಸಂಬಂಧ ಸೈಯದ್ ಅಲ್ತಾಫ್ ಅಹ್ಮದ್ ಎಂಬಾತನ ವಿರುದ್ಧ ಸಿಸಿಬಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ‘ಜಯನಗರದ ನಿವಾಸಿ ಮೊಯಿನ್‌ಖಾನ್ ಅವರ ಜನ್ಮದಿನಾಚರಣೆಗೆ ತೆರಳಿದ್ದ ಆರೋಪಿ, ಪಿಸ್ತೂಲ್‌ನಿಂದ ಸಾರ್ವಜನಿಕ ಸ್ಥಳದಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿ ಆತಂಕ ಮೂಡಿಸಿದ್ದ. ಯಾವುದೇ ಸುರಕ್ಷತಾ ಕ್ರಮ ಅನುಸರಿಸದೇ ನಿರ್ಲಕ್ಷ್ಯತನದಿಂದ ಗಾಳಿಯಲ್ಲಿ ಗುಂಡು ಹಾರಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಆರೋಪಿ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಜುಬೇರ್ ಖಾನ್ ಲಿಂಪಾ ಎಂಬುವರ ಇನ್‌ಸ್ಟಾಗ್ರಾಂ ಖಾತೆಯಲ್ಲಿ ವಿಡಿಯೊ ತುಣುಕು ಹಂಚಿಕೊಳ್ಳಲಾಗಿತ್ತು. ಆ ವಿಡಿಯೊದಲ್ಲಿ ವ್ಯಕ್ತಿಯೊಬ್ಬ ಪಿಸ್ತೂಲ್ ಹಿಡಿದು ಗುಂಡು ಹಾರಿಸಿ ಸಂಭ್ರಮಾಚರಣೆ ಮಾಡುತ್ತಿದ್ದ ದೃಶ್ಯ ಸೆರೆ ಆಗಿತ್ತು. ಜಯನಗರ, ಬಸವನಗುಡಿ, ಹನುಮಂತನಗರ, ಸಿದ್ದಾಪುರ, ಬೊಮ್ಮನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆರೋಪಿಗೆ ಹುಡುಕಾಟ ನಡೆಸಲಾಗಿತ್ತು. ಜುಬೇರ್ ಖಾನ್ ಅವರನ್ನು ವಿಚಾರಣೆ ನಡೆಸಿದಾಗ ಗುಂಡು ಹಾರಿಸಿದ್ದು ಬೊಮ್ಮನಹಳ್ಳಿಯ ಮೂರನೇ ಕ್ರಾಸ್‌ನ ನಿವಾಸಿ ಸೈಯದ್ ಅಲ್ತಾಫ್ ಎಂಬುದು ಗೊತ್ತಾಗಿತ್ತು’ ಎಂದು ಪೊಲೀಸರು ಹೇಳಿದರು.

ಕೆಸರು ಗದ್ದೆಯಂತಾದ ರಸ್ತೆ: ಸಂಚಾರಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ : ರಾಜರಾಜೇಶ್ವರಿ ನಗರ ವಾರ್ಡ್ ಕೆರೆ ಕೋಡಿ ಪಾಳ್ಯದಿಂದ ಹೊಸಕೆರೆಹಳ್ಳಿ ಕೆರೆ ಕೋಡಿವರೆಗೆ ರಸ್ತೆಯನ್ನು ಅಗೆದು ಹಾಗೇ ಬಿಟ್ಟಿರುವುದರಿಂದ ವಾಹನ ಸಂಚಾರಕ್ಕೂ ತೊಡಕಾಗಿದೆ. ಪಾದಚಾರಿಗಳಿಗೂ ಕಷ್ಟವಾಗಿದೆ.

ಅಭಿವೃದ್ಧಿಯ ಹೆಸರಿನಲ್ಲಿ ರಸ್ತೆಯನ್ನು ಅಗೆದು ಬಿಟ್ಟಿರುವುದರಿಂದ ಅಲ್ಲಲ್ಲಿ ಗುಂಡಿಗಳು ಬಿದ್ದು ಸಣ್ಣ ಮಳೆ ಬಂದರೂ ರಸ್ತೆಯಲ್ಲಿ ತಿರುಗಾಡಲು ಪರದಾಡುವಂತಾಗಿದೆ. ದ್ವಿಚಕ್ರ ವಾಹನಗಳು ಗುಂಡಿಗೆ ಬಿದ್ದು ಅಪಘಾತಗಳುಂಟಾಗುತ್ತಿವೆ. ಮಳೆ ಬಂದರೆ ರಸ್ತೆಯು ಕೆಸರು ಗದ್ದೆಯಂತಾಗುತ್ತಿದೆ. ಅಧಿಕ ಮಳೆ ಬಂದರೆ ರಸ್ತೆಯೇ ಕಾಲುವೆಯಂತಾಗುತ್ತಿದೆ. ಗುಂಡಿ ಎಲ್ಲಿದೆ ಎಂಬುದೇ ಗೊತ್ತಾಗುತ್ತಿಲ್ಲ. ವಾಹನಗಳು ಬಂದಾಗ ಪಾದಚಾರಿಗಳ ಮೇಲೆ ಕೆಸರು ನೀರು ಹಾರುತ್ತಿದೆ. ಶಾಲಾ ಮಕ್ಕಳು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ರಾಜರಾಜೇಶ್ವರಿ ನಗರ ಬಡಾವಣೆಯ ನಿವಾಸಿಗಳು ದೂರಿದ್ದಾರೆ.

ಕೆರೆ ಕೋಡಿ ಪಾಳ್ಯದಿಂದ ಹೊಸಕೆರೆಹಳ್ಳಿ ಕೆರೆ ಕೋಡಿವರೆಗಿನ ರಸ್ತೆ ಕೆಸರು ಗದ್ದೆಯಂತಾಗಿದೆ

ಬಿಸಿಲು ಬಂದಾಗ ರಸ್ತೆಯೆಲ್ಲ ದೂಳುಮಯ ಆಗುತ್ತಿದೆ. ಇದರಿಂದ ಸಮೀಪದ ಮನೆಗಳಿಗೆ ದೂಳು ಹಾರಿ ಉಸಿರಾಡುವುದೇ ಕಷ್ಟವಾಗಿದೆ ಎಂದು ಗಟ್ಟಿಗೆರೆಯ ಜೆ.ಆಶಾ ಅಳಲು ತೋಡಿಕೊಂಡರು.

ರಾಜರಾಜೇಶ್ವರಿ ನಗರ, ಐಡಿಯಲ್ ಹೋಮ್ಸ್, ಬಂಗಾರಪ್ಪನಗರ, ಹಲಗೆ ವಡೇರಹಳ್ಳಿ, ಕೆಂಚೇನಹಳ್ಳಿ, ಜವರೇಗೌಡನ ದೊಡ್ಡಿ ಸುತ್ತಮುತ್ತಲಿನ ಬಡಾವಣೆಯ ಜನರು ಜೆ.ಪಿ. ನಗರ, ಜಯನಗರ, ಪದ್ಮನಾಭನಗರ, ಬನಶಂಕರಿ ಮುಂತಾದ ಬಡಾವಣೆಗಳಿಗೆ ಕಿತ್ತು ಹೋಗಿರುವ ಈ ರಸ್ತೆಯಲ್ಲಿಯೇ ಸಂಚರಿಸಬೇಕಿದೆ ಎಂದು ಸ್ಥಳೀಯರಾದ ರಾಘವೇಂದ್ರ ಭಟ್, ಕಾರ್ತಿಕ್ ಗೌಡ, ಧನಂಜಯ ಅಲವತ್ತುಕೊಂಡರು.

ಹಲವು ವರ್ಷಗಳ ಹಿಂದೆ ಅಭಿವೃದ್ಧಿಗಾಗಿ ರಸ್ತೆ ಅಗೆಯಲಾಗಿತ್ತು. ಬಳಿಕ ಕಾಮಗಾರಿ ಆರಂಭವಾಗಲೇ ಇಲ್ಲ. ಈ ಬಗ್ಗೆ ಶಾಸಕ ಮುನಿರತ್ನ ಅವರ ಗಮನಕ್ಕೆ ತರಲಾಗಿತ್ತು. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಡಾ. ಸಿ.ಎನ್. ಮಂಜುನಾಥ್ ಪರವಾಗಿ ಪ್ರಚಾರಕ್ಕೆ ಬಂದವರ ಗಮನಕ್ಕೂ ತರಲಾಗಿತ್ತು. ಆದರೂ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರಾದ ಶಾರದಾ ಮತ್ತು ದಿವ್ಯಾ ಆಕ್ರೋಶವನ್ನು ವ್ಯಕ್ತಪಡಿಸಿದರು.

‘ಈ ಹಿಂದೆ ಈ ರಸ್ತೆಯ ಕಾಮಗಾರಿಯನ್ನು ಬಿಬಿಎಂಪಿ ಬೃಹತ್ ನೀರು ಕಾಲುವೆ ವಿಭಾಗದ ಎಂಜಿನಿಯರ್ ಆರಂಭಿಸಿ ಹಾಗೆಯೇ ನಿಲ್ಲಿಸಿದ್ದರು. ನಂತರ ಬಿಬಿಎಂಪಿ ಹಿರಿಯ ಅಧಿಕಾರಿಗಳು ಬೃಹತ್ ರಸ್ತೆ ಕಾಮಗಾರಿ ವಿಭಾಗಕ್ಕೆ ಹಸ್ತಾಂತರ ಮಾಡಿರುವುದರಿಂದ ಅನುದಾನಕ್ಕಾಗಿ ಮುಖ್ಯ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಅನುಮತಿ ದೊರೆತ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು’ ಎಂದು ಬೃಹತ್ ರಸ್ತೆ ಕಾಮಗಾರಿ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸುರೇಶ್ ಕುಮಾರ್ ಪ್ರತಿಕ್ರಿಯಿಸಿದರು.

ದಾಬಸ್‌ಪೇಟೆ: ಇಬ್ಬರು ಕಾರ್ಮಿಕರ ಸಾವು

ದಾಬಸ್‌ಪೇಟೆ: ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ದಾಬಸ್ ಪೇಟೆಯ ಸೋಂಪುರದ ಕೈಗಾರಿಕಾ ಪ್ರದೇಶದಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕದ ಟ್ಯಾಂಕ್‌ಗೆ ಬಿದ್ದು ಇಬ್ಬರು ಕಾರ್ಮಿಕರು ಗುರುವಾರ ರಾತ್ರಿ ಮೃತಪಟ್ಟಿದ್ದಾರೆ.

ಲಿಂಗರಾಜು (26) ಹಾಗೂ ನವೀನ್ (25) ಮೃತ ಕಾರ್ಮಿಕರು. ದಾಬಸ್ ಪೇಟೆಯ ಆಶಾ ಸ್ವೀಟ್ಸ್ ಕಂಪನಿಯ ಗೋದಾಮಿನಲ್ಲಿ ಘಟನೆ ನಡೆದಿದೆ. ಕಾರ್ಮಿಕರ ಸ್ವಂತ ಊರು ಗೊತ್ತಾಗಿಲ್ಲ.

ಕಂಪನಿ ಗೋದಾಮಿನಲ್ಲಿ ಇಬ್ಬರೂ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಕೆಲಸದ ವೇಳೆ ಲಿಂಗರಾಜ್ ಮೊದಲು ಆಯತಪ್ಪಿ ತ್ಯಾಜ್ಯ ಸಂಸ್ಕರಣಾ ಟ್ಯಾಂಕ್‌ಗೆ ಬಿದ್ದರು. ಅವರನ್ನು ರಕ್ಷಿಸಲು ಮುಂದಾದ ನವೀನ್ ಅವರೂ ಮುಳುಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಕಂಪನಿ ಮಾಲೀಕರು ಹಾಗೂ ವ್ಯವಸ್ಥಾಪಕರ ನಿರ್ಲಕ್ಷ್ಯದಿಂದ ಘಟನೆ ನಡೆದಿದೆ ಎಂದು ಮೃತ ಕಾರ್ಮಿಕರ ಕುಟುಂಬಸ್ಥರು ಆರೋಪಿಸಿದ್ದಾರೆ. ಆಶಾ ಸ್ವೀಟ್ಸ್ ಕಂಪನಿ ಮಾಲೀಕ ಹಾಗೂ ವ್ಯವಸ್ಥಾಪಕರ ವಿರುದ್ಧ ದಾಬಸ್‌ಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕರ್ನಾಟಕ ಸರ್ಕಾರ
ಪುರಸಭಾ ಕಾರ್ಯಾಲಯ
ಆನೇಕಲ್–562106, ಬೆಂಗಳೂರು ನಗರ ಜಿಲ್ಲೆ.
ಫೋನ್: 78–230092, : 78–259225 ಇಮೇಲ್: itstaff_ulb_anekal@yahoo.co.in
ವೆಬ್‌ಸೈಟ್: www.anekaltown.mrc.gov.in

ಸಂಖ್ಯೆ: ಪು.ಕಾ.ಆ/ಆ.ಶಾ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಸಮೀಕ್ಷೆ/ಸಿ.ಆರ್/10/2024–25 ದಿನಾಂಕ : 04/11/2024

ಸಾರ್ವಜನಿಕ ಪ್ರಕಟಣೆ

ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವಿಶೇಷ ಮರು ಸಮೀಕ್ಷೆ

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಗುರುತಿಸುವ ಮತ್ತು ಪುನರ್ವಸತಿಗೆ ರಾಜ್ಯಾದ್ಯಂತ ವಿಶೇಷ ಮರು ಸಮೀಕ್ಷೆಯನ್ನು ಹಮ್ಮಿಕೊಳ್ಳಲಾಗಿದೆ. ಮ್ಯಾನುಯಲ್ ಸ್ಕ್ಯಾವೆಂಜರ್‌ಗಳ ಮತ್ತು ಅವಲಂಬಿತರ ನಿಖರವಾದ ಸಂಖ್ಯೆಯನ್ನು ಮತ್ತು ಅವರನ್ನು ಸದರಿ ವೃತ್ತಿಯಿಂದ ವಿಮುಕ್ತಗೊಳಿಸಿ ಪುನರ್ವಸತಿಗೊಳಿಸಲು ಕೇಂದ್ರ ಸರ್ಕಾರವು ಸಮೀಕ್ಷೆಯನ್ನು ನಡೆಸಲು ಉದ್ದೇಶಿಸಿದೆ.

ಸಮೀಕ್ಷೆಯ ಉದ್ದೇಶ ಮತ್ತು ವ್ಯಾಪ್ತಿ

1) ಕೈಯಿಂದ ಮಲ ಸ್ವಚ್ಛಗೊಳಿಸುವ ವೃತ್ತಿಯಲ್ಲಿ ತೊಡಗಿಕೊಂಡವರನ್ನು (ಅವರ ಅವಲಂಭಿತರ ವಯಸ್ಸು ಮತ್ತು ಅಪ್ರಾಪ್ತ) ಗುರುತಿಸುವುದು ಅಂದರೆ:
• ಎಸ್.ಆರ್.ಎಂ.ಎಸ್. ಯೋಜನೆಯಡಿ ಗುರುತಿಸಿ ಇನ್ನೂ ಅದೇ ಕೆಲಸ ಮುಂದುವರೆಸುವುದು.
• ಎಸ್.ಆರ್.ಎಂ.ಎಸ್. ಯೋಜನೆಯಡಿ ಸೌಲಭ್ಯ ಪಡೆಯದೇ ಇರುವುದು.
2) ನೈಜ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸುವಿಕೆಯನ್ನು ಖಾತರಿಪಡಿಸಿಕೊಳ್ಳುವುದು ಮತ್ತು ಇದೇ ಸಮಯದಲ್ಲಿ ಅನೈಜ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಕಡಿಮೆ ಮಾಡುವುದು ಅಥವಾ ನಿರ್ಮೂಲನೆ ಮಾಡುವುದು.
3) ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ ಮತ್ತು ಕೌಶಲ್ಯ ಸ್ಥಿತಿಗಳನ್ನು ಗುರುತಿಸುವುದು ಮತ್ತು ಅವರನ್ನು ಬದಲಿ ಸ್ವಯಂ ಉದ್ಯೋಗ ಚಟುವಟಿಕೆಗಳಲ್ಲಿ ತೊಡಗಿಸುವುದು.
4) ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಸ್ವಚ್ಛಗೊಳಿಸಲು ತೊಡಗಿಕೊಂಡಿರುವ ಒಣ ಶೌಚಾಲಯಗಳು, ತೆರೆದ ಚರಂಡಿಗಳು ಇತ್ಯಾದಿ ವಿವರ ಕಂಡುಹಿಡಿಯುವುದು. (ಅವರ ಅವಲಂಭಿತರ ವಯಸ್ಸು ಮತ್ತು ಅಪ್ರಾಪ್ತ) ಗುರುತಿಸುವುದು ಅಂದರೆ:
• ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಂದರೆ ಯಾರು?
• ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಎಂದರೆ ಯಾವುದೇ ಆಧುನಿಕ ಸಲಕರಣೆಗಳಿಲ್ಲದೆ ಕೈಯಿಂದ ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿರುವ ಅಥವಾ ಖಾಸಗಿ ಏಜೆನ್ಸಿಯಿಂದ ತೊಡಗಿಸಲಾದ ವ್ಯಕ್ತಿ ಅಥವಾ ಒಣ ಶೌಚಾಲಯ ಅಥವಾ ಒಣ ಶೌಚಾಲಯದಿಂದ ಹೊಮ್ಮುವ ಮಲವನ್ನು ಅಥವಾ ರೈಲು ಹಳಿಯ ಮೇಲೆ ಕೊಳೆಯದಿರುವ ಮಲವನ್ನು ಕೈಯಿಂದ ತೆಗೆಯುವ ವ್ಯಕ್ತಿ.
• ಪಟ್ಟಣ ಪಂಚಾಯಿತಿ, ಪುರಸಭೆ, ಸರ್ಕಾರಿ ಮತ್ತು ಖಾಸಗಿ ಕಛೇರಿಗಳಲ್ಲಿ ಕಸ ಗುಡಿಸುವ ಅಥವಾ ಸ್ಯಾನಿಟರಿ/ಸ್ವಚ್ಛ ಮಾಡುವ ಕೆಲಸಗಾರರು ಸಫಾಯಿ ಕರ್ಮಚಾರಿಗಳಾಗಿದ್ದು ಅವರು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲ.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸ್ವಯಂ ಘೋಷಣೆ

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಾಗಿ ಕೆಲಸ ನಿರ್ವಹಿಸುತ್ತಿರುವ ವ್ಯಕ್ತಿಗಳು ಆನೇಕಲ್ ಪುರಸಭೆಯಲ್ಲಿ ಡೆಸಿಗ್ನೇಟೆಡ್ ಅಧಿಕಾರಿಯಾಗಿ ನೇಮಕವಾಗಿರುವ ಈ ಕೆಳಕಂಡ ಅಧಿಕಾರಿಗಳಿಗೆ ಸ್ವಯಂ ಘೋಷಣೆಯನ್ನು ಕಚೇರಿಯ ವೇಳೆಯಲ್ಲಿ ನಿಗದಿತ ನಮೂನೆಯಲ್ಲಿ ಮಾಡಿಕೊಳ್ಳಬಹುದಾಗಿದೆ.

ನಗರ ಸ್ಥಳೀಯ ಸಂಸ್ಥೆಯ ಹೆಸರು	ಅಧಿಕಾರಿಗಳ ಪದನಾಮ	ಅಧಿಕಾರಿಯ ಮೊಬೈಲ್ ನಂ	ಕಾರ್ಯಾಲಯದ ದೂರವಾಣಿ ಸಂಖ್ಯೆ
ಪುರಸಭೆ ಆನೇಕಲ್	ಪರಿಸರ ಅಭಿಯಂತರರು	6362243758	080–27841111
	ಹಿರಿಯ ಆರೋಗ್ಯ ನಿರೀಕ್ಷಕರು	8892906558	

ದಿನಾಂಕ: 01/11/2024 ರಿಂದ 08/11/2024

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ದಿನಾಂಕ: 24.10.2024 ರಿಂದ 12.11.2024 ರ ಒಳಗಾಗಿ ಆನೇಕಲ್ ಪುರಸಭಾ ಕಛೇರಿಯಲ್ಲಿ ನೇಮಕವಾಗಿರುವ ಡೆಸಿಗ್ನೇಟೆಡ್ ಅಧಿಕಾರಿಗಳನ್ನು ಭೇಟಿಯಾಗಿ ಸ್ವಯಂ ಘೋಷಣೆ ಮಾಡಿಕೊಳ್ಳಲು ಕೋರಲಾಗಿದೆ.

ಸಹಿ/– ಅಧ್ಯಕ್ಷರು ಪುರಸಭೆ ಆನೇಕಲ್
ಸಹಿ/– ಉಪಾಧ್ಯಕ್ಷರು ಪುರಸಭೆ ಆನೇಕಲ್.
ಸಹಿ/– ಮುಖ್ಯಾಧಿಕಾರಿ ಪುರಸಭೆ ಆನೇಕಲ್.

IN THE COURT OF THE X ADDL. DISTRICT AND SESSION JUDGE, BANGALORE RURAL, BANGALORE, III FLOOR, BSNL BUILDING, RABHAVAN ROAD, BANGALORE
Com, O.S. 174/2024
BETWEEN
Plaintiff : **CANARA BANK**
Nelamangala Branch, Roopa Complex, B.H. Road, Nelamangala Bengaluru Rural District.
AND
Defendant : **Sri. Umesh.D**
SUMMONS TO THE DEFENDANT UNDER ORDER V RULE 20(1A) AND (1-A) OF THE CODE OF CIVIL PROCEDURE
To:
Defendant : **Sri Umesh.D** S/o Doddegowda, Aged about 56 years, Residing at. No.9, Hanchipura, Nelamangala Bengaluru Rural District-562123.
WHEREAS the above named Plaintiff bank has instituted suit against you for Recovery of sum of **Rs.8,94,424.00** (Rupees Eight Lakhs Ninety Four Thousand and Four Hundred and Twenty Four only) together with the court costs, current and future Interest at contractual rate of interest of **10% towards Farm Development** Loan from date of suit till the Date of payment. You are hereby called upon to appear before this court in person or By advocate duly, instructed on the 11th Dec-2024 at 11:00AM, in the forenoon to defend yourself, in Default of your appearance on the day mentioned above; the suit will be heard and Determined in your absence.
Given under my hand seal of the court this 24th day of October, 2024.
Advocate for Plaintiff
Mohamed Afroze Ahamed
Opp. State Bank of India,
M.G. Road, Tumakuru.
BY-ORDER OF THE COURT
X Addl. District & Summons Court,
Bengaluru Rural District, Bengaluru

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Flats

3BHK FLAT Rental for Pure Veg Family in 3rd Phase JPNagar Opp. MTR MiniForest, No Broker, Viewing upon Appointment. Contact: 7795242299

Industrial And Factory

AVAILABLE OF Industrial Shed of 95000sqft at Soukya Road, Whitefield. Available Built-to-Suit Warehouse 160000 sqft Vijipura Hoskote Contact: 9341234288/ 9663224353/ 9845417487.

House

2/ 3 BHK Rent/ Lease, 1st N block Rajajinagar near Vidya Vardhaka School, Orion Mall: 9535843355

ಪ್ರಜಾವಾಣಿ
ಮಾನ್ಯ ಓದುಗರು
ಮತ್ತು
ಜಾಹೀರಾತುದಾರರಿಗೆ
ಕನ್ನಡ ರಾಜ್ಯೋತ್ಸವದ
ಶುಭಾಶಯಗಳು

ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
080-4555 7160 / 162 / 163 / 164

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

REAL ESTATE SELLING

Commerical

Bangalore North

COMMERCIAL SPACE 30X100 Srirampuram 2 mins from metro with new shed Rs.18000/- 9739732433

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Flat

Hennur

RENTAL 2/3 BHK Evergreen Layout Kothanur Main Road Near Police Station. Water Security Parking Lift Available: 9845824977

Farm House/ Land/ Resorts

Mysore

LAND FOR SALE IN MYSORE, 38.5 Gunta Land for Sale, Near Cauvery Hospital, Bannur Main Road. Genuine Buyers only/ Brokers Excuse. Contact: 8762204610/ 9731868839.

General

South

30' X 40' North East facing plot with compound wall and gate available for Sale in Karnasrilayout, Kodinalli, Old Madras Road. Contact Mr. Shankar Rao, Advocate, Indiranagar, Bangalore. Mobile No : 9959883493 - NO BROKERS PLEASE-

House

Jayanagar

SALE 65X122 East Facing old House 3rd Block Jayanagar Near Ashoka Pillar Main Road Prime Location Call:9611844667 8123515830

Sites

Anjanapura

BDA E-AUCTION East-South Corner Site No 902 for Sale at Further Extension of Anjanapura 11th Block Bannerghatta Rd 2645sqft Rs.14500/- Call:9448138640 9731125533

Banashankari

KANAKAPURA ROAD, Banashankari 6th Stage, 50x80 Site, And Concorde Napa Vally Villa For Sale: 9916817739

Kempegowda Layout

***NADAPRABHU* KEMPEGOWDA** LAYOUT 1st-Block K Sector 30x40 W/F 84 Lakhs,7th Block F Sector 50x80 West-facing behind 100feet Road on 50 feet road, Nayara Petrol bunk backside and Vishveshwaraiah Layout 3rd-Block 40x60 East-facing. Contact:9686469799

BDA SITE For Sale 3.5 KM from Brigade Panorama Apartment Gurupunvanni Properties Ph:9900006355

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

BUSINESS

Business to Business

Business

PINEWOOD REAPERS Kd-Kiln Dried Good Quality Available@ Reasonable/Cheap Rates 9632912101 9986495950 @Bidadi Industrial Area

PERSONAL

Change of Name

AFFIDAVIT
I, **KUMAR SWAMY,** S/o Late Shivapujayya, do hereby declare that my name mentioned in PUC and Engineering, Kumar Swamy Hiremath and DL my name mentioned **Kumar Swami Hiremath,** all other Documents SSLC marks card, Pass port, Aadhar card, pan, my name mentioned **Kumar Swamy.** I will carry only **Kumar Swamy** not any other name, vide affidavit dated 25-10-2024, sworn before XXIV Addl. Chief Judicial Magistrate, Bengaluru City.

I, GITIKA RAO D/o.Shreekumar Venkatesh R/a#156/10E Suguna Nivas,25th cross Kempamma Layout Hulimavu Bannerghatta Road Bangalore 560076 Declare that have changed my Name from GITIKA SHREEKUMAR to GITIKA RAO vide affidavit dated:22.7.2024 sworn before Notary Jain Swarnamala Bangalore

I, VENKATESHA. K.G, residing at Bengaluru Rural-560107 have changed my name as VENKATESH K.G, vide affidavit dated 31/10/2024 before Notary K.S.Bammappanavar, Bengaluru

PROPERTY CORNER
ಕ್ಲಾಸಿಫೈಡ್ಸ್

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
*Conditions apply
Book your ad with us now! For more details contact:
9845114560 | 9901641752

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯ ಮಂತ್ರಿಗಳು

ರಾಜ್ಯೋತ್ಸವ ಪ್ರಶಸ್ತಿ – 2024 ಮತ್ತು ಕರ್ನಾಟಕ ಸಂಭ್ರಮ–50ರ ಸುವರ್ಣ ಮಹೋತ್ಸವ ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ಸಮಾರಂಭ

ದಿನಾಂಕ: 01.11.2024 ಸಮಯ: ಸಂಜೆ 4.30 ಗಂಟೆಗೆ
ಸ್ಥಳ: ವಿಧಾನಸೌಧದ ಮುಂಭಾಗ ಬೆಂಗಳೂರು

ಪ್ರಶಸ್ತಿ ಪ್ರದಾನ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಗೌರವ ಉಪಸ್ಥಿತಿ

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಕೇಂದ್ರ ಹಣಕಾಸು ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕುಮಾರಿ ಶೋಭಾ ಕರಂದ್ಲಾಜೆ
ಮಾನ್ಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ ಹಾಗೂ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ರಾಜ್ಯ ಸಚಿವರು, ಭಾರತ ಸರ್ಕಾರ

ಘನ ಉಪಸ್ಥಿತಿ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಸನ್ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್

ಶ್ರೀ ಯು.ಟಿ. ಖಾದರ್
ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ

ಡಾ. ಜಿ. ಪರಮೇಶ್ವರ್
ಮಾನ್ಯ ಗೃಹ ಸಚಿವರು, ಕರ್ನಾಟಕ ಸರ್ಕಾರ

ಗೌರವಾನ್ವಿತ ಅತಿಥಿಗಳು

ಶ್ರೀ ಶಿವರಾಜ ಎಸ್. ತಂಗಡಗಿ
ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ

ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ ಎಸ್. ತಂಗಡಗಿ ಅವರು ಸಮಾರಂಭದಲ್ಲಿ ಭಾಗವಹಿಸಿರುವುದು.

ನಾಡಿನ ಸಮಸ್ತ ಜನತೆಗೆ
69ನೇ ಕರ್ನಾಟಕ ರಾಜ್ಯೋತ್ಸವದ
ಹಾರ್ದಿಕ ಶುಭಾಶಯಗಳು

ನವೆಂಬರ್ 01 ರಂದು ನಾಡಿನ ಎಲ್ಲಾ ಮನೆ ಮನೆಗಳಲ್ಲಿ ಬೆಳಗ್ಗೆ 09.00 ಗಂಟೆಗೆ ನಾಡಗೀತೆ ಮೊಳಗಲಿ!

ಮನೆಯಂಗಳದಲ್ಲಿ ಕೆಂಪು ಹಳದಿ ರಂಗೋಲಿ ರಾರಾಜಿಸಲಿ!

ಮೈದಾನಗಳಲ್ಲಿ ಕೆಂಪು ಹಳದಿ ಬಣ್ಣದ ಗಾಳಿಪಟಗಳು ಬಾನೆತ್ತರಕ್ಕೆ ಹಾರಲಿ!

ಸಂಜೆ 7.00 ಗಂಟೆಗೆ ಮನೆಯ ಮುಂದೆ ಹಣತೆಯಲ್ಲಿ ಕನ್ನಡ ಜ್ಯೋತಿ ಬೆಳಗಲಿ!

ಅತಿಥಿಗಳು

ಬೆಂಗಳೂರು ನಗರದ ಮಾನ್ಯ ಲೋಕಸಭಾ ಸದಸ್ಯರು / ರಾಜ್ಯಸಭಾ ಸದಸ್ಯರು / ವಿಧಾನಸಭಾ ಸದಸ್ಯರು / ವಿಧಾನ ಪರಿಷತ್ ಸದಸ್ಯರು ಹಾಗೂ ಚುನಾಯಿತ ಜನಪ್ರತಿನಿಧಿಗಳು

ಮೆರವಣಿಗೆ ಸಾಗುವ ಮಾರ್ಗ

ರವೀಂದ್ರ ಕಲಾಕ್ಷೇತ್ರ → ಹಡ್ಸನ್ ವೃತ್ತ ಕಸ್ತೂರಬಾ ರಸ್ತೆ → ಎಂ.ಜಿ ರಸ್ತೆ ಕಾವೇರಿ ಎಂಪೋರಿಯಂ ಎಡಕ್ಕೆ → ಮಾಣಿಕ್‌ಷಾ ಪರೇಡ್ ಗ್ರೌಂಡ್ → ಕೇಂದ್ರ ಅಂಚೆ ಕಚೇರಿ → ರಾಜ ಭವನ ರಸ್ತೆ → ಬಸವೇಶ್ವರ ವೃತ್ತ → ವಿಧಾನಸೌಧ.

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯವರಿಂದ ಆಕರ್ಷಕ ಪೊಲೀಸ್ ಸಮೂಹ ವಾದ್ಯ ಮೇಳ

ಡಾ. ಎನ್. ಮಂಜುಳ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸರ್ವರಿಗೂ ಆದರದ ಸ್ವಾಗತ

ಡಾ. ಧರಣೀದೇವಿ ಮಾಲಗತ್ತಿ, ಭಾ.ಪೊ.ಸೇ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

70 YEARS IN TRANSFORMING TECHNOLOGY

ಭಾರತ್ ಎಲೆಕ್ಟ್ರಾನಿಕ್ಸ್
भारत इलेक्ट्रॉनिक्स
BHARAT ELECTRONICS
QUALITY, TECHNOLOGY, INNOVATION

ಸರ್ವರಿಗೂ ಬಿಇಎಲ್ ವತಿಯಿಂದ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಕರ್ನಾಟಕದ ಹೆಮ್ಮೆಯ ಪರಂಪರೆಯನ್ನು ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ, ನಾವು ರಾಷ್ಟ್ರದ ಗಡಿಗಳನ್ನು ರಕ್ಷಿಸುವ ನಮ್ಮ ದೃಢ ಸಂಕಲ್ಪವನ್ನು ಪುನರುಚ್ಚರಿಸುತ್ತೇವೆ.

ಮಿಲಿಟರಿ ಸಂವಹನ • ರಾಡಾರ್‌ಗಳು • ನೌಕಾ ವ್ಯವಸ್ಥೆಗಳು • ಸಿ4ಐ ವ್ಯವಸ್ಥೆಗಳು • ಕ್ಷಿಪಣಿ ವ್ಯವಸ್ಥೆಗಳು • ಎಲೆಕ್ಟ್ರಾನಿಕ್ಸ್ ವಾರ್‌ಫೇರ್ • ಏವಿಯಾನಿಕ್ಸ್ • ಎಲೆಕ್ಟ್ರೋ ಆಪ್ಟಿಕ್ಸ್ • ಟ್ಯಾಂಕ್ ಎಲೆಕ್ಟ್ರಾನಿಕ್ಸ್ • ವೆಪನ್ ಸಿಸ್ಟಮ್‌ಗಳು • ಗನ್ ನವೀಕರಣ ಎಲೆಕ್ಟ್ರಾನಿಕ್ ಫ್ಯೂಜ್‌ಗಳು • ಹೋಮ್‌ಲ್ಯಾಂಡ್ ಸೆಕ್ಯುರಿಟಿ ಮತ್ತು ಸ್ಮಾರ್ಟ್ ಸಿಟಿಗಳು

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್: ನೋಂದಾಯಿತ ಮತ್ತು ಪ್ರಧಾನ ಕಚೇರಿ: ಹೊರ ವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045, ಭಾರತ. ದೂ: +91 80 2503 9300/ಫ್ಯಾಕ್ಸ್: +91 80 2503 9291/ಶುಲ್ಕರಹಿತ: 1800 425 0433
www.bel-india.in / **CIN: L32309KA1954GOI000787.**

ಎಲ್ಲ ಪರೀಕ್ಷಾ ಕೇಂದ್ರಗಳಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಕಡ್ಡಾಯ • 2025ರಿಂದಲೇ ಜಾರಿಗೆ ಶಿಕ್ಷಣ ಇಲಾಖೆ ನಿರ್ಧಾರ

ದ್ವಿತೀಯ ಪಿಯು ಪರೀಕ್ಷೆಗೂ 'ವೆಬ್‌ಕಾಸ್ಟಿಂಗ್'

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಸ್‌ಎಸ್‌ಎಲ್‌ಸಿಯಂತೆ ದ್ವಿತೀಯ ಪಿಯು ಪರೀಕ್ಷೆಗಳೂ ಇನ್ನು ಮುಂದೆ ವೆಬ್‌ಕಾಸ್ಟಿಂಗ್ ಕಣ್ಗಾವಲಿನಲ್ಲಿ ನಡೆಯಲಿವೆ.

2024ರ ಪರೀಕ್ಷೆಗಳನ್ನು ಅತ್ಯಂತ ವ್ಯವಸ್ಥಿತವಾಗಿ, ನಕಲಿಗೆ ಅವಕಾಶವಿಲ್ಲದಂತೆ ಪಾರದರ್ಶಕವಾಗಿ ನಡೆಸಲು ನಿರ್ಧರಿಸಿದ್ದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, ಪ್ರತಿ ಪರೀಕ್ಷಾ ಕೇಂದ್ರದಲ್ಲೂ ವೆಬ್‌ಕಾಸ್ಟಿಂಗ್ ಅಳವಡಿಸುವ ನಿರ್ಧಾರ ತೆಗೆದುಕೊಂಡಿತ್ತು. ಯಶಸ್ವಿಯಾಗಿ ಅನುಷ್ಠಾನವನ್ನೂ ಮಾಡಿತ್ತು. ಈಗ ದ್ವಿತೀಯ ಪಿಯು ಪರೀಕ್ಷೆಗಳಿಗೂ ಕಡ್ಡಾಯಗೊಳಿಸಿದೆ.

2024ರಲ್ಲಿ ನಡೆದ ದ್ವಿತೀಯ ಪಿಯು ಪರೀಕ್ಷೆ–1ರ ನಂತರ ಪ್ರತಿ ಜಿಲ್ಲೆಯಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಇದ್ದ ಕೆಲ ಕಾಲೇಜುಗಳನ್ನು ಗುರುತಿಸಿ, ವೆಬ್‌ಕಾಸ್ಟಿಂಗ್ ಅಳವಡಿಸಿ ದ್ವಿತೀಯ ಪಿಯು–2 ಮತ್ತು 3ನೇ ಪರೀಕ್ಷೆ ನಡೆಸಿತ್ತು. ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರ (ಪಿಯುಡಿಡಿ) ಕಚೇರಿಯಲ್ಲಿ ಅಳವಡಿಸಿದ್ದ ಪರದೆಯ ಮೇಲೆ ಆಯಾ ಕಾಲೇಜುಗಳಲ್ಲಿ ನಡೆದಿದ್ದ ಪರೀಕ್ಷೆಗಳನ್ನು ಅಧಿಕಾರಿಗಳು ವೀಕ್ಷಿಸಿದ್ದರು. ಈಗ ರಾಜ್ಯದ ಎಲ್ಲ ಪರೀಕ್ಷಾ ಕೇಂದ್ರಗಳಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಕಡ್ಡಾಯಗೊಳಿಸಲಾಗಿದ್ದು, 2025ರ ಮಾರ್ಚ್, ಏಪ್ರಿಲ್‌ನಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಅಡಿಯಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ.

ಪರೀಕ್ಷಾ ಕೇಂದ್ರಗಳು ಇರುವ ಎಲ್ಲ ಖಾಸಗಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳು ಸಿ.ಸಿ.ಟಿ.ವಿ ಕ್ಯಾಮೆರಾಗಳ ಐಪಿ ಸಂಖ್ಯೆಗಳನ್ನು (ಇಂಟರ್‌ನೆಟ್ ಪ್ರೋಟೊಕಾಲ್ ನಂಬರ್) ಆಯಾ ಜಿಲ್ಲೆಗಳ ಉಪ ನಿರ್ದೇಶಕರ ಜತೆ ಹಂಚಿಕೊಳ್ಳಲು ಸೂಚಿಸಲಾಗಿದೆ. ಉಪ ನಿರ್ದೇಶಕರು, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ತಮ್ಮ ಕಚೇರಿಯಲ್ಲೇ ಕುಳಿತು ಪರೀಕ್ಷಾ ಚಟುವಟಿಕೆ ವೀಕ್ಷಿಸಲಿದ್ದಾರೆ.

ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ತಂಡ ರಚನೆ: ಪ್ರತಿ ತಾಲ್ಲೂಕಿನಲ್ಲೂ ಪ್ರಮುಖ ಕಾಲೇಜಿನ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗದ ತಲಾ ಒಬ್ಬರು ಉಪನ್ಯಾಸಕರನ್ನು ಒಳಗೊಂಡ ನಾಲ್ವರ ತಂಡವನ್ನು ಜಿಲ್ಲಾ ಉಪ ನಿರ್ದೇಶಕರು ರಚಿಸುತ್ತಾರೆ. ಈ ತಂಡ ಆಯಾ ತಾಲ್ಲೂಕು ವ್ಯಾಪ್ತಿಯ ಪಿಯು ಫಲಿತಾಂಶ ಸುಧಾರಣೆ ಹಾಗೂ ವೆಬ್‌ಕಾಸ್ಟಿಂಗ್ ವೀಕ್ಷಣೆಯ ಜವಾಬ್ದಾರಿ ನಿಭಾಯಿಸಲಿದೆ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಈ ತಂಡದ ಮೇಲುಸ್ತುವಾರಿ ನೋಡಿಕೊಳ್ಳುವರು. ಪ್ರತಿ ತಿಂಗಳು ಸಭೆ ನಡೆಸಿ, ಪ್ರಗತಿ ಪರಿಶೀಲನೆ ಮಾಡುವರು.

'ಪ್ರತಿ ಕಾಲೇಜುಗಳ ಪ್ರಾಂಶುಪಾಲರು, ಆಯಾ ವಿಷಯಗಳ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ವೆಬ್‌ಕಾಸ್ಟಿಂಗ್ ಕುರಿತು ಮಾಹಿತಿ ನೀಡಬೇಕು. ಅವರಲ್ಲಿನ ಭಯ ಹೋಗಲಾಡಿಸಬೇಕು. ಧೈರ್ಯವಾಗಿ ಪರೀಕ್ಷೆ ಬರೆಯುವಂತೆ ಹೇಳಬೇಕು. ಮೂರು ಪರೀಕ್ಷೆಗಳನ್ನು ಪರಿಚಯಿಸಿದ ವಿವರ, ಅನುಕೂಲಗಳನ್ನು ಮನವರಿಕೆ ಮಾಡಿಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ವೃದ್ಧಿಸಬೇಕು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೊದಲಬಾರಿ ಪರಿಚಯಿಸಿದಾಗ ಆದ ಲೋಪಗಳು ಪಿಯು ಪರೀಕ್ಷೆಯಲ್ಲಿ ಪುನರಾವರ್ತನೆಯಾಗದಂತೆ ಎಲ್ಲರೂ ಎಚ್ಚರಿಕೆ ವಹಿಸಬೇಕು ಎಂದು ಸೂಚಿಸಲಾಗಿದೆ' ಎಂದು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

> **ಪದವಿಪೂರ್ವ ಶಿಕ್ಷಣದ ಪರೀಕ್ಷೆಗಳು ಮೊದಲಿನಿಂದಲೂ ಪಾವಿತ್ರ್ಯ ಉಳಿಸಿಕೊಂಡಿವೆ. ವೆಬ್‌ಕಾಸ್ಟಿಂಗ್‌ನಿಂದ ಇನ್ನಷ್ಟು ಪಾರದರ್ಶಕವಾಗಲಿವೆ**
> **ಎ.ಎಚ್. ನಿಂಗೇಗೌಡ**, ಅಧ್ಯಕ್ಷ, ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘ

> **2024ರ ಮೊದಲ ಪರೀಕ್ಷೆಯ ನಂತರ ವೆಬ್‌ಕಾಸ್ಟಿಂಗ್ ಅಳವಡಿಸಲು ನಿರ್ಧರಿಸಲಾಗಿತ್ತು. 2025ರಿಂದ ಎಲ್ಲ ಕೇಂದ್ರಗಳಲ್ಲೂ ಕಡ್ಡಾಯಗೊಳಿಸಲಾಗಿದೆ**
> **ರಿತೇಶ್‌ಕುಮಾರ್ ಸಿಂಗ್**, ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ

ಅಂಕಿ ಅಂಶಗಳು

1,231 ಸರ್ಕಾರಿ ಪಿಯು ಕಾಲೇಜುಗಳು

825 ಅನುದಾನಿತ ಕಾಲೇಜುಗಳು

3,567 ಖಾಸಗಿ ಪಿಯು ಕಾಲೇಜುಗಳು

1,124 2024ರಲ್ಲಿದ್ದ ಪರೀಕ್ಷಾ ಕೇಂದ್ರಗಳು

6.98 ಲಕ್ಷ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳು

ಏನಿದು ವೆಬ್‌ಕಾಸ್ಟಿಂಗ್?

ಪ್ರತಿ ಪರೀಕ್ಷಾ ಕೊಠಡಿಯಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗುತ್ತದೆ. ಹೀಗೆ ಅಳವಡಿಸಿದ ಕ್ಯಾಮೆರಾಗಳ ಐಪಿ ಸಂಖ್ಯೆಗಳನ್ನು (ಇಂಟರ್‌ನೆಟ್ ಪ್ರೋಟೊಕಾಲ್ ನಂಬರ್) ಬಳಸಿಕೊಂಡು ಆಯಾ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಿದ ನಿಯಂತ್ರಣ ಕೊಠಡಿಗಳಲ್ಲಿ ಕುಳಿತು ಅಧಿಕಾರಿಗಳು ಎಲ್ಲ ಕೇಂದ್ರಗಳ ಚಟುವಟಿಕೆ ವೀಕ್ಷಿಸಬಹುದು. ಪರೀಕ್ಷಾ ಅಕ್ರಮ ಕಂಡುಬಂದರೆ ತಕ್ಷಣ ಆ ಕೇಂದ್ರದ ಮುಖ್ಯಸ್ಥರಿಗೆ ಮಾಹಿತಿ ನೀಡಲಾಗುತ್ತದೆ. ಜತೆಗೆ, ಅಕ್ರಮಕ್ಕೆ ಸಹಕರಿಸಿದ ಕೊಠಡಿ ಮೇಲ್ವಿಚಾರಕರ ಮೇಲೆ ಕ್ರಮ ಜರುಗಿಸಲಾಗುತ್ತದೆ.

ಸುದ್ದಿ 2 ನಿಮಿಷ

'ಸುವರ್ಣ ಮಹೋತ್ಸವ' ಪ್ರಶಸ್ತಿ ಮೊತ್ತ ₹1 ಲಕ್ಷಕ್ಕೆ ಹೆಚ್ಚಳ

ಬೆಂಗಳೂರು: 'ಕರ್ನಾಟಕ ಸಂಭ್ರಮ–50' ಅಭಿಯಾನದ ಸುವರ್ಣ ಮಹೋತ್ಸವದ ನೆನಪಿಗಾಗಿ ವಿವಿಧ ಕ್ಷೇತ್ರಗಳ ತಲಾ 50 ಮಹಿಳೆಯರು ಮತ್ತು ಪುರುಷ ಸಾಧಕರಿಗೆ ನೀಡುತ್ತಿರುವ 'ಸುವರ್ಣ ಮಹೋತ್ಸವ' ಪ್ರಶಸ್ತಿಯ ಮೊತ್ತವನ್ನು ₹50 ಸಾವಿರದಿಂದ ₹1 ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬುಧವಾರ 100 ಸಾಧಕರ ಪಟ್ಟಿ ಬಿಡುಗಡೆ ಮಾಡಿತ್ತು. ಪ್ರಶಸ್ತಿಯ ನಗದು ಪುರಸ್ಕಾರವನ್ನು ₹50 ಸಾವಿರ ಎಂದು ಘೋಷಿಸಿತ್ತು. ಒಂದು ದಿನದ ಬಳಿಕ ಮೊತ್ತವನ್ನು ₹1 ಲಕ್ಷಕ್ಕೆ ಹೆಚ್ಚಳ ಮಾಡಿದೆ.

'ಕರ್ನಾಟಕ ಸಂಭ್ರಮ–50' ಅಭಿಯಾನದ ಐತಿಹಾಸಿಕ ಆಚರಣೆಗಾಗಿ ನೀಡುತ್ತಿರುವ ಪ್ರಶಸ್ತಿಯ ಮೊತ್ತವನ್ನು ಹೆಚ್ಚಳ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪ್ರಶಸ್ತಿಗೆ ಆಯ್ಕೆಯಾದ ಎಲ್ಲ 100 ಸಾಧಕರಿಗೂ ಈ ಮೊತ್ತ ದೊರಕಲಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ

ನಾಗಮಂಗಲ, ಚನ್ನಪಟ್ಟಣದಲ್ಲೂ ನೋಟಿಸ್: ಅಶೋಕ

ಬೆಂಗಳೂರು: ವಿಜಯಪುರದ ಬಳಿಕ ಕೋಲಾರದಲ್ಲಿ ದೇವಸ್ಥಾನದ ಆಸ್ತಿಗಳನ್ನು ವಕ್ಫ್ ಮಂಡಳಿ ಆಸ್ತಿ ಎಂದು ನಮೂದಿಸಲಾಗಿದೆ. ನಾಗಮಂಗಲ, ಚನ್ನಪಟ್ಟಣ, ಬೆಳಗಾವಿ ಮುಂತಾದ ಕಡೆಗಳಲ್ಲಿ ರೈತರ ಜಮೀನು ಕೊಳ್ಳೆ ಹೊಡೆಯಲು ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಲಾಗಿದೆ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಜಮೀನು, ದೇವಸ್ಥಾನಗಳ ಆಸ್ತಿಗಳನ್ನು ಕಬಳಿಸುತ್ತಿರುವ ವಕ್ಫ್ ಮಂಡಳಿ ಮತ್ತು ಕಾಂಗ್ರೆಸ್ ವಿರುದ್ಧ ನ.4ರಿಂದ ತೀವ್ರ ಹೋರಾಟ ಆರಂಭಿಸಲಾಗುವುದು ಎಂದು ತಿಳಿಸಿದರು.

ಭೂಗಳ್ಳರು ಮಾತ್ರವಲ್ಲದೇ, ಸರ್ಕಾರವೇ ಅಧಿಕೃತವಾಗಿ ಒತ್ತುವರಿ ಆರಂಭ ಮಾಡಿದೆ. ಇದರ ವಿರುದ್ಧ ರೈತ ಸಂಘಟನೆಗಳು ತೀವ್ರವಾಗಿ ಪ್ರತಿಭಟಿಸಬೇಕು. ಹಿಂದೆ ಮುಸ್ಲಿಂ ರಾಜರು ದಾಳಿ ಮಾಡಿದ್ದರು. ಅದೇ ರೀತಿಯಲ್ಲಿ ಈಗ ರೈತರು ಮತ್ತು ದೇವಾಲಯಗಳ ಜಮೀನಿನ ಕಬಳಿಕೆ ನಡೆಯುತ್ತಿದೆ. ಇಂತಹವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಓಲೈಸುತ್ತಿದ್ದಾರೆ ಎಂದರು. ರೈತರಿಗೆ ನೋಟಿಸ್ ಕೊಟ್ಟ ಅಧಿಕಾರಿಯನ್ನು ಜೈಲಿಗೆ ಹಾಕಲು ಮುಖ್ಯಮಂತ್ರಿಗೆ ಧಮ್ ಇಲ್ಲ. ಇಲ್ಲಿ ರಾಜಕಾರಣಕ್ಕಿಂತ ರೈತರಿಗೆ ಉತ್ತರ ನೀಡುವುದು ಮುಖ್ಯ ಎಂದು ಅಶೋಕ ಹೇಳಿದರು.

ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, 1974 ರಲ್ಲಿ ಒಂದು ಗೆಜೆಟ್ ಅಧಿಸೂಚನೆ ಹೊರಡಿಸಲಾಗಿತ್ತು. ಆಗ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿ ಇತ್ತು. ಆ ಗೆಜೆಟ್ ಅಧಿಸೂಚನೆ ವಾಪಸ್ ಪಡೆಯದಿದ್ದರೆ, ಮುಖ್ಯಮಂತ್ರಿಗಳ ವಕ್ಫ್ ಕುರಿತ ನೋಟಿಸ್ ವಾಪಸ್ ಪಡೆಯುವ ಬೊಗಳೆ ಭಾಷಣದಿಂದ ಪ್ರಯೋಜನ ಆಗದು ಎಂದರು.

ಚಿಕ್ಕಮಗಳೂರಿನ ಬಿಂಡಿಗ ದೇವೀರಮ್ಮ ದೇವಿಯ ದರ್ಶನ ಪಡೆಯಲು ದೇವಿರಮ್ಮ ಬೆಟ್ಟ ಹತ್ತಿದ ಜನ

ಬಿಂಡಿಗ ದೇವೀರಮ್ಮ ಬೆಟ್ಟದಲ್ಲಿ ಭಕ್ತ ಸಾಗರ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ವರ್ಷಕ್ಕೊಮ್ಮೆ ದರ್ಶನ ನೀಡುವ ದೇವೀರಮ್ಮ ದೇವಿಯನ್ನು ಕಣ್ತುಂಬಿಕೊಳ್ಳಲು ಗುರುವಾರ ದೇವೀರಮ್ಮ ಬೆಟ್ಟದಲ್ಲಿ ಭಕ್ತ ಸಾಗರವೇ ಸೇರಿತ್ತು.

ಚಿಕ್ಕಮಗಳೂರು ತಾಲ್ಲೂಕಿನ ಮಲ್ಲೇನಹಳ್ಳಿಯ ಬಿಂಡಿಗ ದೇವೀರಮ್ಮ ಜಾತ್ರೆ ಗುರುವಾರ ಆರಂಭವಾಗಿದೆ. ಗುರುವಾರ ಬೆಳಿಗ್ಗೆಯಿಂದಲೇ ದೇವೀರಮ್ಮ ಗುಡ್ಡ ಭಕ್ತರಿಂದ ತುಂಬಿಕೊಂಡಿತ್ತು. ಕಲ್ಲು ಮುಳ್ಳುಗಳ ಹಾದಿಯಲ್ಲಿ ಬರಿಗಾಲಿನಲ್ಲೇ ಸಾಗಿದ ಭಕ್ತರು, ಬೆಟ್ಟ ಏರಿ ದೇವಿಯ ದರ್ಶನ ಪಡೆದರು.

ಸಮುದ್ರ ಮಟ್ಟದಿಂದ ಮೂರು ಸಾವಿರ ಅಡಿಗಳಷ್ಟು ಎತ್ತರದ ಬೆಟ್ಟದ ತುದಿಯಲ್ಲಿ ಇರುವ ದೇಗುಲಕ್ಕೆ ಬುಧವಾರ ಸಂಜೆಯಿಂದಲೇ ಭಕ್ತರು ಬರಲಾರಂಭಿಸಿದ್ದರು. ಇಡೀ ರಾತ್ರಿ ಕತ್ತಲೆಯಲ್ಲಿ ಮೊಬೈಲ್ ಟಾರ್ಚ್ ಬೆಳಗಿಸಿಕೊಂಡು ದುರ್ಗಮ ಹಾದಿಯಲ್ಲಿ ಹೆಜ್ಜೆ ಹಾಕಿದರು. ಚೂಪು ಆಕೃತಿಯ ಈ ಬೆಟ್ಟದ ತುದಿಗೆ ಏರಿ ಸಂಭ್ರಮಿಸಿದರು.

ಬಹುತೇಕ ಭಕ್ತರು ಮಲ್ಲೇನಹಳ್ಳಿ ಕಡೆಯಿಂದ ಪ್ರಮುಖ ದಾರಿಯಲ್ಲಿ ಬಂದರೆ, ಅನೇಕರು ಮಾಣಿಕ್ಯಧಾರ ಜಲಪಾತದ ಕಡೆಯಿಂದ ಸಾಲುಗಟ್ಟಿ ಬಂದರು. ಇನ್ನೊಂದೆಡೆ ಅರಿಶಿಣಗುಪ್ಪೆ ಕಡೆಯಿಂದ ತೋಟದೊಳಗಿನ ಮಾರ್ಗದಲ್ಲೂ ಹಲವರು ಬಂದು ದೇವಿಯ ದರ್ಶನ ಪಡೆದರು.

ಬುಧವಾರ ರಾತ್ರಿ ಮಳೆ ಸುರಿದಿದ್ದರಿಂದ ಜಾರುವ ಹಾದಿಯಲ್ಲಿ ಬೆಟ್ಟಹತ್ತಲು ಭಕ್ತರು ಹರಸಾಹಸ ಪಟ್ಟರು. ಹಾದಿಯುದ್ದಕ್ಕೂ ಪರಸ್ಪರರಿಗೆ ಸಹಕಾರ ನೀಡುತ್ತ ಪಯಣ ಸಾಗಿತು. ಒಬ್ಬರಿಗೊಬ್ಬರು ಆಸರೆಯಾಗಿ ಕೈ ಕೈ ಹಿಡಿದುಕೊಂಡು ನಡೆದರು. ಬುಧವಾರ ರಾತ್ರಿ ಮಳೆ ಸುರಿದಿದ್ದರಿಂದ, ಬಿದ್ದು ಎದ್ದು ಮುಂದೆ ಸಾಗುತ್ತಲೇ ದೇವಿಯ ದರ್ಶನ ಪಡೆದರು. ಕಡಿದಾದ ಪ್ರದೇಶದಲ್ಲಿ ಭಕ್ತರಿಗೆ ನೆರವಾಗಲು ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಅಲ್ಲಲ್ಲಿ ನಿಂತಿದ್ದರು. ಹಗ್ಗದ ಸಹಾಯದಿಂದ ಮೇಲೆ ಏರಲು ಸಹಕಾರ ಮಾಡಿದರು.

ಜಾತ್ರಾ ಮಹೋತ್ಸದ ನಿಮಿತ್ತ ಮಲ್ಲೇನಹಳ್ಳಿ, ಬಿಂಡಿಗ ಮತ್ತು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಸಂಭ್ರಮ ಮನೆ ಮಾಡಿದೆ. ಬೆಟ್ಟದ ತಳದಲ್ಲಿನ ಬಿಂಡಿಗದ ದೇವೀರಮ್ಮ ದೇಗುಲದಲ್ಲಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಭಕ್ತರು ಬೆಟ್ಟ ಇಳಿದು ವಾಹನಗಳತ್ತ ಸಾಗುವ ಕಡೆಗಳಲ್ಲೂ ಪ್ರಸಾದ ಲಭ್ಯವಾಗುವಂತೆ ದೇವಸ್ಥಾನ ಮಂಡಳಿ ವ್ಯವಸ್ಥೆ ಮಾಡಿತ್ತು.

ದರ್ಶನ್‌ಗೆ ಮಧ್ಯಂತರ ಜಾಮೀನು ಮೇಲ್ಮನವಿಗೆ ಪೊಲೀಸರ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ದರ್ಶನ್ ಅವರಿಗೆ ಹೈಕೋರ್ಟ್ ನೀಡಿರುವ ಮಧ್ಯಂತರ ಜಾಮೀನು ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಪೊಲೀಸರು ಚಿಂತನೆ ನಡೆಸಿದ್ದಾರೆ.

ವೈದ್ಯಕೀಯ ಚಿಕಿತ್ಸೆ ಪಡೆಯಲು ಹೈಕೋರ್ಟ್ ಆರು ವಾರಗಳ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದು, ದರ್ಶನ್ ಅವರು ಬಳ್ಳಾರಿ ಜೈಲಿನಿಂದ ಬುಧವಾರ ಸಂಜೆ ಬಿಡುಗಡೆ ಆಗಿದ್ದರು. ಬುಧವಾರ ಸಂಜೆ ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ಪ್ರಕರಣದ ತನಿಖಾಧಿಕಾರಿಗಳ ಸಭೆ ನಡೆದಿದ್ದು, ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಸಂಬಂಧ ಚರ್ಚೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

'ಆದೇಶದ ಪೂರ್ಣಪ್ರತಿ ಇನ್ನೂ ಸಿಕ್ಕಿಲ್ಲ. ಸಿಕ್ಕಿದ ಬಳಿಕ ಕಾನೂನು ತಜ್ಞರ ಜತೆಗೆ ಚರ್ಚೆ ನಡೆಸಲಾಗುವುದು. ಸೋಮವಾರ ಮತ್ತೆ ಸಭೆ ನಡೆಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಮೂಲಗಳು ತಿಳಿಸಿವೆ.

ಹೊಸಕೆರೆಹಳ್ಳಿ ಫ್ಲ್ಯಾಟ್‌ನಲ್ಲಿ ವಾಸ್ತವ್ಯ: ಬಳ್ಳಾರಿ ಕಾರಾಗೃಹದಿಂದ ಬುಧವಾರ ಸಂಜೆ ಬಿಡುಗಡೆಯಾದ ದರ್ಶನ್ ಅವರು ತಡರಾತ್ರಿ ಬೆಂಗಳೂರು ತಲುಪಿದರು. ಹೊಸಕೆರೆಹಳ್ಳಿಯ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ಪತ್ನಿ ವಿಜಯಲಕ್ಷ್ಮಿ ಅವರಿಗೆ ಸೇರಿದ ಫ್ಲ್ಯಾಟ್‌ನಲ್ಲಿ ವಾಸ್ತವ್ಯ ಮಾಡಿದ್ದಾರೆ. ಗುರುವಾರ ಮಧ್ಯಾಹ್ನದ ವೇಳೆಗೆ ಆಸ್ಪತ್ರೆಗೆ ದಾಖಲಾಗುತ್ತಾರೆ ಎನ್ನುವ ಸುದ್ದಿ ಹರಿದಾಡಿತ್ತು. ಆದರೆ, ಅವರು ಹೊರಗೆ ಕಾಣಿಸಿಕೊಳ್ಳಲಿಲ್ಲ. ದರ್ಶನ್ ಅವರು ಶುಕ್ರವಾರ ಅಥವಾ ಸೋಮವಾರ ಆಸ್ಪತ್ರೆಗೆ ದಾಖಲಾಗಿ ವೈದ್ಯಕೀಯ ಪರೀಕ್ಷೆಗೆ ಒಳಗಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ದರ್ಶನ್ ಅವರ ಕಾರುಗಳನ್ನು ರಾಜರಾಜೇಶ್ವರಿ ನಗರದ ನಿವಾಸದಿಂದ ಹೊಸಕೆರೆಹಳ್ಳಿ ನಿವಾಸಕ್ಕೆ ತಂದು ಲಕ್ಷ್ಮಿ ಪೂಜೆ ನೆರವೇರಿಸಲಾಯಿತು.

ವದಂತಿಯಿಂದ ಮನಸ್ತಾಪ; ಪರಿಸ್ಥಿತಿ ತಿಳಿಗೊಳಿಸಿದ ಪೊಲೀಸರು

ವಕ್ಫ್ ಆಸ್ತಿ ಗಲಾಟೆ: ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ಸವಣೂರು ತಾಲ್ಲೂಕಿನ ಕಡಕೋಳ ಗ್ರಾಮದಲ್ಲಿ ವಕ್ಫ್ ಆಸ್ತಿ ವಿಷಯಕ್ಕೆ ಸಂಬಂಧಪಟ್ಟಂತೆ ಗಲಾಟೆಯಾಗಿದ್ದು, ಮುಸ್ಲಿಂ ಸಮುದಾಯದ 8 ಮುಖಂಡರ ಮನೆಗಳ ಮೇಲೆ ಕಲ್ಲು ತೂರಾಟ ನಡೆದಿದೆ.

ಬುಧವಾರ ರಾತ್ರಿ ನಡೆದ ಗಲಾಟೆಯಿಂದ ಗ್ರಾಮದಲ್ಲಿ ಗುರುವಾರ ಪ್ರಕ್ಷುಬ್ಧ ವಾತಾವರಣವಿತ್ತು. ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಸಂಜೆ ಮುಖಂಡರ ಸಭೆ ನಡೆಸಿದ ಪೊಲೀಸರು, ಪರಸ್ಪರ ಸಂಧಾನ ಮಾಡಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ.

'ವಕ್ಫ್ ಆಸ್ತಿಗೆ ಸಂಬಂಧಪಟ್ಟಂತೆ ಮಾತುಕತೆ ನಡೆಸುವಾಗ, ಪರಿಸ್ಥಿತಿ ವಿಕೋಪಕ್ಕೆ ಹೋಗಿ ಗಲಾಟೆ ಶುರುವಾಗಿತ್ತು. ಆಗ ಮನೆಗಳ ಮೇಲೆ ಕಲ್ಲು ತೂರಾಟ ನಡೆದಿತ್ತು. ತಡೆಯಲು ಬಂದವರ ಮೇಲೂ ಹಲ್ಲೆ ಆಗಿತ್ತು. ಗಲಾಟೆಯಲ್ಲಿ ಇಬ್ಬರು ತೀವ್ರ ಗಾಯಗೊಂಡಿದ್ದಾರೆ' ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು, 32 ಆರೋಪಿಗಳನ್ನು ಬಂಧಿಸಲಾಗಿತ್ತು. ಈಗ ಪರಿಸ್ಥಿತಿ ತಿಳಿಯಾಗಿದೆ. ಮುಸ್ಲಿಂ ಮುಖಂಡರು ಪ್ರಕರಣ ಬೇಡ ಎಂದರು. ಹೀಗಾಗಿ, 32 ಮಂದಿಯನ್ನು ವಿಚಾರಣೆ ಮಾಡಿ, ಬಿಟ್ಟು ಕಳುಹಿಸಿದ್ದೇವೆ' ಎಂದು ಅವರು ಹೇಳಿದರು.

ವಕ್ಫ್ ಆಸ್ತಿ ಪಟ್ಟಿ ತಯಾರಿ ವದಂತಿ: 'ಮುಸ್ಲಿಂ ಮುಖಂಡರು ಮತ್ತು ಇತರರ ಹೊಲಗಳಲ್ಲಿ ಆರೋಪಿಗಳು ಕೂಲಿ ಮಾಡಿಜೀವನ ನಡೆಸುತ್ತಿದ್ದರು. ಕಡಕೋಳದಲ್ಲೂ ವಕ್ಫ್ ಆಸ್ತಿಗಳ ಪಟ್ಟಿ ಮಾಡುತ್ತಿರುವ ಬಗ್ಗೆ ಗ್ರಾಮದಲ್ಲಿ ವದಂತಿ ಹರಡಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ದಾಳಿ ಭಯದಲ್ಲಿ ಮುಸ್ಲಿಂ ಹಾಗೂ ಹಿಂದೂಗಳ ಕೆಲವು ಕುಟುಂಬಗಳು ಊರು ತೊರೆದಿವೆ.

> **ಮನೆಗಳ ಮೇಲೆ ಕಲ್ಲು ತೂರಾಟ ನಡೆದಿದೆ. ದೂರು ಕೊಡಲು ಯಾರೂ ಸಿದ್ಧರಿರಲಿಲ್ಲ. ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದೇವೆ**
> **ಅಂಶುಕುಮಾರ್**, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಹಾವೇರಿ

> **ಕಡಕೋಳದಲ್ಲಿ ಮೂರು ವಕ್ಫ್ ಆಸ್ತಿಗಳಿವೆ. ವೈಯಕ್ತಿಕವಾಗಿ ಯಾರಿಗೂ ನೋಟಿಸ್ ಕೊಟ್ಟಿಲ್ಲ. ಆತಂಕಪಡಬೇಕಿಲ್ಲ**
> **ವಿಜಯ ಮಹಾಂತೇಶ ದಾನಮ್ಮನವರ**, ಜಿಲ್ಲಾಧಿಕಾರಿ

ವಕ್ಫ್ ಕಾನೂನು ದುರ್ಬಳಕೆ; ಗಲಾಟೆಗೆ ಸರ್ಕಾರವೇ ಹೊಣೆ: ಬೊಮ್ಮಾಯಿ

ಶಿಗ್ಗಾವಿ: 'ರಾಜ್ಯದಲ್ಲಿ ವಕ್ಫ್ ಕಾನೂನು ದುರ್ಬಳಕೆ ಆಗುತ್ತಿದೆ. ಕಂದಾಯ ದಾಖಲೆ ಕಡೆಗಣಿಸಿ ರೈತರ ಜಮೀನಿನ ಪಹಣಿ ಪತ್ರದಲ್ಲಿ ವಕ್ಫ್ ಆಸ್ತಿಯೆಂದು ನಮೂದು ಮಾಡಲಾಗುತ್ತಿದೆ. ರೈತರಿಗೆ ನೀಡಿದ ನೋಟಿಸ್‌ಗಳನ್ನು ಸರ್ಕಾರ ಹಿಂಪಡೆಯಬೇಕು. ದಾಖಲೆ ಪರಿಶೀಲಿಸಿ ರೈತರಿಗೆ ನ್ಯಾಯ ಒದಗಿಸಿಕೊಡಬೇಕು' ಎಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

ಪಟ್ಟಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸವಣೂರು ತಾಲ್ಲೂಕಿನ ಕಡಕೋಳ ಗ್ರಾಮದಲ್ಲಿ ಆದ ಗಲಾಟೆಗೆ ಸರ್ಕಾರವೇ ಹೊಣೆ. ಗ್ರಾಮೀಣ ಪ್ರದೇಶದಲ್ಲಿ ಎಲ್ಲರೂ ಸೌಹಾರ್ದದಿಂದ ಜೀವನ ನಡೆಸಿದ್ದಾರೆ. ಸೌಹಾರ್ದತೆ ಕದಡುವ ಕೆಲಸ ನಡೆದಿದೆ' ಎಂದರು.

'ಚುನಾವಣೆ ಕಾರಣಕ್ಕೆ ವಿವಾದ ಮುನ್ನೆಲೆಗೆ'

ಕಲಬುರಗಿ: 'ರಾಜ್ಯದಲ್ಲಿ ಉಪ ಚುನಾವಣೆಗಳು ನಡೆಯುತ್ತಿರುವುದರಿಂದ ವಕ್ಫ್ ವಿವಾದವನ್ನು ಮುನ್ನೆಲೆಗೆ ತರಲಾಗುತ್ತಿದೆ. ಬಿಜೆಪಿ ಅಧಿಕಾರದಲ್ಲಿದ್ದಾಗಲೂ ವಕ್ಫ್ ಆಸ್ತಿಗಳು ಎಲ್ಲೆಲ್ಲಿವೆ ಎಂದು ಗುರುತಿಸಲಾಗಿತ್ತು. ಕಲಬುರಗಿ ಜಿಲ್ಲೆಯೊಂದರಲ್ಲೇ 95 ಆಸ್ತಿಗಳನ್ನು ವಕ್ಫ್ ಆಸ್ತಿ ಎಂದು ಬಿಜೆಪಿ ಸರ್ಕಾರ ಇದ್ದಾಗ ಗುರುತಿಸಲಾಗಿತ್ತು. ಇದಕ್ಕೆ ಬಿಜೆಪಿ ನಾಯಕರು ಏನೆನ್ನುತ್ತಾರೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರೈತರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಬಿಜೆಪಿಯವರು ಪರಿಸ್ಥಿತಿಯ ಲಾಭ ಪಡೆಯಲು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಬಿಜೆಪಿ ಅವಧಿಯಲ್ಲಿಯೂ ವಕ್ಫ್ ಅದಾಲತ್‌ಗಳು ನಡೆದಿದ್ದವು. ಆಗೇನು ವಕ್ಫ್ ಮಂಡಳಿ ಬಾಗಿಲು ಹಾಕಿತ್ತೇ' ಎಂದು ಪ್ರಶ್ನಿಸಿದರು.

ಏಳು ಪೊಲೀಸ್ ಅಧಿಕಾರಿಗಳಿಗೆ ಗೃಹಮಂತ್ರಿ ದಕ್ಷತಾ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ಕಾರ್ಯಾಚರಣೆ, ತನಿಖೆ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ (ಎಫ್‌ಎಸ್‌ಎಲ್) ಶ್ಲಾಘನೀಯ ಸೇವೆ ಸಲ್ಲಿಸಿದ ರಾಜ್ಯದ ಏಳು ಪೊಲೀಸ್ ಅಧಿಕಾರಿಗಳಿಗೆ ಕೇಂದ್ರ ಗೃಹ ಸಚಿವಾಲಯ ನೀಡುವ 'ಗೃಹ ಮಂತ್ರಿ ದಕ್ಷತಾ ಪದಕ–2024' ಲಭಿಸಿದೆ.

ಯಾರಿಗೆ ಪದಕ: ಡಿವೈಎಸ್‌ಪಿ ಕೆ.ಬಸವರಾಜ(ಆಂತರಿಕ ಭದ್ರತಾ ವಿಭಾಗ), ಎಸಿಪಿ ವಿ.ಎಲ್. ರಮೇಶ್(ಬೆಂಗಳೂರು ನಗರ), ಇನ್‌ಸ್ಪೆಕ್ಟರ್‌ಗಳಾದ ಉಮೇಶ್ ಕಾಂಬ್ಳೆ(ರಾಯಚೂರು), ನರೇಂದ್ರ ಬಾಬು(ಸಿಐಡಿ), ಕೆ.ಎಂ. ವಸಂತ್(ಹಾಸನ), ರಮೇಶ್ ಎಚ್. ಹೊನ್ನಾಪುರ(ಕಾರವಾರ) ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ಉಪ ನಿರ್ದೇಶಕ ಪ್ರವೀಣ್ ಸಂಗನಾಳ್ ಮಠ ಅವರಿಗೆ ಪದಕ ಲಭಿಸಿದೆ.

ಕ್ಲಿಷ್ಟ ರೀತಿಯ ಅಪರಾಧ ಪ್ರಕರಣಗಳನ್ನು ಭೇದಿಸಿ ಉತ್ತಮ ತನಿಖೆ ನಡೆಸುವ ತನಿಖಾಧಿಕಾರಿಗಳಿಗೆ ಪ್ರತಿವರ್ಷ ಕೇಂದ್ರ ಗೃಹ ಸಚಿವಾಲಯವು ಗೃಹ ಸಚಿವರ ಹೆಸರಿನಲ್ಲಿ ಈ ಪದಕ ನೀಡುತ್ತದೆ. ಈ ಬಾರಿ ವಿಶೇಷ ಕಾರ್ಯಾಚರಣೆ ವಿಭಾಗದಲ್ಲಿ ವಿವಿಧ ರಾಜ್ಯಗಳ 348 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ, ತನಿಖಾ ವಿಭಾಗದಲ್ಲಿ 107 ಮಂದಿಗೆ ಹಾಗೂ ಎಫ್‌ಎಸ್‌ಎಲ್ ವಿಭಾಗದಲ್ಲಿ ಎಂಟು ಮಂದಿಗೆ ಈ ಪದಕ ಲಭಿಸಿದೆ.

ಕೆ.ಬಸವರಾಜ

ವಿ.ಎಲ್.ರಮೇಶ್

ಉಮೇಶ್ ಕಾಂಬ್ಳೆ



ನರೇಂದ್ರ ಬಾಬು



ಕೆ.ಎಂ.ವಸಂತ್

ರಮೇಶ್ ಎಚ್. ಹೊನ್ನಾಪುರ

ಪ್ರವೀಣ್ ಸಂಗನಾಳ್ ಮಠ

ವಾಂತಿ–ಭೇದಿ 41ಕ್ಕೇರಿದ ಪ್ರಕರಣ

ಸೇಡಂ(ಕಲಬುರಗಿ ಜಿಲ್ಲೆ): ಸೇಡಂ ತಾಲ್ಲೂಕಿನ ಹೂಡಾ(ಬಿ) ಗ್ರಾಮದಲ್ಲಿ ವಾಂತಿ–ಭೇದಿ ಪ್ರಕರಣಗಳ ಸಂಖ್ಯೆ 41ಕ್ಕೇರಿದೆ. ಬುಧವಾರ 13 ಜನ ಆಸ್ಪತ್ರೆಗೆ ದಾಖಲಾಗಿದ್ದರು. ಗುರುವಾರ ಮತ್ತೆ 28 ಜನರಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿದೆ. ಮಳಖೇಡ ಸಮುದಾಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

'ಕಲುಷಿತ ನೀರಿನ ಸೇವನೆಯಿಂದ ವಾಂತಿ–ಭೇದಿ ಕಾಣಿಸಿಕೊಂಡಿದೆ. ರಾಜಶ್ರೀ ಸಿಮೆಂಟ್ ಕಂಪನಿ ಗ್ರಾಮಕ್ಕೆ ನದಿ ನೀರನ್ನು ಶುದ್ಧೀಕರಿಸದೆ ನೇರವಾಗಿ ಪೂರೈಸುತ್ತಿದೆ. ಬೋರ್‌ವೆಲ್ ಹತ್ತಿರ ಮುಖ್ಯ ಪೈಪ್ ಒಡೆದು ನೀರಿನ ಸೋರಿಕೆಯಾಗಿರುವುದು ಸಹ ವಾಂತಿ ಭೇದಿಗೆ ಕಾರಣವಾಗಿದೆ' ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿ ವರದಿ ಸಲ್ಲಿಸಿದ್ದಾರೆ.

ಗುರುವಾರ ಗ್ರಾಮಕ್ಕೆ ಭೇಟಿ ನೀಡಿದ ಸಚಿವ ಡಾ.ಶರಣಪ್ರಕಾಶ ಪಾಟೀಲ, ಶೀಘ್ರವೇ ರಾಜಶ್ರೀ ಸಿಮೆಂಟ್ ಕಂಪನಿಗೆ ನೋಟಿಸ್ ನೀಡಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

KARANATAKA STATE LAW UNIVERSITY'S LAW SCHOOL
NAVANAGAR HUBBALLI - 25
Accredited by NAAC with 'A' Grade

2 Year LL.M. ADMISSION NOTIFICATION 2024- 25

Applications are invited for 2yr LL.M. (Constitutional Law, Intellectual Property Rights Laws and Criminal Law) for Academic Year 2024-25

Last date for submission of filled in application form to KSLU's Law School	16-11-2024
Announcement of list of selected candidate on merit cum reservation basis	20-11-2024
Date of commencement of classes for 'Odd' semester	27-11-2024

Minimum Qualification:
LL.B with 45% Aggregate Marks (SC/ST 40%)
Application Forms may be obtained from the Office of the Karnataka State Law University's Law School, Navanagar, Hubballi - 580 025, by paying an application fee of Rs. 500/- (for SC/St Rs 250/-) through Bank Challan, SBI Online Challan.

OR

Application can also be downloaded from the Website www.kslu.karnataka.gov.in and filled Application shall be submitted along with the Bank Challan, SBI Online Challan to The **Director, KSLU's Law School, Navanagar, Hubballi - 580025.**
Contact Details: 0836-2956072
For more details refer website www.kslu.karnataka.gov.in

DIPR/Dwd/569/DeshpandePublicity/2024-25 Sd/- Director

ಬಿಜೆಪಿ–ಜೆಡಿಎಸ್ ಅವಧಿಯಿಂದಲೇ ನೋಟಿಸ್: ಕಾಂಗ್ರೆಸ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕ್ಫ್ ಆಸ್ತಿ ಸಂರಕ್ಷಣೆಗಾಗಿ ಕಂದಾಯ ಇಲಾಖೆ 2006–08ರ ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಿಂದಲೂ ರೈತರಿಗೆ ನೋಟಿಸ್ ನೀಡುತ್ತಾ ಬಂದಿದೆ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಆರೋಪ ಮಾಡಿದ್ದಾರೆ.

ಕೇಂದ್ರ ಬಿಜೆಪಿ ಸರ್ಕಾರ ಮಾದರಿ ವಕ್ಫ್ ನಿಯಮಗಳನ್ನು ರಚಿಸಿ, ಎಲ್ಲ ರಾಜ್ಯಗಳಲ್ಲೂ ವಕ್ಫ್ ಆಸ್ತಿ ಸಂರಕ್ಷಣೆ ಮಾಡಲು ಸೂಚಿಸಿತ್ತು. ಕರ್ನಾಟಕದಲ್ಲಿ 2006ರಲ್ಲೇ ಚಿಕ್ಕಮಗಳೂರು ಜಿಲ್ಲೆಯ ರೈತರಿಗೆ ವಕ್ಫ್ ಕಾಯ್ದೆ ಅಡಿ ನೋಟಿಸ್ ನೀಡಿ, ಖಾತೆ ಬದಲಾವಣೆ ಮಾಡಲಾಗಿದೆ. 2019ರಿಂದ 2023ರ ಬಿಜೆಪಿ ಸರ್ಕಾರದ ಅವಧಿಯಲ್ಲಿ 219 ಪ್ರಕರಣಗಳಲ್ಲಿ ನೋಟಿಸ್ ನೀಡಲಾಗಿದೆ ಎಂದು ಅಂಕಿಅಂಶ ಬಿಡುಗಡೆ ಮಾಡಿದ್ದಾರೆ.

ರಾಜ್ಯದ ಕೆಲ ಭಾಗಗಳಲ್ಲಿ ನೀಡಿದ ನೋಟಿಸ್ ಪ್ರಕರಣವನ್ನು ಕೇಂದ್ರ ಸರ್ಕಾರ ತರಲು ಹೊರಟಿರುವ ತಿದ್ದುಪಡಿ ಕಾಯ್ದೆಗೆ ಸಮರ್ಥನೆಯಾಗಿ ಬಳಸಿಕೊಳ್ಳುತ್ತಿದೆ ಎಂದು ದೂರಿದ್ದಾರೆ.

ಸಂವಿಧಾನದ ಪ್ರಕಾರ ವಿವಿಧ ಧರ್ಮಗಳಿಗೆ ವಿಶೇಷ ಕಾಯ್ದೆಗಳನ್ನು ರಚಿಸಲಾಗಿದೆ. ಅಂತಹ ಕಾಯ್ದೆಗಳನ್ನು ವಕ್ಫ್ ಕಾಯ್ದೆಯೂ ಒಂದು. ಹಿಂದಿನ ಯುಪಿಎ ಸರ್ಕಾರ ವಕ್ಫ್ ಅಭಿವೃದ್ಧಿ ನಿಗಮ ಸ್ಥಾಪಿಸಿ ₹500 ಕೋಟಿ ಅನುದಾನ ನೀಡಿತ್ತು. ಬಿಜೆಪಿ ಸರ್ಕಾರ ಕಳೆದ 10 ವರ್ಷಗಳಲ್ಲಿ ಅನುದಾನವನ್ನೇ ನೀಡಿಲ್ಲ. ಈಗ ವಿಜಯಪುರ ಜಿಲ್ಲೆಯ ಪ್ರಕರಣ ಇಟ್ಟುಕೊಂಡ ಬಿಜೆಪಿ ನಾಯಕರು ರೈತರ ದಾರಿ ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ವಿಶೇಷ ದರ್ಶನ ಟಿಕೆಟ್, ವಿಐಪಿ ಪಾಸ್ ರದ್ದುಗೊಳಿಸಿದ ಜಿಲ್ಲಾಡಳಿತ

ಹಾಸನಾಂಬೆ: ಅವ್ಯವಸ್ಥೆ ಅನಾವರಣ

ಪ್ರಜಾವಾಣಿ ವಾರ್ತೆ

ಹಾಸನ: ನಗರದ ಹಾಸನಾಂಬೆಯ ದರ್ಶನಕ್ಕೆ ಸಾಗರೋಪಾದಿಯಲ್ಲಿ ಬರುತ್ತಿರುವ ಭಕ್ತರನ್ನು ನಿಯಂತ್ರಿಸಲಾಗದ ಜಿಲ್ಲಾಡಳಿತ, ವಿಶೇಷ ದರ್ಶನದ ಟಿಕೆಟ್ ಹಾಗೂ ವಿಐಪಿ ಪಾಸ್‌ಗಳನ್ನು ರದ್ದುಗೊಳಿಸಿದೆ. ಈಗ ಎಲ್ಲ ಭಕ್ತರೂ ಒಂದೇ ಸರದಿಯಲ್ಲಿ ನಿಂತು ದರ್ಶನ ಪಡೆಯುವಂತಾಗಿದೆ.

'ಲಕ್ಷಾಂತರ ವಿಐಪಿ ಪಾಸ್‌ಗಳನ್ನು ಬೇಕಾಬಿಟ್ಟಿ ವಿತರಿಸಲಾಗಿದ್ದು, ಎಲ್ಲರ ಕೈಗಳಲ್ಲೂ ಪಾಸ್‌ಗಳಿರುವುದೇ ಅವ್ಯವಸ್ಥೆಗೆ ಮುಖ್ಯ ಕಾರಣ' ಎಂದು ಭಕ್ತರು ಆಕ್ರೋಶ ವ್ಯಕ್ತಪಡಿಸಿದರು. ಸರದಿ ಸಾಲಿನಲ್ಲಿ ನಿಂತಿದ್ದ ಭಕ್ತರ ಆಕ್ರೋಶವೂ ಭುಗಿಲೆದ್ದಿದ್ದು, ಗುರುವಾರ ಬ್ಯಾರಿಕೇಡ್‌ಗಳನ್ನು ಮುರಿದು ಹಾಕಿದರು.

ಈ ಮಧ್ಯೆ ತಮ್ಮ ಮೇಲೆ ಹಲ್ಲೆ ಮಾಡಲಾಗಿದೆ ಎಂದು ಆರೋಪಿಸಿ ಪೌರಕಾರ್ಮಿಕರು, ದೇಗುಲದ ಸ್ವಚ್ಛತಾ ಕಾರ್ಯದಿಂದ ದೂರ ಉಳಿದರು.

ರೇವಣ್ಣ ಆಕ್ರೋಶ: ಈ ಸನ್ನಿವೇಶದ ಬಗ್ಗೆ, ಜಿಲ್ಲಾಧಿಕಾರಿ ಕಾರ್ಯವೈಖರಿ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಶಾಸಕ ಎಚ್.ಡಿ. ರೇವಣ್ಣ, ತಲಾ ₹1 ಸಾವಿರ ವಿಶೇಷ ದರ್ಶನದ ಟಿಕೆಟ್ ಪಡೆದು ಕುಟುಂಬದವರೊಂದಿಗೆ ದೇವಿಯ ದರ್ಶನ ಪಡೆದರು.

'ಪಾಸ್‌ಗಳನ್ನು ಮುದ್ರಿಸಲು ಜಿಲ್ಲಾಧಿಕಾರಿಗೆ ಯಾರು ಅಧಿಕಾರ ಕೊಟ್ಟರು? ಮುಖ್ಯ ಕಾರ್ಯದರ್ಶಿಗೆ ಹೇಳಿ, ಅಮಾನತು ಮಾಡಿಸುವುದಾಗಿ ಪೊಲೀಸರಿಗೆ ಎಚ್ಚರಿಕೆ ನೀಡುತ್ತಾರೆ. ಇಲ್ಲಿನ ಅವ್ಯವಸ್ಥೆಯ ಕುರಿತು ಮುಖ್ಯ ಕಾರ್ಯದರ್ಶಿಗೆ ನಾನೇ ಪತ್ರ ಬರೆಯುತ್ತೇನೆ. ತಾಕತ್ತಿದ್ದರೆ, ಡಿಸಿ ವಿರುದ್ಧ ತನಿಖೆಗೆ ಆದೇಶಿಸಲಿ. ಇಲ್ಲವಾದರೆ, ಜಿಲ್ಲಾಧಿಕಾರಿಗೆ ಅವರೂ ಶರಣಾಗಿದ್ದಾರೆ ಎಂದು ತಿಳಿದುಕೊಳ್ಳಬೇಕಾಗುತ್ತದೆ' ಎಂದರು.

ಹಾಸನಾಂಬೆ ದೇಗುಲದ ಬಳಿ ಹಾಕಿದ್ದ ಬ್ಯಾರಿಕೇಡ್ ಅನ್ನು ಮುರಿದು ಒಳನುಗ್ಗಿದ ಜನ

ಏಕಾಂಗಿ ಪ್ರತಿಭಟನೆ

ದರ್ಶನೋತ್ಸವದ ಆರಂಭದ ದಿನದಿಂದಲೂ ಅವ್ಯವಸ್ಥೆ ಹೆಚ್ಚಾಗುತ್ತಿದ್ದು, ಗುರುವಾರ ಬೆಂಗಳೂರಿನ ಚಂದ್ರಶೇಖರ್ ಎಂಬುವವರು ಏಕಾಂಗಿಯಾಗಿ ದೇಗುಲದ ಎದುರು ಪ್ರತಿಭಟನೆ ನಡೆಸಿದರು. 'ಅವ್ಯವಸ್ಥೆಗೆ ಧಿಕ್ಕಾರ' ಎಂದು ಕೂಗಿದರು.

ಜನರ ಸಂಖ್ಯೆ ಹೆಚ್ಚಿದ್ದರಿಂದ ಕಳೆದ ವರ್ಷವೂ ಇದೇ ರೀತಿ ಅವ್ಯವಸ್ಥೆ ಉಂಟಾಗಿತ್ತು. ವಿದ್ಯುತ್ ಶಾಕ್ ಸುದ್ದಿ ಹರಡಿ ಕಾಲ್ತುಳಿತದ ಘಟನೆಯೂ ನಡೆದಿತ್ತು. ಅದಾಗ್ಯೂ ಎಚ್ಚೆತ್ತುಕೊಳ್ಳದ ಜಿಲ್ಲಾಡಳಿತದ ವಿರುದ್ಧ ಜನರು ಆಕ್ರೋಶ ವ್ಯಕ್ತಪಡಿಸಿದರು.

ಮಳಿಗೆಗಳು
9.30AM - 10.30PM
FINANCE BONANZA
Upto ₹10,000
ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000
ಕ್ಯಾಶ್ ಬ್ಯಾಕ್*
ಕನ್ನಡ ರಾಜ್ಯೋತ್ಸವ Sale
ಸ್ಕ್ರಾಚ್ ಮಾಡಿ ಗೆಲ್ಲಿರಿ* ಭರವಸೆಯ
ಚಿನ್ನ ಮತ್ತು ಬೆಳ್ಳಿ ನಾಣ್ಯಗಳು
ಇಂದು ಮಾತ್ರ
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
EXCHANGE DHAMAKA
Upto ₹65,000
ಎಕ್ಸ್‌ಚೇಂಜ್ ಮೇಲೆ
ಉಚಿತ*
FIRE-BOLTT
SMART CALLING WATCH WORTH
₹20000
FINANCE POWERED BY Groww
0% EMI
Upto 3,500 Cash Back*
MIN PRODUCT VALUE ₹10,000
1 ಇ.ಎಮ್.ಐ ಉಚಿತ*
HDFC BANK
FESTIVE TREATS
10%
INSTANT DISCOUNT ON CC & DC EMI* MIN SWIPE ₹17,500 MAX CASH BACK UPTO ₹3,000
IDFC FIRST Bank CREDIT CARDS
5%
INSTANT CASHBACK ON CC EMI* MIN SWIPE ₹5000 MAX CASH BACK UPTO ₹10000
YES BANK
5%
INSTANT CASHBACK ON CC EMI* MIN SWIPE ₹20000 MAX CASH BACK UPTO ₹2000
DBS BANK
5%
INSTANT CASHBACK ON CC EMI* MIN SWIPE ₹15000 MAX CASH BACK UPTO ₹2500
ASSURED BUYBACK
UPTO 70%
On New Purchase*
Redmi NOTE 13 5G 6+128
EFFECTIVE PRICE ₹14,999* (PRICE AFTER CASH BACK)
EMI STARTS FROM ₹1,250
ಉಚಿತ: 10000 MAH POWERBANK WORTH ₹1599*
vivo Y200E 8/128
EFFECTIVE PRICE ₹17,290* (PRICE AFTER CASH BACK)
EMI STARTS FROM ₹1,441
ಉಚಿತ: BT NECK BAND OR 10000 MAH POWER BANK WORTH ₹1599*
oppo F27 8/128
EFFECTIVE PRICE ₹17,690* (PRICE AFTER CASH BACK)
EMI STARTS FROM ₹1,474
ಉಚಿತ: BT NECK BAND OR 10000 MAH POWER BANK WORTH ₹1599*
SAMSUNG A35 8+128
₹25,999*
EMI STARTS FROM ₹2,166
GET: EARBUDS @ ₹199*
iPhone 13
EFFECTIVE PRICE ₹44,840* (PRICE AFTER CASH BACK)
EXCHANGE BONUS UPTO ₹6000
EMI STARTS FROM ₹1,952
ಉಚಿತ: ANC EARBUDS OR WIRELESS MAGSAFE POWER BANK WORTH ₹6499*
DELL INS 15 3535 10% CASH BACK
Ryzen 3-7320U
8GB 512GB SSD
15.6 FHD
Win 11 MSO 21
ಇ.ಎಮ್.ಐ ₹2,624
OFFER PRICE ₹31,490
MRP ₹49,395
ಉಚಿತ: 32GB PENDRIVE + W/L MOUSE WORTH ₹1299*
Lenovo SLIM 3 10% CASH BACK
RYZEN 5 7520U
16GB, 512GB SSD
RADEON 610M
15.6" FHD
WIN 11 MSO, 21
ಇ.ಎಮ್.ಐ ₹3,666
OFFER PRICE ₹43,990
MRP ₹69,890
ಉಚಿತ: 32GB PENDRIVE AND W/L MOUSE WORTH ₹1,299*
MacBook
EMI STARTS FROM ₹3,031
UPTO ₹10000 CASHBACK
ಉಚಿತ: 1 YEAR EXTENDED WARRANTY WORTH ₹9999*
hp VICTUS 10% CASH BACK
RYZEN 5, 5600H
512GB SSD, 16GB
4GB GFX RX6500M
15.6 FHD 144 HZ
WIN 11
ಇ.ಎಮ್.ಐ ₹4,499
OFFER PRICE ₹53,990
MRP ₹67,264
ಉಚಿತ: SMART WATCH WORTH ₹7,999*
Lenovo SLIM 3i 10% CASH BACK
HOT DEALS
14TH GEN CORE5 120U
16GB, 512GB SSD
15.6 FHD
WIN 11 MSO, 21
ಇ.ಎಮ್.ಐ ₹4,916
OFFER PRICE ₹58,990
MRP ₹95,090
ಉಚಿತ: UPGRADE TO 2 YRS WARRANTY + BAG + SMART WATCH WORTH ₹10999*
SAMSUNG 98 ಕ್ಯೂಎಲ್‌ಇಡಿ SMART TV 98Q80C
ಇ.ಎಮ್.ಐ ₹19,990
LG 77 ಓಎಲ್‌ಇಡಿ EVO AI C4 4K SMART TV OLED77C46LA
ಇ.ಎಮ್.ಐ ₹2,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SONY 65 ಎಲ್‌ಇಡಿ 4K ULTRA HD HIGH DYNAMIC RANGE (HDR) SMART TV (GOOGLE TV) K-65XR80
ಇ.ಎಮ್.ಐ ₹6,500
Haier 43 ಕ್ಯೂಎಲ್‌ಇಡಿ GOOGLE TV
ಇ.ಎಮ್.ಐ ₹3,208
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
NVY PRIDE OF INDIA
LOWEST PRICE CHALLENGE
4K ಎಲ್‌ಇಡಿ
52% OFF
NVY Official LED partner of RCB
Model	Price	EMI
43 4K SMART	₹18,990	₹1,582
55 4K SMART	₹29,490	₹2,457
LG 650 Ltrs CONVERTIBLE SIDE BY SIDE REFRIGERATOR WITH PREMIUM GLASS DOOR, SMART INVERTER COMPRESSOR, HYGIENE FRESH+™ GL-B257DBM3
ಇ.ಎಮ್.ಐ ₹3,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 653 LITRES SIDE BY SIDE RS76CG8103S9HL
ಇ.ಎಮ್.ಐ ₹4,990
Panasonic 322 ಲೀ ಫ್ರಾಸ್ಟ್ ಫ್ರೀ
ಇ.ಎಮ್.ಐ ₹3,441
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್
ಇ.ಎಮ್.ಐ ₹3,274
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Whirlpool 9.5KG 5 STAR FULLY AUTOMATIC TOP-LOAD WASHING MACHINE WITH IN-BUILT HEATER
ಇ.ಎಮ್.ಐ ₹2,083
LG 28ಲೀ ಕನ್‌ವೆಕ್ಷನ್ ಮೈಕ್ರೋವೇವ್ 286UFW
CHARCOAL CONVECTION MICROWAVE
ಇ.ಎಮ್.ಐ ₹2,142
DAIKIN 1.0 TON 3 STAR INVERTER SPLIT AC
ಇ.ಎಮ್.ಐ ₹3,249
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
OFFER VALID TILL STOCK LAST | OFFER VALID TILL STOCK LAST
CHIMNEY UPTO 54% OFF
KAFF FABER HÄFELE Crompton Prestige BOSCH
WATER PURIFIER UPTO 47% OFF
EUREKA FORBES LG BRITA Livpure HAVELLS
MIXER GRINDER UPTO 54% OFF
Preethi Greenchef Butterfly Panasonic BAJAJ
ELECTRIC WATER HEATER UPTO 60% OFF
Racold Haier HAVELLS BAJAJ V-GUARD KENSTAR
LG SOUND BAR SC9S, 3.1.3 CH, 400W, DOLBY ATMOS & IMAX ENHANCED.
OFFER PRICE ₹31,990
EMI ₹2,666
MRP ₹89,990
LG SAMSUNG SONY Haier Panasonic NVY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo OPPO ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF OZONE
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 । ಅತ್ತಿಬೆಲೆ 99009 99009 77747 । ಆರ್.ಟಿ.ನಗರ 91080 65665 । ಆನೇಕಲ್ 9036289556 । ಇಂದಿರಾನಗರ 9035499255 । ಉತ್ತರಹಳ್ಳಿ 90362 89563 । ಕತ್ರಿಗುಪ್ಪೆ 9035499288 । ಕನಕಪುರ ಮುಖ್ಯ ರಸ್ತೆ 90082 20739 । ಕುಣಿಗಲ್ 90362 89546 । ಕೆಂಗೇರಿ 99009 77712 । ಕೆಜಿಎಫ್ 95917 98130 । ಕೆಆರ್ ಪುರಂ 9019929881 । ಕೋರಮಂಗಲ 90354 11200 । ಕೋಲಾರ 90082 20791 । ಗಾಂಧಿನಗರ 9035499311 । ಗುಬ್ಬಿ 9035027688 । ಗೌರಿಬಿದನೂರು 90354 99244 । ಚನ್ನಪಟ್ಟಣ 9035023186 । ಚಿಂತಾಮಣಿ 90362 89552 । ಚಿಕ್ಕಜಾಲ 95918 32080 । ಚಿಕ್ಕಬಳ್ಳಾಪುರ 9591561669 । ಜಯನಗರ 90354 99077 । ಜಾಲಹಳ್ಳಿ ಕ್ರಾಸ್ 9008220804 । ತಿಪಟೂರು 90362 89548 । ತುಮಕೂರು 90082 18009 । ದೊಡ್ಡಬಳ್ಳಾಪುರ 77602 12888 । ನಾಗರಭಾವಿ 90354 99191 । ನೆಲಮಂಗಲ 9606922798 । ಬಾಗೇಪಲ್ಲಿ 9036289562 । ಬ್ರಿಗೇಡ್ ರಸ್ತೆ 9035499066 । ಬನಶಂಕರಿ 9035499199 । ಬನ್ನೇರುಘಟ್ಟ ರೋಡ್ 9035422500 । ಬಸವನಗುಡಿ 90354 99244 । ಭಾರ್ತಿಯಾ ಮಾಲ್ 70900 00981 । ಮಾದನಾಯಕನಹಳ್ಳಿ 90362 89550 । ಮತ್ತಿಕೆರೆ 90352 22377 । ಮಲ್ಲೇಶ್ವರಂ 90354 99233 । ಮಾಗಡಿರಸ್ತೆ 90362 89557 । ಮಾರತ್‌ಹಳ್ಳಿ 90354 99011 । ಮಾಲೂರು 9036984484 । ಮೈಸೂರು ರಸ್ತೆ 90354 99188 । ಯಲಹಂಕ 9036001315 । ರಾಜಾಜಿನಗರ 9035499144 । ರಾಮನಗರ 9606922697 । ವಿಜಯನಗರ 96069 22795 । ಶಿರಾ 9035023188 । ಸದಾಶಿವನಗರ 9035499088 । ಸಹಕಾರನಗರ 90199 29882 । ಹಿರಿಯೂರು 9035023185 । ಹೆಚ್‌ಆರ್‌ಬಿಆರ್ ಲೇಔಟ್ 90354 99177 । ಹೆಬ್ಬಗೋಡಿ 90350 50023 । ಹೆಸರಘಟ್ಟ ಮುಖ್ಯ ರಸ್ತೆ 90362 89551 । ಹೊಸಕೋಟೆ 90362 89545 । ಹೊಸೂರು 04344 243633 । ಹೊಸೂರು ರಸ್ತೆ 9035499022
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಬಿಹೆಚ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಆಯ್ಕೆಮಾಡಿದ ಮೊಬೈಲ್‌ಗಳಲ್ಲಿ 70% ವರೆಗೆ ಖಚಿತವಾದ ಮರುಖರೀದಿಯು ಮಾನ್ಯವಾಗಿರುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ. ಗೋಲ್ಡ್/ಸಿಲ್ವರ್ ಸ್ಕ್ರಾಚ್ ಕಾರ್ಡ್ ₹25000 ಮತ್ತುಅಧಿಕ ಖರೀದಿಯ ಮೇಲೆ, ಆಯ್ದ ಮಾದರಿಗಳು ಮಾಡೆಲ್ ಮತ್ತು ಬ್ರಾಂಡ್ ಮಾನ್ಯವಾಗಿದೆ.
165 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಬಿಬಿಎಂಪಿ: ಎಆರ್‌ಒಗಳ ಕಚೇರಿಗೆ ಹೋದರಷ್ಟೇ ಅನುಮೋದನೆ, ಕಂದಾಯ ವಿಭಾಗದ ಅಧಿಕಾರಿಗಳಿಂದ ವಿಳಂಬ

ಕಾಲಮಿತಿಯಲ್ಲಿ ಸಿಗದ 'ನಂಬಿಕೆ ನಕ್ಷೆ'

• ಆರ್. ಮಂಜುನಾಥ್

ಬೆಂಗಳೂರು: ವಸತಿ ಕಟ್ಟಡಗಳ ನಿರ್ಮಾಣಕ್ಕೆ ಒಂದೇ ದಿನದಲ್ಲಿ ನಕ್ಷೆ ನೀಡಲಾಗುತ್ತದೆ ಎಂಬ ಘೋಷ ವಾಕ್ಯದಲ್ಲಿ ಆರಂಭವಾದ 'ನಂಬಿಕೆ ನಕ್ಷೆ' ಕುಂಟುತ್ತಾ ಸಾಗುತ್ತಿದೆ. ಕಾಲಮಿತಿಯಲ್ಲಿ ನಾಗರಿಕರಿಗೆ ನಕ್ಷೆ ಸಿಗದೆ, ಬಿಬಿಎಂಪಿ ಕಚೇರಿಗಳಿಗೆ ಅಲೆಯುವುದು ಇನ್ನೂ ನಿಂತಿಲ್ಲ.

'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿ ಬಿಬಿಎಂಪಿ ಕಚೇರಿಗೆ ಹೋಗದೆ ಕಟ್ಟಡ ನಕ್ಷೆ ಪಡೆಯುವ 'ನಂಬಿಕೆ ನಕ್ಷೆ– ನಿಮ್ಮ ಮನೆ ನಕ್ಷೆ ನಿಮ್ಮ ಮನೆ ಬಾಗಿಲಿಗೆ' ಯೋಜನೆ ರಾಜರಾಜೇಶ್ವರಿ ನಗರ ಹಾಗೂ ದಾಸರಹಳ್ಳಿ ವಲಯಗಳಲ್ಲಿ ಪ್ರಾಯೋಗಿಕವಾಗಿ ಯಶಸ್ಸು ಕಂಡಿತ್ತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಯೋಜನೆಯನ್ನು ಸೆಪ್ಟೆಂಬರ್ 2ರಿಂದ ಎಲ್ಲ ವಲಯಗಳಿಗೂ ವಿಸ್ತರಿಸಿದ್ದರು. ಬಹುತೇಕ ಎರಡು ತಿಂಗಳಾದರೂ ಯೋಜನೆ ಹಳಿಗೇ ಬಂದಿಲ್ಲ. ಆನ್‌ಲೈನ್‌ನಲ್ಲಿ ನಕ್ಷೆ ಲಭ್ಯವಾಗುತ್ತಿಲ್ಲ. ಕಂದಾಯ ವಿಭಾಗದ ಅಧಿಕಾರಿಗಳ ಕಚೇರಿಗೆ ಹೋಗಿ, ಒಂದಷ್ಟು ದಿನ ಅಲೆದರೆ ಮಾತ್ರ ನಕ್ಷೆ ಸಿಗುತ್ತಿದೆ.

'ನಂಬಿಕೆ ನಕ್ಷೆ' ಯೋಜನೆಯಂತೆ, 50 x 80 ಅಡಿ ಅಳತೆಯವರೆಗಿನ ವಸತಿ ಕಟ್ಟಡಗಳಿಗೆ ಎಲ್ಲ ದಾಖಲೆಗಳು ಸಿದ್ಧವಿದ್ದರೆ 15 ದಿನದಲ್ಲಿ ಅನುಮೋದಿತ ನಕ್ಷೆ ಲಭ್ಯವಾಗಬೇಕು. ಅರ್ಜಿ ಸಲ್ಲಿಸಿದ ದಿನ 'ತಾತ್ಕಾಲಿಕ ನಕ್ಷೆ' ಸಿಗಬೇಕು. ಇದೆಲ್ಲ ಪ್ರಕ್ರಿಯೆ ಆನ್‌ಲೈನ್‌ನಲ್ಲೇ ನಡೆಯಬೇಕಿದ್ದು, ಬಿಬಿಎಂಪಿ ಸಿಬ್ಬಂದಿಯನ್ನು ಕಚೇರಿಗೆ ಹೋಗಿ ಭೇಟಿ ಮಾಡುವಂತಿಲ್ಲ. ಆದರೆ ಇದೆಲ್ಲ, ಯೋಜನೆಯ ಉದ್ದೇಶಪತ್ರದಲ್ಲೇ ಉಳಿದುಕೊಂಡಿದೆ.

'ಆನ್‌ಲೈನ್‌ನಲ್ಲಿ ನಕ್ಷೆಗೆ ಅರ್ಜಿ ಸಲ್ಲಿಸಿದರೆ ನಗರ ಯೋಜನೆ ಅಧಿಕಾರಿಗಳ ಪ್ರಕ್ರಿಯೆ ಬೇಗ ಮುಗಿಯುತ್ತಿದೆ. ಆದರೆ ಕಂದಾಯ ವಿಭಾಗದ ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ. ಕಂದಾಯ ವಿಭಾಗದಲ್ಲಿನ ದಾಖಲೆಗಳನ್ನು ಪರಿಶೀಲಿಸಿ, ಅದು ಹೊಂದಿಕೆಯಾದರೆ ನಕ್ಷೆ ಅನುಮೋದನೆ ನೀಡಬೇಕು. ಇದನ್ನು ಪಾಲಿಸದ ಸಹಾಯಕ ಕಂದಾಯ ಅಧಿಕಾರಿಗಳು (ಎಆರ್‌ಒ), ಹಿಂದಿನಂತೆಯೇ ಮಾಲೀಕರು ಅಥವಾ ಎಂಜಿನಿಯರ್ ಅವರನ್ನು 'ಸಂಪರ್ಕಿಸಬೇಕು' ಎಂದು ಬಯಸುತ್ತಿದ್ದಾರೆ' ಎಂದು ಪದ್ಮನಾಭನಗರದ ಆಸ್ತಿಯೊಂದರ ಮಾಲೀಕ ರಘುನಾಥ್ ದೂರಿದರು.

'ಒಂದು ವ್ಯವಸ್ಥೆ ಪ್ರಾಯೋಗಿಕವಾಗಿ ಯಶಸ್ಸು ಕಂಡ ಮೇಲೆ, ಅದನ್ನು ಪೂರ್ಣಪ್ರಮಾಣದಲ್ಲಿ ಆನ್‌ಲೈನ್‌ನಲ್ಲೇ ಜಾರಿಗೊಳಿಸಬೇಕಾಗಿತ್ತು. ಕಾಲಮಿತಿಯಲ್ಲಿ ನಕ್ಷೆ ಅನುಮೋದನೆ ಎಂದು ಹೇಳಲಾಗಿದ್ದರೂ, ಎಆರ್‌ಒಗಳಿಗೆ ಅದನ್ನು ನಿಗದಿಪಡಿಸಿಲ್ಲ. ಏಳು ದಿನದಲ್ಲಿ ಅವರು ಅನುಮೋದನೆ ನೀಡದಿದ್ದರೆ ಸ್ವಯಂಚಾಲಿತವಾಗಿ ಸಮ್ಮತಿ ದೊರೆಯಬೇಕು. ಆದರೆ, ಆ ಪ್ರಕ್ರಿಯೆಯೇ ನಡೆಯುತ್ತಿಲ್ಲ' ಎಂದು ಸಿವಿಲ್ ಎಂಜಿನಿಯರ್ ಮತ್ತು ವಾಸ್ತುಶಿಲ್ಪಿ ರಮೇಶ್ ಆರೋಪಿಸಿದರು.

'ನಗರದಲ್ಲಿರುವ ಎಲ್ಲ ಆಸ್ತಿಗಳಿಗೆ ಇ–ಖಾತಾ ಒದಗಿಸುವ ಪ್ರಕ್ರಿಯೆ ನಡೆಯುತ್ತಿದೆ. ಜೊತೆಗೆ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವೂ ನಡೆಯುತ್ತಿದೆ. ಹೀಗಾಗಿ, 'ನಂಬಿಕೆ ನಕ್ಷೆ'ಯಲ್ಲಿನ ಪ್ರಕ್ರಿಯೆ ನಿಧಾನವಾಗು ತ್ತಿದೆ' ಎಂದು ಹೆಸರು ಬಹಿರಂಗಪಡಿ ಸಲು ಇಚ್ಛಿಸದ ಎಆರ್‌ಒಗಳು ವಿವರಣೆ ನೀಡಿದರು.

ಮುಖ್ಯಾಂಶಗಳು

- ಶೇ 50ಕ್ಕೂ ಹೆಚ್ಚು ಅರ್ಜಿಗಳು ಬಾಕಿ
- ಪೂರ್ವ, ಪಶ್ಚಿಮ, ದಕ್ಷಿಣ ವಲಯದಲ್ಲಿ ಅತಿ ವಿಳಂಬ
- ಯೋಜನೆ ಮೂಲ ಉದ್ದೇಶವೇ ವಿಫಲ



ನಂಬಿಕೆ ನಕ್ಷೆ

'ನಂಬಿಕೆ ನಕ್ಷೆ' ಅರ್ಜಿ ಸ್ಥಿತಿ
(ಸೆ.2ರಿಂದ ಅಕ್ಟೋಬರ್ 28ರವರೆಗೆ)

ವಲಯ	ಅರ್ಜಿ ಸ್ವೀಕೃತಿ	ಅನುಮೋದನೆ
ಪೂರ್ವ	126	17
ಪಶ್ಚಿಮ	145	50
ದಕ್ಷಿಣ	215	30
ಬೊಮ್ಮನಹಳ್ಳಿ	250	64
ಮಹದೇವಪುರ	78	35
ಯಲಹಂಕ	107	60
ರಾಜರಾಜೇಶ್ವರಿ ನಗರ	707	480
ದಾಸರಹಳ್ಳಿ	49	37
ಒಟ್ಟು	1617	773

'ವ್ಯತ್ಯಾಸವೇನೂ ಆಗಿಲ್ಲ'

'ಹೊಸ ಯೋಜನೆ ಜಾರಿಗೆ ಬಂದಿದ್ದರೂ ಹಳೆಯ ವ್ಯವಸ್ಥೆಗಿಂತ ಹೆಚ್ಚು ವ್ಯತ್ಯಾಸವೇನಿಲ್ಲ. 'ನಂಬಿಕೆ ನಕ್ಷೆ'ಯ ಘೋಷವಾಕ್ಯದಂತೆ 'ತಾತ್ಕಾಲಿಕ ನಕ್ಷೆ'ಯೂ ಒಂದು ದಿನದಲ್ಲಿ ಸಿಗುತ್ತಿಲ್ಲ. ಆ ಆಯ್ಕೆಯೇ ಇಲ್ಲದಂತೆ ಮಾಡಿದ್ದಾರೆ. ಹಿಂದಿನಂತೆಯೇ, ಎಆರ್‌ಒಗಳನ್ನು ಅವರ ಕಚೇರಿಯಲ್ಲಿ, ಅವರಿರುವ ಸಮಯದಲ್ಲೇ ಹೋಗಿ ಆಗಾಗ ಭೇಟಿ ಮಾಡಬೇಕು. 'ಬಿಬಿಎಂಪಿ ಕಚೇರಿಗೆ ಹೋಗುವಂತಿಲ್ಲ' ಎಂಬ ಹೇಳಿಕೆ ಇಲ್ಲಿ ಅನುಷ್ಠಾನ ವಾಗಿಲ್ಲ, ನಾಗರಿಕರ ಅಲೆದಾಟ ನಿಂತಿಲ್ಲ' ಎಂದು ಸಿವಿಲ್ ಎಂಜಿನಿಯರ್ ಮತ್ತು ವಾಸ್ತುಶಿಲ್ಪಿ ಸರ್ವೋತ್ತಮ್ ಅನುಭವ ಹಂಚಿಕೊಂಡರು.

'ಇನ್ನೂ ಸ್ವಯಂಚಾಲಿತವಾಗಿಲ್ಲ'

'ಕಟ್ಟಡಗಳಿಗೆ 'ನಂಬಿಕೆ ನಕ್ಷೆ' ಯೋಜನೆಯಡಿ ಸ್ವಯಂಚಾಲಿತವಾಗಿ ನಕ್ಷೆ ಅನುಮೋದನೆಯಾಗುವುದನ್ನು ಪೂರ್ಣವಾಗಿ ಜಾರಿಗೊಳಿಸಲಾಗಿಲ್ಲ. ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಅವರ ಪ್ರಕ್ರಿಯೆ ಪೂರ್ಣಗೊಂಡ ನಂತರ ಅವರಿಂದ ಅನುಮೋದನೆಯಾದ ಮೇಲಷ್ಟೇ ನಕ್ಷೆ ಅನುಮೋದನೆಯಾಗುತ್ತಿದೆ. ಪ್ರಾರಂಭದ ಹಂತದಲ್ಲೇ ಸ್ವಯಂಚಾಲಿತ ವ್ಯವಸ್ಥೆ ಇದ್ದರೆ ಸಮಸ್ಯೆಯಾಗಬಹುದು ಎಂದು ತಡೆಹಿಡಿಯಲಾಗಿದೆ. ಆದರೆ, ಎಆರ್‌ಒಗಳಿಂದ ಅನುಮೋದನೆ ವಿಳಂಬವಾಗುತ್ತಿರುವುದು ನಿಜ. ಅವರ ಹಂತದಲ್ಲೇ ಅರ್ಜಿ ಅಥವಾ ಕಡತಗಳು ಹೆಚ್ಚು ಬಾಕಿ ಉಳಿದಿವೆ' ಎಂದು ನಗರ ಯೋಜನೆ ವಿಭಾಗದ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಕೆ.ಆರ್.ಪುರ ಸಂತೆ ಮೈದಾನ ಟೆಂಡರ್: ಹೈಕೋರ್ಟ್ ನೋಟಿಸ್

ಬೆಂಗಳೂರು: ಕೆ.ಆರ್.ಪುರ ಸಂತೆ ಮೈದಾನದಲ್ಲಿ ವ್ಯಾಪಾರಿಗಳಿಂದ ತೆರಿಗೆ ಸಂಗ್ರಹಿಸಲು ಕರೆಯಲಾಗಿರುವ ಇ-ಟೆಂಡರ್ ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ 'ಅಖಿಲ ಕರ್ನಾಟಕ ರೈತರ ಮತ್ತು ವ್ಯಾಪಾರಿಗಳ ಸಂಘ'ದ ಅಧ್ಯಕ್ಷ ಎಲೆ ಶ್ರೀನಿವಾಸ್ ವಿ. ಸೇರಿದಂತೆ ಹಣ್ಣು, ತರಕಾರಿ ಮಾರಾಟ ಮಾಡುವ ಒಟ್ಟು ಏಳು ಜನರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ನವೆಂಬರ್ 26ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಕೆ. ಆರ್.ಪುರ ಸಂತೆ ಮೈದಾನದಲ್ಲಿ ನಡೆಯುವ ವಾರದ ಸಂತೆ ಸುಂಕ ಮತ್ತು ದಿನವಹಿ ಸಂತೆ ಸುಂಕವನ್ನು ಒಂದು ವರ್ಷದ ಅವಧಿಗೆ ವಸೂಲು ಮಾಡುವ ಬಗ್ಗೆ ಕೆ.ಆರ್. ಪುರ ಮಹದೇವಪುರ ವಲಯದ ಕಾರ್ಯಪಾಲಕ ಎಂಜಿನಿಯರ್ (ಯೋಜನೆ) 2024ರ ಸೆಪ್ಟೆಂಬರ್ 4ರಂದು ಕರೆದಿರುವ ಇ–ಟೆಂಡರ್ ಹರಾಜು; ಮಾರುಕಟ್ಟೆಯ ಗಡಿ ರೇಖೆ ಗುರುತಿಸುವಲ್ಲಿನ ತಾಂತ್ರಿಕ ದೋಷಗಳಿಂದ ಕೂಡಿದ್ದು ಅದನ್ನು ರದ್ದುಗೊಳಿಸಲು ಆದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ಪ್ರಾದೇಶಿಕ ಅಸಮಾನತೆ ತೊಲಗಿಸಿ'

ಬೆಂಗಳೂರು: ರಾಜ್ಯದ ಉದ್ದಿಮೆಗಳಲ್ಲಿ ಪರಭಾಷಿಕರ ಅವೈಜ್ಞಾನಿಕ ವಲಸೆ ತಡೆಗಟ್ಟಲು ಹಾಗೂ ಪ್ರಾದೇಶಿಕ ಅಸಮಾನತೆ ತೊಲಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, 'ಪ್ರತಿಯೊಂದು ರಾಜ್ಯಗಳಲ್ಲಿಯೂ ಮಾನವ ಅಭಿವೃದ್ಧಿಯ ಜೊತೆ ಜೊತೆಗೆ ಕೈಗಾರಿಕಾ ಅಭಿವೃದ್ಧಿಯು ಆಗಬೇಕೆಂಬುದು ಎಲ್ಲ ಸರ್ಕಾರಗಳ ಮೂಲ ಆಶಯ. ಈ ಮೂಲಕ ಆಯಾ ರಾಜ್ಯದ ಸ್ಥಳೀಯರಿಗೆ ಉದ್ಯೋಗಾವಕಾಶಗಳು ದೊರೆತು ಆರ್ಥಿಕ ಸುಭದ್ರತೆಯನ್ನು ಕಲ್ಪಿಸುವುದು ಸರ್ಕಾರಗಳ ಆದ್ಯ ಕರ್ತವ್ಯ' ಎಂದು ಹೇಳಿದ್ದಾರೆ.

ಹೊರ ರಾಜ್ಯಗಳ ಲಕ್ಷಾಂತರ ಕಾರ್ಮಿಕರು ವಲಸೆ ಬಂದು ರಾಜ್ಯದ ಉದ್ದಿಮೆಗಳಲ್ಲಿ ಉದ್ಯೋಗಾವಕಾಶಗಳನ್ನು ಕಂಡುಕೊಂಡು, ಕನ್ನಡ ನಾಡಿನ ಭಾಷೆ, ಸಂಸ್ಕೃತಿ ಹಾಗೂ ಪ್ರಾದೇಶಿಕ ಸಮಾನತೆಗೆ ಕೊಡಲಿ ಪೆಟ್ಟು ನೀಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕನ್ನಡಿಗರು ತಮ್ಮ ನೆಲದಲ್ಲಿಯೇ ಉದ್ಯೋಗಾವಕಾಶಗಳಿಂದ ವಂಚಿತರಾಗಿ ಅನಾಥರಾಗಿ ಬದುಕುವಂತಹ ವಾತಾವರಣ ಮೂಡಿದೆ. ಪ್ರತಿಯೊಂದು ಉದ್ಯಮಗಳಲ್ಲಿಯೂ ಎ , ಬಿ, ಸಿ ಮತ್ತು ಡಿ ಹುದ್ದೆಗಳಲ್ಲಿ ಕನ್ನಡಿಗರಿಗೆ ಕ್ರಮವಾಗಿ ಶೇಕಡ 60, ಶೇಕಡ 80 ಹಾಗೂ ಶೇಕಡ 100ರಷ್ಟು ಹುದ್ದೆಗಳು ಸಿಗಬೇಕೆಂಬ ಸರ್ಕಾರದ ಕಾನೂನು ಉಲ್ಲಂಘನೆ ಆಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ತುಳು ವಿಕ್ಷನರಿ, ವಿಕಿಸೋರ್ಸ್ ಲೈವ್

ಪ್ರಜಾವಾಣಿ ವಾರ್ತೆ

ಮಂಗಳೂರು: ತುಳು ಪದಕೋಶ ವಿಕ್ಷನರಿ ಮತ್ತು ಡಿಜಿಟಲ್ ಮಾದರಿಯ ಪುಸ್ತಕಗಳ ಸಂಗ್ರಹ ವಿಕಿಸೋರ್ಸ್ ಈಗ ಲೈವ್ ಆಗಿದೆ. ಇಂಕ್ಯುಬೇಟರ್‌ನಲ್ಲಿದ್ದ ಇವರೆಡೂ ಅ.30ರಂದು ಬೆಳಿಗ್ಗೆ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗಿವೆ.

ವಿಕ್ಷನರಿಯನ್ನು ವಿಕಿಮೀಡಿಯಾ ಫೌಂಡೇಷನ್ ನಿರ್ವಹಿಸುತ್ತಿದ್ದು ನಿಘಂಟು ಮಾದರಿಯಲ್ಲಿದೆ. ಬಳಕೆದಾರರು ಇದರಲ್ಲಿ ಮಾಹಿತಿ ಹುಡುಕಬಹುದಾಗಿದೆ. ತುಳು ಪದಗಳನ್ನು ಸೇರಿಸುವ ಅವಕಾಶವೂ ಇದೆ.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಸಂಪಾದಕರಲ್ಲಿ ಒಬ್ಬರಾದ ವಿಶ್ವನಾಥ ಬದಿಕಾನ 'ವಿಕ್ಷನರಿ 2018ರಿಂದ ಕಾರ್ಯನಿರ್ವಹಿಸುತ್ತಿತ್ತು. ಆದರೆ ಬಳಕೆದಾರರಿಗೆ ಮುಕ್ತವಾಗಿರಲಿಲ್ಲ. ಈ ವರ್ಷ ಮಾರ್ಚ್‌ನಿಂದ ವಿಕಿಸೋರ್ಸ್‌ನ ಕಾರ್ಯನಿರ್ವಹಣೆ ಆರಂಭವಾಗಿತ್ತು. ಈಗ ಲೈವ್ ಆಗಿದ್ದರೂ ಕೆಲವು ತಾಂತ್ರಿಕ ಕೆಲಸಗಳು ನಡೆಯುತ್ತಿದ್ದು ಎರಡು ದಿನಗಳಲ್ಲಿ ಇವೆರಡೂ ಸಂಪೂರ್ಣವಾಗಿ ಬಳಕೆಗೆ ಮುಕ್ತವಾಗಲಿವೆ. ವಿಕಿಸೋರ್ಸ್‌ನಲ್ಲಿ ಸದ್ಯ ಆರು ಪುಸ್ತಕಗಳು ಇವೆ' ಎಂದರು.

ಸಂಚಾರ ನಿಯಮ ಉಲ್ಲಂಘನೆ: ಈವರೆಗೆ ಒಟ್ಟು 19,30,584 ದೂರು

ಪಬ್ಲಿಕ್ ಐ: ನಿತ್ಯ 600 ಪ್ರಕರಣ ದಾಖಲು

• ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುವವರ ಬಗ್ಗೆ ಫೋಟೊ ಸಮೇತ ದೂರು ಸ್ವೀಕರಿಸಲು ಸಂಚಾರ ಪೊಲೀಸರು ಅಭಿವೃದ್ಧಿಪಡಿಸಿರುವ 'ಪಬ್ಲಿಕ್–ಐ' ಆ್ಯಪ್‌ಗೆ ದೂರುಗಳ ಮಹಾಪೂರವೇ ಹರಿದು ಬರುತ್ತಿದೆ. ಇದು ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ 'ದಂಡ'ದ ಅಸ್ತ್ರ ಬಳಸಲು ಪೊಲೀಸರಿಗೆ ನೆರವಾಗುತ್ತಿದೆ.

ಪಬ್ಲಿಕ್ ಐ ಆ್ಯಪ್‌ನಲ್ಲಿ ದಿನಕ್ಕೆ ಸರಾಸರಿ 800 ದೂರುಗಳು ಬರುತ್ತಿವೆ. ಅವುಗಳನ್ನು ಪರಿಶೀಲಿಸುವ ಪೊಲೀಸರು, ನಿಯಮ ಉಲ್ಲಂಘನೆಯನ್ನು ಗುರುತಿಸಿ 600ಕ್ಕೂ ಅಧಿಕ ಪ್ರಕರಣಗಳನ್ನು ದಾಖಲಿಸುತ್ತಿದ್ದಾರೆ.

ಪ್ರಸಕ್ತ ವರ್ಷದ ಆಗಸ್ಟ್ ಅಂತ್ಯಕ್ಕೆ ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಒಟ್ಟು 2,55,048 ದೂರುಗಳು ಆ್ಯಪ್ ಮೂಲಕ ಸಲ್ಲಿಕೆಯಾಗಿವೆ. ಅವುಗಳನ್ನು ಆಧರಿಸಿ 2,13,048 ಪ್ರಕರಣ ದಾಖಲಿಸಲಾಗಿದೆ.

ಅಂಕಿ ಅಂಶಗಳು

19,30,584 2015ರಿಂದ ಬಂದ ದೂರುಗಳ ಸಂಖ್ಯೆ

16,16,445 ದಾಖಲಾದ ಪ್ರಕರಣಗಳ ಸಂಖ್ಯೆ

3,14,139 ತಿರಸ್ಕೃತಗೊಂಡ ದೂರುಗಳ ಸಂಖ್ಯೆ

23,750 ದೂರುಗಳನ್ನು ತಿರಸ್ಕರಿಸಿದ್ದು, 18,250 ಪ್ರಕರಣಗಳು ಪರಿಶೀಲನೆ ಹಂತದಲ್ಲಿವೆ.

2023ರಲ್ಲಿ 3,14,564 ದೂರು ದಾಖಲಾಗಿದ್ದು, ಅವುಗಳಲ್ಲಿ 2,43,116 ಪ್ರಕರಣಗಳನ್ನು ಬಗೆಹರಿಸಲಾಗಿತ್ತು.

2015ರ ಸೆಪ್ಟೆಂಬರ್‌ನಲ್ಲಿ ಈ ವ್ಯವಸ್ಥೆ ಪ್ರಾರಂಭವಾದಾಗಿನಿಂದ ಒಟ್ಟು 19,30,584 ದೂರುಗಳು ಬಂದಿವೆ. ಈ ಪೈಕಿ 16,16,445 ಪ್ರಕರಣ ದಾಖಲಿಸಿ, 3,14,139 ದೂರುಗಳನ್ನು ತಿರಸ್ಕರಿಸಲಾಗಿದೆ.



ಈ ಆ್ಯಪ್ ಬಳಕೆ ಮಾಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಸಂಚಾರ ನಿಯಮ ಉಲ್ಲಂಘನೆಯಲ್ಲಿ ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಾಲನೆ, ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ, ನೋ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆ, ದೋಷಪೂರಿತ ನೋಂದಣಿ ಫಲಕ (ನಂಬರ್ ಪ್ಲೇಟ್) ಅಳವಡಿಕೆ ಪ್ರಕರಣಗಳೇ ಹೆಚ್ಚು ಎಂಬುದನ್ನು ಅಂಕಿ ಅಂಶಗಳು ಹೇಳುತ್ತವೆ.

ನಗರದಲ್ಲಿ ವಾಹನಗಳ ದಟ್ಟಣೆ ಹೆಚ್ಚಿದ್ದು, ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಜೊತೆಯಲ್ಲಿ ದಂಡ ವಿಧಿಸುವ ಕಾರ್ಯ ನಿರ್ವಹಿಸಲು ಸಿಬ್ಬಂದಿ ಕೊರತೆ ಇದೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಸಂಚಾರ ಪೊಲೀಸರು ಜಾರಿಗೆ ತಂದಿರುವ ಪಬ್ಲಿಕ್–ಐ ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸಾರ್ವಜನಿಕರು ತಮ್ಮ ಸುತ್ತಮುತ್ತ ಸಂಚಾರ ನಿಯಮ ಉಲ್ಲಂಘನೆ ಮಾಡಿದವರ ಫೋಟೊ ತೆಗೆದು ಆ್ಯಪ್, ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ (ಫೇಸ್‌ಬುಕ್, ಟ್ವಿಟರ್) ವಾಹನಗಳ ನೋಂದಣಿ ಸಂಖ್ಯೆ ಹಾಗೂ ಫೋಟೊ ಸಮೇತ ದೂರು ನೀಡಬಹುದು.

ಅಪ್‌ಲೋಡ್ ಮಾಡಿದ ಫೋಟೊದಲ್ಲಿ ವಾಹನದ ನೋಂದಣಿ ಸಂಖ್ಯೆ ಮತ್ತು ಉಲ್ಲಂಘನೆ ಆಗಿರುವುದು ಸ್ಪಷ್ಟವಾಗಿ ಗೋಚರಿಸಬೇಕು. ಅಂಥ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥ ವಾಹನಗಳ ಮಾಲೀಕರ ವಿರುದ್ಧ ಪೊಲೀಸರು ಕಾನೂನು ಕ್ರಮ ಕೈಗೊಳ್ಳುತ್ತಾರೆ.

'ನಗರದಲ್ಲಿ ಅಂದಾಜು ಒಂದು ಲಕ್ಷಕ್ಕೂ ಹೆಚ್ಚು ಜನರು ಆ್ಯಪ್ ಬಳಸುತ್ತಿದ್ದಾರೆ. ಕೇವಲ ದಂಡ ವಿಧಿಸುವುದು ಇಲಾಖೆ ಉದ್ದೇಶವಲ್ಲ. ವಾಹನ ಸವಾರರು ಸಂಚಾರ ನಿಯಮ ಪಾಲಿಸುವುದು ಮುಖ್ಯ. ಪೊಲೀಸ್ ಸಿಬ್ಬಂದಿ ಹಾಗೂ ಸಿಸಿಟಿವಿ ಕ್ಯಾಮೆರಾಗಳು ಇಲ್ಲದ ಪ್ರದೇಶಗಳಲ್ಲಿಯೂ ರಸ್ತೆ ಸುರಕ್ಷತಾ ನಿಯಮ ಪಾಲಿಸಬೇಕು. ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ಸಾರ್ವಜನಿಕರು ಹಾಗೂ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಗುತ್ತಿದೆ' ಎಂದು ಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಜೈನ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ನಗರದ ವಿವಿಧ ಪ್ರದೇಶಗಳಿಂದ ಸಾರ್ವಜನಿಕರು ಆ್ಯಪ್‌ನಲ್ಲಿ ದೂರು ದಾಖಲಿಸಿದ್ದಾರೆ. ಜನವಸತಿ ಹಾಗೂ ವಾಣಿಜ್ಯ ಪ್ರದೇಶಗಳಲ್ಲಿ ಹೆಚ್ಚು ನಿಯಮ ಉಲ್ಲಂಘನೆ ಆಗಿರುವ ಕುರಿತು ದೂರುಗಳು ಬಂದಿವೆ. ಆ್ಯಪ್‌ನಲ್ಲಿ ದಾಖಲಾಗುವ ದೂರಿನ ಅಂಕಿ ಅಂಶ ಆಧರಿಸಿ ಕಟ್ಟು ನಿಟ್ಟಿನ ನಿಯಮ ಜಾರಿಗೆ ಕ್ರಮಕೈಗೊಳ್ಳಲಾಗುವುದು. ಸಾರ್ವಜನಿಕರು ಪಬ್ಲಿಕ್ ಐ ಆ್ಯಪ್ ಹಾಗೂ ಇತರೆ ಸಾಮಾಜಿಕ ಮಾಧ್ಯಮದ ಮೂಲಕವೂ ದೂರು ನೀಡಬಹುದು' ಎಂದು ಹೇಳಿದರು.

ಅಸ್ಸಾಂ: ದಂಪತಿ ಬಂಧನ



ಡಿಫೂ (ಅಸ್ಸಾಂ): ಅಸ್ಸಾಂನ ಕಾಬ್ರಿ ಆಂಗ್ಲೋಂಗ್ ಜಿಲ್ಲೆಯಲ್ಲಿ ಸುಮಾರು ₹10 ಕೋಟಿ ಮೌಲ್ಯದ ನಿಷೇಧಿತ ಯಾಬಾ ಮಾತ್ರೆಗಳನ್ನು (ಡ್ರಗ್ಸ್) ಹೊಂದಿದ್ದ ಮಣಿಪುರದ ದಂಪತಿಯನ್ನು ಬಂಧಿಸಲಾಗಿದ್ದು, ಮಾತ್ರೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬುಧವಾರ ಸಂಜೆ ವಾಹನ ತಪಾಸಣೆ ಮಾಡಿದಾಗ, ಕಾರಿನಲ್ಲಿ ಬಚ್ಚಿಟ್ಟುಕೊಂಡಿದ್ದ 25 ಬಂಡಲ್ ಯಾಬಾ ಮಾತ್ರೆಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ಈ ಬಂಡಲ್‌ಗಳಲ್ಲಿ ಸುಮಾರು 50,000 ಮಾತ್ರೆಗಳಿವೆ ಎಂದು ಅವರು ಹೇಳಿದ್ದಾರೆ.

ಏಳು ಸಾಧಕರಿಗೆ 'ಸಂಸ್ಕೃತಿ ಸಿರಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ 2024ನೇ ಸಾಲಿನ 'ಸಂಸ್ಕೃತಿ ಸಿರಿ' ಪ್ರಶಸ್ತಿಗೆ ಸಾಹಿತಿ ದೊಡ್ಡರಂಗೇಗೌಡ ಸೇರಿ ಏಳು ಮಂದಿ ಆಯ್ಕೆಯಾಗಿದ್ದಾರೆ.

ಪರಿಸರವಾದಿ ಅ.ನ. ಯಲ್ಲಪ್ಪರೆಡ್ಡಿ, ಸಂಸ್ಕೃತಿ ಚಿಂತಕ ಮಲ್ಲೇಪುರಂ ಜಿ. ವೆಂಕಟೇಶ್, ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ, ರಂಗಕರ್ಮಿ ಸಿ. ಬಸವಲಿಂಗಯ್ಯ, ಸುಗಮ ಸಂಗೀತ ವಿದ್ವಾಂಸರಾದ ಜಯಶ್ರೀ ಅರವಿಂದ್ ಹಾಗೂ ಮುಂಬೈನ ಹೊರನಾಡು ಸಾಂಸ್ಕೃತಿಕ ಸಂಘಟನೆಯ ಆರ್‌.ಕೆ. ಶೆಟ್ಟಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ ₹25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನವೆಂಬರ್ 8ರಂದು ಸಂಜೆ 5 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಸಮಾರಂಭ ಉದ್ಘಾಟಿಸಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ವೇಮಗಲ್ ನಾರಾಯಣ ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ದೊಡ್ಡರಂಗೇಗೌಡ

ಸಿ. ಬಸವಲಿಂಗಯ್ಯ

ಅ.ನ. ಯಲ್ಲಪ್ಪರೆಡ್ಡಿ

ಎಸ್‌.ಜಿ. ಸಿದ್ಧರಾಮಯ್ಯ


ಆರ್‌.ಕೆ. ಶೆಟ್ಟಿ

ಮಲ್ಲೇಪುರಂ ಜಿ. ವೆಂಕಟೇಶ್

ಜಯಶ್ರೀ ಅರವಿಂದ್

ಬೆಂಗಳೂರು ರೇಸ್

ಯುಕನ್ ಗೆಲ್ಲುವ ನಿರೀಕ್ಷೆ

ರಾಜ್ಯೋತ್ಸವ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಯೂಕಾನ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ರೀಗಲ್ ರಿಯಾಲಿಟಿ 12, ಮಾರ್ಥ 11, ಪವರ್ ಆಫ್ ಬ್ಯೂಟಿ 5

2ನೇ ರೇಸ್: ಇನ್ಸ್ಪೈರ್ 1, ನಿಕ್ಸ್ 6, ಫೈನಲ್ ಕಾಲ್ 5

3ನೇ ರೇಸ್: ಸ್ಕಾರ್ಲೆಟ್ ಲೇಡಿ 1, ಎಲ್ವಿಡೆನ್ 6, ಲೇಡಿ ಲಯನ್ 3

4ನೇ ರೇಸ್: ಜೆರ್ಸಿ ಕಿಂಗ್ 2, ನೆವರ್ ಗೀವ್ ಇನ್ 4, ವಿವಾಲ್ಡೊ 3

5ನೇ ರೇಸ್: ಡೆಲ್ ಅವಿಜ್ 11, ಡಿಸಿಪಲ್ 4, ಡಿವೈನ್ ಆರ್ಟ್ 6

6ನೇ ರೇಸ್: ಯುಕನ್ 2, ಐರನ್ ಕ್ಲಾಡ್ 4

7ನೇ ರೇಸ್: ರನ್ ಫಾರ್ ದಿ ಸನ್ 3, ಲಾಕ್‌ಹೀಡ್ 2, ಕೂಲ್ ವಾಟರ್ 3

8ನೇ ರೇಸ್: ಜೂನ್ 1, ಬಲ್ಮೊರಾಲ್ 3, ಸ್ಟ್ರೈಕಿಂಗ್ ಐಸ್ 6

ಉತ್ತಮ ಬೆಟ್: ಸ್ಕಾರ್ಲೆಟ್ ಲೇಡಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

200 ಹಾಸಿಗೆಯ ಇಎಸ್‌ಐ ಆಸ್ಪತ್ರೆ ನಿರ್ಮಾಣ ಕಾರ್ಯಕ್ಕೆ ಪ್ರಧಾನಿ ಮೋದಿ ಚಾಲನೆ

ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಚಂದಾಪುರ ಪುರಸಭೆ ವ್ಯಾಪ್ತಿ ಇಗ್ಗಲೂರು ಬಳಿ ₹290ಕೋಟಿ ವೆಚ್ಚದಲ್ಲಿ 200 ಹಾಸಿಗೆಯ ಇಎಸ್‌ಐ ಆಸ್ಪತ್ರೆ ನಿರ್ಮಾಣ ಕಾರ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ವಿಡಿಯೊ ಕಾನ್ಫರೆನ್ಸ್ ಮೂಲಕ ಭೂಮಿ ಪೂಜೆ ನೆರವೇರಿಸಿದರು. ಆರೋಗ್ಯ ಸಚಿವ ಜೆ.ಪಿ.ನಡ್ಡಾ, ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಇದ್ದರು.

ಇಗ್ಗಲೂರು ಬಳಿ ಆಯೋಜಿಸಿದ್ದ ಭೂಮಿ ಪೂಜೆ ಕಾರ್ಯಕ್ರಮ ಉದ್ದೇಶಿಸಿ ಸಂಸದ ಡಾ.ಸಿ.ಎನ್.ಮಂಜುನಾಥ್ ಮಾತನಾಡಿ, ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ಅವಶ್ಯ ಇದೆ. ಕಾರ್ಮಿಕರಿಗೆ ಉತ್ತಮ ಆರೋಗ್ಯ ಸೌಲಭ್ಯ ಸಿಗಲು ಸುಸಜ್ಜಿತ ಆಸ್ಪತ್ರೆ ನಿರ್ಮಾಣವಾಗುತ್ತಿರುವುದು ಈ ಭಾಗಕ್ಕೆ ಉಪಯುಕ್ತವಾಗಿದೆ. ಆಯುಷ್ಮಾನ್ ಭಾರತ್ ಯೋಜನೆ ಖಾಸಗಿ ಆಸ್ಪತ್ರೆಯಲ್ಲೂ ಸಿಗಬೇಕು. ಇದಕ್ಕೆ ರಾಜ್ಯ ಸರ್ಕಾರ ಕೆಲವು ಬದಲಾವಣೆ ತಂದು ಸಹಕಾರ ನೀಡಬೇಕು. ಇದರಿಂದ ಜನರಿಗೆ ಅಗತ್ಯ ಆರೋಗ್ಯ ಸೌಲಭ್ಯ ಸಿಗಲಿದೆ ಎಂದರು.

ಆಸ್ಪತ್ರೆ ವಿಶೇಷತೆ: ಐದು ಎಕರೆ ಪ್ರದೇಶದಲ್ಲಿ ಏಳು ಮಹಡಿ ಆಸ್ಪತ್ರೆ, ಆಸ್ಪತ್ರೆ ಉದ್ಯೋಗಿಗಳಿಗೆ ವಸತಿ ಗೃಹ, ಕ್ಯಾಂಟೀನ್ ಸೇರಿದಂತೆ ಸುಸಜ್ಜಿತ ಹಲವು ಸೌಲಭ್ಯ ಒಳಗೊಳ್ಳಲಿದೆ.

ಆನೇಕಲ್‌ನ ಚಂದಾಪುರ ಪುರಸಭೆ ವ್ಯಾಪ್ತಿ ಇಗ್ಗಲೂರು ಬಳಿ ಇಎಸ್‌ಐ ಆಸ್ಪತ್ರೆ ನಿರ್ಮಾಣದ ಭೂಮಿ ಪೂಜೆ ನಡೆಯಿತು

ಇಎಸ್‌ಐ ಆಸ್ಪತ್ರೆ ವಿಶೇಷತೆ

ಕಾರ್ಮಿಕರಿಗೆ ಆರೋಗ್ಯ ಸೌಲಭ್ಯ ಒದಗಿಸಲು ಇಎಸ್‌ಐ ಆಸ್ಪತ್ರೆ ತಾಲ್ಲೂಕಿನಲ್ಲಿ ಸ್ಥಾಪಿತವಾಗಿದ್ದು ಐದು ಎಕರೆ ಪ್ರದೇಶದಲ್ಲಿ ಏಳು ಮಹಡಿ ಆಸ್ಪತ್ರೆ, ಆಸ್ಪತ್ರೆ ಉದ್ಯೋಗಿಗಳಿಗೆ ವಸತಿ ಗೃಹ, ಕ್ಯಾಂಟೀನ್ ಸೇರಿದಂತೆ ಸುಸಜ್ಜಿತ ಸೌಲಭ್ಯವುಳ್ಳ ಆಸ್ಪತ್ರೆಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಬೊಮ್ಮಸಂದ್ರ, ಜಿಗಣಿ, ಅತ್ತಿಬೆಲೆ, ವೀರಸಂದ್ರ, ಎಲೆಕ್ಟ್ರಾನಿಕ್‌ಸಿಟಿ ಸೇರಿದಂತೆ ಐದು ಕೈಗಾರಿಕಾ ಪ್ರದೇಶಗಳಿವೆ. ಲಕ್ಷಾಂತರ ಮಂದಿ ಕಾರ್ಮಿಕರು ಈ ಭಾಗದಲ್ಲಿದ್ದಾರೆ. ವಾರ್ಷಿಕ ₹140ಕೋಟಿ ಹೆಚ್ಚು ಹಣ ಇಎಸ್‌ಐಗೆ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಿಂದಲೇ ಜಮೆಯಾಗುತ್ತಿದೆ. ಬಹುದಿನಗಳ ಕಾರ್ಮಿಕರ ಬೇಡಿಕೆ ಈಡೇರಿದಂತಾಗಿದ್ದು ಎರಡೂವರೆ ವರ್ಷಗಳಲ್ಲಿ ಇಎಸ್‌ಐ ಆಸ್ಪತ್ರೆ ನಿರ್ಮಾಣವಾಗಲಿದೆ ಸಾಧ್ಯತೆ ಇದೆ.

ನಗರದಲ್ಲಿ ಇಂದು

ಡಿ.ವಿ.ಜಿ. ಅವರಿಗೆ ನುಡಿ ನಮನ: ಉದ್ಘಾಟನೆ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಕಟ್ಟೆ ಸತ್ಯ ನಾರಾಯಣ, ಆಶಯ ನುಡಿ: ಜಗದೀಶ ಮುಳಬಾಗಿಲು, ಅತಿಥಿಗಳು: ಶ್ರ.ದೇ. ಪಾರ್ಶ್ವನಾಥ್, ಸಮೀವುಲ್ಲಾ ಖಾನ್, ವೀರಕಪುತ್ರ ಶ್ರೀನಿವಾಸ್, ಭಾನುಪ್ರಕಾಶ್, ಆಯೋಜನೆ: ಡಿ.ವಿ.ಜಿ. ಕನ್ನಡ ಬಳಗ, ಸ್ಥಳ: ಕಹಳೆ ಬಂಡೆ ಉದ್ಯಾನ, ಬಸವನಗುಡಿ, ಬೆಳಿಗ್ಗೆ 9

ಸುಧಾ ಮೂರ್ತಿ

ಪುಸ್ತಕ ಜಾತ್ರೆ: ಉದ್ಘಾಟನೆ: ಸುಧಾ ಮೂರ್ತಿ, ಅಂಕಿತ ಅಮರ್, ಕನ್ನಡ ಗೀತೆ: ಕೃತ್ತಿಕಾ ಶ್ರೀನಿವಾಸ್, ಉಚಿತ ಕನ್ನಡ ಪುಸ್ತಕಗಳ ವಿತರಣೆ: ಎಸ್.ಜಿ. ಸಿದ್ಧರಾಮಯ್ಯ, ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್ ಹೌಸ್, ಮೂರನೇ ಮುಖ್ಯರಸ್ತೆ, ಗಾಂಧಿನಗರ, ಬೆಳಿಗ್ಗೆ 10

ಆಯೋಜನೆ: ಕನ್ನಡ ಯುವಜನ ಸಂಘ, ಧ್ವಜಾರೋಹಣ: ಶಂಕರಪ್ಪ, ಅತಿಥಿ: ಲಕ್ಷ್ಮೀಪತಯ್ಯ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಸ್ಥಳ: ಕನ್ನಡ ಯುವಜನ ಸಂಘದ ಆವರಣ, ಹೊಂಬೇಗೌಡನಗರ, ಬೆಳಿಗ್ಗೆ 7.30

ಆಯೋಜನೆ: ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಅತಿಥಿಗಳು: ಎನ್.ಬಿ. ಸಖ್ರಿ, ವಿಜೆಕೆ. ಭಕ್ತವತ್ಸಲಂ, ಪ್ರಭಾಕರ್, ನವೀನ ಕೆ.ಸಿ., ಜಗನ್ನಾಥರೆಡ್ಡಿ, ಮುರಳಿಗೌಡ, ಮಹೇಶ, ಸ್ಥಳ: ಚಿಕ್ಕಣ್ಣ ಬಡಾವಣೆ, ಬೆಳಿಗ್ಗೆ 8

ಆಯೋಜನೆ: ಬಿಬಿಎಂಪಿ, ಧ್ವಜಾರೋಹಣ: ಎಸ್. ಆರ್. ಉಮಾಶಂಕರ್, ತುಷಾರ್ ಗಿರಿನಾಥ್, ಸ್ಥಳ: ಬಿಬಿಎಂಪಿ ಕೇಂದ್ರ ಕಚೇರಿ, ಬೆಳಿಗ್ಗೆ 8

ಆಯೋಜನೆ: ಕನ್ನಡ ಗೆಳೆಯರ ಬಳಗ, ಕವಿ ಪ್ರತಿಮೆಗೆ ಮಾಲಾರ್ಪಣೆ, ಕನ್ನಡ ಚಿಂತನೆ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು ನ್ಯಾಷನಲ್ ಕಾಲೇಜು ವೃತ್ತ, ಬಸವನಗುಡಿ, ಬೆಳಿಗ್ಗೆ 8

ಆಯೋಜನೆ: ಶ್ರೀನಗರ ಕನ್ನಡ ರಾಜ್ಯೋತ್ಸವ ಸಮಿತಿ, ಉದ್ಘಾಟನೆ: ಕುಮಾರ ಚಂದ್ರಶೇಖರ ಸ್ವಾಮೀಜಿ, ಅತಿಥಿಗಳು: ಎಂ. ಕೃಷ್ಣಪ್ಪ, ಯು.ಬಿ. ವೆಂಕಟೇಶ್, ಎಲ್.ಎ. ರವಿಸುಬ್ರಮಣ್ಯ, ಕೆ. ಬಾಗೇಗೌಡ, ವೆಂಕಟರಾಮೇಗೌಡ, ಕೆ.ವಿ. ಶಂಕರ್, ಎಚ್. ಶ್ರೀನಿವಾಸ್, ಎಚ್. ಕೆಂಪಣ್ಣ, ಸ್ಥಳ: 11ನೇ ಮುಖ್ಯರಸ್ತೆ, ಶ್ರೀನಗರ, ಬೆಳಿಗ್ಗೆ 8.30

ಆಯೋಜನೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಧ್ವಜಾರೋಹಣ, ರಾಜ್ಯೋತ್ಸವ ಸಂದೇಶ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಅತಿಥಿಗಳು: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಪ್ರಾಸ್ತಾವಿಕ ನುಡಿ: ಮಧು ಬಂಗಾರಪ್ಪ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಸ್ಥಳ: ಕಂಠೀರವ ಹೊರಾಂಗಣ ಕ್ರೀಡಾಂಗಣ, ಬೆಳಿಗ್ಗೆ 9

ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ, ಬೆಳಿಗ್ಗೆ 10ಕ್ಕೆ ಧ್ವಜಾರೋಹಣ: ಎಲ್.ಎನ್. ಮುಕುಂದರಾಜ್, ಡಾ. ನಾಗಲಕ್ಷ್ಮಿ ಚೌಧರಿ, ಪ್ರಾಸ್ತಾವಿಕ ನುಡಿ: ಗುರುದೇವ್ ನಾರಾಯಣಕುಮಾರ್, ಅಧ್ಯಕ್ಷತೆ: ಎಂ. ನಾಗರಾಜ್ ಯಾದವ್, ಮಧ್ಯಾಹ್ನ 3ಕ್ಕೆ ಬೈಕ್ ರ್‍ಯಾಲಿಗೆ ಚಾಲನೆ: ತುಷಾರ್ ಗಿರಿನಾಥ್, ಸಂಜೆ 7ಕ್ಕೆ 'ಪರಮೇಶ್ವರ ಪುಲಕೇಶಿ ಪ್ರಶಸ್ತಿ' ಪ್ರದಾನ: ಅತಿಥಿಗಳು: ಭಾವನಾ, ಶಂಕರ ಎಂ. ಬಿದರಿ, ಕುರುಬೂರು ಶಾಂತಕುಮಾರ್ಪ್ರಶಸ್ತಿ ಪುರಸ್ಕೃತರು: ಮೃಂತ್ಯುಜಯಸ್ವಾಮಿ, ಡಾ. ಜಗದೀಶ್, ಶಿವಕುಮಾರ್ ಆರ್., ಆಂಜನೇಯರೆಡ್ಡಿ ಆರ್., ಆರ್. ವೆಂಕಟರಾಜು, ಚನ್ನಬಸಮ್ಮ ಯಾದಗಿರಿ, ಅಶೋಕ ರಾಮಚಂದ್ರ ಯಾದಗಿರಿ, ಶ್ರ. ದೇ. ಪಾರ್ಶ್ವನಾಥ್, ಸಮೀವುಲ್ಲಾ ಖಾನ್, ದಿವ್ಯಾ ಆಲೂರು, ಅನನ್ಯ ಪ್ರಕಾಶ್, ನಿಖಿಲ್ ಕುರಗೋಡ್, ಅಜಯ್ ಕುಮಾರ್, ರಾಮಚಂದ್ರ ಎಸ್., ಸ್ಥಳ: ಕನ್ನಡ ಚಳವಳಿ ಚೇತನ ಜಿ. ನಾರಾಯಣಕುಮಾರ್ ವೇದಿಕೆ, ಪರಮೇಶ್ವರ ಪುಲಕೇಶಿ ಮಹಾಮಂಟಪ, ಬನ್ನಪ್ಪ ಪಾರ್ಕ್ ಆಟದ ಮೈದಾನ, ಕೆಂಪೇಗೌಡ ರಸ್ತೆ

ಭಾವನಾ

ರಾಷ್ಟ್ರ ಧ್ವಜಾರೋಹಣ: ಸ್ಥಳ: ಸೆಂಟ್ರಲ್ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘಧ ಕಟ್ಟಡದ ಮುಂಭಾಗ, ಸೆಂಟ್ರಲ್ ಕಾಲೇಜಿನ ಕ್ರಿಕೆಟ್ ಮೈದಾನ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಳಿಗ್ಗೆ 10

ಆಯೋಜನೆ: ಕೇಂದ್ರೀಯ ಸದನ ಕನ್ನಡ ಸಂಘ, ಧ್ವಜಾರೋಹಣ: ಶಂಕರ ಬಿದರಿ, ಅತಿಥಿಗಳು: ಕೊಂಡಪ್ಪ ನಾಯುಡು, ಲಿಂಗರಾಜ ನಾಯಕ್, ಕೆ. ಹರೀಶ್, ಚಿನ್ನಾಲ ಶ್ರೀಧರ್, ಅಧ್ಯಕ್ಷತೆ: ಮ. ಚಂದ್ರಶೇಖರ್, ಸ್ಥಳ: ಧ್ವಜ ಸ್ತಂಭದ ಹತ್ತಿರ, ಕೇಂದ್ರೀಯ ಸದನ, ಯೋಗಿ ವೇಮನ ರಸ್ತೆ, ಕೋರಮಂಗಲ, ಬೆಳಿಗ್ಗೆ 10.30

ಆಯೋಜನೆ: ಚಾಮರಾಜಪೇಟೆ ನಾಡಹಬ್ಬದ ಕನ್ನಡ ರಾಜ್ಯೋತ್ಸವ ಸಮಿತಿ, ಧ್ವಜಾರೋಹಣ, ಮೆರವಣಿಗೆಗೆ ಚಾಲನೆ: ಸಿದ್ದರಾಮಯ್ಯ, ಜಮೀರ್ ಅಹಮದ್ ಖಾನ್, ರಾಮಲಿಂಗಾರೆಡ್ಡಿ, ಜಿ.ಸಿ. ಚಂದ್ರಶೇಖರ್, ಮನ್ಸೂರ್ ಅಲಿಖಾನ್, ಮಹಮ್ಮದ್ ಹ್ಯಾರಿಸ್ ನಲಪಾಡ್, ಆರ್. ವಿ. ದೇವರಾಜ್, ಜೈದ್‌ಖಾನ್, ಸೌಮ್ಯಾ ರೆಡ್ಡಿ, ಅಲ್ತಾಫ್‌ಖಾನ್, ಸ್ಥಳ: ಮೂರನೇ ಮುಖ್ಯರಸ್ತೆ, ಏಳನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 10.30

ಆಯೋಜನೆ: ಕರ್ನಾಟಕ ರಾಜ್ಯೋತ್ಸವ ಸಮಿತಿ, ನಗರ ದೇವತೆ ಕನ್ನಡ ತಾಯಿ ಅಣ್ಣಮ್ಮ ದೇವತೆಯ ಮೆರವಣಿಗೆಗೆ ಚಾಲನೆ: ಸಿದ್ದರಾಮಯ್ಯ, ಅತಿಥಿಗಳು: ಎಚ್. ಆಂಜನೇಯ, ತುಷಾರ್ ಗಿರಿನಾಥ್, ಉಮಾಶಂಕರ್ ಎಸ್.ಆರ್., ಅಧ್ಯಕ್ಷತೆ: ವಾಟಾಳ್ ನಾಗರಾಜ್, ಸ್ಥಳ: ಮೈಸೂರು ಬ್ಯಾಂಕ್ ವೃತ್ತದ ಹತ್ತಿರ, ಬೆಳಿಗ್ಗೆ 10.30

ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಧ್ವಜಾರೋಹಣ: ಟಿ.ಎ. ನಾರಾಯಣಗೌಡ, ಸ್ಥಳ: ಕರ್ನಾಟಕ ರಕ್ಷಣಾ ವೇದಿಕೆ, ಐದನೇ ಮುಖ್ಯರಸ್ತೆ, ಗಾಂಧಿನಗರ, ಬೆಳಿಗ್ಗೆ 11

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕಲಾಕೃತಿಗಳು ಮತ್ತು ಕನ್ನಡ ಅಕ್ಷರ ಕಲಾಕೃತಿಗಳ ಪ್ರದರ್ಶನ: ಅನಿಮಿಷ್ ನಾಗನೂರ, ಜಿ. ಹರಿಕುಮಾರ್, ಟಿ.ಬಿ. ಕೋಡಿಹಳ್ಳಿ, ಮೋಹನ್ ಕುಮಾರ್, ಟಿ.ಡಿ. ಸುರೇಶ್, ಸುರೇಶ ವಾಘ್ಮೋರೆ, ಆಯೋಜನೆ: ಅಕ್ಷರ ಸಿಂಗಾರೋತ್ಸವ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ರಾಜ್ಯೋತ್ಸವ ಪ್ರಶಸ್ತಿ ಪ್ರದಾನ–2024, ಕರ್ನಾಟಕ ಸಂಭ್ರಮ–50ರ ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ಸಮಾರಂಭ: ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅತಿಥಿ: ಶಿವರಾಜ ಎಸ್. ತಂಗಡಗಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, **ಆಯೋಜನೆ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ವಿಧಾನಸೌಧದ ಮುಂಭಾಗ, ಸಂಜೆ 4.30

ಇತರೆ ಕಾರ್ಯಕ್ರಮಗಳು

ವಾರ್ಷಿಕೋತ್ಸವ ಸಮಾರಂಭ, 'ಚಿತ್ಪಾವನ ಮಹಿಳಾ ಯಕ್ಷಯಾನ' ಪುಸ್ತಕ ಬಿಡುಗಡೆ: ಗಂಗಮ್ಮ ಕೇಶವಮೂರ್ತಿ, ಅತಿಥಿಗಳು: ಶಾಲಿನಿ ಹೆಬ್ಬಾರ್, ಆರತಿ ಪಟ್ರಮೆ, ಸಭಾಧ್ಯಕ್ಷತೆ: ಶೈಲಜಾ ಜೋಷಿ, 'ಭೀಷ್ಮ ವಿಜಯ' ತಾಳಮದ್ದಳೆ ಪ್ರದರ್ಶನ: ಭಾಗವತರು: ಶಾಲಿನಿ ಹೆಬ್ಬಾರ್, ದೀಪಕ ತುಳುಪುಳೆ, ಚೆಂಡೆ: ಚಂದ್ರಶೇಖರ ಶೆಂಡ್ಯೆ, ಮದ್ದಳೆ: ವರುಣ ಹೆಬ್ಬಾರ್, ಮುಮ್ಮೇಳ: ಭೀಷ್ಮ: ಮಹಾದೇವ ಶೆಂಡ್ಯೆ, ಪರಶುರಾಮ: ದಿನಕರ ಗೋಖಲೆ, ಅಂಬೆ: ಪವನ್ ವೆಲಣ್ಕರ್, ಹೋತ್ರವಾಹನ: ಸುಹಾಸ್ ಮರಾಠೆ, ಆಯೋಜನೆ: ಚಿತ್ಪಾವನ ಮಹಿಳಾ ಯಕ್ಷಗಾನ ಮಂಡಳಿ, ಸ್ಥಳ: ಶಿವಾಲಿ ಮಂಟಪ, ಉಲ್ಲಾಳು ಉಪನಗರ, ಮಧ್ಯಾಹ್ನ 3.30

ಹರಿದಾಸ ಮಂಜರಿ: ಶ್ರೀಕೃಷ್ಣ ಪಾರಿಜಾತ ಭಜನಾ ಮಂಡಳಿಯ ಸದಸ್ಯರಿಂದ, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ಏಳನೇ ಮುಖ್ಯರಸ್ತೆ, ಏಳನೇ ಅಡ್ಡರಸ್ತೆ, ಮೂರನೇ ಬ್ಲಾಕ್, ತ್ಯಾಗರಾಜನಗರ, ಸಂಜೆ 5.30

ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ನಿಗದಿಯಾಗದ ದಿನಾಂಕ: ಆರಂಭವಾಗದ ಮೆಟ್ರೊ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಾಗಸಂದ್ರ–ಮಾದಾವರ ನಮ್ಮ ಮೆಟ್ರೊ ವಿಸ್ತರಿತ ಪ್ರದೇಶದಲ್ಲಿ ರೈಲು ಸಂಚಾರ ಆರಂಭಿಸಬಹುದು ಎಂದು ರೈಲ್ವೆ ಸುರಕ್ಷತಾ ಆಯುಕ್ತರು ಅನುಮತಿ ನೀಡಿ 25 ದಿನಗಳು ಕಳೆದರೂ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳ ಒಪ್ಪಿಗೆ ಸಿಗದ ಕಾರಣ ರೈಲು ಸಂಚಾರ ಇನ್ನೂ ಆರಂಭವಾಗಿಲ್ಲ. ಸರ್ಕಾರಗಳ ನಿರ್ದೇಶನಕ್ಕಾಗಿ ಬಿಎಂಆರ್‌ಸಿಎಲ್ ಕಾದು ಕುಳಿತಿದೆ.

ಹಸಿರು ಮಾರ್ಗದಲ್ಲಿ 3.7 ಕಿ.ಮೀ. ಉದ್ದದಲ್ಲಿ ಮೂರು ನಿಲ್ದಾಣಗಳನ್ನಷ್ಟೇ ಹೊಂದಿರುವ ಈ ಕಾಮಗಾರಿಗೆ 2017ರ ಮೇ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು. ವಿವಿಧ ಕಾರಣಗಳಿಂದ ಏಳು ವರ್ಷ ಕುಂಟುತ್ತಾ ಸಾಗಿ, 2024ರಲ್ಲಿ ಪೂರ್ಣಗೊಂಡಿತ್ತು. 27 ತಿಂಗಳಲ್ಲಿ ಮುಗಿಯಬೇಕಿದ್ದ ಕಾಮಗಾರಿ 91 ತಿಂಗಳಿಗೆ ಪೂರ್ಣಗೊಂಡಿತು. ಆನಂತರ ಸಿಗ್ನಲಿಂಗ್ ಸೇರಿದಂತೆ ವಿವಿಧ ಪರೀಕ್ಷೆಗಳು ನಡೆದಿದ್ದವು. ರೈಲ್ವೆ ಸುರಕ್ಷತೆ ದಕ್ಷಿಣ ವೃತ್ತದ ಆಯುಕ್ತ ಅನಂತ್ ಮಧುಕರ್ ಚೌಧರಿ, ಉಪ ಆಯುಕ್ತ ನಿತೀಶ್ ಕುಮಾರ್ ರಂಜನ್ ಮತ್ತು ತಾಂತ್ರಿಕ ತಂಡ ಅ.3ರಂದು ಗುಣಮಟ್ಟ ಪರೀಕ್ಷೆಯನ್ನು ನಡೆಸಿದ್ದರು. ರೈಲು ಸಂಚಾರ ಆರಂಭಿಸಬಹುದು ಎಂದು ಅ.4ರಂದೇ ಅನುಮತಿ ಕೂಡಾ ನೀಡಿದ್ದರು.

ನಾಗಸಂದ್ರ–ಮಾದಾವರ ನಿಲ್ದಾಣಗಳ ನಡುವೆ ರೈಲ್ವೆ ಸುರಕ್ಷತಾ ಆಯುಕ್ತರ ನೇತೃತ್ವದಲ್ಲಿ ಗುರುವಾರ ಸುರಕ್ಷತಾ ತಪಾಸಣೆ ನಡೆಯಿತು

ರೈಲ್ವೆ ಸುರಕ್ಷತಾ ಆಯುಕ್ತರಿಂದ ಒಪ್ಪಿಗೆ ಸಿಕ್ಕಿದ ಕೂಡಲೇ ಉದ್ಘಾಟನೆಗೆ ದಿನಾಂಕ ನಿಗದಿಗಾಗಿ ಬಿಎಂಆರ್‌ಸಿಎಲ್, ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿತ್ತು. ರಾಜ್ಯ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ (ಯುಡಿಡಿ) ಕೇಂದ್ರ ಸರ್ಕಾರದ ನಗರ ವ್ಯವಹಾರ ಮತ್ತು ವಸತಿ ಸಚಿವಾಲಯಕ್ಕೆ (ಎಂಒಎಚ್‌ಯುಎ) ಪತ್ರ ಬರೆದಿದೆ. ಅಲ್ಲಿಂದ ಮುಂದಕ್ಕೆ ಯಾವುದೇ ಪ್ರಕ್ರಿಯೆಗಳು ನಡೆದಿಲ್ಲ.

‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಡಿಯಲ್ಲಿ ಬಿಎಂಆರ್‌ಸಿಎಲ್ ಇರುವುದರಿಂದ ಎರಡೂ ಸರ್ಕಾರಗಳ ಒಪ್ಪಿಗೆ ಇಲ್ಲದೇ ನಾವು ಸಂಚಾರ ಆರಂಭಿಸುವಂತಿಲ್ಲ. ಹಿಂದೆ ನೇರಳೆ ಮಾರ್ಗದಲ್ಲಿ ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವೆ ಸಂಚಾರ ಆರಂಭಿಸಲು ಒಪ್ಪಿಗೆ ಕೋರಿದ್ದಾಗ, ‘ಯಾವುದೇ ಉದ್ಘಾಟನೆಗೆ ಕಾಯಬೇಡಿ. ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಆರಂಭಿಸಿ’ ಎಂದು ನಿರ್ದೇಶನ ನೀಡಿದ್ದರು. ಈ ಮಾರ್ಗದಲ್ಲಿಯೂ ಒಂದೋ ಉದ್ಘಾಟನೆಗೆ ದಿನ ನಿಗದಿ ಮಾಡಬೇಕು. ಇಲ್ಲವೇ ಸಾರ್ವಜನಿಕರ ಅನುಕೂಲಕ್ಕಾಗಿ ಕೂಡಲೇ ಆರಂಭಿಸಿ ಎಂದು ನಿರ್ದೇಶನ ಬರಬೇಕು. ಆದರೆ, ಸರ್ಕಾರಗಳಿಂದ ಯಾವುದೇ ಸೂಚನೆ ಬಂದಿಲ್ಲ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಅಲವತ್ತುಕೊಂಡಿದ್ದಾರೆ.

‘ವಾಣಿಜ್ಯ ಸಂಚಾರ ಬೇಗ ಆರಂಭವಾದಷ್ಟು ಜನರಿಗೂ ಒಳ್ಳೆಯದು, ಬಿಎಂಆರ್‌ಸಿಎಲ್‌ಗೂ ಆದಾಯ ಬರುತ್ತದೆ. ಅನುಮತಿಗಾಗಿ ನಾವು ಕಾಯುತ್ತಿದ್ದೇವೆ’ ಎಂದು ಮಾಹಿತಿ ನೀಡಿದ್ದಾರೆ.

‘ರಾಜಕೀಯ ಬೇಡ; ಬೇಗ ಶುರು ಮಾಡಿ’

ಮಂಜುನಾಥನಗರ, ಚಿಕ್ಕಬಿದರಕಲ್ಲು (ಜಿಂದಾಲ್), ಮಾದಾವರ ಮೆಟ್ರೊ ನಿಲ್ದಾಣಗಳಿರುವ ಈ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರ ಆರಂಭಿಸಲು ಯಾವುದೇ ರಾಜಕೀಯ ಮಾಡಬಾರದು ಎಂದು ಮೆಟ್ರೊ ಪ್ರಯಾಣಿಕ ಯೋಗೀಶ್ ಆಗ್ರಹಿಸಿದ್ದಾರೆ.

‘ಜನಪ್ರತಿನಿಧಿಗಳು ಉಪ ಚುನಾವಣೆಯಲ್ಲಿ ಮುಳುಗಿರುವುದರಿಂದ ಮೆಟ್ರೊ ಬಗ್ಗೆ ಯೋಚಿಸಲು ಸಮಯ ಇಲ್ಲ ಅನಿಸುತ್ತದೆ. ಅವರು ಯಾವಾಗ ಬೇಕಿದ್ದರೂ ಉದ್ಘಾಟನೆ ಮಾಡಿಕೊಳ್ಳಲಿ, ಮೊದಲು ರೈಲು ಸಂಚಾರ ಆರಂಭಿಸಲಿ’ ಎಂದು ತಿಳಿಸಿದ್ದಾರೆ.

ವಿಸ್ತರಿತ ಹಸಿರು ಮಾರ್ಗ

- 3.7 ಕಿ.ಮೀ. ಉದ್ದದ ಮಾರ್ಗ ಮೂರು ನಿಲ್ದಾಣಗಳು
- ಅ.3ರಂದು ಗುಣಮಟ್ಟ ಪರೀಕ್ಷೆ ನಡೆದಿತ್ತು
- ರೈಲು ಸಂಚಾರ ಆರಂಭಿಸಲು ಅ.4ರಂದೇ ಅನುಮತಿ

ಕೆಲಸದೊತ್ತಡ: ಆತಂಕ ಹುಟ್ಟಿಸಿದ ಐಟಿ ಉದ್ಯೋಗಿಗಳ ಸಾವು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೆಲಸದ ಒತ್ತಡದಿಂದ ಅರ್ನ್‌ಸ್ಟ್ ಆ್ಯಂಡ್ ಯಂಗ್ ಸಂಸ್ಥೆಯ ಮಹಿಳಾ ಉದ್ಯೋಗಿ ಅನ್ನಾ ಸೆಬಾಸ್ಟಿಯನ್ ಪೆರಾಯಿಲ್ ಸಾವಿನ ಬೆನ್ನಲ್ಲೇ ಹೃದಯ ಸ್ತಂಭನದಿಂದ ಹಲವು ಐಟಿ ಉದ್ಯೋಗಿಗಳು ಮೃತಪಟ್ಟಿರುವ ಆಘಾತಕಾರಿ ಮಾಹಿತಿ ಹೊರಬಿದ್ದಿದೆ.

40 ವರ್ಷದ ವಿ.ಎಸ್ ರಾಹುಲ್, 41 ವರ್ಷದ ಕನಿವಳನ್ ರಮೇಶ್, 30ರ ಜೀನಾ ಬಿ, 40ರ ದಿವ್ಯಾ ಸುಂದರಂ, 49ರ ಜಯನ್... ಹೀಗೆ 30ರಿಂದ 40ರ ಆಸುಪಾಸಿನ ವಯಸ್ಸಿನವರು ಸಾವಿಗೀಡಾದ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಈ ಪಟ್ಟಿ ಇತರೆ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವ ಮಲಯಾಳಿ ಐಟಿ ಉದ್ಯೋಗಿಗಳು ಹಾಗೂ ಕೇರಳದಲ್ಲಿ ಕೆಲಸ ಮಾಡುತ್ತಿರುವ ಇತರೆ ರಾಜ್ಯಗಳ ಐಟಿ ಉದ್ಯೋಗಿಗಳನ್ನು ಒಳಗೊಂಡಿದೆ.

‘ಪ್ರತಿಧ್ವನಿ’ಯು ಇತ್ತೀಚೆಗೆ ಐಟಿ ಉದ್ಯೋಗಿಗಳ ಆರೋಗ್ಯ ಸರಿಯಾಗಿರುವಂತೆ ಕ್ರಮ ಕೈಗೊಳ್ಳಬೇಕೆಂದು ಕೇರಳ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಈ ಬಗ್ಗೆ ಮಾತನಾಡಿದ ‘ಪ್ರತಿಧ್ವನಿ’ಯ ರಾಜ್ಯ ಸಂಚಾಲಕ ರಾಜೀವ್ ಕೃಷನ್, ‘2023ರಿಂದ ಮಧ್ಯ ವಯಸ್ಸಿನ 12 ಐಟಿ ಉದ್ಯೋಗಿಗಳು ಮೃತಪಟ್ಟಿದ್ದಾರೆ. ಈ ಸಂಖ್ಯೆ ಇನ್ನೂ ಹೆಚ್ಚಾಗಿರಲೂಬಹುದು’ ಎಂದಿದ್ದಾರೆ.

ಕೇಂದ್ರ, ಕೇರಳ ಸರ್ಕಾರಗಳಿಗೆ ಮನವಿ

‘ಪ್ರತಿಧ್ವನಿ’ಯು ಐಟಿ ಉದ್ಯೋಗಿಗಳ ಪ್ರತಿಕ್ರಿಯೆ ಆಧರಿಸಿ ಕೇಂದ್ರ ಹಾಗೂ ಕೇರಳ ಸರ್ಕಾರಗಳಿಗೆ ಕಳೆದ ವಾರ ಮನವಿ ಸಲ್ಲಿಸಿದೆ. ಕುಂದುಕೊರತೆ ನಿವಾರಣೆಗೆ ಗೋಪ್ಯ ಕಾರ್ಯವಿಧಾನ, ಐಟಿ ಉದ್ಯೋಗಿಗಳಿಗೆ ಮಾನಸಿಕ ಆರೋಗ್ಯ ಸಹಾಯವಾಣಿ, ಮಾನಸಿಕ ಆರೋಗ್ಯ ರಕ್ಷಣಾ ಕಾಯ್ದೆಯು ಪಾಲನೆಯಾಗುವಂತೆ ಕ್ರಮವಹಿಸಬೇಕು ಎನ್ನುವುದೂ ಸೇರಿ ಹಲವು ಸಲಹೆಗಳನ್ನು ಮನವಿಯಲ್ಲಿ ತಿಳಿಸಲಾಗಿದೆ.

ಉದ್ಯೋಗಿಗಳಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳು ಮತ್ತು ಕೆಲಸದ ಒತ್ತಡದ ಕುರಿತು ಅಧ್ಯಯನ ಮಾಡಲು ಹಾಗೂ ಆ ಬಗ್ಗೆ ನಿಗಾ ವಹಿಸಲು ವೈದ್ಯಕೀಯ ಶಿಬಿರಗಳು ಮತ್ತು ಆರೋಗ್ಯ ಸಮೀಕ್ಷೆಗಳನ್ನು ‘ಪ್ರತಿಧ್ವನಿ’ಯು ಪ್ರಾರಂಭಿಸುತ್ತಿದೆ.

ಅನ್ನಾ ಅವರ ಸಾವಿನ ಬಳಿಕ ‘ಪ್ರತಿಧ್ವನಿ’ಯು ಇಲ್ಲಿನ ಐಟಿ ಉದ್ಯೋಗಿಗಳ ಮಾನಸಿಕ ಆರೋಗ್ಯ, ಕಾರ್ಮಿಕ ಕಾನೂನುಗಳ ಕುರಿತು ವಿಚಾರಸಂಕಿರಣ ಹಮ್ಮಿಕೊಂಡಿತ್ತು. ಇಲ್ಲಿ ಸಾಕಷ್ಟು ಮಂದಿ ಪಾಲ್ಗೊಂಡಿದ್ದರು. ಉದ್ಯೋಗ–ನಿತ್ಯಜೀವನದ ಸಮತೋಲನ ಕಾಪಾಡುವಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಮಹಿಳೆಯರು ಹಂಚಿಕೊಂಡರು.

ಉರುಳಿದ ವಿದ್ಯುತ್ ಕಂಬಗಳು, ಬೆಂಗಳೂರು ನಗರ ಜಿಲ್ಲೆಯಲ್ಲಿ 117 ವಿದ್ಯುತ್ ಪರಿವರ್ತಕಗಳಿಗೆ ಹಾನಿ

ಮಳೆ: ಬೆಸ್ಕಾಂಗೆ ₹ 3.49 ಕೋಟಿ ನಷ್ಟ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಹಿಂಗಾರು ಮಳೆಯ ಅಬ್ಬರಕ್ಕೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಅಕ್ಟೋಬರ್ ತಿಂಗಳಲ್ಲಿ ₹ 3.49 ಕೋಟಿ ನಷ್ಟವಾಗಿದೆ. ಇದು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬೆಸ್ಕಾಂ ತಿಂಗಳೊಂದರಲ್ಲಿ ಅನುಭವಿಸಿದ ಅತ್ಯಧಿಕ ನಷ್ಟದ ಮೊತ್ತ.

ಮಳೆ ಗಾಳಿಯಿಂದಾಗಿ ನಿರಂತರವಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವ ಜೊತೆಗೆ, ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ 840 ವಿದ್ಯುತ್ ಕಂಬಗಳು ಧರೆಗುರುಳಿವೆ. 30 ಡಿಪಿ ಸ್ಟ್ರಕ್ಚರ್‌ಗಳು ಹಾಗೂ ನೂರಕ್ಕೂ ಹೆಚ್ಚು ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿದೆ. ಪರಿಕರಗಳ ಬದಲಾವಣೆಗಾಗಿ ₹2.7 ಕೋಟಿ ಹಾಗೂ ದುರಸ್ತಿಗಾಗಿ (ಕಾರ್ಮಿಕರ ವೆಚ್ಚ) ₹66 ಲಕ್ಷದಷ್ಟು ವೆಚ್ಚ ಮಾಡಲಾಗಿದೆ ಎಂದು ಬೆಸ್ಕಾಂ ಮೂಲಗಳು ತಿಳಿಸಿವೆ.

ದಾವಣಗೆರೆಯಲ್ಲಿ ಹೆಚ್ಚು ಹಾನಿ: ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳ ಪೈಕಿ ದಾವಣಗೆರೆ ಜಿಲ್ಲೆಯಲ್ಲಿ 227 ವಿದ್ಯುತ್ ಕಂಬಗಳು ಮುರಿದುಬಿದ್ದಿವೆ. ಅಂದಾಜು ₹13 ಲಕ್ಷ ನಷ್ಟವಾಗಿದೆ. ಅದೇ ರೀತಿ ಚಿತ್ರದುರ್ಗ ಜಿಲ್ಲೆಯಲ್ಲಿ 142, ರಾಮನಗರದಲ್ಲಿ 119 ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ 111 ಕಂಬಗಳು ಮುರಿದುಬಿದ್ದಿವೆ. ನಾಲ್ಕು ಜಿಲ್ಲೆಗಳಿಂದ ಅಂದಾಜು ₹39 ಲಕ್ಷದಷ್ಟು ನಷ್ಟವಾಗಿದೆ ಎಂದು ಬೆಸ್ಕಾಂ ಮೂಲಗಳು ತಿಳಿಸಿವೆ.

ವಿದ್ಯುತ್ ಕಂಬಗಳಷ್ಟೇ ಅಲ್ಲದೇ, 189 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಹಾನಿಗೊಳಗಾಗಿವೆ. ಅಂದಾಜು ₹2.19 ಕೋಟಿಯಷ್ಟು ನಷ್ಟವಾಗಿದೆ. ಬೆಂಗಳೂರು ನಗರ ಜಿಲ್ಲೆಯೊಂದರಲ್ಲೇ 117 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿದೆ. ಟ್ರಾನ್ಸ್‌ಫಾರ್ಮರ್‌ಗಳ ಹಾನಿಯಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. 46 ಟ್ರಾನ್ಸ್‌ಫಾರ್ಮರ್‌ಗಳು ಹಾನಿಯಾಗಿರುವ ರಾಮನಗರ ಜಿಲ್ಲೆ ಎರಡನೇ ಸ್ಥಾನದಲ್ಲಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

‘ಬೆಸ್ಕಾಂ ವ್ಯಾಪ್ತಿಯಲ್ಲಿ ಹಾನಿಗೊಳಗಾದ ವಿದ್ಯುತ್ ಕಂಬಗಳು ಹಾಗೂ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಿಸುವ ಹಾಗೂ ದುರಸ್ತಿ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ವಿಳಂಬವಿಲ್ಲದೇ ದುರಸ್ತಿ ಕಾರ್ಯ ಕೈಗೊಂಡಿದ್ದೇವೆ. ದುರಸ್ತಿ ವೇಳೆ, ಗ್ರಾಹಕರಿಗೆ ಪರ್ಯಾಯವಾಗಿ ವಿದ್ಯುತ್ ಪೂರೈಸಿ, ತೊಂದರೆಯಾಗದಂತೆ ನೋಡಿಕೊಂಡಿದ್ದೇವೆ’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದರು.

ಮುಖ್ಯಾಂಶಗಳು

- ಅಕ್ಟೋಬರ್ ತಿಂಗಳಲ್ಲಿ ಹೆಚ್ಚು ಹಾನಿ
- ದಾವಣಗೆರೆ ಜಿಲ್ಲೆಯಲ್ಲಿ ಹೆಚ್ಚು ನಷ್ಟ
- ದುರಸ್ತಿ ಕಾರ್ಯ ಬಹುತೇಕ ಪೂರ್ಣ

2024ರಲ್ಲಿ ಈವರೆಗಿನ ವೆಚ್ಚ

ತಿಂಗಳು	ವೆಚ್ಚ (ಕೋಟಿ ₹ಗಳಲ್ಲಿ)
ಏಪ್ರಿಲ್	0.50
ಮೇ	10.91
ಜೂನ್	6.56
ಜುಲೈ	2.57
ಆಗಸ್ಟ್	1.88
ಸೆಪ್ಟೆಂಬರ್	0.48
ಅಕ್ಟೋಬರ್	3.40

ಅಕ್ಟೋಬರ್(22ರವರೆಗೆ) ತಿಂಗಳ ಮಾಹಿತಿ

ಜಿಲ್ಲೆಗಳು	ವಿದ್ಯುತ್ ಕಂಬಗಳು	ಪರಿವರ್ತಕಗಳು	ಒಟ್ಟು ವೆಚ್ಚ (₹ಕೋಟಿಗಳಲ್ಲಿ)
ಬೆಂಗಳೂರು ನಗರ	111	117	194.04
ಬೆಂಗಳೂರು ಗ್ರಾಮಾಂತರ	25	3	4.72
ರಾಮನಗರ	119	46	80.95
ಕೋಲಾರ	66	0	10.19
ಚಿಕ್ಕಬಳ್ಳಾಪುರ	56	5	7.02
ತುಮಕೂರು	94	0	5.64
ದಾವಣಗೆರೆ	227	10	22.38
ಚಿತ್ರದುರ್ಗ	142	8	15.42

ಏಳು ತಿಂಗಳಲ್ಲಿ ₹24 ಕೋಟಿ ನಷ್ಟ

ಬೆಸ್ಕಾಂ ವ್ಯಾಪ್ತಿಯಲ್ಲಿ ಈ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ 22ರವರೆಗೆ 8,225 ವಿದ್ಯುತ್ ಕಂಬಗಳು ಉರುಳಿಬಿದ್ದಿವೆ. 1,367 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿದೆ. 9.20 ಕಿ.ಮೀಗಳಷ್ಟು ಉದ್ದದ ವಿದ್ಯುತ್ ತಂತಿಗಳಿಗೆ ಹಾನಿಯಾಗಿದೆ. ಒಟ್ಟು ₹24.93 ಕೋಟಿ ನಷ್ಟವಾಗಿದೆ.

ಅಮಾವಾಸ್ಯೆ ಪೂಜೆಗೆ ಮಾದೇಶ್ವರನ ಸನ್ನಿಧಿಯಲ್ಲಿ ಭಕ್ತ ಸಾಗರ • ಅದ್ದೂರಿ ಜಾತ್ರೆ

ದೀಪಾವಳಿ: ಇಂದು ಹಾಲರವಿ ಉತ್ಸವ

ಪ್ರಜಾವಾಣಿ ವಾರ್ತೆ

ಮಹದೇಶ್ವರ ಬೆಟ್ಟ(ಚಾಮರಾಜನಗರ ಜಿಲ್ಲೆ): ದೀಪಾವಳಿ ಜಾತ್ರಾ ಮಹೋತ್ಸವದ ಮೂರನೇ ದಿನವಾದ ಗುರುವಾರ ಮಾದೇಶ್ವರ ಸ್ವಾಮಿಗೆ ವಿಶೇಷ ಅಮಾವಾಸ್ಯೆ ಪೂಜೆ ಹಾಗೂ ವಿವಿಧ ಉತ್ಸವಾದಿಗಳು ನೆರವೇರಿದವು. ನೆರೆಯ ತಮಿಳುನಾಡು ಸೇರಿದಂತೆ ವಿವಿಧೆಡೆಯ ಅಸಂಖ್ಯಾತ ಭಕ್ತರು ಪಾಲ್ಗೊಂಡಿದ್ದು, ಜಾತ್ರೆ ಅದ್ದೂರಿಯಾಗಿ ನಡೆಯುತ್ತಿದೆ.

ಬೇಡಗಂಪಣ ಸಮುದಾಯದ ಸರದಿ ಅರ್ಚಕರು ಮಾದೇಶ್ವರ ಸ್ವಾಮಿಯನ್ನು ಫಲಪುಷ್ಪಗಳಿಂದ ಶೃಂಗರಿಸಿ ಬಿಲ್ವಾರ್ಚನೆ, ಮಹಾಮಂಗಳಾರತಿ, ರುದ್ರಾಭಿಷೇಕ ಮಾಡಿದ ನಂತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

ಹಾಲರವಿ ಉತ್ಸವ ಇಂದು: ದೀಪಾವಳಿಗೆ ಮೆರುಗು ತರುವುದು ಹಾಲರವಿ ಉತ್ಸವ. ಇದು ಬೇಡಗಂಪಣ ಸಮುದಾಯದ ಪುಟ್ಟ ಬಾಲೆಯರಿಂದ ನಡೆಯುತ್ತದೆ. ಈ ಸಮುದಾಯಕ್ಕೆ ಸೇರಿದ 101 ಬಾಲೆಯರು ಉಪವಾಸವಿದ್ದು, ಬೆಳಿಗ್ಗೆ ಮಹದೇಶ್ವರ ಬೆಟ್ಟದಿಂದ 7 ಕಿಲೋ ಮೀಟರ್ ದೂರವಿರುವ ಹಳ್ಳಕ್ಕೆ ತಲುಪಿ, ಅಲ್ಲಿ ಮಡಿ ಮಾಡಿ ತಮ್ಮ ಪೋಷಕರೊಡನೆ ಪ್ರತ್ಯೇಕವಾಗಿ ಹಾಲು ಹಳ್ಳದ ಗಂಗೆಯನ್ನು ಪುಟ್ಟ ತಾಮ್ರದ ಬಿಂದಿಗೆಯಲ್ಲಿ ತುಂಬಿಕೊಳ್ಳುತ್ತಾರೆ. ಅವುಗಳನ್ನು ಒಂದೆಡೆ ಇಟ್ಟು ಪೂಜೆ ನೆರವೇರಿಸಿದ ಬಳಿಕ ಅಲ್ಲಿಂದ ಕಾಲ್ನಡಿಗೆಯಲ್ಲಿ ಮಹದೇಶ್ವರ ಬೆಟ್ಟ ತಂಬಡಿಗೇರಿ ಮುಖ್ಯದ್ವಾರ ತಲುಪಿ ವಿಶೇಷ ಪೂಜೆ ನೆರವೇರಿಸುತ್ತಾರೆ. ಬಳಿಕ ಮಂಗಳ ವಾದ್ಯಗಳ ಸಹಿತ ದೇವಾಲಯ ತಲುಪುತ್ತಾರೆ. ದೇವಾಲಯದ ಹೊರ ಹಾಗೂ ಒಳ ಆವರಣದಲ್ಲಿ ಒಂದು ಸುತ್ತು ಪ್ರದಕ್ಷಿಣೆ ಹಾಕುತ್ತಾರೆ. ಬಳಿಕ ಭಕ್ತರಿಗೆ ತೀರ್ಥ ವಿತರಿಸಲಾಗುವುದು.

ವಿಶೇಷವಾಗಿ ಅಮಾವಾಸ್ಯೆ ಉತ್ಸವದಲ್ಲಿ ಪಾಲ್ಗೊಳ್ಳುವುದಕ್ಕಿಂತ ಹಾಲರವಿ ಉತ್ಸವದಲ್ಲಿ ಹೆಚ್ಚಿನ ಭಕ್ತರು ಪಾಲ್ಗೊಳ್ಳುತ್ತಾರೆ. ಹಾಲುಹಳ್ಳದ ತೀರ್ಥವನ್ನು ಮನೆಗೆ ಕೊಂಡೊಯ್ದರೆ ಯಾವುದೇ ದೃಷ್ಟಿಯಾಗಿದ್ದರೂ ನಿವಾರಣೆಯಾಗುವುದು ಎಂಬುದು ವಾಡಿಕೆ.

ಮಾದೇಶ್ವರ ಸನ್ನಿಧಿಯಲ್ಲಿ ಗುರುವಾರ ವಿವಿಧ ಸೇವೆಯಲ್ಲಿ ಪಾಲ್ಗೊಂಡಿದ್ದ ಭಕ್ತರು

ದೃಷ್ಟಿ ತಾಗದಿರಲು ಕತ್ತಿ ಪವಾಡ

ಸುಮಾರು 7 ಕಿಲೋ ಮೀಟರ್ ದೂರದಿಂದ ಹಾಲರವಿ ತಂದ ಬಾಲೆಯರು ಹಾಗೂ ಗಂಗೆಗೆ ದೃಷ್ಟಿ ತಾಗದಿರಲಿ ಎಂದು ತಂಬಡಿಗೇರಿಯ ಪ್ರವೇಶ ದ್ವಾರದಲ್ಲಿ ಗಂಗೆಯನ್ನು ಒಂದೆಡೆ ಇರಿಸಲಾಗುತ್ತದೆ. ಅದರ ಮುಂದೆ ಕತ್ತಿಯಿಂದ ದೃಷ್ಟಿ ತೆಗೆಯಲಾಗುತ್ತದೆ. ಈ ಕಾರ್ಯಕ್ರಮದ ನಂತರವೇ ಹಾಲರವಿ ಉತ್ಸವ ಮುಂದುವರೆಯುವುದು ವಾಡಿಕೆ.

ನಾಗಮಲೆಗೆ ಚಾರಣ; ಭಕ್ತರಿಗೆ ಮುಕ್ತ ಅವಕಾಶ

ಹನೂರು (ಚಾಮರಾಜನಗರ ಜಿಲ್ಲೆ): ಮಲೆಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ ನಾಗಮಲೆ ಚಾರಣಕ್ಕೆ ವಿಧಿಸಲಾಗಿದ್ದ ನಿಷೇಧ ಆದೇಶವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದು, ಭಕ್ತರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ಅರಣ್ಯ ಸಚಿವರ ಆದೇಶದಂತೆ, ನಾಗಮಲೆಗೆ ತೆರಳಲು ಆನ್‌ಲೈನ್ ಟಿಕೆಟ್ ಕಡ್ಡಾಯಗೊಳಿಸಿ, 200 ಮಂದಿಗಷ್ಟೇ ಮಾತ್ರ ಅವಕಾಶ ನೀಡಲಾಗುತ್ತಿತ್ತು.

ಆದರೆ, ‘ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಹೆಚ್ಚಿನ ಭಕ್ತರು ಬರುವುದರಿಂದ ಭಕ್ತರ ಮಿತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕು’ ಎಂದು ಸಾಲೂರು ಮಠದ ಶಾಂತಮಲ್ಲಿಕಾರ್ಜುನಸ್ವಾಮಿ ಅವರು ಪ್ರಧಾನ ಮುಖ್ಯಅರಣ್ಯ ಸಂರಕ್ಷಣಾಧಿಕಾರಿಗೆ(ವನ್ಯಜೀವಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು) ಮನವಿ ಮಾಡಿದ್ದರು.

ಅವರಿಗೆ ಸ್ಪಂದಿಸಿರುವ ಪಿಸಿಸಿಎಫ್, ‘ದೀಪಾವಳಿ, ಕಾರ್ತಿಕ ಸೋಮವಾರಗಳು ಸೇರಿ ಇತರೆ ವಿಶೇಷ ದಿನಗಳಲ್ಲಿ ಮಾತ್ರ ವನ್ಯಜೀವಿ ಕಾಯ್ದೆ ಉಲ್ಲಂಘನೆಯಾಗದಂತೆ ಹಾಗೂ ಅರಣ್ಯ ಮತ್ತು ವನ್ಯಜೀವಿಗಳಿಗೆ ಹಾನಿ ಉಂಟು ಮಾಡದೆ ಷರತ್ತಿಗೆ ಒಳಪಟ್ಟು ಬೆಳಿಗ್ಗೆ 6 ಗಂಟೆಯಿಂದ 11 ಗಂಟೆ ಒಳಗೆ ನಾಗಮಲೆಗೆ ಹೋಗಬಹುದು. ಅಲ್ಲದೆ, ಸಂಜೆ 6 ಗಂಟೆ ಒಳಗೆ ವಾಪಸು ಬರಲು ಅನುಮತಿ ನೀಡಲಾಗಿದೆ’ ಪ್ರಧಾನ ಮುಖ್ಯ ಅರಣ್ಯ-ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮಲೆಮಹದೇಶ್ವರ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರದ ಮೂಲಕ ತಿಳಿಸಿದ್ದಾರೆ.

ಚಲುವರಾಯಸ್ವಾಮಿ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿರುದ್ಧದ ಭೂ ಕಬಳಿಕೆ ಆರೋಪಕ್ಕೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಮಧ್ಯಂತರ ತಡೆ ನೀಡಿದೆ.

‘ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಜಾರಿಗೊಳಿಸಿರುವ ಸಮನ್ಸ್ ಹಾಗೂ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಚಲುವರಾಯಸ್ವಾಮಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸಿದ್ಧಾರ್ಥ್ ಬಿ.ಮುಚ್ಚಂಡಿ, ‘ಕಳೆದ ನೂರು ವರ್ಷಗಳ ದಾಖಲೆಗಳಲ್ಲಿ ಎಲ್ಲೂ ವ್ಯಾಜ್ಯಗ್ರಸ್ತ ಜಮೀನನ್ನು ಖರಾಬು ಅಥವಾ ಕೆರೆ ಪ್ರದೇಶ ಎಂದು ಉಲ್ಲೇಖ ಮಾಡಿಲ್ಲ. ಇದೀಗ ಏಕಾಏಕಿ ಸರ್ವೆ ನಡೆಸಿ ಅದನ್ನು ಕೆರೆ ಜಾಗ ಎಂದು ಹೇಳಲಾಗುತ್ತಿದೆ. ಆದರೆ, ಇದಕ್ಕೆ ಸೂಕ್ತ ದಾಖಲೆಗಳಿಲ್ಲ’ ಎಂದರು.

‘ಮಂಜೂರಾದ ಜಮೀನನ್ನು ಸರ್ಕಾರ ರದ್ದುಗೊಳಿಸಿಲ್ಲ. ಆದ್ದರಿಂದ, ಇಲ್ಲಿ ಒತ್ತುವರಿ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ಪ್ರಕರಣದಲ್ಲಿ ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ–2011 ಅನ್ನು ಅನ್ವಯಿಸಿರುವುದೇ ಕಾನೂನು ಬಾಹಿರ ಕ್ರಮ. ಆದ್ದರಿಂದ, ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಜಾರಿಗೊಳಿಸಿರುವ ಸಮನ್ಸ್ ರದ್ದುಗೊಳಿಸಬೇಕು’ ಎಂದರು.

ವಾದ ಆಲಿಸಿದ ನ್ಯಾಯಪೀಠ, ‘ಅರ್ಜಿದಾರರ ವಿರುದ್ಧ ವಿಶೇಷ ಕೋರ್ಟ್ 2024ರ ಮಾರ್ಚ್ 28ರಂದು ಹೊರಡಿಸಿದ್ದ ಸಮನ್ಸ್ ಹಾಗೂ ಮುಂದಿನ ವಿಚಾರಣಾ ಪ್ರಕ್ರಿಯೆಗಳಿಗೆ ಮಧ್ಯಂತರ ತಡೆ ನೀಡಿತು.

‘ಪತ್ನಿಯ ಖಾಸಗೀತನದ ಹಕ್ಕನ್ನೂ ಗೌರವಿಸಿ’

ಪ್ರಜಾವಾಣಿ ವಾರ್ತೆ

ಚೆನ್ನೈ: ಖಾಸಗೀತನದ ಹಕ್ಕು ಎಂಬುದು ಸಂಗಾತಿಯ ಖಾಸಗಿತನದ ಹಕ್ಕನ್ನೂ ಒಳಗೊಳ್ಳುತ್ತದೆ, ಈ ಹಕ್ಕನ್ನು ಉಲ್ಲಂಘಿಸಿ ಪಡೆದ ಸಾಕ್ಷ್ಯವನ್ನು ಮಾನ್ಯ ಮಾಡಲು ಆಗುವುದಿಲ್ಲ ಎಂದು ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠವು ಹೇಳಿದೆ.

ಪತಿಯು ಸಲ್ಲಿಸಿರುವ ವಿಚ್ಛೇದನ ಅರ್ಜಿಗೆ ಸಂಬಂಧಿಸಿದಂತೆ, ಪತಿಯನ್ನೇ ಸಾಕ್ಷಿಯಾಗಿ ಪರಿಗಣಿಸಲು ಹಾಗೂ ಪತ್ನಿಯ ದೂರವಾಣಿ ಕರೆ ವಿವರಗಳನ್ನು ಸಾಕ್ಷ್ಯವನ್ನಾಗಿ ಪರಿಗಣಿಸಲು ಅವಕಾಶ ಕಲ್ಪಿಸಿದ ಸ್ಥಳೀಯ ನ್ಯಾಯಾಲಯವೊಂದರ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.



ವೈವಾಹಿಕ ಸಂಬಂಧಗಳಲ್ಲಿ ದುರ್ನಡತೆ ಸಹಜ ಎಂಬ ಪೂರ್ವ ನಂಬಿಕೆಯ ಆಧಾರದಲ್ಲಿ ಕಾನೂನಿನ ಕ್ರಮವನ್ನು ಕೈಗೊಳ್ಳಲು ಆಗದು ಹಾಗೂ ಸಂಗಾತಿಯ ಮೇಲೆ ಕಳ್ಳಗಣ್ಣು ಇರಿಸುವುದಕ್ಕೆ ಅಸ್ತು ಎನ್ನಲು ಅಥವಾ ಅಂಥದಕ್ಕೆ ಉತ್ತೇಜನ ನೀಡಲು ಆಗುವುದಿಲ್ಲ ಎಂದು ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಹೇಳಿದ್ದಾರೆ.

‘ಪತ್ನಿಯ ಸಹಮತ ಇಲ್ಲದೆ ಅಥವಾ ಆಕೆಗೆ ಗೊತ್ತಿಲ್ಲದೆ ಆಕೆಯ ಖಾಸಗಿ ವಿಚಾರಗಳನ್ನು ಸಂಗ್ರಹಿಸುವುದನ್ನು ಒಳ್ಳೆದು ಎನ್ನಲಾಗದು’ ಎಂದಿದ್ದಾರೆ.

ಕ್ರೌರ್ಯ ಹಾಗೂ ಇತರ ಕೆಲವು ಕಾರಣಗಳನ್ನು ಉಲ್ಲೇಖಿಸಿ, ಪತ್ನಿಯಿಂದ ತಮಗೆ ವಿಚ್ಛೇದನ ಬೇಕು ಎಂದು ಪತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರವಾಗಿ, ಪತಿಯನ್ನೇ ಸಾಕ್ಷಿಯಾಗಿ ಪರಿಗಣಿಸಲು ಹಾಗೂ ಪತ್ನಿಗೆ ಗೊತ್ತಿಲ್ಲದಂತೆ ಪಡೆದಿದ್ದ ಆಕೆಯ ದೂರವಾಣಿ ಕರೆ ದಾಖಲೆಗಳನ್ನು ಸಾಕ್ಷ್ಯವನ್ನಾಗಿ ಪರಿಗಣಿಸಲು ಅಧೀನ ನ್ಯಾಯಾಲಯ ಅವಕಾಶ ಕೊಟ್ಟಿದ್ದನ್ನು ಪ್ರಶ್ನಿಸಿ, ಮಹಿಳೆಯು ಹೈಕೋರ್ಟ್‌ನಲ್ಲಿ ಈ ಅರ್ಜಿ ಸಲ್ಲಿಸಿದ್ದರು.

ಅಯೋಧ್ಯೆಯ ಸರಯೂ ನದಿ ತಟದಲ್ಲಿ ದೀಪಾವಳಿ ಪ್ರಯುಕ್ತ ಆಯೋಜಿಸಲಾಗಿದ್ದ ದೀಪೋತ್ಸವದಲ್ಲಿ ಸಾವಿರಾರು ಜನರು ದೀಪ ಬೆಳಗಿದರು –ಪಿಟಿಐ ಚಿತ್ರ

ಗಿನ್ನಿಸ್ ದಾಖಲೆಗೆ ಸೇರಿದ ಅಯೋಧ್ಯೆ ದೀಪೋತ್ಸವ

ಅಯೋಧ್ಯೆ (ಪಿಟಿಐ): ಅಯೋಧ್ಯೆಯ ರಾಮಮಂದಿರದಲ್ಲಿ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆಯಾದ ಬಳಿಕ ಮೊದಲ ಬಾರಿಗೆ ನಡೆದ ವಿಜೃಂಭಣೆಯ ದೀಪಾವಳಿ ಉತ್ಸವವು ಎರಡು ವಿಶ್ವ ದಾಖಲೆಗಳನ್ನು ನಿರ್ಮಿಸಿದೆ. ಸರಯೂ ನದಿ ತಟದಲ್ಲಿ ದೀಪಾವಳಿ ಪ್ರಯುಕ್ತ ಬುಧವಾರ 25,12,585 ದೀಪಗಳನ್ನು ಬೆಳಗಿಸಲಾಗಿದೆ.

ಅತಿ ದೊಡ್ಡ ದೀಪೋತ್ಸವ ಹಾಗೂ ಅತಿ ಹೆಚ್ಚು ಜನರು ಏಕಕಾಲದಲ್ಲಿ ಆರತಿ ಬೆಳಗಿರುವುದು ಗಿನ್ನಿಸ್ ದಾಖಲೆಯಲ್ಲಿ ಸ್ಥಾನ ಪಡೆದಿವೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಸೇರಿ ಸಾವಿರಾರು ಜನರು ಈ ದೀಪಮಹೋತ್ಸವವನ್ನು ಕಣ್ತುಂಬಿಕೊಂಡಿದ್ದಾರೆ.

ರೈತರು–ವಿಜ್ಞಾನಿಗಳ ಸಂವಾದ ಸಭೆಯಲ್ಲಿ ಸುರೇಶ ಹೊನ್ನಪ್ಪಗೋಳ

‘ಹೈನುಗಾರರ ಆತ್ಮಹತ್ಯೆ ಪ್ರಕರಣ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷಿಯನ್ನು ನಂಬಿದವರು ಮಳೆ, ಬೆಳೆ, ಬೆಲೆ ಕೈಕೊಟ್ಟಾಗ ಆರ್ಥಿಕ ದುಃಸ್ಥಿತಿ ಉಂಟಾಗಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳಿವೆ. ಹೈನುಗಾರಿಕೆಯನ್ನೇ ಮುಖ್ಯ ಕಸುಬಾಗಿ ಮಾಡಿಕೊಂಡವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಇಲ್ಲವೇ ಇಲ್ಲ’ ಎಂದು ಕೇಂದ್ರ ಸರ್ಕಾರದ ಪಶುಸಂಗೋಪನಾ ಇಲಾಖೆಯ ಮಾಜಿ ಆಯುಕ್ತ ಸುರೇಶ ಹೊನ್ನಪ್ಪಗೋಳ ತಿಳಿಸಿದರು.

ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ (ಎನ್‌ಐಎಎನ್‌ಪಿ) ನಗರದ ಐಸಿಎಆರ್– ಎನ್‌ಐಎಎನ್‌ಪಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕ್ರಿಯಾ ಯೋಜನೆ ಅಡಿಯಲ್ಲಿ ಹಮ್ಮಿಕೊಂಡಿದ್ದ ‘ರೈತರು–ವಿಜ್ಞಾನಿಗಳ ಸಂವಾದ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪಶುಸಂಗೋಪನೆ ಎನ್ನುವುದು ರೈತರಿಗೆ ಎಟಿಎಂ ಇದ್ದಂತೆ. ನಿಗದಿತ ಆದಾಯ ನಿರಂತರವಾಗಿ ಬರುತ್ತಿರುತ್ತದೆ. ಕೃಷಿ ಜಿಡಿಪಿ ಮತ್ತು ರಾಷ್ಟ್ರೀಯ ಜಿಡಿಪಿಗೆ ಪಶುಸಂಗೋಪನೆಯ ಕೊಡುಗೆ ಅಧಿಕವಿದೆ ಎಂದು ಹೇಳಿದರು.



ನಗರದಲ್ಲಿ ಇತ್ತೀಚೆಗೆ ನಡೆದ ‘ರೈತರು–ವಿಜ್ಞಾನಿಗಳ ಸಂವಾದ’ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹೈನುಗಾರರು

ನಗರೀಕರಣದ ಹೊರತಾಗಿಯೂ ಪ್ರಾಣಿಗಳನ್ನು ಸಾಕುವ ಅಭ್ಯಾಸವನ್ನು ರೈತರು ಮುಂದುವರಿಸಬೇಕು. ಕುಟುಂಬ ಬೆಳೆದಂತೆ ಹಿಡುವಳಿ ವಿಸ್ತೀರ್ಣವೂ ಚಿಕ್ಕದಾಗುತ್ತಾ ಹೋಗುತ್ತದೆ. ಪ್ರಾಣಿಗಳನ್ನು ಸಾಕಿದರೆ, ಕುಟುಂಬ ಬೆಳೆದಂತೆ ಪ್ರಾಣಿಗಳ ಸಂಖ್ಯೆಯೂ ಬೆಳೆಯುತ್ತದೆ ಎಂದು ವಿವರಿಸಿದರು.

ಐಸಿಎಆರ್– ಎನ್‌ಐಎಎನ್‌ಪಿ ನಿರ್ದೇಶಕ ಅರ್ಥಬಂಧು ಸಾಹೂ ಮಾತನಾಡಿ, ‘ಹೈನುಗಾರಿಕೆ ಲಾಭದಾಯಕ ಮಾತ್ರವಲ್ಲ, ಆರೋಗ್ಯಕ್ಕೆ ಬೇಕಾದ ಪೌಷ್ಟಿಕಾಂಶವೂ ಇದರಿಂದ ಮತ್ತು ಸಮತೋಲಿತ ಆಹಾರವೂ ಅದರಿಂದ ದೊರೆಯುತ್ತದೆ’ ಎಂದು ಅವರು ಹೇಳಿದರು.

ಹೈನುಗಾರಿಕೆ, ಸಣ್ಣ ಮೆಲುಕು ಹಾಕುವ ಪ್ರಾಣಿಗಳ ಸಾಕಾಣಿಕೆ ಮತ್ತು ಹಿತ್ತಲಿನಲ್ಲಿ ಕೋಳಿ ಸಾಕಣೆಗೆ ಸಂಬಂಧಿಸಿದ ಪರಿಕರಗಳನ್ನು ರೈತರಿಗೆ ವಿತರಿಸಲಾಯಿತು.

ಪಶುಪಾಲನೆ ಮತ್ತು ಪಶುವೈದ್ಯ ಸೇವಾ ನಿರ್ದೇಶಕ ಜಿ.ಟಿ. ರಾಮಯ್ಯ, ಡಿಎಪಿಎಸ್‌ಸಿ ನೋಡಲ್ ಅಧಿಕಾರಿಗಳಾದ ರಂಗಸಾಮಿ ಎ., ಕೃಷ್ಣಪ್ಪ ಬಳಗಾನೂರು ಭಾಗವಹಿಸಿದ್ದರು.

ಗೋದಾಮಿನ ಮೇಲೆ ಗುರುವಾರ ರಾತ್ರಿ ದಾಳಿ ನಡೆಸಿರುವ ಚುನಾವಣಾಧಿಕಾರಿಗಳು ಹಾಗೂ ಪೊಲೀಸರ ತಂಡ, ಸೀರೆ ಹಾಗೂ ಪಂಚೆ – ಶರ್ಟ್‌ಗಳನ್ನು ಪರಿಶೀಲಿಸಿತು

ಗೋದಾಮಿನಲ್ಲಿದ್ದ ಸೀರೆ, ಪಂಚೆ, ಶರ್ಟ್ ಜಪ್ತಿ

ಪ್ರಜಾವಾಣಿ ವಾರ್ತೆ

ಬಿಡದಿ: ಇಲ್ಲಿನ ಭೀಮೇನಹಳ್ಳಿಯಲ್ಲಿರುವ ಸ್ಟೋರಿ ಫ್ಯಾಷನ್ ಪ್ರೈವೇಟ್ ಲಿಮಿಟೆಡ್ ಗೋದಾಮಿನ ಮೇಲೆ ಗುರುವಾರ ರಾತ್ರಿ ದಾಳಿ ನಡೆಸಿರುವ ಚುನಾವಣಾಧಿಕಾರಿಗಳ ತಂಡ ಸೂಕ್ತ ದಾಖಲೆಗಳಿಲ್ಲದೆ ಸಂಗ್ರಹಿಸಿಟ್ಟಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಸೀರೆ ಹಾಗೂ ಪಂಚೆ–ಶರ್ಟ್‌ಗಳನ್ನು ವಶಪಡಿಸಿಕೊಂಡಿದೆ. ಚನ್ನಪಟ್ಟಣ ಉಪ ಚುನಾವಣೆಗೆ ಹಂಚಲು ಇವುಗಳನ್ನು ಸಂಗ್ರಹಿಸಿಡಲಾಗಿತ್ತು ಎಂಬ ಆರೋಪ ಕೇಳಿ ಬಂದಿದೆ.

ಗೋದಾಮಿನಲ್ಲಿ ಸೀರೆ ಮತ್ತು ಪಂಚೆ–ಶರ್ಟ್‌ಗಳನ್ನು ಸಂಗ್ರಹಿಸಿರುವ ಬಗ್ಗೆ ಸಿಕ್ಕ ಖಚಿತ ಮಾಹಿತಿ ಮೇರೆಗೆ ಫ್ಲೈಯಿಂಗ್ ಸ್ಕ್ವಾಡ್ ತಂಡ ಪೊಲೀಸರೊಂದಿಗೆ ದಾಳಿ ನಡೆಸಿತು. ಆಗ ಸುಮಾರು 25 ಬಾಕ್ಸ್‌ಗಳಲ್ಲಿದ್ದ ಬಟ್ಟೆಗಳು ಪತ್ತೆಯಾದವು. ಸ್ಥಳದಲ್ಲಿದ್ದ ಕಾರ್ಮಿಕರನ್ನು ವಿಚಾರಿಸಿದಾಗ ಒಬ್ಬೊಬ್ಬರು ಒಂದೊಂದು ರೀತಿ ಹೇಳಿಕೆ ನೀಡತೊಡಗಿದರು ಎಂದು ಅಧಿಕಾರಿಗಳು ತಿಳಿಸಿದರು.

ಇಷ್ಟು ಪ್ರಮಾಣದ ಬಟ್ಟೆಗಳನ್ನು ಯಾವ ಪಕ್ಷದವರು ಸಂಗ್ರಹಿಸಿ ಇಟ್ಟಿದ್ದರು, ಎಲ್ಲಿಂದ ತರಲಾಗಿತ್ತು ಎಂಬುದರ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ಗೋದಾಮು ಮಾಲೀಕ ಸೇರಿ ಬಟ್ಟೆಗಳನ್ನು ತರಿಸಿದವರು ಯಾರು ಎಂಬುದನ್ನು ಪತ್ತೆ ಹಚ್ಚಲಾಗುವುದು ಎಂದು ಅಧಿಕಾರಿಗಳು ಹೇಳಿದರು.

ಶುಕ್ರವಾರ • ನವೆಂಬರ್ 1, 2024 ಪ್ರಜಾವಾಣಿ

ದೀಪದ ಹಬ್ಬದಲ್ಲಿ ಲಕ್ಷ್ಮಿ

• ನವೀನ ಗಂಗೋತ್ರಿ

ದೀಪಾವಳಿಯ ಸಂಭ್ರಮಗಳ ಸಾಲಿನಲ್ಲಿ ಲಕ್ಷ್ಮೀಪೂಜೆಗೆ ವಿಶಿಷ್ಟ ಸ್ಥಾನ. ಸಂಪತ್ತು ಇನ್ನಷ್ಟು ವೃದ್ಧಿಯಾಗಲಿ ಎಂಬ ಆಶಯದೊಂದಿಗೆ ಇದೇ ಹೊತ್ತಿನಲ್ಲಿ ಹಣದ ಹೂಡಿಕೆ ಮಾಡುವುದು ಸಹ ಸಂಪ್ರದಾಯದಲ್ಲಿ ಇದೆ.

ಹಬ್ಬಗಳೆಂದರೆ ವಿಚಾರ ಮತ್ತು ಆಚಾರ ಜಗತ್ತುಗಳು ಒಂದಾಗುವ ವಿಶಿಷ್ಟ ಕಾಲ. ಆಚಾರವಿಲ್ಲದ ಬರಿಯ ವಿಚಾರಗಳು ಅಥವಾ ವಿಚಾರವಿಲ್ಲದ ಮುಗ್ಧ ಆಚಾರಗಳು ಜಾಳು ಜಾಳು ಎನಿಸುತ್ತವೆ. ಅರ್ಥಪೂರ್ಣವಾದ ಜೀವಿತಕ್ಕೆ ಆಚಾರ–ವಿಚಾರಗಳೆರಡೂ ಸಹಮತದಲ್ಲಿರುವುದು ಬಲು ಮುಖ್ಯ. ಸಮುದಾಯ ಅಥವಾ ನಾಗರಿಕತೆಯೊಂದರ ಆಚಾರ ಹಾಗೂ ವಿಚಾರಗಳು ಒಂದಾಗುವ ಪರ್ವಕಾಲವೇ ಹಬ್ಬ. ಭಾರತದ ಚಿಂತನೆಯಲ್ಲಿ ದೈವಿಕತೆ ಎನ್ನುವುದು ಸೃಷ್ಟಿಯಿಂದ ಹೊರಗಿರುವ ಒಂದು ಸಂಗತಿಯಾಗಿರದೆ ಇಡೀ ಸೃಷ್ಟಿಯೇ ದೈವಿಕವಾಗಿರುವುದರಿಂದ ನಮ್ಮ ಹಬ್ಬಗಳು ಸೃಷ್ಟಿಯ, ಮಾನವತೆಯ ಮತ್ತು ಇಹಲೋಕದ ಸಂಭ್ರಮವೇ ಆಗಿರುವುದು ಸಹಜ. ಹಾಗೆಂದೇ ಭಾರತೀಯ ಹಬ್ಬಗಳಿಗೂ ಪ್ರಕೃತಿಗೂ ಮತ್ತು ಲೋಕದ ಬದುಕಿಗೂ ಘನಿಷ್ಠವಾದ ಸಂಬಂಧವಿದೆ. ಭಾರತೀಯ ಹಬ್ಬಗಳ ಪೈಕಿ ದಕ್ಷಿಣದಲ್ಲಿ 'ದೊಡ್ಡಹಬ್ಬ' ಎಂದೇ ಗುರುತಿಸಿಕೊಳ್ಳುವ ದೀಪಾವಳಿ ಮತ್ತೆ ಬಂದಿದೆ. ವಸ್ತುತಃ ದೀಪಾವಳಿ ಎಂಬುದು ಒಂದು ಹಬ್ಬವಾಗಿರದೆ ಹಲವು ಹಬ್ಬಗಳ ಒಂದು ಸಮೂಹ ಎನ್ನಬಹುದು. ದೀಪಾವಳಿ ಹಬ್ಬದ ಕಥೆಯಲ್ಲಿ ಭೂದೇವಿ, ನರಕಾಸುರ, ರಾವಣ, ಬಲಿ, ಶ್ರೀರಾಮಚಂದ್ರ, ಶ್ರೀಕೃಷ್ಣ, ಲಕ್ಷ್ಮೀದೇವಿ, ಕುಬೇರ – ಹೀಗೆ ಹಲವರ ಪಾತ್ರವಿದೆ. ಹಬ್ಬದ ಕಥೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವೂ ಆಗಿವೆ. ಹಾಗಿದ್ದೂ ದೀಪಾವಳಿಯೊಂದಿಗೆ ಲಕ್ಷ್ಮೀಪೂಜೆಯ ಸಂಬಂಧ ಮಾತ್ರ ಭಾರತದ ತುಂಬ ಏಕರೂಪವಾಗಿ ಕಂಡುಬರುವಂಥದು.

ಸನಾತನ ಭಾರತವು ಗುರುತಿಸಿಕೊಂಡಿರುವಂತೆ ಮಾನವ ಬದುಕಿನ ನಾಲ್ಕು ಪುರುಷಾರ್ಥಗಳಲ್ಲಿ ಅರ್ಥವೂ ಒಂದು. ಇದು ಲೌಕಿಕ ಬದುಕಿನ ನಾನಾ ವಿಧದ ಉತ್ಕರ್ಷಗಳನ್ನು ಸ್ವಪ್ರಯತ್ನದಿಂದ ಸಾಧಿಸುವುದಕ್ಕೆ ಸಂಬಂಧಿಸಿದ, ಕನಸು–ಕಾಂಕ್ಷೆಗಳನ್ನು ಧರ್ಮಮಾರ್ಗದಲ್ಲಿ ಪೂರ್ಣಗೊಳಿಸಿಕೊಳ್ಳುವ ಕುರಿತಾದ ಪುರುಷಾರ್ಥವಾಗಿದೆ. ಅರ್ಥಪುರುಷಾರ್ಥದಲ್ಲಿ ಬಲುದೊಡ್ಡಪಾಲು ದ್ರವ್ಯದ್ದು. ದ್ರವ್ಯವೆಂದರೆ ವಿತ್ತ, ಸಂಪತ್ತು ಮತ್ತು ಅವನ್ನು ಸಾಧಿಸುವ ಸಲಕರಣೆಗಳು. ಈ ಎಲ್ಲವಕ್ಕೂ ಸಂಬಂಧಿಸಿದ ದೇವತೆ ಲಕ್ಷ್ಮೀದೇವಿ.

ದೀಪಾವಳಿಯ ಸಂಭ್ರಮಗಳ ಸಾಲಿನಲ್ಲಿ ಲಕ್ಷ್ಮೀಪೂಜೆಗೆ ವಿಶಿಷ್ಟ ಸ್ಥಾನ. ಭೌತಿಕ ಜಗತ್ತಿನಲ್ಲಿ ಧರ್ಮಾಚರಣೆಗೆ ಅನುವಾಗುವಂಥ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಬೇಕಾದ ಸಾಧನ ಸಲಕರಣೆಗಳೆಲ್ಲಕ್ಕೂ, ಮತ್ತು ಲೌಕಿಕ ಬದುಕಿನ ಎಲ್ಲ ಸೌಖ್ಯಕ್ಕೂ ಲಕ್ಷ್ಮೀದೇವಿಯೇ ಅಧಿದೇವತೆಯಾದ್ದರಿಂದ ದೀಪಾವಳಿಯ ಹೊತ್ತಿನಲ್ಲಿ ಸಂಪತ್ತಿಗೂ ಮತ್ತು ಸಂಪತ್ತಿನ ಮೂಲಕ್ಕೂ ಪೂಜೆ ಸಲ್ಲುತ್ತದೆ. ಚಂಚಲೆಯಾದ ಲಕ್ಷ್ಮಿಯನ್ನು ಪೂಜಿಸುವುದು ಮಾತ್ರವಲ್ಲದೆ, ಸಂಪತ್ತು ಇನ್ನಷ್ಟು ವೃದ್ಧಿಯಾಗಲಿ ಎಂಬ ಆಶಯದೊಂದಿಗೆ ಇದೇ ಹೊತ್ತಿನಲ್ಲಿ ಹಣದ ಹೂಡಿಕೆ ಮಾಡುವುದು ಸಹ ಸಂಪ್ರದಾಯದಲ್ಲಿ ಇದೆ. ಈ ಹಿನ್ನೆಲೆಯಲ್ಲಿ ಭಾರತೀಯ ಶೇರು ಮಾರುಕಟ್ಟೆಯಲ್ಲಿ 'ಮುಹೂರ್ತ ಟ್ರೇಡಿಂಗ್' ಎಂಬ ಆಧುನಿಕ ಲಕ್ಷ್ಮೀ ಆರಾಧನೆಯೊಂದು ಬೆಳೆದು ಬಂದಿದ್ದನ್ನು ಲಕ್ಷಿಸಬಹುದು!

ಲಕ್ಷ್ಮೀದೇವತೆಯನ್ನು ಹಣ ಮತ್ತು ಸಂಪತ್ತಿನ ರೂಪದಲ್ಲಿ ಮಾತ್ರವಲ್ಲದೆ, ತೇಜಸ್ಸು, ಕಾಂತಿ, ಸೌಖ್ಯ ಮತ್ತು ಸಮೃದ್ಧಿಯ ರೂಪದಲ್ಲಿ ಕಂಡುದು ನಮ್ಮ ಪರಂಪರೆ. ಶುಚಿತ್ವ ಮತ್ತು ಒಪ್ಪ ಓರಣವಾಗಿರುವ ಮನೆಯೇ ಲಕ್ಷ್ಮೀದೇವಿಯ ಆವಾಸ. ಆಕೆಯ ಕಟಾಕ್ಷದ ಬಯಕೆಯಿರುವವರು ಶುಚಿಯಾಗಿರಬೇಕು ಎನ್ನುತ್ತವೆ ಶಾಸ್ತ್ರಗಳು. ಹಾಗಾಗಿಯೇ ದೀಪಾವಳಿಯ ಹೊತ್ತಿನಲ್ಲಿ ಮನೆಯನ್ನು, ಕೆಲಸದ ಸ್ಥಳಗಳನ್ನು ಶುಚಿಗೊಳಿಸುವ ಸಂಪ್ರದಾಯವೂ ಬೆಳೆದಿದೆ. ಆಶ್ವಯುಜ ಅಮಾವಾಸ್ಯೆಯ ರಾತ್ರಿಯಂದು ಭೂಲೋಕಕ್ಕೆ ಬಿಜಯಂಗೈಯುವ ಲಕ್ಷ್ಮೀದೇವಿಯನ್ನು ಬರಮಾಡಿಕೊಳ್ಳಲೆಂದೇ ದೀಪಾಲಂಕಾರ, ಆಕಾಶಬುಟ್ಟಿ ಇತ್ಯಾದಿ ಸಡಗರಗಳು ಮನೆಯನ್ನು ತುಂಬುತ್ತವೆ.

ದೀಪದ ಮೂಲಕ ದೇವತೆಯನ್ನು ಕರೆದು ಉಪಾಸನೆ ಮಾಡುವ ದೀಪಾವಳಿಯ ಈ ಆಚರಣೆಯು ನಮ್ಮ ನಾಗರಿಕತೆಯ ಜೀವಂತಿಕೆಗೆ ಸಾಕ್ಷಿ. ಲಕ್ಷ್ಮೀದೇವಿಯ ಕೃಪೆಯಿಂದ ಆಂತರಿಕ ಕಾಂತಿಯು ಕಂಗಳಲ್ಲೂ, ಸಮೃದ್ಧಿಯು ಬಾಳಲ್ಲೂ, ಸಂಪತ್ತು ಭೌತಿಕ ಬದುಕಿನಲ್ಲಿಯೂ ಹಬ್ಬಿಕೊಳ್ಳಲಿ.

ಡಿಜಿಪಿ ರಶ್ಮಿ ವಿರುದ್ಧ ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

ರಶ್ಮಿ ಶುಕ್ಲಾ – ಎಕ್ಸ್ ಖಾತೆ ಚಿತ್ರ

ಮುಂಬೈ: ಮಹಾರಾಷ್ಟ್ರದ ಡಿಜಿಪಿ ರಶ್ಮಿ ಶುಕ್ಲಾ ಅವರು ರಾಜ್ಯದ ಪೊಲೀಸ್ ಆಯುಕ್ತರನ್ನು ಮತ್ತು ಎಸ್‌ಪಿಗಳನ್ನು ಸಂಪರ್ಕಿಸಿ, ವಿರೋಧ ಪಕ್ಷಗಳ ನಾಯಕರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸುವಂತೆ ಸೂಚನೆ ನೀಡುತ್ತಿದ್ದಾರೆ ಎಂದು ಕಾಂಗ್ರೆಸ್ ಗುರುವಾರ ಆರೋಪಿಸಿದೆ.

ರಶ್ಮಿ ಶುಕ್ಲಾ ಅವರನ್ನು ಹುದ್ದೆಯಿಂದ ತೆಗೆಯಬೇಕು ಎಂದು ಪಕ್ಷವು ಚುನಾವಣಾ ಆಯೋಗವನ್ನು ಮತ್ತೊಮ್ಮೆ ಒತ್ತಾಯಿಸಿದೆ.

ಈ ವಿಚಾರವಾಗಿ ಕಾನೂನು ಸಮರ ಸಾರುವುದಾಗಿಯೂ ಕಾಂಗ್ರೆಸ್ ಹೇಳಿದೆ. 'ರಶ್ಮಿ ಅವರ ಕೃತ್ಯಗಳನ್ನು ಚುನಾವಣಾ ಆಯೋಗವು ಉಪೇಕ್ಷಿಸುತ್ತಿರುವಂತೆ ಕಾಣುತ್ತಿದೆ' ಎಂದು ಎಂಪಿಸಿಸಿ ಅಧ್ಯಕ್ಷ ನಾನಾ ಪಟೋಲೆ ಅವರು ಕೇಂದ್ರ ಚುನಾವಣಾ ಆಯೋಗಕ್ಕೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪತ್ರದ ಪ್ರತಿಯೊಂದನ್ನು ಅವರು ಮಹಾರಾಷ್ಟ್ರದ ಮುಖ್ಯ ಚುನಾವಣಾ ಆಯುಕ್ತರಿಗೂ ಕಳುಹಿಸಿದ್ದಾರೆ. ಈ ವಿಚಾರವಾಗಿ ಕಾಂಗ್ರೆಸ್ ಪಕ್ಷವು ಸೆಪ್ಟೆಂಬರ್ 24ರಂದು ಹಾಗೂ ಅಕ್ಟೋಬರ್ 4ರಂದು ಕೂಡ ಪತ್ರ ಬರೆದಿತ್ತು ಎಂಬುದನ್ನು ಪಟೋಲೆ ಅವರು ನೆನಪಿಸಿದ್ದಾರೆ.

ರಾಜ್ಯದಲ್ಲಿ ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿಕೊಂಡ ಹಿಂಸಾಚಾರ ಪ್ರಕರಣಗಳು ಕಳೆದ 20 ದಿನಗಳಲ್ಲಿ ಹೆಚ್ಚಳ ಕಂಡಿವೆ. ಕಾನೂನು ಮತ್ತು ಸುವ್ಯವಸ್ಥೆ ಕುಸಿಯುತ್ತಿದೆ ಎಂದು ಪಟೋಲೆ ಅವರು ದೂರಿದ್ದಾರೆ.

ರಶ್ಮಿ ಅವರು ತಾವು ಕಾಂಗ್ರೆಸ್, ಶಿವಸೇನಾ (ಯುಬಿಟಿ) ಮತ್ತು ಎನ್‌ಸಿಪಿ (ಎಸ್‌ಪಿ) ಪಕ್ಷಗಳಿಗೆ ವಿರುದ್ಧವಾಗಿರುವುದನ್ನು ಸ್ಪಷ್ಟವಾಗಿ ತೋರಿಸಿದ್ದಾರೆ ಎಂದು ಪಟೋಲೆ ಆರೋಪಿಸಿದ್ದಾರೆ.

ಸುದ್ದಿ 2 ನಿಮಿಷ

'680 ಎಕರೆ ಭೂಮಿ ಮಾರಾಟವಲ್ಲ, ನಗದೀಕರಣ'

ಬೆಂಗಳೂರು: ಪ್ರವಾಸೋದ್ಯಮ ಇಲಾಖೆಯ 680 ಎಕರೆ ಮಾರಾಟ ಮಾಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಿಲ್ಲ ಎಂದು ಹಣಕಾಸು ಇಲಾಖೆ ಮತ್ತು ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಸ್ಪಷ್ಟನೆ ನೀಡಿರುವ ಅವರು, ಸಚಿವ ಸಂಪುಟ ಪ್ರವಾಸೋದ್ಯಮ ನೀತಿಗೆ ಒಪ್ಪಿಗೆ ನೀಡಿದ್ದು, ಪ್ರವಾಸೋದ್ಯಮ ಇಲಾಖೆಗೆ ಸೇರಿದ 680 ಎಕರೆ ಭೂಮಿ ನಗದೀಕರಣ ಮಾಡಿ, ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯ ಯೋಜನೆಗಳಿಗೆ ಬಳಸಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

ನಗದೀಕರಣ ಎಂದರೆ ಮಾರಾಟ ಮಾಡುವುದಲ್ಲ. ಖಾಸಗಿ ಹೂಡಿಕೆಯನ್ನು ಆಕರ್ಷಿಸುವ ಉದ್ದೇಶಕ್ಕಾಗಿ ಭೂಮಿಯನ್ನು ಬಳಸಿಕೊಳ್ಳುವುದು ಎಂದು ಅವರು ತಿಳಿಸಿದ್ದಾರೆ.

ಮಧ್ಯ ಪ್ರದೇಶ: ಮತ್ತೆ ಎರಡು ಆನೆಗಳ ಸಾವು

ಉಮರಿಯ (ಪಿಟಿಐ): ಮಧ್ಯಪ್ರದೇಶದ ಬಾಂಧವಗಢ ಹುಲಿ ಸಂರಕ್ಷಣಾ ಮೀಸಲು ಅರಣ್ಯದಲ್ಲಿ (ಬಿಟಿಆರ್) ಇನ್ನೂ ಎರಡು ಆನೆಗಳು ಮೃತಪಟ್ಟಿವೆ. ಇದರೊಂದಿಗೆ ಮೃತಪಟ್ಟ ಆನೆಗಳ ಸಂಖ್ಯೆ 9ಕ್ಕೆ ಏರಿದೆ. ಮತ್ತೊಂದು ಆನೆಯ ಸ್ಥಿತಿ ಗಂಭೀರವಾಗಿದೆ.

ಅರಣ್ಯ ಇಲಾಖೆ ಅಧಿಕಾರಿಯೊಬ್ಬರು, 'ಬುಧವಾರ ಒಂದು, ಗುರುವಾರ ಬೆಳಿಗ್ಗೆ ಮತ್ತೊಂದು ಆನೆ ಮೃತಪಟ್ಟಿತು. ಎಂಟು ಆನೆಗಳ ಮರಣೋತ್ತರ ಪರೀಕ್ಷೆ ಪೂರ್ಣಗೊಂಡಿದೆ' ಎಂದರು.

ಹೆಚ್ಚುವರಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಎಲ್.ಕೃಷ್ಣಮೂರ್ತಿ 'ವೈದ್ಯರು ಕಳೇಬರಗಳ ಪರೀಕ್ಷೆ ನಡೆಸಿದ್ದಾರೆ. ಮೃತ ಆನೆಗಳ ಹೊಟ್ಟೆಯಲ್ಲಿ ವಿಷಯುಕ್ತ ಅಂಶಗಳು, ಹಾರಕ ಸಿರಿಧಾನ್ಯ (ಕೋದೊ ಮಿಲೆಟ್) ಕಂಡುಬಂದಿದೆ' ಎಂದು ತಿಳಿಸಿದರು.

ಆನೆಗಳ ಸಾವಿನ ತನಿಖೆಗೆ ಸರ್ಕಾರ ಕೃಷ್ಣಮೂರ್ತಿ ಅವರ ನೇತೃತ್ವದಲ್ಲೇ ಸಮಿತಿಯನ್ನು ರಚಿಸಿದೆ.

'ಕೋತಿಗಳು ಹೆಚ್ಚಾಗಿ ಹಾರಕ ಸಿರಿಧಾನ್ಯವನ್ನೇ ತಿನ್ನುತ್ತವೆ. ಆದರೆ ಸತ್ತಿರುವ ನಿದರ್ಶನವಿಲ್ಲ' ಎಂದು ಅವರ ಗಮನಸೆಳೆದಾಗ, 'ಆನೆಗಳ ಒಳಾಂಗಗಳ ಮಾದರಿಯನ್ನು ಪ್ರಯೋಗಾಲಯಕ್ಕೂ ಕಳುಹಿಸಲಾಗಿದೆ. ವಿಧಿವಿಜ್ಞಾನ ಪರೀಕ್ಷೆ ಬಳಿಕವೇ ಸಾವಿಗೆ ನಿಖರ ಕಾರಣ ತಿಳಿಯಲಿದೆ' ಎಂದರು.

50:50 ನಿವೇಶನ ಹಿಂಪಡೆಯಲು ಚಿಂತನೆ?

ನಗರಾಭಿವೃದ್ಧಿ ಇಲಾಖೆಗೆ ಸಿ.ಎಂ. ಸೂಚನೆ; ಬದಲಿ ನಿವೇಶನ ಅರ್ಧ ಬೆಲೆಗೆ ಮಾರಾಟಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಮೈಸೂರು: 'ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 50:50 ಅನುಪಾತದಲ್ಲಿ ಹಂಚಿಕೆಯಾಗಿರುವ ಎಲ್ಲ ನಿವೇಶನಗಳನ್ನು ಹಿಂಪಡೆಯಲು ಸರ್ಕಾರ ಚಿಂತನೆ ನಡೆಸಿದೆ' ಎನ್ನಲಾಗಿದ್ದು, ಇದರಿಂದ ನಿವೇಶನ ಪಡೆದವರಿಗೆ ಸಂಕಷ್ಟ ಎದುರಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರು ಮುಡಾದಿಂದ ಪಡೆದ 14 ಬದಲಿ ನಿವೇಶನಗಳನ್ನು ಹಿಂದಿರುಗಿಸಿದ ಬೆನ್ನಲ್ಲೇ, 'ಈ ಅನುಪಾತದಲ್ಲಿ ಹಂಚಿಕೆಯಾದ ಎಲ್ಲ ನಿವೇಶನಗಳನ್ನೂ ಹಿಂಪಡೆಯಬೇಕು' ಎಂಬ ಆಗ್ರಹ ಕೇಳಿಬಂದಿತ್ತು. ಎನ್.ಚಲುವರಾಯಸ್ವಾಮಿ, ತನ್ವೀರ್ ಸೇಠ್ ಸೇರಿದಂತೆ ಕಾಂಗ್ರೆಸ್‌ನ ಸಚಿವರು–ಶಾಸಕರೇ ಈ ಕುರಿತು ಒತ್ತಾಯಿಸಿದ್ದರು.

ಬಿಜೆಪಿ ಶಾಸಕ ಟಿ.ಎಸ್. ಶ್ರೀವತ್ಸ ಈಚೆಗೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದು, ಆ ಅನುಪಾತದಲ್ಲಿ ಹಂಚಿಕೆಯಾಗಿರುವ ಎಲ್ಲ ನಿವೇಶನಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಿದ್ದರು. ಅದನ್ನು ಗಂಭೀರವಾಗಿ ಪರಿಗಣಿಸಿರುವ ಸಿದ್ದರಾಮಯ್ಯ, ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಮುಡಾದಲ್ಲಿ 2020ರಿಂದ 2024ರವರೆಗೆ 1500ಕ್ಕೂ ಹೆಚ್ಚು ನಿವೇಶನಗಳು ಹಂಚಿಕೆಯಾಗಿವೆ. ಪ್ರಕರಣವು ವಿವಾದದ ಸ್ವರೂಪ ಪಡೆಯುತ್ತಿದ್ದಂತೆ, ನಿವೇಶನ ಪಡೆದವರು ಹಾಗೂ ಅವರಿಂದ ನಿವೇಶನ ಖರೀದಿಸಿದವರಲ್ಲಿ ಆತಂಕ ಎದುರಾಗಿದೆ. ಇಂತಹ ಅನೇಕ ನಿವೇಶನಗಳಲ್ಲಿ ಈಗಾಗಲೇ ಕಟ್ಟಡ ನಿರ್ಮಾಣ ಕಾಮಗಾರಿಗಳು ನಡೆದಿವೆ. 'ಅವುಗಳನ್ನು ಮುಂದುವರಿಸಬೇಕೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ನಿಲ್ಲಿಸಬೇಕೆ' ಎಂಬ ಗೊಂದಲ ಮೂಡಿದೆ.

'ನಿವೇಶನ ಪಡೆದವರಲ್ಲಿ ಕೆಲವರು ಅರ್ಧ ಬೆಲೆಗೆ ನಿವೇಶನ ಮಾರಾಟ ಮಾಡುವ ಪ್ರಯತ್ನವನ್ನೂ ನಡೆಸಿದ್ದಾರೆ' ಎಂಬ ಆರೋಪ ಕೇಳಿಬಂದಿದೆ.

ಸರ್ಕಾರ ಶೀಘ್ರ ನಿರ್ಧಾರ : ಶ್ರೀವತ್ಸ ವಿಶ್ವಾಸ

ಮೈಸೂರು: 'ಮುಡಾದಲ್ಲಿ 50:50 ಅನುಪಾತದಲ್ಲಿ ನೀಡಲಾಗಿರುವ ನಿವೇಶನಗಳನ್ನು ವಾಪಸ್ ಪಡೆಯುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಸರ್ಕಾರ ಶೀಘ್ರವೇ ತೀರ್ಮಾನ ಕೈಗೊಳ್ಳುವ ನಿರೀಕ್ಷೆ ಇದೆ' ಎಂದು ಶಾಸಕ ಟಿ.ಎಸ್. ಶ್ರೀವತ್ಸ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಬದಲಿ ನಿವೇಶನ ಪಡೆದವರಲ್ಲಿ ಅನರ್ಹರು ಹಲವರಿದ್ದಾರೆ. ಅರ್ಹರಿಗೆ ನಿವೇಶನ ಸಿಗಬೇಕೆಂಬುದೇ ನಮ್ಮ ಉದ್ದೇಶ' ಎಂದರು.

'ಬದಲಿ ನಿವೇಶನ ಪಡೆದವರು, ಸಿದ್ದರಾಮಯ್ಯ ಕುಟುಂಬವೇ ನಿವೇಶನ ಪಡೆದಿದೆ ಎಂದು ಸಮರ್ಥಿಸಿಕೊಂಡು ಸುಮ್ಮನಿದ್ದರು. ಈಗ ಸಿ.ಎಂ. ಪತ್ನಿಯೇ ನಿವೇಶನಗಳನ್ನು ವಾಪಸ್ ನೀಡಿರುವುದರಿಂದ ಕಡಿಮೆ ಬೆಲೆಗೆ ಮಾರಲು ಯತ್ನಿಸುತ್ತಿದ್ದಾರೆ. ಅಂಥ ನಿವೇಶನಗಳ ನೋಂದಣಿ ಮಾಡದಂತೆ ಸರ್ಕಾರ ಉಪ ನೋಂದಣಾಧಿಕಾರಿಗಳಿಗೆ ಸೂಚಿಸಬೇಕು' ಎಂದು ಕೋರಿದರು.

'ನ. 7 ರಂದು ನಡೆಯಲಿರುವ ಮುಡಾ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸುವೆ' ಎಂದರು.

ಒಳಮೀಸಲಾತಿ: 3 ತಿಂಗಳೊಳಗೆ ವರದಿ ಸಲ್ಲಿಕೆಗೆ ಷರತ್ತು– ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ನೀಡುವ ಸಂಬಂಧ ಸರ್ಕಾರ ರಚಿಸಲಿರುವ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಧ್ಯಕ್ಷತೆಯ ಆಯೋಗಕ್ಕೆ ಮೂರು ತಿಂಗಳಲ್ಲೇ ವರದಿ ನೀಡುವಂತೆ ಷರತ್ತು ವಿಧಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಒಳಮೀಸಲಾತಿ ನೀಡುವುದನ್ನು ತಡ ಮಾಡುವ ಅಥವಾ ಕಾಲ ಹರಣ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಅವರು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಆಯೋಗವು ನಿಗದಿತ ಗಡುವಿನೊಳಗೆ ವರದಿಯನ್ನು ಸಲ್ಲಿಸಲು ಬೇಕಾದ ಅಗತ್ಯ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳಲಿದೆ. ಸಮರ್ಪಕವಾಗಿ, ವೈಜ್ಞಾನಿಕವಾಗಿ ಹಾಗೂ ವಿವಾದಗಳಿಗೆ ಆಸ್ಪದ ನೀಡದಂತೆ ಒಳ ಮೀಸಲಾತಿ ಜಾರಿ ಮಾಡುವ ಉದ್ದೇಶದಿಂದಲೇ ಸರ್ಕಾರ ಆಯೋಗ ರಚಿಸುವ ತೀರ್ಮಾನ ತೆಗೆದುಕೊಂಡಿದೆ ಎಂದು ಅವರು ಹೇಳಿದ್ದಾರೆ.

ಸುಪ್ರೀಂಕೋರ್ಟ್ ಆದೇಶದಂತೆ ಒಳಮೀಸಲಾತಿಯನ್ನು ವೈಜ್ಞಾನಿಕವಾಗಿ, ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸೂಕ್ತ ಅಂಕಿ– ಅಂಶಗಳ ಅಗತ್ಯವಿದೆ. ಈ ಅಂಕಿ–ಅಂಶಗಳನ್ನು ಆಯೋಗ ವೈಜ್ಞಾನಿಕವಾಗಿ ನಿರ್ಧರಿಸಲಿದೆ ಎಂದಿದ್ದಾರೆ.

ರಾಜ್ಯದಲ್ಲಿ ಒಳಮೀಸಲಾತಿ ಕುರಿತು ಮೂರು ದಶಕಗಳ ನಿರಂತರ ಬೇಡಿಕೆ, ಒತ್ತಾಯಗಳ ಹಿನ್ನೆಲೆಯಲ್ಲಿ ರಾಜ್ಯ ಸಚಿವ ಸಂಪುಟವು ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿಯನ್ನು ಕಲ್ಪಿಸಲು ತಾತ್ವಿಕವಾಗಿ ಒಪ್ಪಿಗೆ ನೀಡಿದೆ. ಪರಿಶಿಷ್ಟ ಜಾತಿಗಳಲ್ಲಿ 101 ಒಳಪಂಗಡಗಳಿದ್ದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ವೈಜ್ಞಾನಿಕವಾಗಿ ಒಳಮೀಸಲಾತಿ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದು ಹೇಳಿದ್ದಾರೆ.

ತೆಲಂಗಾಣ ಸರ್ಕಾರ ಸಹ ಒಳ ಮೀಸಲಾತಿ ಜಾರಿ ಸಂಬಂಧ ಈಗಾಗಲೇ ಇದೇ ಮಾದರಿಯಲ್ಲಿ ಒಂದು ಆಯೋಗ ರಚನೆ ಮಾಡಿದೆ ಎಂದಿದ್ದಾರೆ.

ಮುಂದಿನ ತೀರ್ಮಾನ ಆಗುವವರೆಗೆ ರಾಜ್ಯ ಸರ್ಕಾರದ ಅಧೀನದ ಸಿವಿಲ್ ಸೇವೆಗಳಲ್ಲಿನ ಹಾಗೂ ಮೀಸಲಾತಿ ಅನ್ವಯವಾಗುವ ವೃಂದಗಳಿಗೆ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆ ಹೊರಡಿಸದಿರುವ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

30 ವಾರಗಳ ಭ್ರೂಣ ತೆಗೆಸಲು ಕೋರ್ಟ್ ಒಪ್ಪಿಗೆ

ಮುಂಬೈ (ಪಿಟಿಐ): ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದ 11 ವರ್ಷದ ಬಾಲಕಿಯೊಬ್ಬಳು ಸದ್ಯ 30 ವಾರಗಳ ಗರ್ಭಿಣಿಯಾಗಿದ್ದು, ಗರ್ಭಪಾತ ಮಾಡಿಸಿಕೊಳ್ಳಲು ಬಾಂಬೆ ಹೈಕೋರ್ಟ್ ಆಕೆಗೆ ಗುರುವಾರ ಅನುಮತಿ ನೀಡಿದೆ.

ನ್ಯಾಯಮೂರ್ತಿಗಳಾದ ಶರ್ಮಿಳಾ ದೇಶ್‌ಮುಖ್ ಹಾಗೂ ಜಿತೇಂದ್ರ ಜೈನ್ ಅವರಿದ್ದ ರಜಾ ಕಾಲದ ಪೀಠವು, ಇಲ್ಲಿನ ಜೆ.ಜೆ. ಸರ್ಕಾರಿ ಆಸ್ಪತ್ರೆಯಲ್ಲಿ ಗುರುವಾರವೇ ಗರ್ಭಪಾತ ಮಾಡಿಸಿಕೊಳ್ಳುವಂತೆ ಬಾಲಕಿಗೆ ಸೂಚಿಸಿತು.

ಅರ್ಜಿದಾರ ಬಾಲಕಿಗೆ ಗರ್ಭಪಾತ ಮಾಡಿಸಲು ಅನುಮತಿ ನೀಡಲಾಗಿದೆ ಎಂದು ಪೀಠ ತಿಳಿಸಿದೆ. ಅಲ್ಲದೆ, ಅತ್ಯಾಚಾರ ಪ್ರಕರಣದ ವಿಚಾರಣೆಗೆ ಡಿಎನ್‌ಎ ಅಥವಾ ಇತರ ಪರೀಕ್ಷೆಗಳಿಗೆ ನೆರವಾಗಲು ಭ್ರೂಣದ ರಕ್ತ ಮತ್ತು ಅಂಗಾಂಶದ ಮಾದರಿಯನ್ನು ಸಂಗ್ರಹಿಸಿಟ್ಟುಕೊಳ್ಳುವಂತೆಯೂ ಸೂಚಿಸಿದೆ.

ವೈದ್ಯಕೀಯ ಗರ್ಭಪಾತ ಕಾಯ್ದೆಯ ಪ್ರಕಾರ 20 ವಾರ ತುಂಬಿರುವ ಭ್ರೂಣ ತೆಗೆಸಲು ಕೋರ್ಟ್ ಅನುಮತಿ ಕಡ್ಡಾಯವಾಗಿದೆ.

ತಿರುಮಲದ ಕೆಲಸಗಾರರು ಹಿಂದೂಗಳೇ ಆಗಿರಬೇಕು: ಟಿಟಿಡಿ ನೂತನ ಅಧ್ಯಕ್ಷ

ಹೈದರಾಬಾದ್ (ಪಿಟಿಐ): 'ತಿರುಮಲದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ ಹಿಂದೂಗಳೇ ಆಗಿರಬೇಕು' ಎಂದು ಪ್ರತಿಪಾದಿಸಿರುವ ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಮಂಡಳಿಯ ನೂತನ ಅಧ್ಯಕ್ಷ ಬಿ.ಆರ್. ನಾಯ್ಡು ಅವರು, 'ಇದಕ್ಕಾಗಿ ನಾನು ಕಾರ್ಯ ನಿರ್ವಹಿಸುತ್ತೇನೆ' ಎಂದರು.

'ಇತರ ಧರ್ಮಕ್ಕೆ ಸೇರಿದ ಸಿಬ್ಬಂದಿ ಕುರಿತು ಆಂಧ್ರ ಪ್ರದೇಶ ಸರ್ಕಾರದ ಜತೆ ಚರ್ಚಿಸಲಾಗುವುದು. ಈ ಸಿಬ್ಬಂದಿಯನ್ನು ಸರ್ಕಾರದ ಇತರ ಇಲಾಖೆಗಳಿಗೆ ನಿಯುಕ್ತಿಗೊಳಿಸುವ ಅಥವಾ ಸ್ವಯಂ ನಿವೃತ್ತಿಗೆ (ವಿಆರ್‌ಎಸ್) ಅವಕಾಶ ಕಲ್ಪಿಸುವ ಕುರಿತು ಸಮಾಲೋಚನೆ ನಡೆಸಲಾಗುವುದು' ಎಂದು ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ತಿರುಮಲದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ ಹಿಂದೂಗಳೇ ಆಗಿರಬೇಕು. ಇದನ್ನು ಕಾರ್ಯಸಾಧು ಮಾಡಲು ನಾನು ಶ್ರಮಿಸುತ್ತೇನೆ. ಈ ವಿಷಯದಲ್ಲಿ ಹಲವು ಸಮಸ್ಯೆಗಳಿದ್ದು, ಆ ಕುರಿತು ಚರ್ಚಿಸಲಾಗುವುದು' ಎಂದರು.

ಟಿಟಿಡಿ ಮಂಡಳಿಯ ಅಧ್ಯಕ್ಷ ಸ್ಥಾನಕ್ಕೆ ತಮ್ಮನ್ನು ನೇಮಕ ಮಾಡಿದ್ದಕ್ಕೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಮತ್ತು ಎನ್‌ಡಿಎ ನಾಯಕರಿಗೆ ಅವರು ಕೃತಜ್ಞತೆ ಸಲ್ಲಿಸಿದರು.

ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತಿರುಮಲದಲ್ಲಿ ಅವ್ಯವಹಾರಗಳು ನಡೆದಿವೆ ಎಂದ ಅವರು, ದೇವಾಲಯದ ಪಾವಿತ್ರ್ಯಕ್ಕೆ ಧಕ್ಕೆ ಆಗದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು.

ಮಂಡಳಿ ಸದಸ್ಯರಾಗಿ ರಾಜ್ಯದ ಮೂವರು

ಎಚ್‌.ಎಲ್‌. ದತ್ತು

ನರೇಶ್ ಕುಮಾರ್

ಬೆಂಗಳೂರು: ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಆಡಳಿತ ಮಂಡಳಿಗೆ ಆಂಧ್ರಪ್ರದೇಶ ಸರ್ಕಾರವು ನೇಮಿಸಿರುವ ನೂತನ 24 ಸದಸ್ಯರಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಚ್.ಎಲ್. ದತ್ತು ಸೇರಿದಂತೆ ಕರ್ನಾಟಕದ ಮೂವರಿಗೆ ಅವಕಾಶ ಕಲ್ಪಿಸಲಾಗಿದೆ.

ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ರಾಜ್ಯ ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದ ಬಿಜೆಪಿ ಮುಖಂಡ ನರೇಶ್ ಕುಮಾರ್ ಹಾಗೂ ದರ್ಶನ್ ಆರ್.ಎನ್. ಅವರನ್ನು ಟಿಟಿಡಿ ಆಡಳಿತ ಮಂಡಳಿ ಸದಸ್ಯರನ್ನಾಗಿ ನೇಮಿಸಲಾಗಿದೆ.

'ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸವಿತಾ ಸಮಾಜಕ್ಕೆ ಟಿಟಿಡಿ ಆಡಳಿತ ಮಂಡಳಿಯಲ್ಲಿ ಪ್ರಾತಿನಿಧ್ಯ ಕಲ್ಪಿಸಲಾಗಿದೆ. ನಮ್ಮ ಸಮುದಾಯದ ಕುರಿತು ಇರುವ ಅಭಿಪ್ರಾಯವನ್ನು ಬದಲಿಸುವ ನಿಟ್ಟಿನಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತೇನೆ' ಎಂದು ನರೇಶ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

'ಸೇನೆ ವಾಪಸ್ ಕೆಲವೆಡೆ ಪೂರ್ಣ'

ಒಂದನೇ ಪುಟದಿಂದ...

ಮೇಜರ್ ಬಾಬ್ ಖಟಿಂಗ್ ಅವರು 1951ರ ಫೆಬ್ರುವರಿಯಲ್ಲಿ ಮಕ್‌ಮಹೋನ್ ರೇಖೆಯವರೆಗೆ ಭಾರತದ ಆಡಳಿತವನ್ನು ಸ್ಥಾಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಎಂದು ಸಿಂಗ್ ಹೇಳಿದರು.

'ತವಾಂಗ್ ಪ್ರದೇಶವು ಭಾರತದ ಜೊತೆ ಶಾಂತಿಯುತವಾಗಿ ವಿಲೀನ ಆಗುವುದಕ್ಕೆ ಮೇಜರ್ ಖಟಿಂಗ್ ಅವರು ನೇತೃತ್ವ ವಹಿಸಿದ್ದಷ್ಟೇ ಅಲ್ಲದೆ, ಅಗತ್ಯವಿರುವ ಮಿಲಿಟರಿ ಹಾಗೂ ಭದ್ರತಾ ಚೌಕಟ್ಟನ್ನು ಕೂಡ ಅವರು ರೂಪಿಸಿದರು' ಎಂದು ಸ್ಮರಿಸಿದರು.

ಸಿಂಗ್ ಅವರು ಪಟೇಲ್ ಪ್ರತಿಮೆಗೆ ಗೌರವ ಸಲ್ಲಿಸಿದರು. 'ದೇಶದ ವಲ್ಲಭ ಎಂಬ ಹೆಸರಿನ ಈ ಪ್ರತಿಮೆಯು ಒಗ್ಗಟ್ಟಿನಲ್ಲಿ ಇರುವ ಶಕ್ತಿಯ ಬಗ್ಗೆ ಜನರಿಗೆ ನೆನಪಿಸಿಕೊಡಲಿದೆ' ಎಂದರು.

ಶಿವಾಜಿ ಮೂರ್ತಿ...

ದೀಪಾವಳಿ ಪ್ರಯುಕ್ತ ಬೆಳಗಾವಿಯಲ್ಲಿ ಗುರುವಾರ ಛತ್ರಪತಿ ಶಿವಾಜಿ ಮೂರ್ತಿಗಳ ಮಾರಾಟ ನಡೆಯಿತು. ಹಬ್ಬದ ಸಂದರ್ಭದಲ್ಲಿ ಮನೆಗಳ ಎದುರು ಮಕ್ಕಳು ಚಿಕ್ಕ ಕೋಟೆಗಳನ್ನು ಕಟ್ಟಿ ಸಂಭ್ರಮಿಸುವ ವಿಶಿಷ್ಟ ಸಂಪ್ರದಾಯ ಕರ್ನಾಟಕ– ಮಹಾರಾಷ್ಟ್ರ ಗಡಿ ಭಾಗದಲ್ಲಿದೆ. ಛತ್ರಪತಿ ಶಿವಾಜಿ ಮಹಾರಾಜರು ಗೆದ್ದು ವಶಪಡಿಸಿಕೊಂಡ ಕೋಟೆ ಮಾದರಿಗಳನ್ನು ಮಾಡುವುದು ರೂಢಿ. ಬಣ್ಣದ ಗೊಂಬೆಗಳನ್ನು ಕೋಟೆಯಲ್ಲಿ ರಾಜ, ರಾಣಿ, ಸೈನಿಕರಾಗಿ ಬಳಸಿಕೊಂಡು, ಪ್ರದರ್ಶನಕ್ಕೆ ಇಡುತ್ತಾರೆ

ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಮೈಸೂರು ಹಾಗೂ ಕೊಡಗು ಜಿಲ್ಲೆಯ ಕೆಲವೆಡೆ ಮಳೆ

ಐದು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು/ಮೈಸೂರು/ಮಡಿಕೇರಿ: ರಾಜ್ಯದ ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ರಾಮನಗರ ಜಿಲ್ಲೆಯಲ್ಲಿ ಶುಕ್ರವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡದಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ. ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಕೆಲವು ಸ್ಥಳಗಳಲ್ಲಿ ಬೆಳಗಿನ ಜಾವ ಮಂಜು ಬೀಳಲಿದೆ ಎಂದು ಹೇಳಿದೆ.

ಮಡಿಕೇರಿ ತಾಲ್ಲೂಕಿನ ಬಲ್ಲಮಾವಟಿಯಲ್ಲಿ ಗುರುವಾರ ಅಂತರ ಗ್ರಾಮ ಹಾಕಿ ಟೂರ್ನಿಯ ವೀಕ್ಷಕರು ಮಳೆಯಿಂದ ರಕ್ಷಣೆ ಪಡೆಯಲು ಕುರ್ಚಿಯನ್ನು ತಲೆ ಮೇಲೆ ಹೊತ್ತು ಸುರಕ್ಷಿತ ಸ್ಥಳದತ್ತ ದೌಡಾಯಿಸಿದರು. ಪ್ರಜಾವಾಣಿ ಚಿತ್ರ/ಸಿ.ಎಸ್. ಸುರೇಶ್

ಗುರುವಾರ ಬೆಳಿಗ್ಗೆ 8.30ಕ್ಕೆ ಒಳಗೊಂಡಂತೆ ವಿಜಯನಗರದ ಹರಪನಹಳ್ಳಿಯಲ್ಲಿ 5 ಸೆಂ.ಮೀ, ಹಾವೇರಿಯಲ್ಲಿ 4 ಸೆಂ.ಮೀ ಮಳೆ ದಾಖಲಾಗಿದೆ.

ಮೈಸೂರು, ಕೊಡಗಿನಲ್ಲಿ ಮಳೆ: ಮೈಸೂರು ಹಾಗೂ ಕೊಡಗು ಜಿಲ್ಲೆಯ ಕೆಲವೆಡೆ ಗುರುವಾರ ಒಂದು ಗಂಟೆಗೂ ಹೆಚ್ಚು ಕಾಲ ಮಳೆಯಾಯಿತು.

ಮಡಿಕೇರಿ ತಾಲ್ಲೂಕಿನ ಬಲ್ಲಮಾವಟಿ ಗ್ರಾಮದಲ್ಲಿ ಗುರುವಾರ ಸುಮಾರು ಒಂದು ಗಂಟೆಗೂ ಅಧಿಕ ಕಾಲ ಮಳೆ ಸುರಿಯಿತು. ಅಲ್ಲಿನ ನೇತಾಜಿ ವಿದ್ಯಾ ಸಂಸ್ಥೆಯ ಮೈದಾನದಲ್ಲಿ ನಾಲ್ನಾಡ್ ಹಾಕಿ ಕ್ಲಬ್ ನಡೆಸುತ್ತಿರುವ ಅಂತರ ಗ್ರಾಮ ಹಾಕಿ ಟೂರ್ನಿಯ ಪಂದ್ಯಗಳು ಕೆಲ ಹೊತ್ತು ಸ್ಥಗಿತಗೊಂಡಿದ್ದವು.

ಮಡಿಕೇರಿ, ನಾಪೋಕ್ಲು ಸುತ್ತಮುತ್ತ ಗುಡುಗು, ಸಿಡಿಲಿನ ವಾತಾವರಣವಿದ್ದು, ಕೆಲವು ಕಡೆ ಮಳೆಯಾಗಿದೆ. ಸುಂಟಿಕೊಪ್ಪದಲ್ಲಿ ಗುಡುಗು ಸಹಿತ ಮಳೆ ಸುರಿದಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಹಾಗೂ ಹುಣಸೂರು ತಾಲ್ಲೂಕಿನ ಕೆಲವೆಡೆ ಮಳೆ ಸುರಿಯಿತು. ದೀಪಾವಳಿ ಸಂದರ್ಭದ ಈ ಮಳೆಯಿಂದ, ಭತ್ತ, ಮುಸುಕಿನ ಜೋಳದ ಫಸಲಿನಲ್ಲಿ ಕಾಣಿಸಿಕೊಳ್ಳುವ ಹುಳಹುಪ್ಪಟೆ ನಿಯಂತ್ರಣಕ್ಕೆ ಬರುವುದರಿಂದ ರೈತರಲ್ಲಿ ಹರ್ಷ ಮೂಡಿದೆ.

ನಿಧನ ವಾರ್ತೆ

ಕಾಷ್ಟಶಿಲ್ಪಿ ಬಸಣ್ಣ ಕಂಚಗಾರ

ಹುಣಸಗಿ (ಯಾದಗಿರಿ ಜಿಲ್ಲೆ): ಹುಣಸಗಿ ತಾಲ್ಲೂಕಿನ ಕೊಡೇಕಲ್ಲ ಗ್ರಾಮದ ಹಿರಿಯ ಕಾಷ್ಟಶಿಲ್ಪಿ ಬಸಣ್ಣ ಕಾಳಪ್ಪ ಕಂಚಗಾರ (86) ಗುರುವಾರ ನಿಧನರಾದರು.

ಅವರಿಗೆ ಪತ್ನಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಗುರುವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಸಣ್ಣ ಕಂಚಗಾರ ಅವರಿಗೆ 2014ರಲ್ಲಿ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ಹಾಗೂ 2018ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿತ್ತು.

ಕಾಷ್ಟ ಶಿಲ್ಪಿಗಳಲ್ಲಿ ಹಿರಿಯರಾಗಿದ್ದ ಬಸಣ್ಣ ಕಂಚಗಾರ ಅವರು ವಿವಿಧ ಬಗೆಯ ದೇವರ ಮೂರ್ತಿಗಳನ್ನು ತಮ್ಮ ಕಲಾ ಕೌಶಲದ ಮೂಲಕ ಚಿತ್ರಿಸುವಲ್ಲಿ ಹೆಸರುವಾಸಿಯಾಗಿದ್ದರು.

ಕಂಚುಗಾರಿಕೆ, ಕಂಬಾರಿಕೆ, ಎರಕ ಮತ್ತು ವಿವಿಧ ಶಿಲ್ಪಕಲಾ ಕೃತಿಗಳನ್ನು ಮಾಡುವುದರಲ್ಲಿ ಅವರು ಪ್ರಸಿದ್ಧರಾಗಿದ್ದರು.

ತಾಲ್ಲೂಕು ಆಡಳಿತದ ಪರವಾಗಿ ಕೊಡೇಕಲ್ಲ ಉಪ ತಹಶೀಲ್ದಾರ್ ಕಲ್ಲಪ್ಪ ಜಂಜಿನಗಡ್ಡಿ ಅಂತಿಮ ದರ್ಶನ ಪಡೆದು ಗೌರವ ಸಲ್ಲಿಸಿದರು.

ಕ್ರಿಮಿನಲ್ ಪ್ರಕರಣ ಹಿಂತೆಗೆತ ಆದೇಶ ಪ್ರಶ್ನಿಸಿದ್ದ ಅರ್ಜಿ

ಪಿಐಎಲ್ ಸಲ್ಲಿಕೆಗೆ ಹೈಕೋರ್ಟ್ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ಹುಬ್ಬಳ್ಳಿಯಲ್ಲಿ 2022ರಲ್ಲಿ ಪೊಲೀಸ್ ಠಾಣೆ ಮೇಲೆ ಕಲ್ಲೆಸೆದು, ದಾಳಿ ನಡೆಸಿ ಗಲಭೆ ಸೃಷ್ಟಿಸಿದ್ದ ಆರೋಪವೂ ಸೇರಿದಂತೆ ಹಲವರ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದ ರಾಜ್ಯ ಸರ್ಕಾರದ ಆದೇಶ ಪ್ರಶ್ನಿಸಲಾಗಿದ್ದ ರಿಟ್ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಾಗಿ ಪರಿವರ್ತಿಸಲು ಹೈಕೋರ್ಟ್ ಅರ್ಜಿದಾರರಿಗೆ ಅನುಮತಿ ನೀಡಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನ್‌ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಶ್ರೀಧರ್ ಪ್ರಭು, 'ಯುಎಪಿಎ (ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ-1967) ಅಡಿಯಲ್ಲಿ ವಿಚಾರಣೆ ಎದುರಿಸುತ್ತಿದ್ದವರ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವುದಕ್ಕಾಗಿ ರಾಜ್ಯ ಸರ್ಕಾರ ಹಾಲಿ ಮತ್ತು ಮಾಜಿ ಶಾಸಕರು, ಸಚಿವರು, ಕನ್ನಡ ಪರ ಹೋರಾಟಗಾರರು, ರೈತ ಮುಖಂಡರು ಮತ್ತು ವಿವಿಧ ಸಂಘಟನೆಗಳ ಪದಾಧಿಕಾರಿಗಳ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದಿದೆ. ಈ ಕ್ರಮ ಯುಎಪಿಎ ಅಡಿಯಲ್ಲಿನ ಆರೋಪಿಗಳನ್ನು ರಕ್ಷಿಸಲು ಕೈಗೊಂಡಿರುವ ಕ್ರಮವಾಗಿದೆ' ಎಂದು ಆಕ್ಷೇಪಿಸಿದರು.

ಇದಕ್ಕೆ ನ್ಯಾಯಪೀಠವು, 'ಈ ಪ್ರಕರಣದಲ್ಲಿ ಸರ್ಕಾರದ ಆದೇಶವನ್ನು ಪ್ರಶ್ನಿಸಲು ನಿಮಗಿರುವ ಕಾನೂನಾತ್ಮಕ ಅಧಿಕಾರ ಏನಿದೆ? ನೀವು ಈ ಪ್ರಕರಣವನ್ನು ರಿಟ್ ಅರ್ಜಿ ವ್ಯಾಪ್ತಿಯ ಬದಲಿಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಾಗಿ ಪರಿವರ್ತಿಸಿ ಪರಿಹಾರ ಪಡೆಯುವುದು ಉಚಿತ' ಎಂದು ಸೂಚಿಸಿತು. ಇದನ್ನು ಒಪ್ಪಿದ ಅರ್ಜಿದಾರರು ರಿಟ್ ಅರ್ಜಿ ಹಿಂಪಡೆದರು.

ಅರ್ಜಿಯಲ್ಲಿ ಏನಿತ್ತು?

'ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಒಟ್ಟು 43 ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದಂತೆ 2024ರ ಅಕ್ಟೋಬರ್ 15ರಂದು ಪ್ರಾಸಿಕ್ಯೂಷನ್ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ನಿರ್ದೇಶಕರು ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ನನ್ನ ತಪ್ಪೇನು: ನಿಖಿಲ್ ಕಣ್ಣೀರು

ಎರಡು ಸೋಲಿನ ನೆನಪು: 'ಮಾಜಿ ಪ್ರಧಾನಿ ಮೊಮ್ಮಗ, ಮಾಜಿ ಸಿ.ಎಂ ಮಗನಾಗಿದ್ದೇ ದುರದೃಷ್ಟವೇನೊ'

• ಓದೇಶ ಸಕಲೇಶಪುರ

ಚನ್ನಪಟ್ಟಣ (ರಾಮನಗರ): ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪ್ರಚಾರದ ಅಬ್ಬರ ಗುರುವಾರ ಜೋರಾಗಿತ್ತು. ನಿಖಿಲ್ ಪರ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಬಿ.ಸಿ.ಪಾಟೀಲ ಸೇರಿದಂತೆ ಪಕ್ಷದ ನಾಯಕರು ಪ್ರಚಾರ ನಡೆಸಿದರು.

ಯೋಗೇಶ್ವರ್ ಪರ ಸಚಿವ ಎನ್.ಚಲುವರಾಯ-ಸ್ವಾಮಿ, ಮಾಜಿ ಸಂಸದ ಡಿ.ಕೆ.ಸುರೇಶ್ ಸೇರಿದಂತೆ ಶಾಸಕರು ಮತ್ತು ಮುಖಂಡರು ಸಾಥ್ ನೀಡಿದರು. ರಾಮನಗರದಲ್ಲಿ ಬಿಜೆಪಿ-ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಕಾಂಗ್ರೆಸ್‌ಗೆ ಬರ ಮಾಡಿಕೊಂಡರು.

ಪ್ರಚಾರದ ವೇಳೆ ಎಚ್‌ಡಿಕೆ ಎತ್ತಿನ ಬಂಡಿ ಏರಿದರೆ, ನಿಖಿಲ್ ಕಾರ್ಯಕರ ಬೈಕ್‌ನಲ್ಲಿ ಸುತ್ತಾಡಿದರು. ತೆರೆದ ವಾಹನದಲ್ಲಿ ಯೋಗೇಶ್ವರ್ ಗ್ರಾಮೀಣ ಭಾಗಗಳಲ್ಲಿ ಸಂಚರಿಸಿ ಮತ ಯಾಚಿಸಿದರು. ಅಭ್ಯರ್ಥಿಗಳು ಹಾಗೂ ನಾಯಕರಿಗೆ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು. ಘೋಷಣೆ ಕೂಗಿ ಅಭಿಮಾನ ಮೆರೆದರು. ಸಂಜೆ ಶುರುವಾದ ಮಳೆ ಪ್ರಚಾರಕ್ಕೆ ಅಡ್ಡಿಯಾಯಿತು.

ನಿಖಿಲ್ ಕಣ್ಣೀರು: 'ಸತತ ಎರಡು ಚುನಾವಣೆಗಳಲ್ಲಿ ಸೋತಿರುವ ನಾನು ಏನು ತಪ್ಪು ಮಾಡಿದ್ದೇನೆಂದು ಗೊತ್ತಾಗುತ್ತಿಲ್ಲ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮೊಮ್ಮಗನಾಗಿ ಮತ್ತು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಮಗನಾಗಿ ಹುಟ್ಟಿರುವುದೇ ನನ್ನ ದುರದೃಷ್ಟನೋ ಗೊತ್ತಿಲ್ಲ' ಎಂದು ನಿಖಿಲ್ ಕುಮಾರಸ್ವಾಮಿ ಭಾವುಕರಾಗಿ ಕಣ್ಣೀರು ಹಾಕಿದರು.

ತಾಲ್ಲೂಕಿನ ಕನ್ನಮಂಗಲ ಗ್ರಾಮದ ಪ್ರಚಾರ ಸಭೆಯಲ್ಲಿ ಗುರುವಾರ ಮತದಾರರನ್ನು ಉದ್ದೇಶಿಸಿ ಮಾತನಾಡುತ್ತಾ ಭಾವುಕರಾದರು. ಆಗ ಕಾರ್ಯಕರ್ತರು, 'ಕಣ್ಣೀರು ಹಾಕಬೇಡಿ. ನಿಮ್ಮನ್ನು ಗೆಲ್ಲಿಸುತ್ತೇವೆ. ಯಾವುದೇ ಕಾರಣಕ್ಕೂ ನೀವು ಸೋಲುವುದಿಲ್ಲ. ನಿಮ್ಮ ಗೆಲುವು ಖಚಿತ' ಎಂದು ಕೂಗಿ ಭರವಸೆ ನೀಡಿದರು.

ಗುರುವಾರ ಪ್ರಚಾರ ನಡೆಸಿದ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರು ಭಾಷಣದ ವೇಳೆ ಭಾವುಕರಾಗಿ ಕಣ್ಣೀರು ಹಾಕಿದರು

ಸುಳ್ಳಿಗೆ ಮತ್ತೊಂದು ಹೆಸರೇ ಕುಮಾರಸ್ವಾಮಿ. ಎರಡೂ ಕಡೆ ಅವರು ರಾಜಕಾರಣ ಮಾಡಿದ್ದಾಯಿತು. ಅದನ್ನು ಮನಗಂಡ ಜನ ಬೇಸತ್ತಿದ್ದಾರೆ. ಎಚ್‌ಡಿಕೆಗೆ ತಮ್ಮ ಸ್ಥಾನ ಉಳಿಸಿಕೊಳ್ಳುವುದೇ ಕಷ್ಟ
ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ

'ನಿಖಿಲ್ ಅಭ್ಯರ್ಥಿಯಾಗಿದ್ದು ದೇವರ ನಿರ್ಧಾರ'

'ನಿಖಿಲ್ ಕುಮಾರಸ್ವಾಮಿ ಎನ್‌ಡಿಎ ಅಭ್ಯರ್ಥಿಯಾಗಿದ್ದು ದೇವರ ನಿರ್ಧಾರ. ಈಗಿನ ಕಾಂಗ್ರೆಸ್ ಅಭ್ಯರ್ಥಿ (ಸಿ.ಪಿ.ಯೋಗೇಶ್ವರ್) ಎನ್‌ಡಿಎ ಅಭ್ಯರ್ಥಿಯಾಗಬೇಕಿತ್ತು. ಯಾವ ಚಿಹ್ನೆಯಿಂದಾದರೂ ಟಿಕೆಟ್ ಕೊಡಿ ಎಂದು ಕೇಳಿದರು. ಅವರ ಮಾತುಗಳಿಗೆ ನಾವೂ ಮರುಳಾದೆವು. ಜೆಡಿಎಸ್ ಚಿಹ್ನೆ ನಿರಾಕರಿಸಿ ಕಮಲ ಚಿಹ್ನೆಯೇ ಬೇಕೆಂದು ವರಸೆ ತೆಗೆದರು. ಬಿಜೆಪಿ ನಾಯಕರಾದ ಜೆ.ಪಿ. ನಡ್ಡಾ, ಪ್ರಲ್ಹಾದ ಜೋಶಿ ಸಹ ಅದೇ ವ್ಯಕ್ತಿಗೆ ಟಿಕೆಟ್ ಕೊಡಿ ಎಂದರು. ಅವರ ಮಾತಿಗೆ ನಾವೂ ಒಪ್ಪಿ ಟಿಕೆಟ್ ಕೊಡಲು ತೀರ್ಮಾನಿಸಿದೆವು. ಆದರೆ, ಆ ವ್ಯಕ್ತಿ ಎಲ್ಲರಿಗೂ ಟೋಪಿ ಹಾಕಿ ಹೋದರು' ಎಂದು ಕುಮಾರಸ್ವಾಮಿ ಕಿಡಿಕಾರಿದರು.

'ವಯಸ್ಸಾದ ರಾಜನ ಮಗನಿಗೆ ಪಟ್ಟಾಭಿಷೇಕ'

'ರಾಜನಿಗೆ ವಯಸ್ಸಾದ ಮೇಲೆ ಮಗನಿಗೆ ಪಟ್ಟಾಭಿಷೇಕ ಮಾಡುತ್ತಾರೆ. ಅದೇ ರೀತಿ ಮಗನನ್ನು ಚುನಾವಣೆಗೆ ನಿಲ್ಲಿಸಿದ್ದಾರೆ. ಕುಮಾರಸ್ವಾಮಿ ಅವರ ಕುಟುಂಬ ಯಾಕೆ ಚನ್ನಪಟ್ಟಣದ ಮೇಲೆ ಮುಗಿಬಿದ್ದಿದೆಯೊ ಗೊತ್ತಿಲ್ಲ. ಏನೂ ಸಂಬಂಧವೇ ಇಲ್ಲದೆ ಎಚ್‌ಡಿಕೆ ಪತ್ನಿ ಅನಿತಾ ಅವರು ಸ್ಪರ್ಧಿಸಿದ್ದರು. ನಂತರ, ಸ್ವತಃ ಎಚ್‌ಡಿಕೆ ನನ್ನ ವಿರುದ್ಧ ಎರಡು ಸಲ ನಿಂತು ಗೆದ್ದರು. ಅವರು ತಾಲ್ಲೂಕಿನಲ್ಲಿ ಏನು ಅಭಿವೃದ್ಧಿ ಮಾಡಿದ್ದಾರೆ? ನಾನು ತಂದಿದ್ದ ನೀರಾವರಿ ಯೋಜನೆಗಳನ್ನು ಸಹ ಮುಂದುವರಿಸಲಿಲ್ಲ. ಹೀಗಿರುವಾಗ, ಯಾವ ನೈತಿಕತೆ ಮೇಲೆ ಪುತ್ರನಿಗೆ ಮತ ಕೇಳುತ್ತಿದ್ದಾರೆ?. ಅಭಿವೃದ್ಧಿಯಲ್ಲಿ ಪಾಲುದಾರನಾಗ-ಬೇಕೆಂದು ನಾನು ಕಾಂಗ್ರೆಸ್ ಸೇರಿದ್ದೇನೆ. ಲೋಕಸಭಾ ಚುನಾವಣೆಯಲ್ಲಿ ಒಬ್ಬ ದೈತ್ಯ ಹಾಗೂ ಪ್ರಾಮಾಣಿಕ ರಾಜಕಾರಣಿ ಸುರೇಶ್ ಅವರನ್ನು ಸೋಲಿಸಿರುವ ನೋವಿದೆ' ಎಂದು ಕಾಂಗ್ರೆಸ್ ಸಿ.ಪಿ.ಯೋಗೇಶ್ವರ್ ತಮ್ಮ ಪ್ರಚಾರ ಭಾಷಣದಲ್ಲಿ ತಿಳಿಸಿದರು.

ಕುಮಾರಸ್ವಾಮಿ ಅವರಿಗೆ ಪಕ್ಷವೆಂದರೆ ಅವರ ಕುಟುಂಬದವರು ಮಾತ್ರ. ಅವರ ಮನೆಯವರು ಮಾತ್ರ ಅಭಿವೃದ್ಧಿ ಆಗಬೇಕು. ಬೇರಾರು ಬೆಳೆಯಬಾರದು. ಅದಕ್ಕೆ ಚನ್ನಪಟ್ಟಣದಲ್ಲೂ ತಮ್ಮ ಪುತ್ರನನ್ನೇ ನಿಲ್ಲಿಸಿದ್ದಾರೆ
ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಆಧುನಿಕ ಅಭಿಮನ್ಯು ನಿಖಿಲ್ ಒಂಟಿಯಲ್ಲ. ಅವರ ಜತೆ ಎಲ್ಲರೂ ಇದ್ದಾರೆ. ಭೀಷ್ಮನಾಗಿ ಎಚ್.ಡಿ. ದೇವೇಗೌಡರು, ದ್ರೋಣರಾಗಿ ಬಿ.ಎಸ್.ಯಡಿಯೂರಪ್ಪ, ಅರ್ಜುನನಾಗಿ ಎಚ್.ಡಿ.ಕುಮಾರಸ್ವಾಮಿ ಇದ್ದಾರೆ
ಬಿ.ಸಿ.ಪಾಟೀಲ, ಮಾಜಿ ಸಚಿವ

ಸಂಡೂರು: ಲೆಕ್ಕಕಷ್ಟೇ ಮೈತ್ರಿ!

• ಹರಿಶಂಕರ್ ಆರ್.

ಬಳ್ಳಾರಿ: ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಮೈತ್ರಿ ಮಾಡಿಕೊಂಡು ರಾಜ್ಯದ ಮೂರು ಉಪಚುನಾವಣೆಗಳನ್ನು ಎದುರಿಸುತ್ತಿವೆ. ಆದರೆ, ಸಂಡೂರಿನಲ್ಲಿ ಅದರ ಲಕ್ಷಣಗಳು ಕಾಣುತ್ತಿಲ್ಲ. ಕ್ಷೇತ್ರದಲ್ಲಿ ಈಗಾಗಲ ಒಂದು ಹಂತದ ಪ್ರಚಾರ ಮುಗಿಸಿರುವ ಬಿಜೆಪಿಯ ಜೊತೆಗೆ ಮೂಲ ಜೆಡಿಎಸ್ ನಾಯಕರು, ಕಾರ್ಯಕರ್ತರು ಎಲ್ಲಿಯೂ ಕಾಣಿಸುತ್ತಿಲ್ಲ.

ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಅವರು ನಾಮಪತ್ರ ಸಲ್ಲಿಸುವ ದಿನ ಜೆಡಿಎಸ್ ನಾಯಕ ಅನಿಲ್ ಲಾಡ್ ಮಾತ್ರ ಕಾಣಿಸಿಕೊಂಡಿದ್ದರು. ನಂತರ ಲಾಡ್ ಕೂಡ ಸಕ್ರಿಯವಾಗಿ ಎಲ್ಲಿಯೂ ಕಾಣಿಸಿಕೊಳ್ಳುತ್ತಿಲ್ಲ.

'ಬಿಜೆಪಿ ನಿತ್ಯ ನಡೆಸುವ ಪ್ರಚಾರ, ಸಭೆ ಮತ್ತು ಸಮಾರಂಭಗಳಿಗೆ ಜೆಡಿಎಸ್‌ನ ಯಾವ ನಾಯಕರನ್ನೂ ಆಹ್ವಾನಿಸುತ್ತಿಲ್ಲ. ಹೀಗಾಗಿ ಸಹಜವಾಗಿಯೇ ಬೇಸರವಿದೆ. ಕ್ಷೇತ್ರದಲ್ಲಿ ಜೆಡಿಎಸ್ ಪ್ರಬಲ ಆಗಿಲ್ಲದಿರ ಬಹುದು. ಆದರೆ, ನಿರ್ಣಾಯಕ-ವಾಗಲಿದೆ' ಎಂದು ಜೆಡಿಎಸ್‌ನ ಕೆಲ ಮುಖಂಡರು ಹೇಳಿದರು.

ಜಿಲ್ಲೆಯಲ್ಲಿ ಜೆಡಿಎಸ್ 2013ರವರೆಗೆ ಮೇಲುಗೈ ಸಾಧಿಸಿತ್ತು. ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಪ್ರಾಬಲ್ಯವನ್ನು 1985ರಲ್ಲಿ ಮೊದಲ ಬಾರಿಗೆ ಮುರಿದಿದ್ದೇ ಜನತಾಪಕ್ಷ. ಅದರ ಬಳಿಕ ಮತ್ತೆ ಪ್ರಬಲ ಗೊಂಡಿದ್ದ ಕಾಂಗ್ರೆಸ್‌ನ್ನು 2004ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಸಂತೋಷ್ ಲಾಡ್ ಮತ್ತೆ ಸೋಲಿಸಿದ್ದರು. ಸಂತೋಷ್ ಲಾಡ್ ಪಕ್ಷ ತೊರೆದ ನಂತರವೂ ಜೆಡಿಎಸ್ ತನ್ನ ಸಾಮರ್ಥ್ಯ ಉಳಿಸಿಕೊಂಡಿತ್ತಾದರೂ, ನಂತರದ ಚುನಾವಣೆಗಳಲ್ಲಿ ಸೊರಗಿದೆ. ಆದರೂ, ಜೆಡಿಎಸ್‌ನ ಹಳೆ ಬೇರುಗಳು ಸಂಡೂರಿನಲ್ಲಿ ಜೀವಂತ ಇರುವುದು ಸುಳ್ಳಲ್ಲ.

ಪರಿಸ್ಥಿತಿ ಹೀಗಿದ್ದರೂ, ಬಿಜೆಪಿ ನಾಯಕರು ಜೆಡಿಎಸ್‌ನ ಮೂಲ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂಬ ಮಾತು ಕೇಳಿ ಬಂದಿವೆ. ಚುನಾವಣಾ ಜವಾಬ್ದಾರಿ ವಹಿಸಿಕೊಂಡಿರುವ ಜನಾರ್ದನ ರೆಡ್ಡಿ, ಅಭ್ಯರ್ಥಿಯಾಗಲೀ, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರಾಗಲೀ ಒಂದು ಬಾರಿಯಾದರೂ ಜಿಲ್ಲಾ ಜೆಡಿಎಸ್‌ನ ಮುಖಂಡರನ್ನು ಕರೆದು ನೆರವು ಕೇಳಿಲ್ಲ ಎನ್ನಲಾಗಿದೆ.

ಬಿಜೆಪಿ ನಡೆಸುತ್ತಿರುವ ಪ್ರಚಾರದಲ್ಲಿ ಜೆಡಿಎಸ್‌ನ ಸ್ಥಳೀಯ ನಾಯಕರ ಉಪಸ್ಥಿತಿ ಒಂದು ಕಡೆ ಇರಲಿ, ಜೆಡಿಎಸ್‌ನ ಬಾವುಟಗಳೂ ಕಾಣುತ್ತಿಲ್ಲ. ಹೀಗಾಗಿ ಕ್ಷೇತ್ರದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಮಾತಿಗಷ್ಟೇ ಎಂಬಂತೆ ಕಾಣುತ್ತಿದೆ.

ತಲೆ ಹಾಕದ ಜೆಡಿಎಸ್ ಪ್ರಮುಖರು: ಜೆಡಿಎಸ್ ರಾಜ್ಯ ನಾಯಕರು ಸಂಡೂರು ಮರೆತಿದ್ದಾರೆ. ಎಲ್ಲರೂ ಚನ್ನಪಟ್ಟಣಕ್ಕೆ ಸೀಮಿತವಾಗಿದ್ದಾರೆ ಎಂಬ ಮಾತು ಬಿಜೆಪಿಯ ಕೆಲ ನಾಯಕರಿಂದ ವ್ಯಕ್ತವಾಗಿದೆ.

ಮತ್ತೊಂದು ಕಡೆ ಕ್ಷೇತ್ರವನ್ನು 9 ಮಹಾಶಕ್ತಿ ಕೇಂದ್ರಗಳಾಗಿ ವಿಂಗಡಿಸಿ ಪ್ರಚಾರ ನಡೆಸುತ್ತಿರುವ ಬಿಜೆಪಿ ಒಂದೊಂದು ಕೇಂದ್ರಕ್ಕೂ ಉಸ್ತುವಾರಿಗಳನ್ನು ನೇಮಿಸಿದೆ. ಈ ಉಸ್ತುವಾರಿ ಪಟ್ಟಿಯಲ್ಲಿ ಜೆಡಿಎಸ್‌ನ ಕರೆಮ್ಮ ನಾಯ್ಕ ಹೆಸರು ಇದೆ.

ಕುಡತಿನಿಯಲ್ಲಿ ಬಿಜೆಪಿ ಕೈಗೊಂಡಿದ್ದ ಪ್ರಚಾರ ಸಭೆಯಲ್ಲಿ ಶ್ರೀರಾಮುಲು, ಅಭ್ಯರ್ಥಿ ಬಂಗಾರು ಹನುಮಂತ, ಜನಾರ್ದನ ರೆಡ್ಡಿ, ದಿವಾಕರ್ ಇದ್ದರು

ಜನಾರ್ದನ ರೆಡ್ಡಿ, ಅಭ್ಯರ್ಥಿ ಅಥವಾ ಬಿಜೆಪಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಆದರೂ ಮಿತ್ರ ಪಕ್ಷವಾಗಿ ಕೆಲಸ ಮಾಡಲು ರಾಜ್ಯ ನಾಯಕರು ಸೂಚಿಸಿದ್ದಾರೆ
ಮೀನಹಳ್ಳಿ ತಾಯಣ್ಣ
ಅಧ್ಯಕ್ಷ, ಜೆಡಿಎಸ್ ಜಿಲ್ಲಾ ಘಟಕ

ಜೆಡಿಎಸ್ ನಾಯಕರನ್ನು ಪ್ರಚಾರಕ್ಕೆ ಕರೆಯುತ್ತಿದ್ದೇವೆ. ಮೈತ್ರಿಯಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಎಚ್.ಡಿ ಕೆ ಅವರು ಒಂದಿಡೀ ದಿನ ಪ್ರಚಾರ ಮಾಡುವುದಾಗಿ ತಿಳಿಸಿದ್ದಾರೆ
ಉಡೇದ್ ಸುರೇಶ್
ಕಾರ್ಯದರ್ಶಿ, ಬಿಜೆಪಿ ಜಿಲ್ಲಾ ಘಟಕ

ಅಟ್ಟಕ್ಕೇರಿಸಿ ಪಕ್ಷ ಹಾಳು ಮಾಡುವವರಿದ್ದಾರೆ, ಎಚ್ಚೆತ್ತುಕೊಳ್ಳಿ– ಖರ್ಗೆ ಸಲಹೆ

ಸಿ.ಎಂ, ಡಿಸಿಎಂಗೆ ಒಗ್ಗಟ್ಟಿನ ಪಾಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾರಿಗಾದರೂ ನೋವಾದರೆ ಎಲ್ಲರೂ ಒಗ್ಗಟ್ಟಾಗಿರಬೇಕು. ಎಲ್ಲರೂ ಒಂದಾಗಿದ್ದರೆ ಯಾರೂ ನಿಮ್ಮ ಮೇಲೆ ಕೈ ಎತ್ತುವುದಿಲ್ಲ' ಎಂದು ರಾಜ್ಯ 'ಕೈ' ನಾಯಕರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ಕಿವಿಮಾತು ಹೇಳಿದರು.

ಇಂದಿರಾಗಾಂಧಿ ಅವರ ಪುಣ್ಯಸ್ಮರಣೆ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನ ನಿಮಿತ್ತ ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರಿಗೆ ಏನಾದರೂ ಆದರೆ ಇನ್ನೊಬ್ಬರು ಖುಷಿ ಪಡುವುದು, ಶಿವಕುಮಾರ್ ಅವರಿಗೆ ಏನಾದರೂ ಆದರೆ ಮತ್ತೊಬ್ಬರು ಖುಷಿ ಪಡುವುದನ್ನು ಬಿಡಬೇಕು' ಎಂದರು.

ಅವರು ಮಾತನಾಡುವಾಗ ವೇದಿಕೆಯಲ್ಲಿ ಅಕ್ಕಪಕ್ಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಕುಳಿತಿದ್ದರು.

'ಒಬ್ಬರನ್ನು ಕಂಡು ಮತ್ತೊಬ್ಬರು ಉರಿದುಕೊಳ್ಳಬೇಡಿ. ನಿಮ್ಮನ್ನು ಅಟ್ಟಕ್ಕೇರಿಸಿ ಪಕ್ಷ ಹಾಳು ಮಾಡುವವರಿದ್ದಾರೆ. ಮೊದಲು ನೀವು ಎಚ್ಚೆತ್ತುಕೊಳ್ಳಿ. ನಮ್ಮ ಒಡಕು ಹೊರಗಡೆ ತೋರಿಸಬಾರದು. ಒಗ್ಗಟ್ಟಿನಿಂದ ಹೋರಾಟ ಮಾಡಿದರೆ ಪಕ್ಷ ಬಲಗೊಳ್ಳುತ್ತದೆ' ಎಂದರು.

'ರಾಜ್ಯ ರಾಜಕಾರಣದಲ್ಲಿ ನಾನು ಕೈ ಹಾಕುವುದಿಲ್ಲ. ಏನೇ ಇದ್ದರೂ ರಾಜ್ಯದ ನಾಯಕರನ್ನು ಕೇಳಿ ಎನ್ನುತ್ತೇನೆ. ನಾನೇನಾದರೂ ಮಾತನಾಡಿದರೆ ರಾಷ್ಟ್ರ ಮಟ್ಟದಲ್ಲಿ ದೊಡ್ಡ ಸುದ್ದಿ ಆಗುತ್ತದೆ. ನೀವೇ ಬಗೆಹರಿಸಿಕೊಳ್ಳಬೇಕು' ಎಂದೂ ರಾಜ್ಯ ನಾಯಕರಿಗೆ ಸೂಚಿಸಿದರು.

ಖರ್ಗೆ ಅನುಮಾನ: ವಿದ್ಯುನ್ಮಾನ ಮತಯಂತ್ರದ (ಇವಿಎಂ) ಬಗ್ಗೆ ಅನುಮಾನ ವ್ಯಕ್ತಪಡಿಸಿದ ಖರ್ಗೆ, 'ನಾವು ಹರಿಯಾಣ ಸೋತಿದ್ದು ಹೇಗೆ? ರಾತ್ರೋರಾತ್ರಿ ಅವರು (ಬಿಜೆಪಿಯವರು) ಬದಲಾವಣೆ ಮಾಡಿಕೊಂಡರು. ಮುನ್ನಡೆಯಲ್ಲಿದ್ದ ಕ್ಷೇತ್ರಗಳು 66ರಿಂದ ದಿಢೀರ್ 33ಕ್ಕೆ ಬರುತ್ತದೆ ಅಂದರೆ ಹೇಗೆ? ಅವರು (ಬಿಜೆಪಿ) ನಿಜವಾಗಿ ಯಾವ ಚುನಾವಣೆಯನ್ನೂ ಗೆದ್ದಿಲ್ಲ. ಮೋಸದಿಂದ ಗೆದ್ದಿದ್ದು. ಇವಿಎಂಗಳು ಹಲವು ದೇಶಗಳಲ್ಲಿ ಇಲ್ಲ. ಅಮೆರಿಕ, ಕೆನಡಾ, ಆಸ್ಟ್ರೇಲಿಯಾ ಎಲ್ಲಿಯೂ ಇಲ್ಲ. ಹಲವು ಕಡೆ ಮತಪತ್ರ ಇದೆ' ಎಂದರು.

'ನಮ್ಮ ದುರ್ದೈವ, ಲೋಕಸಭೆ ಚುನಾವಣೆಯಲ್ಲಿ ಇನ್ನೊಂದು 25-30 ಸೀಟು ಬರಲಿಲ್ಲ. ಒಂದು ಪಕ್ಷಕ್ಕೆ ಬಹುಮತ ಸಿಕ್ಕಿಲ್ಲ. ಹೀಗಾಗಿ, ಅವರಿಗೆ (ಎನ್‌ಡಿಎ) ಸಂವಿಧಾನ ಬದಲಾವಣೆ ಮಾಡಲು ಆಗಲ್ಲ. ಆರೆಸ್ಸೆಸ್, ಬಿಜೆಪಿ ಒಡೆದು ಆಳಲು ಪ್ರಯತ್ನಿಸುತ್ತಿವೆ. ಇದರ ಬಗ್ಗೆ ಹುಷಾರಾಗಿರಬೇಕು' ಎಂದು ಪಕ್ಷದ ಕಾರ್ಯಕರ್ತರಿಗೆ ಖರ್ಗೆ ಎಚ್ಚರಿಕೆ ನೀಡಿದರು.

ಇಂದಿರಾಗಾಂಧಿ ಅವರ ಪುಣ್ಯ ಸ್ಮರಣೆ ಮತ್ತು ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಭಾವಚಿತ್ರಕ್ಕೆ ಮಲ್ಲಿಕಾರ್ಜುನ ಖರ್ಗೆ ಪುಷ್ಪನಮನ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದರು

'ಮೋದಿ ಮನಸ್ಸಿನಲ್ಲಿ ವಿಷ ತುಂಬಿದೆ'

'ನೆಹರೂ ಹಾಗೂ ಸರ್ದಾರ್ ಪಟೇಲ್ ಅವರಷ್ಟೇ ತೀವ್ರವಾಗಿ ಈ ದೇಶ ಕಟ್ಟಿದವರು ಇಂದಿರಾಗಾಂಧಿ. ಆದರೆ, ಪಟೇಲ್ ಅವರ ಹುಟ್ಟುಹಬ್ಬದ ಕಾರ್ಯ-ಕ್ರಮದಲ್ಲಿ ಗುರುವಾರ ಭಾಗವಹಿಸಿದ ಪ್ರಧಾನಿ ನರೇಂದ್ರ ಮೋದಿ, ಈ ದೇಶಕ್ಕಾಗಿ ಪ್ರಾಣ ಕೊಟ್ಟ ನಾಯಕಿಯನ್ನು ನೆನಪಿಸಿಕೊಳ್ಳಲಿಲ್ಲ. ಪರೋಕ್ಷವಾಗಿ ಕಾಂಗ್ರೆಸ್ ಪಕ್ಷಕ್ಕೆ ಬೈಯುವ ಕೆಲಸ ಮಾಡಿದರು. ಅಂದರೆ, ಇನ್ನೂ ಅವರ ಮನಸ್ಸಿನಲ್ಲಿ ಮತ್ತು ಅವರ ಪಕ್ಷದ ಜನರಲ್ಲಿ ವಿಷ ತುಂಬಿದೆ. ಬಿಜೆಪಿಯ ಅಗ್ರಗಣ್ಯ ನಾಯಕರಾಗಿದ್ದ ವಾಜಪೇಯಿ ಅವರು ಇಂದಿರಾ ಗಾಂಧಿ ಅವರನ್ನು 'ದುರ್ಗೆ' ಎಂದು ಕರೆದಿದ್ದರು. ಇಂತಹ ಪಕ್ಷದ ನಾಯಕರಾದ ಮೋದಿ ಬಾಯಲ್ಲಿ ಇಂದಿರಾ ಗಾಂಧಿ ಅವರ ಹೆಸರೇ ಬರಲಿಲ್ಲ' ಎಂದು ಖರ್ಗೆ ಅಸಮಾಧಾನ ವ್ಯಕ್ತಪಡಿಸಿದರು.

'ಸಿದ್ದರಾಮಯ್ಯ ಅಭ್ಯರ್ಥಿಯೆಂದು ಮತ ನೀಡಿ'

ಶಿಗ್ಗಾವಿ ಕ್ಷೇತ್ರದ ಉಪಚುನಾವಣೆ • ಸಚಿವ ಜಮೀರ್ ಅಹ್ಮದ್ ಖಾನ್ ಪ್ರಚಾರ

ಪ್ರಜಾವಾಣಿ ವಾರ್ತೆ

ತಡಸ (ಹಾವೇರಿ ಜಿಲ್ಲೆ): 'ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಯಾಸೀರ ಅಹ್ಮದ್ ಖಾನ್ ಪಠಾಣ ಅವರು ಕಾಂಗ್ರೆಸ್ ಅಭ್ಯರ್ಥಿ. ಆದರೆ, ಇಲ್ಲಿಯ ನೈಜ ಅಭ್ಯರ್ಥಿ ಸಿದ್ದರಾಮಯ್ಯ. ಅವರು ಮಾಡಿದ ಜನಪರ ಕೆಲಸ ಮತ್ತು ಗ್ಯಾರಂಟಿ ಯೋಜನೆಗಳನ್ನು ನೆನೆದು ಕಾಂಗ್ರೆಸ್‌ಗೆ ಮತ ನೀಡಿ' ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಮನವಿ ಮಾಡಿದರು.

ಶಿಗ್ಗಾವಿ ತಾಲ್ಲೂಕಿನ ತಡಸ ಗ್ರಾಮದಲ್ಲಿ ಗುರುವಾರ ನಡೆದ ಕಾಂಗ್ರೆಸ್ 'ರೋಡ್ ಶೋ'ನಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ ಬಾರಿ 30 ಸಾವಿರದಿಂದ 40 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸುವರು' ಎಂದರು.

'ಬಸವರಾಜ ಬೊಮ್ಮಾಯಿ ಅವರು ಇಲ್ಲಿ ನಾಲ್ಕು ಬಾರಿ ಗೆದ್ದಿದ್ದಾರೆ. ಒಮ್ಮೆ ಮುಖ್ಯಮಂತ್ರಿಯೂ ಆಗಿದ್ದಾರೆ. ಈಗ ಅವರ ಮಗನನ್ನು ನಿಲ್ಲಿಸಿದ್ದಾರೆ. ಆದರೆ, ಕ್ಷೇತ್ರವನ್ನು ಅಭಿವೃದ್ಧಿ ಮಾಡಿಲ್ಲ ಎಂಬ ಸಿಟ್ಟು ಜನರಲ್ಲಿದೆ. ಅವರಿಗೆ ಯಾವ ರೀತಿ ಪಾಠ ಕಲಿಸಬೇಕು ಎಂಬುದನ್ನು ಜನರೇ ತೀರ್ಮಾನಿಸುವರು' ಎಂದರು.

ಶಿಗ್ಗಾವಿ ತಾಲ್ಲೂಕಿನ ತಡಸ ಗ್ರಾಮದಲ್ಲಿ ಗುರುವಾರ ಪ್ರಚಾರ ನಡೆಸಿದ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಹೈಮದ್ ಷಾ ಖಾದ್ರಿ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹ್ಮದ್ ಖಾನ್ ಪಠಾಣ, ಮುಖಂಡ ಸೈಯದ್ ಅಜ್ಜಂಪೀರ ಖಾದ್ರಿ ಇದ್ದರು

'ಕೈ'ಗೆ ಪಾಠ ಕಲಿಸಿ

ಶಿಗ್ಗಾವಿ: 'ಬಸವರಾಜ ಬೊಮ್ಮಾಯಿ ಅವರು ಮುಖ್ಯ-ಮಂತ್ರಿಯಾಗಿದ್ದ ಸಂದರ್ಭದಲ್ಲಿ ರೈತರು ಹಾಗೂ ಅವರ ಮಕ್ಕಳ ಶಿಕ್ಷಣಕ್ಕೆಂದು ಯೋಜನೆಗಳನ್ನು ಜಾರಿಗೆ ತಂದರು. ಆದರೆ, ಅಧಿಕಾರ ಬರುತ್ತಿದ್ದಂತೆ ಕಾಂಗ್ರೆಸ್ ಸರ್ಕಾರ ಎಲ್ಲ ಯೋಜನೆಗಳನ್ನು ಹಿಂಪಡೆದಿದೆ. ರೈತ ವಿರೋಧಿಯಾದ ಸರ್ಕಾರಕ್ಕೆ ಜನ ಪಾಠ ಕಲಿಸಬೇಕು' ಎಂದು ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಹೇಳಿದರು.

'ಕ್ಷೇತ್ರದಲ್ಲಿ ತಂದೆ ಬಸವರಾಜ ಬೊಮ್ಮಾಯಿ ಅವರು ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಹೇಳಲು ಒಂದು ದಿನ ಸಾಲದು' ಎಂದು ಹೇಳಿದರು.

'ಶಕ್ತಿ' ಪರಿಷ್ಕರಣೆ: ಖರ್ಗೆ ಅಸಹನೆ

ಒಂದನೇ ಪುಟದಿಂದ...

ಆಗ, ಶಿವಕುಮಾರ್, 'ನಾನು ಆ ರೀತಿ ಹೇಳಿಲ್ಲ' ಎಂದು ಸಮಜಾಯಿಷಿ ನೀಡಿದರು. ಅದಕ್ಕೆ ಖರ್ಗೆ, 'ನೀನು ಪತ್ರಿಕೆ ನೋಡಿಲ್ಲ. ನಾನು ನೋಡುತ್ತೇನೆ. ಪತ್ರಿಕೆಯಲ್ಲಿ ನೀನು ಹೇಳಿದೆ ಎಂದು ಬಂದಿದೆ' ಎಂದರು.

ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ, 'ಇಲ್ಲ... ಪರಿಷ್ಕರಣೆ ಎಂದು ಹೇಳಿದ್ದಾರೆ' ಎಂದರು. 'ಪರಿಷ್ಕರಣೆ ಮಾಡುತ್ತೇವೆ ಅಂದಿದ್ದಕ್ಕೆ ಈಗ ಎಲ್ಲರೂ ಅನುಮಾನ ಪಡುತ್ತಾರಲ್ಲ. ಬೇರೆಯವರಿಗೆ, ಹೇಳುವವರಿಗೆ ಒಳ್ಳೆಯದಾಯಿತಲ್ಲ' ಎಂದು ಖರ್ಗೆ ಪ್ರತಿಕ್ರಿಯಿಸಿದರು.

'ನಿಮ್ಮ (ರಾಜ್ಯ ಸರ್ಕಾರ) ಗ್ಯಾರಂಟಿಯನ್ನು ನಾವು ಮಹಾರಾಷ್ಟ್ರದಲ್ಲಿ ಅನುಕರಿಸುತ್ತಿದ್ದೇವೆ. ಆದರೆ, ಐದು, ಆರು, 10, 20 ಗ್ಯಾರಂಟಿ ಎಂದು ಘೋಷಿಸದಂತೆ ಅಲ್ಲಿನ ನಾಯಕರಿಗೆ ಹೇಳಿದ್ದೇವೆ. ನಿಮ್ಮಲ್ಲಿ ಏನು ಬಜೆಟ್ ಇದೆ. ಅದಕ್ಕೆ ತಕ್ಕಂತೆ ಗ್ಯಾರಂಟಿ ಕೊಡಿ ಎಂದು ಹೇಳಿದ್ದೇವೆ' ಎಂದೂ ಖರ್ಗೆ ಹೇಳಿದರು.

'ಐದು ಗ್ಯಾರಂಟಿಗಳಲ್ಲಿ ಒಂದು ಗ್ಯಾರಂಟಿ ಪರಿಷ್ಕರಣೆ ಮಾಡುತ್ತೇವೆ ಅಂದಿದ್ದಕ್ಕೆ ಈಗ ಎಲ್ಲರೂ ಅನುಮಾನ ಪಡುತ್ತಾರಲ್ಲವೇ. ಬೇರೆಯವರಿಗೆ ಮಾತನಾಡಲು, ಗೊಂದಲ ಸೃಷ್ಟಿಯಾಗಲು ನೀವೇ ಅವಕಾಶ ಮಾಡಿಕೊಟ್ಟಿದ್ದೀರಲ್ಲವೇ' ಎಂದು ತುಸು ಏರಿದ ಧ್ವನಿಯಲ್ಲಿಯೇ ಪ್ರಶ್ನಿಸಿದರು.

'ಬಜೆಟ್ ಬಿಟ್ಟು ಗ್ಯಾರಂಟಿ ಕೊಟ್ಟರೆ ಇಲ್ಲಿ (ರಾಜ್ಯ) ದಿವಾಳಿ ಆಗಿ ಹೋಗುತ್ತದೆ. ರಸ್ತೆ ಗುಂಡಿಗೆ ಒಂದು ಬುಟ್ಟಿ ಮಣ್ಣು ಹಾಕಲು ಕೂಡಾ ಹಣ ಇರುವುದಿಲ್ಲ. ಆಗ ಎಲ್ಲರೂ ನಿಮ್ಮ ಮೇಲೆ ಮುಗಿಬೀಳುತ್ತಾರೆ' ಎಂದು ಖರ್ಗೆ ಹೇಳಿದರು.

'ಗ್ಯಾರಂಟಿ ನೀಡಲು ಸರ್ಕಾರ ವಿಫಲವಾದರೆ, ಕೆಟ್ಟ ಹೆಸರು ಇಟ್ಟು ಹೋಗ್ತೀರಾ, ಹೊರತು ಒಳ್ಳೆಯ ಹೆಸರು ಇಟ್ಟು ಹೋಗಲ್ಲ. ಮತ್ತೆ 10 ವರ್ಷ ವನವಾಸದಲ್ಲಿ ಇರಬೇಕಾಗುತ್ತದೆ' ಎಂದೂ ಎಚ್ಚರಿಕೆ ನೀಡಿದರು.

'ಗ್ಯಾರಂಟಿ' ನಿಲ್ಲಿಸುವ ಪ್ರಶ್ನೆಯೇ ಇಲ್ಲ'

ಒಂದನೇ ಪುಟದಿಂದ...

'ಕೆಲವು ಮಹಿಳಾ ಪ್ರಯಾಣಿಕರು ನೀಡಿರುವ ಸಲಹೆ ಬಗ್ಗೆ ನಾವು ಚರ್ಚೆ ಮಾಡಬೇಕಿದೆ. ಈ ವಿಚಾರದಲ್ಲಿ ಯಾವುದೇ ಆತುರವಿಲ್ಲ' ಎಂದು ಸ್ಪಷ್ಟಪಡಿಸಿದರು.

ಅಸೂಯೆಯಿಂದ ಟೀಕೆ: 'ರಾಜ್ಯ ಸರ್ಕಾರ ದಿವಾಳಿಯಾಗುತ್ತಿದ್ದು, ಗ್ಯಾರಂಟಿ ಯೋಜನೆಗಳಿಂದಲೇ ಸರ್ಕಾರ ಪತನವಾಗಲಿದೆ' ಎಂಬ ಎಚ್.ಡಿ. ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಈ ಗ್ಯಾರಂಟಿ ಯೋಜನೆಗಳನ್ನು ಕಂಡು ಕುಮಾರಸ್ವಾಮಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಅವರ ಅಧಿಕಾರ ಅವಧಿಯಲ್ಲಿ ಇಂತಹ ಒಂದು ಯೋಜನೆ ಕೊಟ್ಟಿಲ್ಲ. ಹೀಗಾಗಿ ಯಾಕೆ ಮತ ಕೇಳುತ್ತೀರಿ ಎಂದು ಜನ ಅವರನ್ನು ಧಿಕ್ಕರಿಸುತ್ತಿದ್ದಾರೆ. ಅದನ್ನು ಸಹಿಸಲಾಗದೆ ನನಗೆ ಈ ಅವಕಾಶ ಸಿಗಲಿಲ್ಲವಲ್ಲ ಎಂದು ಅಸೂಯೆಯಿಂದ ಅವರು ತಮ್ಮ ಕೈ ಹಿಸುಕಿಕೊಳ್ಳುತ್ತಿದ್ದಾರೆ' ಎಂದರು.

'ಗ್ಯಾರಂಟಿ ಸ್ಥಗಿತಕ್ಕೆ ಕಳ್ಳನಿಗೆ ಪಿಳ್ಳೆನೆವ'

ಒಂದನೇ ಪುಟದಿಂದ...

'ಸಾರಿಗೆ ಇಲಾಖೆ ನಷ್ಟದಲ್ಲಿದೆ. ಸರ್ಕಾರವೇ ಸಾರಿಗೆ ಇಲಾಖೆಗೆ ಕೋಟ್ಯಂತರ ರೂಪಾಯಿ ಹಣ ನೀಡಬೇಕಿದೆ. ಸರ್ಕಾರದ ಖಜಾನೆ ಸಂಪೂರ್ಣ ಖಾಲಿಯಾಗಿದೆ. ಇಷ್ಟಾದರೂ ಯಾವ ಮುಖ ಇಟ್ಟುಕೊಂಡು ಉಪಚುನಾವಣೆ ಎದುರಿಸಲು ಮುಂದಾಗಿದ್ದಾರೆಂದು ಗೊತ್ತಿಲ್ಲ' ಎಂದರು.

'ಪಡಿತರ ಚೀಟಿ ರದ್ದು ಮಾಡಲು ಎಲ್ಲ ಬಗೆಯ ಷರತ್ತುಗಳನ್ನು ವಿಧಿಸುತ್ತಿದ್ದಾರೆ. ಅಧಿಕಾರಕ್ಕೆ ಬಂದ ನಂತರ ಏನು ಬೇಕಾದರೂ ಮಾಡಬಹುದು ಎಂಬಂತೆ ವರ್ತಿಸುತ್ತಿದ್ದಾರೆ. ಬಿಜೆಪಿ ರಾಷ್ಟ್ರೀಯ ಪಕ್ಷವಾಗಿದ್ದು, ನಾವು ಹಿಟ್ ಮಾಡಿದ ಕೂಡಲೇ ಕಾಂಗ್ರೆಸ್ ಓಡಿ ಹೋಗುತ್ತದೆ. ಈ ಸರ್ಕಾರ ತುಘಲಕ್ ಆಡಳಿತ ನೀಡಿ ನಗೆಪಾಟಲಿಗೀಡಾಗಿದೆ' ಎಂದು ಹೇಳಿದರು.

ಒಂದೇ ರೀತಿಯ ಹೆಸರು, ಉಪನಾಮದ ಅಭ್ಯರ್ಥಿಗಳು

ಮಹಾರಾಷ್ಟ್ರ: ಪಕ್ಷಗಳಿಗೆ ಭಿನ್ನ ಸವಾಲು

ಪುಣೆ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆಯ ಚುನಾವಣೆಯ ಹಲವು ಕ್ಷೇತ್ರಗಳಲ್ಲಿ ಹೋಲಿಕೆ ಇರುವ ಹೆಸರುಗಳು ಹಾಗೂ ಉಪನಾಮ ಹೊಂದಿರುವವರು ಸ್ಪರ್ಧಿಸಿರುವುದು ಹಲವು ಅಭ್ಯರ್ಥಿಗಳಿಗೆ ತಲೆನೋವಾಗಿದೆ.

ಎನ್‌ಸಿಪಿ ನಾಯಕ, ಮಾಜಿ ಗೃಹ ಸಚಿವ ಆರ್.ಆರ್ ಪಾಟೀಲ್ ಅವರ ಪುತ್ರ ರೋಹಿತ್ ರಾವ್‌ಸಾಹೇಬ್ ಪಾಟೀಲ್ ಪುತ್ರ ಕಣಕ್ಕಿಳಿದಿರುವ ಸಾಂಗ್ಲಿ ಜಿಲ್ಲೆಯ ತಾಸಗಾಂವ್-ಕವಠೆ ಮಹಾಕಲ್ ಕ್ಷೇತ್ರದಲ್ಲಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯಿಂದ ಸಂಜಯ್ ಕಾಕಾ ಪಾಟೀಲ್ ಸ್ಪರ್ಧಿಸುತ್ತಿದ್ದಾರೆ. ಇದೇ ಹೆಸರು ಹೋಲುವ ಇತರ ಮೂವರು ಕಣದಲ್ಲಿದ್ದಾರೆ. ರೋಹಿತ್ ರಾವ್‌ಸಾಹೇಬ್ ಪಾಟೀಲ್, ರೋಹಿತ್ ರಾಜಗೊಂಡ ಪಾಟೀಲ್ ಮತ್ತು ರೋಹಿತ್ ರಾಜೇಂದ್ರ ಪಾಟೀಲ್ ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದು, ಎನ್‌ಸಿಪಿ (ಎಸ್‌ಪಿ)ಗೆ ತಲೆ ನೋವಾಗಿದೆ. ಹೋಲಿಕೆ ಇರುವ ಹೆಸರುಗಳು ಮತದಾರರನ್ನು ಗೊಂದಲಕ್ಕೆ ಸಿಲುಕಿಸಲಿವೆ. ಇದು, ದುಬಾರಿಯಾಗಬಹುದು ಎಂದೂ ಪಕ್ಷಗಳು ಹೇಳಿವೆ.

ಪುಣೆಯ ವಡ್ಗಾಂವ್ ಶೇರಿ ಕ್ಷೇತ್ರದಿಂದ ಎನ್‌ಸಿಪಿ (ಎಸ್‌ಪಿ)ಅಭ್ಯರ್ಥಿ ಬಾಪುಸಾಹೇಬ್ ತುಕಾರಾಮ್ ಪಠಾರೆ ಅವರು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಅಭ್ಯರ್ಥಿ ಸುನೀಲ್ ಟಿಂಗ್ರೆ ವಿರುದ್ಧ ಸ್ಪರ್ಧಿಸುತ್ತಿದ್ದಾರೆ. ಆದರೆ, ಪಠಾರೆ ಅವರಿಗೆ ತಮ್ಮದೇ ಉಪನಾಮವುಳ್ಳ ಮತ್ತೊಬ್ಬ ಅಭ್ಯರ್ಥಿ, ಬಾಪು ಬಬನ್ ಪಠಾರೆ ಪಕ್ಷೇತರರಾಗಿ ಸ್ಪರ್ಧಿಸಿರುವುದು ಸವಾಲಾಗಿದೆ. ಆ ಪಕ್ಷೇತರ ಅಭ್ಯರ್ಥಿ ಆಸ್ತಿ ಘೋಷಣೆ ಅಪೂರ್ಣವಾಗಿದ್ದು, ಸ್ಪರ್ಧೆಯಿಂದ ಅನರ್ಹ ಗೊಳಿಸಬೇಕು ಎಂದು ತುಕಾರಾಮ್ ಆಗ್ರಹಿಸಿದ್ದಾರೆ. ಆದರೆ, ಅವರ ನಾಮಪತ್ರವನ್ನು ಮಾನ್ಯ ಮಾಡಲಾಗಿದೆ. ಬಿಜೆಪಿ ಶಾಸಕಿ ಮಾಧುರಿ ಮಿಸಾಳ್ ವಿರುದ್ಧ ಎನ್‌ಸಿಪಿ (ಎಸ್‌ಪಿ) ನಾಯಕಿ ಅಶ್ವಿನಿ ನಿತಿನ್ ಕದಮ್ ಸ್ಪರ್ಧಿ-ಸುತ್ತಿದ್ದಾರೆ. ಇಲ್ಲೂ ಇಬ್ಬರು ಪಕ್ಷೇತರ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಅವರಲ್ಲಿ ಒಬ್ಬರು 'ಅಶ್ವಿನಿ ನಿತಿನ್ ಕದಮ್', ಮತ್ತೊಬ್ಬರು ಅಶ್ವಿನಿ ವಿಜಯ್ ಕದಮ್.

53 ಕ್ಷೇತ್ರಗಳಲ್ಲಿ 'ಸೇನಾ' ನೇರ ಕಾಳಗ

ನವದೆಹಲಿ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ 53 ಕ್ಷೇತ್ರಗಳಲ್ಲಿ ಶಿವಸೇನಾ ಉಭಯ ಬಣಗಳ ನೇರ ಹಣಾಹಣಿಗೆ ವೇದಿಕೆ ಸಜ್ಜಾಗಿದೆ.

ಎರಡೂವರೆ ವರ್ಷಗಳ ಹಿಂದೆ ಶಿವಸೇನಾ ವಿಭಜನೆಯಾಗಿತ್ತು. ಪಕ್ಷ ವಿಭಜಿಸಿ ಬಿಜೆಪಿ ಜತೆಗೆ ಕೂಡಿಕೆ ಮಾಡಿಕೊಂಡ ಏಕನಾಥ ಶಿಂದೆ ಮುಖ್ಯಮಂತ್ರಿಯಾಗಿದ್ದರು. 'ಮಹಾ ಅಘಾಡಿ ಮೈತ್ರಿಕೂಟ'ದ ಸರ್ಕಾರದಲ್ಲಿ ಮುಖ್ಯಮಂತ್ರಿ-ಯಾಗಿದ್ದ ಉದ್ಧವ್ ಠಾಕ್ರೆ ಅಧಿಕಾರ ಕಳೆದುಕೊಂಡಿದ್ದರು. ಇದೀಗ 53 ಕ್ಷೇತ್ರಗಳಲ್ಲಿ ಉದ್ಧವ್-ಶಿಂದೆ ಬಣಗಳ ಅಭ್ಯರ್ಥಿಗಳು ಪರಸ್ಪರ ಕಾದಾಡಲಿದ್ದಾರೆ.

53 ಅಭ್ಯರ್ಥಿಗಳಲ್ಲಿ 44 ಹಾಲಿ ಶಾಸಕರು ಸೇರಿದ್ದಾರೆ. ಕೊಪ್ರಿ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಶಿಂದೆ ವಿರುದ್ಧ ಪ್ರಬಲ ಹುರಿಯಾಳುವನ್ನು ಉದ್ಧವ್ ಬಣ ಕಣಕ್ಕಿಳಿಸಿದೆ. ಶಿವಸೇನಾ ಮಾಜಿ ನಾಯಕ ಆನಂದ್ ದಿಘೆ ಅವರ ಸಂಬಂಧಿ ಕೇದಾರ್ ದಿಘೆ ಸವಾಲನ್ನು ಎದುರಿಸಬೇಕಿದೆ.

ವರ್ಲಿ ಕ್ಷೇತ್ರದಲ್ಲಿ ಉದ್ಧವ್ ಠಾಕ್ರೆ ಪುತ್ರ ಆದಿತ್ಯ ಅವರು ರಾಜ್ಯಸಭಾ ಸದಸ್ಯ ಮಿಲಿಂದ್ ದಿಯೋರಾ ಅವರ ಸ್ಪರ್ಧೆ ಎದುರಿಸಬೇಕಿದೆ. ಮಿಲಿಂದ್ ಅವರು ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದರು. ಯುಪಿಎ ಸರ್ಕಾರದಲ್ಲಿ ಸಚಿವರಾಗಿದ್ದರು. 2014 ಹಾಗೂ 2019ರ ಚುನಾವಣೆಗಳಲ್ಲಿ ಸೋತಿದ್ದರು. ಈ ವರ್ಷದ ಲೋಕಸಭಾ ಚುನಾವಣೆಗೆ ಪೂರ್ವದಲ್ಲಿ ಶಿವಸೇನಾ (ಶಿಂದೆ ಬಣ) ಸೇರಿದ್ದರು. ಬಳಿಕ ರಾಜ್ಯಸಭಾ ಸದಸ್ಯರಾಗಿದ್ದರು.

2019ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಶಿವಸೇನಾ ಜತೆಗೂಡಿ ಸ್ಪರ್ಧಿಸಿದ್ದವು. ಬಿಜೆಪಿ 105ರಲ್ಲಿ ಹಾಗೂ ಶಿವಸೇನಾ 56 ಕ್ಷೇತ್ರಗಳಲ್ಲಿ ಜಯ ಗಳಿಸಿದ್ದವು. ಬಳಿಕ ಮುಖ್ಯಮಂತ್ರಿ ಗಾದಿಯ ವಿಷಯದಲ್ಲಿ ಎರಡೂ ಪಕ್ಷಗಳ ನಡುವೆ ಬಿಕ್ಕಟ್ಟು ಸೃಷ್ಟಿಯಾಗಿತ್ತು. ಉದ್ಧವ್ ಠಾಕ್ರೆ ಅವರು ಕಾಂಗ್ರೆಸ್ ಹಾಗೂ ಅವಿಭಜಿತ ಎನ್‌ಸಿಪಿಯ ಬೆಂಬಲ ಪಡೆದು ಮುಖ್ಯಮಂತ್ರಿಯಾಗಿದ್ದರು.

ಏಕನಾಥ ಶಿಂದೆ ನೇತೃತ್ವದಲ್ಲಿ ಶಿವಸೇನಾದ 41 ಶಾಸಕರು ಬಂಡಾಯವೆದ್ದ ಕಾರಣ ಮಹಾ ಅಘಾಡಿ ಸರ್ಕಾರ 2022ರ ಜೂನ್‌ನಲ್ಲಿ ಪತನಗೊಂಡಿತ್ತು. ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡು ಶಿಂದೆ ಮುಖ್ಯಮಂತ್ರಿಯಾಗಿದ್ದರು.

'ಗ್ಯಾರಂಟಿ ಕಾರ್ಡ್' ತಂತ್ರ ನಡೆಯದು'

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್‌ನ ಚುನಾವಣಾ ಕಾರ್ಯತಂತ್ರ 'ಗ್ಯಾರಂಟಿ ಕಾರ್ಡ್' ಇಲ್ಲಿ ನಡೆಯುವುದಿಲ್ಲ. ಇದು ಈಗಾಗಲೇ ರಾಜಸ್ಥಾನ ಹಾಗೂ ಛತ್ತೀಸಗಢದಲ್ಲಿ ವೈಫಲ್ಯ ಕಂಡಿದೆ ಎಂದು ಉಪಮುಖ್ಯ ಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ಒಬ್ಬರಿಗೆ ಪ್ರಧಾನಿ ಆಗುವ ಬಯಕೆ, ಮತ್ತೊಬ್ಬರಿಗೆ ಮತ್ತೆ ಮತ್ತೆ ಸೋಲುವ ಆಸೆ!

ವಯನಾಡ್ ಕಣದಲ್ಲಿ ತರಹೇವಾರಿ ಕಲಿಗಳು

• ಶೆಮಿನ್ ಜಾಯ್

ನವದೆಹಲಿ: ತಾನು ಈ ದೇಶ ಪ್ರಧಾನಿ ಆಗಬಹುದು ಎಂದು ಒಬ್ಬ ಅಭ್ಯರ್ಥಿ ಭಾವಿಸಿದ್ದಾರೆ. ಇನ್ನೊಬ್ಬ ಅಭ್ಯರ್ಥಿಯು, ತನಗೆ ಅಮೇಠಿಯಿಂದ ಕಣಕ್ಕೆ ಇಳಿಯಲು ಅವಕಾಶ ಕೊಡಲಿಲ್ಲ, ಹೀಗಾಗಿ ಪ್ರತಿಭಟನೆಯ ರೂಪದಲ್ಲಿ ಇಲ್ಲಿ ಕಣಕ್ಕೆ ಇಳಿದಿರುವುದಾಗಿ ಹೇಳುತ್ತಾರೆ.

ದುರ್ಬಲ ಸಮುದಾಯಗಳಿಗೆ ಸೇರಿದವರು ಸಂಸತ್ತಿನಲ್ಲಿ ಇರಬೇಕು ಎಂಬ ಕಾರಣಕ್ಕೆ ಇನ್ನೊಬ್ಬ ಅಭ್ಯರ್ಥಿ ಕಣದಲ್ಲಿದ್ದಾರೆ. ಮತ್ತೊಬ್ಬ ಅಭ್ಯರ್ಥಿಗೆ, ಚುನಾವಣೆಯಲ್ಲಿ ಸೋಲುವುದನ್ನು ಮುಂದುವರಿಸಿಕೊಂಡು ಹೋಗಬೇಕು ಎಂಬ ಬಯಕೆ ಇದೆ.

ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ನಿಗದಿಯಾಗಿರುವ ಉಪ ಚುನಾವಣೆಯಲ್ಲಿ ಕಣಕ್ಕೆ ಇಳಿಯಲು ಪ್ರಮುಖವಲ್ಲದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ಹಾಗೂ ಪಕ್ಷೇತರರಿಗೆ ಈ ಬಗೆಯ ಹತ್ತು ಹಲವು ಕಾರಣಗಳಿವೆ.

ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಪ್ರಿಯಾಂಕಾ ಗಾಂಧಿ ವಾದ್ರಾ, ಬಿಜೆಪಿ ಅಭ್ಯರ್ಥಿಯಾಗಿ ನವ್ಯಾ ಹರಿದಾಸ್ ಮತ್ತು ಸಿಪಿಐ ಅಭ್ಯರ್ಥಿಯಾಗಿ ಸತ್ಯನ್ ಮೊಕೇರಿ ಮಾತ್ರವೇ ಅಲ್ಲದೆ ಇತರ 13 ಮಂದಿ ಕಣದಲ್ಲಿದ್ದಾರೆ. ಈ ಪೈಕಿ 10 ಮಂದಿ ಕೇರಳದ ಹೊರಗಿನವರು. ಕರ್ನಾಟಕದ ಇಬ್ಬರು ಕೂಡ ಕಣದಲ್ಲಿ ಇದ್ದಾರೆ.

2011ರಿಂದ ಈಚೆಗೆ ಐದು ಚುನಾವಣೆಗಳಲ್ಲಿ ಸ್ಪರ್ಧಿಸಿರುವ ಬರಹಗಾರ್ತಿ, ಬಹುಜನ ದ್ರಾವಿಡ ಪಕ್ಷದ ಎ. ಸೀತಾ ಅವರು ವಯನಾಡ್‌ನಲ್ಲಿ ಕಣದಲ್ಲಿದ್ದಾರೆ. ಸಮಾಜದ ದುರ್ಬಲ ವರ್ಗಗಳ ಜನರ ಪ್ರಾತಿನಿಧ್ಯ ಸಂಸತ್ತಿನಲ್ಲಿ ಇರಬೇಕು ಎಂಬ ಕಾರಣಕ್ಕೆ ಅವರು ಸ್ಪರ್ಧಿಸಿದ್ದಾರೆ. 'ಸಾಮಾಜಿಕ ನ್ಯಾಯ ಬೇಕು ಎಂದು ಕೂಗುತ್ತ ಇದ್ದರೆ ಸಾಕಾಗದು. ಅದನ್ನು ನಾವು ದೇಶದ ಎಲ್ಲ ಕಡೆಯೂ ಖಾತರಿಪಡಿಸಬೇಕು. ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆಗಬೇಕು ಎಂಬುದು ನನ್ನ ಗುರಿ' ಎಂದು ಅವರು ಹೇಳುತ್ತಾರೆ.

ಕಣದಲ್ಲಿ ಇರುವ ಸೋನು ಸಿಂಗ್ ಯಾದವ್ ಅವರಿಗೆ ದೇಶದ ಪ್ರಧಾನಿಯಾಗುವ ಬಯಕೆ ಇದೆ, ಆ ಜವಾಬ್ದಾರಿಯನ್ನು ನಿಭಾಯಿಸಲು ತಾವು ಸಮರ್ಥರಿರುವುದಾಗಿ ಅವರು ಹೇಳುತ್ತಾರೆ.

ಉತ್ತರ ಪ್ರದೇಶದ ಗೋಪಾಲ್ ಸ್ವರೂಪ್ ಗಾಂಧಿ ಅವರು ಮುಂದಿನ ವಾರದ ಆರಂಭದಲ್ಲಿ ವಯನಾಡ್ ತಲುಪಲಿದ್ದಾರೆ. ಅಲ್ಲಿ ಚುನಾವಣಾ ಕಣದಲ್ಲಿ ಇರುವ ಅವರು, ಲೋಕಸಭಾ ಚುನಾವಣೆಯಲ್ಲಿ ತಮಗೆ ಬಿಜೆಪಿಯ ಕಾರಣದಿಂದಾಗಿ ಅಮೇಠಿಯಲ್ಲಿ ಕಣಕ್ಕೆ ಇಳಿಯಲು ಅವಕಾಶ ಸಿಗಲಿಲ್ಲ ಎಂದು ಹೇಳುತ್ತಾರೆ.

ಸೈಬರ್ ಭದ್ರತೆ ವಿಷಯದಲ್ಲಿ ಎಂಟೆಕ್ ಪದವಿ ಪಡೆದಿರುವ ಜಯೇಂದ್ರ ರಾಥೋಡ್ ಅವರು, ಗಾಂಧಿನಗರದಲ್ಲಿ ಅಮಿತ್ ಶಾ ವಿರುದ್ಧ ಸ್ಪರ್ಧಿಸಲು, ವಾರಾಣಸಿಯಲ್ಲಿ ನರೇಂದ್ರ ಮೋದಿ ಅವರ ವಿರುದ್ಧ ಸ್ಪರ್ಧಿಸಲು ತಮಗೆ ಅವಕಾಶ ಆಗಲಿಲ್ಲ ಎಂದಿದ್ದಾರೆ. ಇವರಿಬ್ಬರ ವಿರುದ್ಧ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸದಂತೆ ತಮ್ಮ ಮೇಲೆ ಒತ್ತಡ ಇತ್ತು ಎಂದು ಅವರು ಹೇಳುತ್ತಾರೆ. ಬೀದರ್‌ನ ಇಸ್ಮಾಯಿಲ್ ಜಬಿಉಲ್ಲಾ ಎನ್ನುವವರು ಕೂಡ ಕಣದಲ್ಲಿ ಇದ್ದಾರೆ.

(ಈ ವರದಿಗೆ ಚೆನ್ನೈನಿಂದ ಇ.ಟಿ.ಬಿ. ಶಿವಪ್ರಿಯನ್ ಮತ್ತು ನವದೆಹಲಿಯಿಂದ ಅಜಿತ್ ಅತ್ರಾಡಿ ಮಾಹಿತಿ ಒದಗಿಸಿದ್ದಾರೆ)

ಬಳ್ಳಾರಿಯ ಫ್ಯಾಷನ್ ಡಿಸೈನರ್ ಸ್ಪರ್ಧೆ

ಫ್ಯಾಷನ್ ಡಿಸೈನರ್ ಆಗಿರುವ ರುಕ್ಮಿಣಿ ವಯನಾಡ್‌ನಲ್ಲಿ ಕಣಕ್ಕೆ ಇಳಿದಿದ್ದಾರೆ. ಇವರು ಬಳ್ಳಾರಿಯವರು.

ವಯನಾಡ್‌ನಲ್ಲಿ ಗಣನೀಯ ಸಂಖ್ಯೆಯಲ್ಲಿ ಇರುವ ಬುಡಕಟ್ಟು ಸಮುದಾಯಗಳ ಜನರನ್ನು ವಿವಿಧ ರಾಜಕೀಯ ಪಕ್ಷಗಳು ತಮ್ಮ ಹಿತಕ್ಕೆ ದುರ್ಬಳಕೆ ಮಾಡಿಕೊಳ್ಳುತ್ತಿವೆ ಎಂದು ರುಕ್ಮಿಣಿ ಅವರಿಗೆ ಅನ್ನಿಸಿದೆ.

ಬುಡಕಟ್ಟು ಜನರ ಅಭಿವೃದ್ಧಿಗೆ ಹೆಚ್ಚು ಕೆಲಸ ಮಾಡಲು ಪ್ರಿಯಾಂಕಾ ಅವರಿಂದ ಸಾಧ್ಯವಿಲ್ಲ ಎಂದು ರುಕ್ಮಿಣಿ ಭಾವಿಸಿದ್ದಾರೆ. 'ಬುಡಕಟ್ಟು ಜನರ ಅಭಿವೃದ್ಧಿಯ ಕೆಲಸ ಮಾಡಲು ಹಾಗೂ ಅವರ ಶೋಷಣೆಯನ್ನು ತಡೆಯಲು ನಾನು ಗಮನ ನೀಡುತ್ತೇನೆ' ಎಂದು ರುಕ್ಮಿಣಿ ಹೇಳಿದರು.

ಇವರು ಕೆಲವು ತಿಂಗಳ ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ ಕೊಪ್ಪಳ ಕ್ಷೇತ್ರದಲ್ಲಿ ಕಣಕ್ಕೆ ಇಳಿದಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಪ್ರಜಾವಾಣಿ ಶುಕ್ರವಾರ • ನವೆಂಬರ್ 1, 2024

ಅಭಿಮತ

❦ ಸುಭಾಷಿತ ❦

ಕಿರಿ ಹಣತೆ ಕಿರಿದಾದರೇನು? ಬೆಳಕ ಬೀರುವ ಶಕ್ತಿ ಹಿರಿದಲ್ಲವೇನು?

– ಜಿ.ಎಸ್.ಶಿವರುದ್ರಪ್ಪ

ಸುವರ್ಣ ಸಂಭ್ರಮ ರಸಬಳ್ಳಿಯಾಗಿ ಹಬ್ಬಲಿ ಸೌಹಾರ್ದ–ವಿವೇಕ ಪರಂಪರೆ ಮರುಕಳಿಸಲಿ

‘ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ’ ಎನ್ನುವ ಆಶಯದೊಂದಿಗೆ 1973ರ ನವೆಂಬರ್ 1ರಂದು ಮೈಸೂರು ರಾಜ್ಯಕ್ಕೆ ‘ಕರ್ನಾಟಕ’ ಎಂದು ನಾಮಕರಣ ಮಾಡಿದ ಚಾರಿತ್ರಿಕ ಘಟನೆಯ ಸುವರ್ಣ ಮಹೋತ್ಸವ ಸಂದರ್ಭವು ಕನ್ನಡಿಗರ ಸಂಭ್ರಮವಾಗಿ ರೂಪುಗೊಂಡಿರುವುದು ಸಹಜವಾಗಿದೆ. ಭಾಷೆಯ ಮೂಲಕ ರಾಜ್ಯದ ಹೆಸರನ್ನು ಸಂಕೇತಿಸುವ ವಿದ್ಯಮಾನಕ್ಕೆ ಐವತ್ತು ವರ್ಷಗಳು ತುಂಬಿರುವುದು ಜನರ ಭಾವಕೋಶಕ್ಕೆ ಹತ್ತಿರವಾದುದು. ತಾಯ್ನುಡಿಯನ್ನು ಸಂಭ್ರಮಿಸುವ, ನಾಡಿನ ಅಸ್ಮಿತೆಯ ಬಗ್ಗೆ ಅಭಿಮಾನ ಹೊಂದುವ ಹಾಗೂ ಗೌರವವನ್ನು ಪ್ರಕಟಪಡಿಸುವ ‘ರಾಜ್ಯೋತ್ಸವ’ ಸಂಭ್ರಮಕ್ಕೆ ಸುವರ್ಣ ಮಹೋತ್ಸವ ಸಂದರ್ಭವೂ ಸೇರಿಕೊಂಡು ಈ ಬಾರಿಯ ಕನ್ನಡ ಹಬ್ಬ ವಿಶೇಷ ಮಹತ್ವ ಪಡೆದುಕೊಂಡಿದೆ. ಈ ಸಂಭ್ರಮವನ್ನು ಹೆಚ್ಚಿಸುವಂತೆ ವಾರ್ಷಿಕ ‘ರಾಜ್ಯೋತ್ಸವ ಪ್ರಶಸ್ತಿ’ಗಳ ಜೊತೆಗೆ, ನೂರು ಸಾಧಕರಿಗೆ ‘ಸುವರ್ಣ ಮಹೋತ್ಸವ ಪ್ರಶಸ್ತಿ’ಗಳನ್ನೂ ರಾಜ್ಯ ಸರ್ಕಾರ ಪ್ರಕಟಿಸಿದೆ. ನಾಡು–ನುಡಿಗೆ ಮಹತ್ವದ ಕೊಡುಗೆ ನೀಡಿದವರನ್ನು ಗುರುತಿಸಿ, ಗೌರವಿಸುವ ಮೂಲಕ ಸುವರ್ಣ ಮಹೋತ್ಸವ ಪ್ರಭಾವಳಿಯ ಕರ್ನಾಟಕ ರಾಜ್ಯೋತ್ಸವವನ್ನು ಅವಿಸ್ಮರಣೀಯ ಹಾಗೂ ಅರ್ಥಪೂರ್ಣಗೊಳಿಸುವ ಸರ್ಕಾರದ ನಡೆ ಸ್ವಾಗತಾರ್ಹ. ಈ ಸಂಭ್ರಮವು ಶಾಲೆಗಳಲ್ಲಿ, ಸಾರ್ವಜನಿಕ ಸಂಸ್ಥೆಗಳಲ್ಲಿ ಹಾಗೂ ಮನೆ ಮನೆಗಳಲ್ಲಿ ಅನಾವರಣಗೊಂಡು, ಇಡೀ ಕರ್ನಾಟಕ ಕನ್ನಡ ಧ್ವಜವನ್ನು ಎತ್ತಿಹಿಡಿದಂತೆ ಕಾಣಿಸುತ್ತಿದೆ. ಸಾಹಿತ್ಯ, ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿ ನಾಡು–ನುಡಿಯನ್ನು ಬಲಗೊಳಿಸುವ ಉದ್ದೇಶದ ಅಕಾಡೆಮಿ ಹಾಗೂ ಪ್ರಾಧಿಕಾರಗಳು ಇನ್ನಷ್ಟು ಹುಮ್ಮಸ್ಸಿನಿಂದ ಕಾರ್ಯನಿರ್ವಹಿಸಬೇಕು. ಸುವರ್ಣ ಮಹೋತ್ಸವದ ಸಂಭ್ರಮವು ಪ್ರಶಸ್ತಿಗಳು ಹಾಗೂ ಪುಸ್ತಕ ಪ್ರಕಟಣೆಗಷ್ಟೇ ಸೀಮಿತಗೊಳ್ಳದೆ ಕನ್ನಡವನ್ನು ರಚನಾತ್ಮಕವಾಗಿ ರೂಪಿಸುವ ಕೆಲಸ ಅಕಾಡೆಮಿ–ಪ್ರಾಧಿಕಾರಗಳಿಂದ ನಡೆಯಬೇಕಾಗಿದೆ. ಕನ್ನಡ ಸಂಭ್ರಮವು ಭಾವನೆಗಳಿಗೆ ಸೀಮಿತಗೊಳ್ಳದೆ ಕನ್ನಡಿಗರ ಬದುಕನ್ನು ಸಹನೀಯಗೊಳಿಸುವ ರೂಪವನ್ನೂ ಹೊಂದಬೇಕಾಗಿದೆ.

ಕನ್ನಡನಾಡಿನ ‘ವಿವೇಕ ಪರಂಪರೆ’ಯನ್ನು ಮರಳಿ ಜಾಗೃತಗೊಳಿಸುವ ಕೆಲಸ ಪ್ರಜ್ಞಾಪೂರ್ವಕವಾಗಿ ನಡೆಯಬೇಕಾಗಿದೆ

ಕನ್ನಡವನ್ನು ಕಟ್ಟುವ ಅರ್ಥಪೂರ್ಣ ಕಾರ್ಯಕ್ರಮಗಳಿಗೆ ಸರ್ಕಾರ ನಿರಂತರತೆಯನ್ನು ತಂದುಕೊಡಬೇಕು. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತು ಹದಿನಾರು ವರ್ಷಗಳಾದವು. ಹೋರಾಟದ ಮೂಲಕ ಪಡೆದುಕೊಂಡ ಈ ಸ್ಥಾನಮಾನದಿಂದ ಕನ್ನಡಕ್ಕಾದ ಪ್ರಯೋಜನಗಳೇನು ಎನ್ನುವುದನ್ನು ನಾಡಿಗೆ ತಿಳಿಸುವ ಕೆಲಸವಾಗಬೇಕು. ವಿಶ್ವವಿದ್ಯಾಲಯಗಳು ಶೈಕ್ಷಣಿಕವಾಗಿ ಹಾಗೂ ಬೌದ್ಧಿಕವಾಗಿ ಕಡು ದಾರಿದ್ರ್ಯದ ಸ್ಥಿತಿ ತಲುಪಿರುವ ದಿನಗಳಿವು. ವಿಶ್ವವಿದ್ಯಾಲಯಗಳನ್ನು ಬಲಪಡಿಸುವ ಕೆಲಸ ಸರ್ಕಾರದ ಆದ್ಯತೆಯಾಗಬೇಕು. ಅವುಗಳಿಗೆ ಅಗತ್ಯವಾದ ಆರ್ಥಿಕ ಹಾಗೂ ಮಾನವಿಕ ಸಂಪನ್ಮೂಲಗಳನ್ನು ನೀಡದೇ ಹೋದರೆ, ಉನ್ನತ ಶಿಕ್ಷಣ ಕ್ಷೇತ್ರದ ಜೊತೆಗೆ ನಾಡು– ನುಡಿಯನ್ನೂ ದುರ್ಬಲಗೊಳಿಸಿದಂತಾಗುತ್ತದೆ ಎನ್ನುವುದನ್ನು ಸರ್ಕಾರ ಮರೆಯಬಾರದು. ಇನ್ನಾದರೂ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಉಮೇದು ಕೈಬಿಟ್ಟು, ಇರುವ ವಿಶ್ವವಿದ್ಯಾಲಯಗಳನ್ನು ಸದೃಢಗೊಳಿಸಬೇಕು. ಅಧ್ಯಯನ ಮತ್ತು ಸಂಶೋಧನೆಗಳ ಮೂಲಕ ಕನ್ನಡದ ಅಸ್ಮಿತೆಯನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಆರಂಭಗೊಂಡ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಸ್ತುತ ಸ್ಥಾವರದ ರೂಪದಲ್ಲಷ್ಟೇ ಉಳಿದಂತಿದೆ. ಅದನ್ನು ಬಲಗೊಳಿಸುವ, ಸೃಜನಶೀಲಗೊಳಿಸುವ ಕೆಲಸ ಆಗಬೇಕು. ನಾಡು–ನುಡಿಗೆ ತಾತ್ವಿಕ ಹಾಗೂ ಬೌದ್ಧಿಕ ತಳಹದಿಯನ್ನು ರೂಪಿಸುವ ದಿಸೆಯಲ್ಲಿ ವಿಶ್ವವಿದ್ಯಾಲಯಗಳ ಪಾತ್ರ ಮಹತ್ವವಾದುದು. ವಿಶ್ವವಿದ್ಯಾಲಯಗಳು ತಮ್ಮ ಜಡತೆಯಿಂದ ಹೊರಬಂದು ಅಧ್ಯಯನ, ಸಂಶೋಧನೆ ಹಾಗೂ ಬೌದ್ಧಿಕ ಚಟುವಟಿಕೆಗಳ ಕೇಂದ್ರಗಳಾಗುವುದು ಸಾಧ್ಯವಾದಲ್ಲಿ ಅದು ‘ಸುವರ್ಣ ಮಹೋತ್ಸವ’ದ ಬಹು ಅರ್ಥಪೂರ್ಣ ಆಚರಣೆಯಾಗುವುದರ ಜೊತೆಗೆ, ನಾಡಿಗೆ ಸರ್ಕಾರ ನೀಡುವ ಮಹತ್ವದ ಕೊಡುಗೆಯೂ ಆಗುವುದು.

ಕನ್ನಡ ಎನ್ನುವುದು ಬರಿ ನುಡಿಯಲ್ಲ. ಅದು ಮನಸ್ಸುಗಳನ್ನು ಬೆಸೆಯುವ ಭಾಷೆ. ಪರಧರ್ಮ ಹಾಗೂ ಪರ ವಿಚಾರಗಳನ್ನು ಸೈರಣೆಯಿಂದ ಕಾಣುವ ಧೋರಣೆ ಕನ್ನಡ ಪರಂಪರೆಯ ಉದ್ದಕ್ಕೂ ಇದೆ. ದೇಶದ ಸಂವಿಧಾನ ಪ್ರತಿಪಾದಿಸುವ ಬಹುತ್ವದ ಪರಿಕಲ್ಪನೆ ಸಾವಿರಾರು ವರ್ಷಗಳ ‘ಕನ್ನಡ ವಿವೇಕ’ದ ಪ್ರಮುಖ ಲಕ್ಷಣವೂ ಆಗಿದೆ. ಆದರೆ, ಕೆಲವು ವರ್ಷಗಳಿಂದ ಕನ್ನಡ ಭಾಷೆ ತನ್ನ ಮಾರ್ದವತೆಯನ್ನು ಕಳೆದುಕೊಳ್ಳುತ್ತಿರುವುದಕ್ಕೆ ಹಾಗೂ ಪರಧರ್ಮ, ಪರ ವಿಚಾರಗಳ ಕುರಿತ ಸಹಿಷ್ಣುತೆ ಕ್ಷೀಣಿಸುತ್ತಿರುವುದಕ್ಕೆ ನಿದರ್ಶನದ ರೂಪದಲ್ಲಿ ಹಲವು ಘಟನೆಗಳನ್ನು ನಾಡು ಕಂಡಿದೆ. ಈ ಘಟನೆಗಳು ನಾಡಿನ ಉದಾತ್ತ ಪರಂಪರೆಯನ್ನು ಮುಕ್ಕಾಗಿಸುವಂತಹವು ಹಾಗೂ ಕನ್ನಡದ ಜೀವಶಕ್ತಿಯನ್ನು ಗಾಸಿಗೊಳಿಸುವಂತಹವು. ಕನ್ನಡನಾಡಿನ ‘ವಿವೇಕ ಪರಂಪರೆ’ಯನ್ನು ಮರಳಿ ಜಾಗೃತಗೊಳಿಸುವ ಕೆಲಸ ಕರ್ನಾಟಕದ ‘ಸುವರ್ಣ ಮಹೋತ್ಸವ’ ಸಂದರ್ಭದಲ್ಲಿ ಪ್ರಜ್ಞಾಪೂರ್ವಕವಾಗಿ ನಡೆಯಬೇಕಾಗಿದೆ. ಕನ್ನಡ ಹಾಗೂ ಕರ್ನಾಟಕವನ್ನು ಮಾನವೀಯಗೊಳಿಸುವ ಕೆಲಸದಲ್ಲಿ ಸರ್ಕಾರದೊಂದಿಗೆ ಜನಸಾಮಾನ್ಯರೂ ಭಾಗಿಯಾಗುವುದು ನಿಜವಾದ ಅರ್ಥದಲ್ಲಿ ಕನ್ನಡ ಕಟ್ಟುವ ಕೆಲಸವಾಗಿದೆ, ನಮ್ಮನ್ನು ನಾವು ಗೌರವಿಸಿಕೊಳ್ಳುವ ರೀತಿಯೂ ಆಗಿದೆ.

ದಿನದ ಟ್ವೀಟ್

ಸ್ವಾವಲಂಬಿ ಆಗೋಣ

ಮಹಾನಗರಗಳಲ್ಲಿ ಸ್ವತಃ ಅಡುಗೆ ಮಾಡಿಕೊಳ್ಳುವುದು ಮತ್ತು ನಂತರ ಶುಚಿ ಮಾಡುವುದು ‘ಹಳೆಯ’ ಪದ್ಧತಿ ಎನಿಸಿಕೊಂಡಿವೆ. ಆಧುನಿಕ ಸಲಕರಣೆಗಳನ್ನು ಬಳಸಿ ಅಡುಗೆ ಮಾಡುವುದು ಈಗ ಅಷ್ಟೇನೂ ಕಷ್ಟದ ಕೆಲಸವಲ್ಲ, ಅವು ಬಹಳಷ್ಟು ಸಮಯ ಉಳಿಸುತ್ತವೆ. ನೀವು ಎಷ್ಟಾದರೂ ಗಳಿಸುತ್ತಿರಿ (ಮಧ್ಯಮ ವರ್ಗದವರನ್ನಷ್ಟೇ ಉದ್ದೇಶಿಸಿ ಹೇಳುತ್ತಿದ್ದೇನೆ), ನಿಮ್ಮ ವೈಯಕ್ತಿಕ ಅಗತ್ಯಗಳಿಗೆಲ್ಲ ಹೊರಗಿನವರನ್ನು ಅವಲಂಬಿಸಿದರೆ ನೀವು ಉಳಿತಾಯ ಮಾಡಲು ಸಾಧ್ಯವೇ ಇಲ್ಲ.

ಸುನಂದಾ ವಸಿಷ್ಠ, ಲೇಖಕಿ

ಕಿಡಿನುಡಿ

ಪ್ರಾಣಿ ಹಿಂಸೆ ಮಾಡುವವರನ್ನು ಬಂಧಿಸಬೇಕು. ಈ ವಿಡಿಯೊ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ಇಂತಹವರು ಸಂಪೂರ್ಣವಾಗಿ ಹೃದಯಹೀನರು.

(ಹುಡುಗರ ತಂಡವೊಂದು ನಾಯಿಯನ್ನು ಹಿಡಿದುಕೊಂಡು, ಬಾಲಕ್ಕೆ ಪಟಾಕಿ ಹಚ್ಚಿ ವಿಕೃತ ಆನಂದ ಅನುಭವಿಸುತ್ತಿರುವ ವಿಡಿಯೊ ದೃಶ್ಯಕ್ಕೆ ಪ್ರತಿಕ್ರಿಯೆ)

ವಿದಿತ್ ಶರ್ಮಾ, ಸಂಸ್ಥಾಪಕ, ಸೇವ್ ಎ ಸ್ಟ್ರೇ ಟ್ರಸ್ಟ್

25 ವರ್ಷಗಳ ಹಿಂದೆ

ಸೋಮವಾರ, 1-11-1999

• ಸಾವಿರಾರು ಸಾವು? 25 ಲಕ್ಷ ಮನೆ ನಾಶ; ಪರಿಹಾರಕ್ಕೆ 500 ಕೋಟಿ ಅಗತ್ಯ

ಭುವನೇಶ್ವರ, ಅ. 31 (ಪಿಟಿಐ)– ಶತಮಾನದ ಅತಿ ದೊಡ್ಡ ನೈಸರ್ಗಿಕ ದುರಂತವೆಂದು ಬಣ್ಣಿಸಲಾಗುತ್ತಿರುವ ಒರಿಸ್ಸಾದ ಚಂಡಮಾರುತಕ್ಕೆ ಸಾವಿರಾರು ಜನರು ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆ.

ಲಕ್ಷಾಂತರ ಜನರು ಮನೆಗಳನ್ನು ಕಳೆದುಕೊಂಡಿದ್ದಾರೆ. ಸಂಪರ್ಕ ಮತ್ತು ರೈಲು ಮಾರ್ಗಗಳನ್ನು ಸರಿಪಡಿಸಲು ಶತಾಯಗತಾಯ ಯತ್ನಿಸುತ್ತಿರುವ ಒರಿಸ್ಸಾ ಸಾಮಾನ್ಯ ಸ್ಥಿತಿಗೆ ಮರಳಲು ಪರದಾಡುತ್ತಿದೆ.

ಚಂಡಮಾರುತಕ್ಕೆ ಕನಿಷ್ಠ ಮೂರು ಸಾವಿರ ಮಂದಿ ಸತ್ತಿರಬಹುದು ಎಂದು ಕೆಲವೊಂದು ಮೂಲಗಳು ಅಂದಾಜಿಸಿವೆ. ಆದರೆ ಇದನ್ನು ಒಪ್ಪಿಕೊಳ್ಳಲು ರಾಜ್ಯದ ಮುಖ್ಯಮಂತ್ರಿ ಗಿರಿಧರ್ ಗಮಾಂಗ್ ಅವರು ಸಿದ್ಧರಿಲ್ಲ.

ಗಮಾಂಗ್ ಅವರು ಇಂದು ಕಂದಾಯ ಸಚಿವ ಜಗನ್ನಾಥ್ ಪಟ್ನಾಯಕ್ ಅವರೊಂದಿಗೆ ಚಂಡಮಾರುತ ಪೀಡಿತ ಪ್ರದೇಶಗಳಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದರು. ಪರಿಹಾರ ಕಾರ್ಯಕ್ಕಾಗಿ ರಾಜ್ಯಕ್ಕೆ ಕನಿಷ್ಠ 500 ಕೋಟಿ ರೂಪಾಯಿಗಳಾದರೂ ಬೇಕು ಎಂದು ಅವರು ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 1-11-1974

• ರೈಲು ಬೋಗಿಗೆ ಬೆಂಕಿ: 44 ಜನರ ಸಾವು

ಅಲಹಾಬಾದ್, ಅ. 31– ಹೌರಾಗೆ ಹೋಗುತ್ತಿದ್ದ ಅಪ್ಪರ್ ಇಂಡಿಯಾ ಎಕ್ಸ್‌ಪ್ರೆಸ್ ರೈಲಿನ ಬೋಗಿಯೊಂದರಲ್ಲಿ ಇಂದು ಬೆಳಿಗ್ಗೆ ಬೆಂಕಿ ಹೊತ್ತಿಕೊಂಡ ಕಾರಣ ಕನಿಷ್ಠ 44 ಮಂದಿ ಪ್ರಯಾಣಿಕರು ಮೃತಪಟ್ಟರು.

ಇಲ್ಲಿಗೆ 60 ಕಿ.ಮೀ. ದೂರದಲ್ಲಿರುವ ಮನೋಹರ್ ಗಂಜ್ ರೈಲು ನಿಲ್ದಾಣದ ಸಮೀಪದಲ್ಲಿ ಸಂಭವಿಸಿದ ಈ ಬೆಂಕಿ ಅವಘಡದಲ್ಲಿ 35 ಮಂದಿ ಗಾಯಗೊಂಡರು.

ದುರಂತಕ್ಕೀಡಾದ ಈ ನತದೃಷ್ಟರೆಲ್ಲ ಎರಡನೇ ದರ್ಜೆ ಬೋಗಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಈ ಬೋಗಿಯಲ್ಲಿದ್ದ ಪ್ರಯಾಣಿಕರೊಬ್ಬರ ಬಳಿಯಿದ್ದ ಸ್ಫೋಟಕ ವಸ್ತು ಸಿಡಿದು ಬೋಗಿಗೆ ಬೆಂಕಿ ಹೊತ್ತಿಕೊಂಡಿತೆಂದು ಗಾಯಗೊಂಡ ಕೆಲವರು ತಿಳಿಸಿದ್ದಾರೆ.

• ಸದ್ಯದ ಪರಿಸ್ಥಿತಿ ಬದಲಾವಣೆಗೆ ಜನತೆಯ ತವಕ: ಜೆ.ಪಿ

ನವದೆಹಲಿ, ಅ. 31– ತಮ್ಮ ಸುತ್ತಮುತ್ತ ಏನಾಗುತ್ತಿದೆ ಎಂಬುದು ಜನತೆಗೆ ಗೊತ್ತು, ಆದರೆ ಸದ್ಯದ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ಭಾವಿಸಿದ್ದಾರೆ ಎಂದು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ್ ಇಂದು ಇಲ್ಲಿ ಹೇಳಿದರು.

ಸರ್ದಾರ್ ಪಟೇಲ್ ಜಯಂತಿ ಸಮಿತಿ ಏರ್ಪಡಿಸಿದ್ದ ಸರ್ದಾರ್ ಪಟೇಲರ 99ನೇ ಜನ್ಮದಿನೋತ್ಸವದಲ್ಲಿ ಅವರು ಮಾತನಾಡಿದರು.

ಬದಲಾವಣೆಯನ್ನು ಜನತೆ ಬಯಸಿದ್ದಾರೆ ಎಂಬುದು ಕಳೆದ ವರ್ಷದ ಚುನಾವಣೆಗಳಿಂದ ವೇದ್ಯವಾಗಿದೆ ಎಂದು ಹೇಳಿದರು.

ಕನ್ನಡ ನೆಲದ ಒಳಿತುಗಳನ್ನು ಕೆಡಿಸುವ ಶಕ್ತಿಗಳ ಬಗ್ಗೆ ಪ್ರತಿರೋಧ ಹುಟ್ಟಬೇಕಿದೆ

ಕರ್ನಾಟಕದಲ್ಲಿ ಕರ್ನಾಟಕತ್ವವನ್ನು ಅರಸುತ್ತಾ…

ಅನುರಣನ

ನಾರಾಯಣ ಎ.

ವಿವಿಧ ಬಗೆಯ ವರ್ಧಂತಿಗಳಿವೆ. ಆದರೆ ಮರುನಾಮಕರಣದ ವರ್ಧಂತಿ ಆಚರಿಸುವ ವೈಶಿಷ್ಟ್ಯ ಕರ್ನಾಟಕದ್ದು ಮಾತ್ರ ಆಗಿರಬೇಕು. ರಾಜ್ಯದ ಮರುನಾಮಕರಣ ಆಗಿ, ಅಂದರೆ, 1956ರಲ್ಲಿ ರಾಜ್ಯ ಏಕೀಕರಣವಾದ ನಂತರವೂ ಇದ್ದ ಮೈಸೂರು ರಾಜ್ಯ ಎಂಬ ಹೆಸರನ್ನು ಬಿಟ್ಟು, 1973ರಲ್ಲಿ ಕರ್ನಾಟಕ ರಾಜ್ಯ ಎಂಬ ಹೆಸರನ್ನು ಸ್ವೀಕರಿಸಿ ಐದು ದಶಕಗಳು ಸಂದಿವೆ. ಮರುನಾಮಕರಣವನ್ನು ವರ್ಷವಿಡೀ ಸ್ಮರಿಸಿದ ಗುಂಗಿನಲ್ಲಿ ಇರುವಾಗಲೇ ಮತ್ತೆ ರಾಜ್ಯೋತ್ಸವ ಬಂದಿದೆ.

‘ಹೆಸರು ಬದಲಿಸಿಕೊಂಡದ್ದರಲ್ಲಿ ಅಂತಹದ್ದೇನಿದೆ? ಗುಲಾಬಿಯನ್ನು ಬೇರೆ ಯಾವ ಹೆಸರಿಂದ ಕರೆದರೂ ಬೀರುವ ಸುಗಂಧ ಬೇರೆ ಆಗುವುದಿಲ್ಲವಲ್ಲ’ ಅಂತ ಶೇಕ್ಸ್‌ಪಿಯರ್ ಹೇಳಿದ್ದು ಅಥವಾ ಕೇಳಿದ್ದು ಸತ್ಯದ ಮಾತಲ್ಲವೇ? ಇರಬಹುದು. ಆದರೆ ನಾಡು–ನುಡಿಯ ಜತೆಗೆ ನಾಡವರಿಗಿರುವ ಸಂಬಂಧದ ಪ್ರಶ್ನೆ ಬಂದಾಗ ಹೆಸರಲ್ಲೇನೋ ಇರುತ್ತದೆ. ನಾಡ ಹೆಸರು ಒಂದು ನಾಮಪದ ಮಾತ್ರವಲ್ಲ, ನಾಡನಾಮಕ್ಕೆ ಒಂದು ಕ್ರಿಯಾಪದದ ಲೇಪವೂ ಇರುತ್ತದೆ. ಹಾಗಾಗಿ, ಏಕೀಕರಣವಾಗಿ 17 ವರ್ಷಗಳ ತರುವಾಯ ನಡೆದ ರಾಜ್ಯದ ಮರುನಾಮಕರಣ ಮತ್ತು ಅದರ ಮರುಸ್ಮರಣೆಯ ಭಾಗವಾಗಿ ಮೆಲುಕು ಹಾಕಬೇಕಿರುವ ಹಲವು ವಿಚಾರಗಳಿವೆ.

ಭಾಷಾವಾರು ಪ್ರಾಂತ್ಯಗಳ ಸೃಷ್ಟಿಯೊಂದಿಗೆ ಮದರಾಸು ರಾಜ್ಯವು ತಮಿಳುನಾಡು, ಮುಂಬೈ ರಾಜ್ಯವು ಮಹಾರಾಷ್ಟ್ರ, ಹೈದರಾಬಾದ್ ರಾಜ್ಯವು ಆಂಧ್ರಪ್ರದೇಶ ಆದವು. ಮೈಸೂರು ರಾಜ್ಯ ಮಾತ್ರ ಮೈಸೂರಾಗಿಯೇ ಮುಂದುವರಿದಿತ್ತು ಎನ್ನುವಲ್ಲಿ ಹೆಸರಿನಾಚೆಗಿನ ಒಂದು ಸಂಕೇತವಿದೆ. ಉಳಿದ ರಾಜ್ಯಗಳು ಏಕೀಕರಣವಾದ ನಂತರ, ಅರಸೊತ್ತಿಗೆ ಅಥವಾ ಬ್ರಿಟಿಷ್ ಆಳ್ವಿಕೆಯನ್ನು ನೆನಪಿಸುತ್ತಿದ್ದ ನಗರಗಳ ಹೆಸರುಗಳಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಇಷ್ಟಪಡಲಿಲ್ಲ. ಕನ್ನಡಿಗರಿಗೆ ಅದೊಂದು ಅಪವಾದ ಅಂತ ಅನ್ನಿಸಲಿಲ್ಲ. ಅದಕ್ಕೆ ರಾಜಕೀಯ- ಸಾಂಸ್ಕೃತಿಕ ಕಾರಣಗಳು ಏನೇ ಇದ್ದಿರಬಹುದು. ಆದರೆ ಸಮಸ್ತ ನಾಡಬಾಂಧವರ ಅಸ್ಮಿತೆಯನ್ನು ಸೂಚಿಸುವ ಹೆಸರು ಏಕೀಕರಣದೊಂದಿಗೆ ರಾಜ್ಯಕ್ಕೆ ದಕ್ಕದೇ ಹೋದದ್ದು ಏಕೀಕರಣದ ಆಶಯ ಹಾಗೂ ಸಂವಿಧಾನದ ಆಶಯ ಅಪೂರ್ಣವಾಗಿಯೇ ಉಳಿದದ್ದರ ಸಂಕೇತ.

ಈ ಹಿನ್ನೆಲೆಯಲ್ಲಿ ಮೈಸೂರು ಹೋಗಿ ಕರ್ನಾಟಕ ಎಂದಾದದ್ದು ಕರ್ನಾಟಕ ಪ್ರಜ್ಞೆಯೊಂದನ್ನು ಹುಟ್ಟುಹಾಕುವ ಉದ್ದೇಶದಿಂದ ಮತ್ತು ಸಾಂವಿಧಾನಿಕ ಪ್ರಜಾತಂತ್ರದ ಜತೆ ಇನ್ನಷ್ಟು ಗಾಢವಾಗಿ ಬೆಸೆಯುವ ದೃಷ್ಟಿಯಿಂದ ಒಂದು ಪ್ರಮುಖ ಹೆಜ್ಜೆ. ಈ ಎರಡರ ಪೈಕಿ ಕರ್ನಾಟಕದಲ್ಲಿ ಕನ್ನಡ ಪ್ರಜ್ಞೆ ಹುಟ್ಟುಹಾಕುವ ಉದ್ದೇಶ ಎಷ್ಟರಮಟ್ಟಿಗೆ ಈಡೇರಿದೆ ಎಂಬ ಪ್ರಶ್ನೆಯನ್ನು ಸುವರ್ಣ ಸಂಭ್ರಮದ ಅಂತಿಮ ಘಟ್ಟದಲ್ಲೀಗ ಕೇಳಬೇಕಿದೆ.

ಕರ್ನಾಟಕದಲ್ಲಿ ಜಾತಿಪ್ರಜ್ಞೆಯೊಂದು ಸದಾ ಜಾಗೃತ ಆಗಿರುವಂತೆ ಕಾಣುತ್ತದೆ. ಕರ್ನಾಟಕದಲ್ಲಿ ರಾಷ್ಟ್ರಪ್ರಜ್ಞೆ ಎಂದರೆ ಒಂದು ನಿರ್ದಿಷ್ಟ ಸ್ವರೂಪದ ಭಾರತ ಪ್ರಜ್ಞೆ ಯಾವತ್ತೂ ಜಾಗೃತವಾಗಿರುವಂತಿದೆ. ಆದರೆ ಇವೆರಡರ ಮಧ್ಯೆ ಇರಬೇಕಾಗಿದ್ದ ಕರ್ನಾಟಕ ಪ್ರಜ್ಞೆಯೊಂದು ಹುಟ್ಟಿದಂತಿಲ್ಲ, ಹುಟ್ಟಿದ್ದರೂ ಅದು ಬೆಳೆದಿಲ್ಲ. ಕರ್ನಾಟಕತ್ವ ಎಂದರೆ ಕರ್ನಾಟಕದ ಮಣ್ಣಿನ ನೆಲ, ಜಲ, ಭಾಷೆ, ಸಂಸ್ಕೃತಿಯ ಸ್ವಂತಿಕೆಯನ್ನು, ಶತಶತಮಾನಗಳಿಂದ ಜನಜೀವನದ ಭಾಗವಾಗಿರುವ ಸಹಬಾಳ್ವೆಯ ಸೌಹಾರ್ದದ ಆಶಯಗಳನ್ನು ಉಳಿಸಿಕೊಂಡೇ ಇಲ್ಲಿನ ರಾಜಕೀಯವನ್ನು, ಆರ್ಥಿಕತೆಯನ್ನು ಕಟ್ಟಬೇಕೆಂಬ ಛಲ ಜನಮನದಲ್ಲಿ ಗಾಢವಾಗಿ ಬೇರೂರಿದಂತೆ ಕಾಣುವುದಿಲ್ಲ. ಇದನ್ನು ಮನಗಂಡೇ ಮರುನಾಮಕರಣದ ವೇಳೆ ‘ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ’ ಅಂತ ಚೆನ್ನವೀರ ಕಣವಿ ಅವರು ಕವನ ಕಟ್ಟಿರಬೇಕು.

ಕರ್ನಾಟಕದ ಮೇಲೆ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ದಾಳಿ ನಡೆಯುತ್ತಿದೆ. ಬಹುಕಾಲದಿಂದ ಆಗುತ್ತಿದ್ದ ಈ ವಿದ್ಯಮಾನ ಈಗ ಹೊಸ ಸ್ವರೂಪದಲ್ಲಿ ಮತ್ತು ನಿರ್ದಯ ಸ್ಥಿತಿಯಲ್ಲಿ ಕಾಣಿಸಿಕೊಳ್ಳುತ್ತಿದೆ. ಕರ್ನಾಟಕತ್ವ ರಾಜ್ಯದಲ್ಲಿ ಜಾಗೃತವಾಗಿ ಇದ್ದಿದ್ದರೆ ಈ ದಾಳಿಗಳ ವಿರುದ್ಧ ಒಂದು ವ್ಯಾಪಕ ಪ್ರತಿರೋಧ ಎಂದೋ ಕಾಣಿಸುತ್ತಿತ್ತು. ಆ ಪ್ರತಿರೋಧ ಒಂದು ರಾಜಕೀಯ ಅಥವಾ ಸಾಂಸ್ಕೃತಿಕ ಶಕ್ತಿಯಾಗಿ ರೂಪುಗೊಳ್ಳುತ್ತಿತ್ತು. ನೆರೆ ರಾಜ್ಯಗಳಲ್ಲಿ ಹೀಗೆ ಆಗಿದೆ. ಕರ್ನಾಟಕದಲ್ಲಿ ಸಂಘಟನೆಗಳ ಕಡೆಯಿಂದ ಅಲ್ಲೊಂದು ಇಲ್ಲೊಂದು ಪ್ರತಿಭಟನೆಯ ಧ್ವನಿ ಕೇಳಿಸುತ್ತಿರಬಹುದು. ಆದರೆ, ಅದು ಜನಸಮೂಹದ ಧ್ವನಿ ಆಗುತ್ತಿಲ್ಲ ಎನ್ನುವುದು ವಿಷಾದದ ವಿದ್ಯಮಾನವೂ ಹೌದು, ಅಪಾಯದ ಮುನ್ಸೂಚನೆಯೂ ಹೌದು.

ರಾಜಕೀಯವಾಗಿ ಕರ್ನಾಟಕವು ದೆಹಲಿಯಿಂದ ಆಳುವವರ ಸಾಮಂತ ರಾಜ್ಯ ಎಂಬಷ್ಟರಮಟ್ಟಿಗೆ ಅವಮಾನಿಸಿದರೂ ಅದು ಜನಮನವನ್ನು ಗಾಸಿಗೊಳಿಸುವುದಿಲ್ಲ. ಹೋದ ಚುನಾವಣೆಯ ವೇಳೆ ‘ಡಬಲ್ ಎಂಜಿನ್’ ಸರ್ಕಾರ ಎಂಬ ಪರಿಕಲ್ಪನೆಯನ್ನು ಕೇಂದ್ರದಲ್ಲಿ ಆಡಳಿತ ನಡೆಸುವ ಪಕ್ಷ ಪ್ರತಿಪಾದಿಸಿತ್ತು. ಅಂದರೆ, ನಮ್ಮ ಪಕ್ಷವನ್ನು ಕರ್ನಾಟಕದಲ್ಲೂ ನೀವು ಚುನಾಯಿಸದೇ ಹೋದರೆ ‘ಹುಷಾರ್’ ಎನ್ನುವ ಎಚ್ಚರಿಕೆ, ನಿಮ್ಮನ್ನು ಸತಾಯಿಸಲಿದ್ದೇವೆ ಎನ್ನುವ ‘ಬೆದರಿಕೆ’. ಈಗ ದೆಹಲಿ ದರ್ಬಾರ್, ಕರ್ನಾಟಕವನ್ನು ಸತಾಯಿಸುತ್ತಿದೆ ಕೂಡ.

ಕರ್ನಾಟಕದ ಮೇಲೆ ತಣ್ಣಗೆ ಆಗುತ್ತಿರುವ ಸಾಂಸ್ಕೃತಿಕ ಪ್ರಹಾರವಂತೂ ಇನ್ನೂ ಅವಮಾನಕರವಾಗಿದೆ. ‘ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು’ ಎಂಬ ಕರ್ನಾಟಕ ನೆಲದ ಅಧ್ಯಾತ್ಮವನ್ನು, ಸದಾ ‘ಇತರರನ್ನು’ ಸೃಷ್ಟಿಸಿ ಬೇಟೆಯಾಡುವ ಪ್ರವೃತ್ತಿಯ ಮತಾಂಧ ರಾಜಕೀಯ ವಶೀಕರಿಸಿಕೊಳ್ಳುತ್ತಿದೆ. ಎಲ್ಲರನ್ನೂ ‘ಇವ ನಮ್ಮವ ಇವ ನಮ್ಮವ’ ಎನ್ನುವ ಈ ನೆಲದ ಸಂಸ್ಕೃತಿಯನ್ನು ಧರ್ಮದ ಹೆಸರಲ್ಲಿ ಮಸುಕಾಗಿಸುತ್ತಿರುವ ಆಕ್ರಮಣಕ್ಕೆ ಕನ್ನಡಿಗರು ತಿಳಿದೋ ತಿಳಿಯದೆಯೋ ಸಿಲುಕುತ್ತಿದ್ದಾರೆ. ಕರ್ನಾಟಕಕ್ಕೆ ಸಿಗಬೇಕಿರುವ ತೆರಿಗೆ ಪಾಲನ್ನು ಕೂದಲು ಸೀಳುವ ವಾದ ಮಂಡಿಸುವ ಮೂಲಕ ಕಡಿತಗೊಳಿಸಿ ನಾಡಿನ ಆರ್ಥಿಕ ನರನಾಡಿಗಳನ್ನು ಅದುಮಿ ಹಿಡಿಯುವ ಆರ್ಥಿಕ ರಾಜಕೀಯವೂ ಕರ್ನಾಟಕವನ್ನು ಹೈರಾಣಾಗಿಸುತ್ತಿದೆ.

ರಾಜ್ಯ ಮರುನಾಮಕರಣವಾದಾಗ ಅಧಿಕಾರದಲ್ಲಿದ್ದ ದೇವರಾಜ ಅರಸು ನೇತೃತ್ವದ ಸರ್ಕಾರವು ದೇಶವೇ ಮೆಚ್ಚುವ ಸಾಮಾಜಿಕ ನ್ಯಾಯದ ಮಾದರಿಯೊಂದನ್ನು ಜಾರಿಗೆ ತಂದಿತು. ಜನತಾ ಪಕ್ಷದ ನೇತೃತ್ವದ ಮೊದಲ ಕಾಂಗ್ರೆಸ್ಸೇತರ ಸರ್ಕಾರವು ಆಡಳಿತ ವಿಕೇಂದ್ರೀಕರಣಕ್ಕೊಂದು ಮಾದರಿ ಹಾಕಿಕೊಟ್ಟಿತು. ಕಳೆದ ಶತಮಾನದ ಅಂತ್ಯದವರೆಗೂ ಎಲ್ಲ ಸಮಸ್ಯೆಗಳ ನಡುವೆಯೂ ಕನ್ನಡ ಮಣ್ಣಿನ ಸಹಬಾಳ್ವೆಯ, ಸಾಮರಸ್ಯದ ಬದುಕಿಗೆ ದೊಡ್ಡ ರೀತಿಯಲ್ಲಿ ತೊಡಕಾಗುವ ರಾಜಕೀಯ ರೂಪುಗೊಳ್ಳಲಿಲ್ಲ. ಆ ನಂತರದ ಕತೆಯೇ ಬೇರೆ. ದೇಶದೆಲ್ಲೆಡೆ ಹರಡುತ್ತಿರುವ ಸಂಶಯ ಮಾತ್ರದಿಂದ ಥಳಿಸಿ ಕೊಲ್ಲುವ ಗುಂಪುಹತ್ಯೆಯ ಮಾದರಿಗೆ ಕರ್ನಾಟಕ ಮೂಲವಾಯಿತು. ಹಾಗೆಯೇ, ಅನೈತಿಕ ಪೊಲೀಸ್‌ಗಿರಿ, ಆಪರೇಷನ್ ಕಮಲ, ಸಾಮಾಜಿಕ ನ್ಯಾಯವನ್ನು ಅಣಕಿಸುವ ತರಹೇವಾರಿ ನುಡಿಗಟ್ಟು ಇತ್ಯಾದಿಗಳೆಲ್ಲವೂ ಕರ್ನಾಟಕದಿಂದ ರಫ್ತಾಗುತ್ತಿರುವ ವಿವಿಧ ಸಾಮಾಜಿಕ- ರಾಜಕೀಯ ಮಾದರಿಗಳು.

ಈ ನೆಲದ ಒಳಿತನ್ನು ಹೊರಗಿನಿಂದ ತರಿಸಿದ ಕೆಡುಕು ಆಕ್ರಮಿಸಿಕೊಳ್ಳುವಾಗ ಜನಮನದಲ್ಲಿ ಹುಟ್ಟಬೇಕಿರುವ ಒಂದು ಸಾತ್ವಿಕ ಆಕ್ರೋಶ, ಈ ಮಣ್ಣು ಪ್ರತಿಪಾದಿಸುವ ಮಾನವೀಯ ಮೌಲ್ಯಗಳನ್ನು ಧಿಕ್ಕರಿಸುವ ಘಟನೆಗಳು ನಡೆದಾಗ ಸಮಾಜ ಪಟ್ಟುಕೊಳ್ಳಬೇಕಿರುವ ನಾಚಿಕೆ, ಈ ನಾಡ ನಾಡಿಯ ಭಾಗವಾಗಿರುವ ಸಾಮಾಜಿಕ ನ್ಯಾಯದ ಪರಿಕಲ್ಪನೆಯೇ ಪರಿಹಾಸ್ಯಕ್ಕೆ ಒಳಗಾಗುತ್ತಿರುವ ಬಗ್ಗೆ ಇರಬೇಕಾದ ಕನಿಷ್ಠ ಆತಂಕ ಇವ್ಯಾವುವೂ ಕಾಣಿಸಿಕೊಳ್ಳುತ್ತಿಲ್ಲ. ಕೆಟ್ಟದ್ದು ಘಟಿಸುತ್ತದೆ ಎನ್ನುವುದೇ ಸಮಸ್ಯೆಯಲ್ಲ. ಕೆಟ್ಟದ್ದನ್ನು ಒಳ್ಳೆಯದು ಎಂದು ಸ್ವೀಕರಿಸುವ ಪ್ರವೃತ್ತಿ ಹೆಚ್ಚುತ್ತಿದೆ ಎನ್ನುವುದು ಕರ್ನಾಟಕತ್ವವನ್ನು ಅಣಕಿಸುವ ಬೆಳವಣಿಗೆ.

ಈ ಕಟು ವಾಸ್ತವಗಳ ನಡುವೆ, ಕರ್ನಾಟಕ ಆರ್ಥಿಕವಾಗಿ ಬೆಳೆಯುತ್ತಿದೆ, ತಂತ್ರಜ್ಞಾನ ಆಧಾರಿತ ಉದ್ದಿಮೆಗಳಲ್ಲಿ ಜಾಗತಿಕವಾಗಿ ಗಮನ ಸೆಳೆದಿದೆ ಎಂಬಿತ್ಯಾದಿಗಳನ್ನೇ ಇಟ್ಟುಕೊಂಡು ಅಭಿಮಾನಪಡುವ ದೊಡ್ಡ ಸಂಖ್ಯೆಯ ಜನ ಇರಬಹುದು. ಆದರೆ, ಈ ಶ್ರೀಮಂತಿಕೆಯನ್ನು ಉಳಿಸಿಕೊಳ್ಳಬೇಕಾದರೆ, ಈ ಶ್ರೀಮಂತಿಕೆ ಜನಜೀವನದ ನೆಮ್ಮದಿಗೆ ಕಾರಣವಾಗಬೇಕಿದ್ದರೆ, ತನ್ನಂತೆ ಪರರ ಬಗೆವ ಕರ್ನಾಟಕದ ಮಣ್ಣಿನ ಮೂಲ ಗುಣವನ್ನು ಸಂರಕ್ಷಿಸಿಕೊಳ್ಳಬೇಕು ಎಂಬಷ್ಟಾದರೂ ಪ್ರಜ್ಞೆಯನ್ನು ಇಂದಿನ ಸಂದರ್ಭದಲ್ಲಿ ಸೃಷ್ಟಿಸಿಕೊಳ್ಳಲಾಗದೇ ಹೋದರೆ ರಾಜ್ಯೋತ್ಸವ ಬರೀ ಪ್ರದರ್ಶನವಾಗುತ್ತದೆ.

ಚುರುಮುರಿ

ದೀಪಾವಳಿ ಕವನ

• ಬಿ.ಎನ್.ಮಲ್ಲೇಶ್

‘ಯಾಕೋ ತೆಪರಾ ಸಪ್ಪಗೆ ಕೂತಿದೀಯ? ರಾಜ್ಯೋತ್ಸವ ಪ್ರಶಸ್ತಿ ಸಿಗ್ಲಿಲ್ಲ ಅಂತಾನಾ? ಬೇಜಾರ್ ಮಾಡ್ಕಾಬೇಡ, ಮುಂದಿನ ಸಲ ಸಿಗುತ್ತೆ ಬಿಡು’ ಹರಟೆಕಟ್ಟೆಯಲ್ಲಿ ಮಂಜಮ್ಮ ತೆಪರೇಸಿಯನ್ನು ಸಮಾಧಾನಿಸಿದಳು.

‘ಈ ತೆಪರ ಅರ್ಜಿ ಜತಿ ರಾಜ್ಯಪಾಲರ ಫೋಟೊ ಕಳಿಸೋ ಬದ್ಲು ಇ.ಡಿ. ಅವರಿಂದ ಒಂದು ರೆಕ್ಮಂಡೇಶನ್ ಮಾಡಿಸಿದ್ದಿದ್ರೆ ಗ್ಯಾರಂಟಿ ಪ್ರಶಸ್ತಿ ಸಿಕ್ಕಿರೋದು. ಮುಂದಿನ ಸಲ ಈ ಐಡಿಯಾ ಮಾಡೋ ತೆಪರ’ ಗುಡ್ಡೆ ನಕ್ಕ.

‘ಪುನರಪಿ ಪ್ರಯತ್ನಂ, ಪುನರಪಿ ನಿರಾಕರಣಂ’ ದುಬ್ಬೀರ ಹೊಸ ಶ್ಲೋಕ ಹೊಸೆದ.

‘ಪ್ರಶಸ್ತಿ ಮನೆ ಹಾಳಾಗ್ಲಿ, ದೀಪಾವಳಿ ಹೆಂಗೆ ನಡೆದೈತಿ ಹೇಳ್ರಪ’ ಮಂಜಮ್ಮ ಮಾತು ಬದಲಿಸಿದಳು.

‘ಮಕ್ಕಳಿಗೆ ಪಟಾಕಿ, ತನಗೆ ರೇಷ್ಮೆ ಸೀರೆ ಕೊಡ್ಸಬೇಕು ಅಂತ ನನ್ ಹೆಂಡ್ತಿ ಗಂಟು ಬಿದ್ದಿದ್ಲು, ಒಂದೆರಡು ಕವನ ಹೇಳಿ ಮೆಲ್ಲಕೆ ಬಚಾವಾದೆ’ ಎಂದ ಪರ್ಮೇಶಿ.

‘ಹೌದಾ? ಏನಪ ಅವು ಕವನ?’

‘ಪ್ರಿಯೆ, ಈ ದೀಪಾವಳಿಗೆ ಪಟಾಕಿಗಳೇಕೆ ಬೇಕು, ನಿನ್ನ ಮಾತುಗಳೇ ಸಾಕು ಅಂದೆ. ಜೋರು ಜಗಳಕ್ಕೇ ಬಿದ್ಲು’.

‘ಮತ್ತೆ ಬಿಡ್ತಾಳಾ? ಆಮೇಲೆ?’

‘ಸೀರೆಗಾಗಿ ನಿನ್ನ ಸೊರಸೊರ ಅಳು… ಅದೇ ಸುರುಸುರು ಬತ್ತಿ… ನಿನ್ನ ಸಿಟ್ಟು, ಸೆಡವು, ದುಃಖ ದುಮ್ಮಾನ, ಆಟಂಬಾಂಬಿಗೆ ಸಮಾನ’ ಅಂದೆ. ಅಡುಗೆ ಮನೇಲಿ ಪಾತ್ರೆ ಪಡಗ ಸೌಂಡ್ ಜೋರಾದ್ವು’.

‘ನಿನ್ ಮೇಲೆ ಬಾಣ ಬಿರುಸು ಬಿಡ್ಲಿಲ್ವಾ?’

‘ಇಲ್ಲ, ‘ನೀನೊಮ್ಮೆ ಕಿರು ನಕ್ಕರೂ ಸಾಕು ಅರಳುತ್ತವೆ ಅಲ್ಲಲ್ಲಿ ಹೂ ಮತಾಪು’ ಅಂದೆ. ಸ್ವಲ್ಪ ಮೆತ್ತಗಾದ್ಲು’.

‘ಪಾಕಡ ನೀನು, ಮುಂದೆ?’

‘ಪ್ರಿಯೆ, ಈ ದೀಪಾವಳಿಗೆ ದೀಪಗಳೇಕೆ ಬೇಕು? ನಿನ್ನ ಕಣ್ಣ ಬೆಳಕೇ ಸಾಕು’ ಅಂದೆ ನೋಡು, ಫುಲ್ ಬಿದ್ದೋದ್ಲು… ಸೀರೆನೂ ಇಲ್ಲ, ಪಟಾಕಿನೂ ಇಲ್ಲ!’

‘ಎಲಾ ಮಳ್ಳ, ಬೆಣ್ಣೆ ಚೆನ್ನಾಗಿ ಹಚ್ಚೀಯ’ ಎಂದಳು ಮಂಜಮ್ಮ.

ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಅಂದಗಾತಿ ‘ಜೆಲ್ಲಿ’ ನೀ ಹೊರಟಿದ್ದೆಲ್ಲಿ?

ಸಾಗರದ ಆರೋಗ್ಯ ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುವ ಜೆಲ್ಲಿ ಮೀನುಗಳ ಸಂತತಿ ವೃದ್ಧಿಗೆ ಈಗ ಸಾಗರದ ಮಾಲಿನ್ಯ ಕಂಟಕಪ್ರಾಯವಾಗಿದೆ

• ಶ್ರೀಗುರು

ಇದಕ್ಕೆ ಹೃದಯವಿಲ್ಲ. ದೇಹದಲ್ಲಿ ಎಲ್ಲೂ ಮೂಳೆಗಳಿಲ್ಲ. ಮೆದುಳೂ ಇಲ್ಲ! ಆದರೆ ಕೇಂದ್ರ ನರಮಂಡಲ ವ್ಯವಸ್ಥೆ ಇದೆ. ಅದರಿಂದಾಗಿ ಇದಕ್ಕೆ ಬುದ್ಧಿ ಇದೆ. ಇದರ ಹೆಸರು ಜೆಲ್ಲಿ ಮೀನು. ತೀರಾ ಪ್ರಾಥಮಿಕ ಹಂತದ ನರಮಂಡಲ ವ್ಯವಸ್ಥೆಯುಳ್ಳ ಈ ಮೀನುಗಳು ವಾಸನೆ, ಬೆಳಕನ್ನು ಗ್ರಹಿಸಿ ವಾತಾವರಣಕ್ಕೆ ಪ್ರತಿಕ್ರಿಯಿಸುತ್ತವೆ.

ವಿಶ್ವದ ಎಲ್ಲ ಭಾಗದ ಸಾಗರಗಳ ನೀರಿನಲ್ಲಿ ಕಂಡುಬರುವ ಇವು ವಿವಿಧ ಬಣ್ಣ, ಗಾತ್ರ, ಆಕಾರಗಳಲ್ಲಿ ಕಾಣಸಿಗುತ್ತವೆ. ಇವು ಸಾಗರ ಮಾಲಿನ್ಯ ತಡೆಯುತ್ತವೆ ಎನ್ನುವ ಕಾರಣಕ್ಕೆ ಇವುಗಳ ಪ್ರಾಮುಖ್ಯ ಅರಿಯಲು ದಿನವೊಂದು ನಿಗದಿಯಾಗಿದೆ. ಭೂಮಿಯ ಮೇಲೆ ವಾಸವಿದ್ದ ದೈತ್ಯಪ್ರಾಣಿ ಡೈನೊಸಾರ್‌ಗಿಂತ ಮುಂಚಿನಿಂದ ಜೆಲ್ಲಿ ಮೀನುಗಳಿವೆ. ಪ್ರತಿವರ್ಷ ನವೆಂಬರ್ ಮೂರನೇ ತಾರೀಖಿನಂದು ‘ವಿಶ್ವ ಜೆಲ್ಲಿ ಮೀನು’ ದಿನಾಚರಣೆ ನಡೆಯುತ್ತದೆ.

ಜಗತ್ತಿನ ಮೀನುಗಳಲ್ಲೇ ಇದು ಅತ್ಯಂತ ವಿಶಿಷ್ಟ ಎನಿಸಿದ್ದು, ಎಲ್ಲ ಜೀವಿಗಳಿಗೂ ಬಾಯಿಯು ತಲೆಯ ಭಾಗದಲ್ಲಿದ್ದರೆ ಇದಕ್ಕೆ ದೇಹದ ಮಧ್ಯ ಭಾಗದಲ್ಲಿದೆ. ತಿಂದದ್ದನ್ನು ವೇಗವಾಗಿ ಜೀರ್ಣಿಸಿಕೊಳ್ಳುವ ಶಕ್ತಿ ಇರುವ ಜೆಲ್ಲಿ ಮೀನುಗಳ ಬಾಯಿ ಮತ್ತು ಗುದದ್ವಾರ ಎರಡೂ ಒಂದೇ ಆಗಿದೆ! ಥಟ್ಟನೆ ನೋಡಿದರೆ ದೀಪಾವಳಿ ಹಬ್ಬದಂದು ಉರಿಸುವ ಭೂಚಕ್ರದಂತೆ ವರ್ಣಮಯವಾಗಿ ಕಾಣಿಸುವ ಈ ಮೀನಿಗೆ ಛತ್ರಿ ಆಕಾರದ ತಲೆ ಇದೆ. ಭೂಮಿಯ ದಕ್ಷಿಣ ಗೋಳಾರ್ಧದಲ್ಲಿ ಚಳಿಗಾಲ ಪ್ರಾರಂಭವಾದೊಡನೆ ಈ ಮೀನುಗಳ ವಲಸೆ ಕಾರ್ಯ ಶುರುವಾಗುತ್ತದೆ. ಬೆಚ್ಚಗಿನ ಉತ್ತರ ಗೋಳಾರ್ಧದ ಕಡೆ ಪ್ರಯಾಣಿಸುವ ಇವು ಕರಾವಳಿ ತೀರದಲ್ಲಿ ಹೆಚ್ಚಾಗಿ ಇರುತ್ತವೆ. ಈ ವಿದ್ಯಮಾನದ ನೆನಪಿಗೆ ಮತ್ತು ಜೆಲ್ಲಿ ಮೀನುಗಳ ಪ್ರಾಮುಖ್ಯವನ್ನು ಜಗತ್ತಿಗೆ ತಿಳಿಸಿದ ಅರ್ನೆಸ್ಟ್ ಹಾಕಲ್ ಜನ್ಮದಿನವನ್ನು ಹತ್ತು ವರ್ಷಗಳಿಂದ ‘ವಿಶ್ವ ಜೆಲ್ಲಿ ಮೀನು’ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ.

ಸಾಗರದಲ್ಲಿನ ಬಯೊಮಾಸ್, ಪ್ಲಾಂಕ್ಟನ್ ಜೀವಿ ಪರಿಸರ (ಸೂಕ್ಷ್ಮವಾದ ಪ್ರಾಣಿ ಮತ್ತು ಸಸ್ಯಜೀವಿಗಳ ಸಮುದಾಯ), ವಲಸೆ, ಸಾಗರಜೀವಿ ಸಮುದಾಯಗಳ ಸಂರಕ್ಷಣೆಯ ಮೇಲೆ ಮಹತ್ವದ ಪರಿಣಾಮ ಬೀರುವ ಜೆಲ್ಲಿ ಮೀನುಗಳು ಆಹಾರ ಸರಪಳಿಯ ಬಹುಮುಖ್ಯ ಘಟಕಗಳಾಗಿವೆ. ಜನರ ಸ್ವಾದಿಷ್ಟ ಆಹಾರವಾಗಿ ಬಳಕೆಗೊಳ್ಳುವ ಇವು ಪ್ರೋಟೀನ್, ಕೊಲಾಜೆನ್, ಸೆಲೆನಿಯಂ, ಕೋಲೈನ್‌ಗಳ ಆಗರವಾಗಿದ್ದು, ಸರಿಯಾದ ಕ್ರಮದಲ್ಲಿ ಸೇವಿಸಿದಾಗ ಮನುಷ್ಯನ ಆರೋಗ್ಯವನ್ನು ವೃದ್ಧಿಸುತ್ತವೆ ಎಂಬ ಮಾಹಿತಿ ಇದೆ. ಮೀನಿನ ದೇಹದ ಜೆಲೆಟಿನ್ ಸಂಯುಕ್ತವನ್ನು ಆಹಾರಗಳ ಬಂಧಕವನ್ನಾಗಿ ಬಳಸುವುದು ರೂಢಿಯಲ್ಲಿದೆ. ಹಸಿರು ಬಣ್ಣದ ಪ್ರೋಟೀನ್ ಅನ್ನು ಸ್ರವಿಸುತ್ತಾ ಬೆಳಕು ಬೀರುವುದರಿಂದ ವೈದ್ಯಕೀಯ ವಿಜ್ಞಾನದ ಸಂಶೋಧನೆಯಲ್ಲಿ ಬಳಸಲಾಗುತ್ತದೆ.

ಜೆಲ್ಲಿ ಮೀನುಗಳು ಸಾಮಾನ್ಯವಾಗಿ ಸಮುದ್ರಕಳೆ, ದಾಳಿಕೋರ ಸಂತತಿ, ಸಾಗರ ಕಿರಿಕಿರಿ ಎಂದೆಲ್ಲ ಕರೆಸಿಕೊಳ್ಳುತ್ತವೆ. ಮೀನು, ಸೀಗಡಿ, ಏಡಿ ಮತ್ತು ಕಿರುಸಸ್ಯಗಳನ್ನು ಭಕ್ಷಿಸುವ ಜೆಲ್ಲಿ ಮೀನುಗಳನ್ನು ದಕ್ಷಿಣ ಏಷ್ಯಾದ ದೇಶಗಳಲ್ಲಿ ಮತ್ತು ವಿಶೇಷವಾಗಿ ಚೀನಾ ದೇಶದ ಖಾದ್ಯಗಳಲ್ಲಿ ಯಥೇಚ್ಛವಾಗಿ ಬಳಸುತ್ತಾರೆ.

ನೋಡಲು ತುಂಬಾ ವಿಶಿಷ್ಟವಾಗಿ, ಅಂದವಾಗಿ ಕಾಣುವ, ತಿಂದಾಗ ಸ್ವಾದಿಷ್ಟವೆನಿಸುವ ಜೆಲ್ಲಿ ಮೀನುಗಳ ಕುರಿತು ಜನಸಾಮಾನ್ಯರಿಗೆ ತಿಳಿವಳಿಕೆ ಕಡಿಮೆ. ನೀರಿನಲ್ಲಿರುವಾಗ ಇವು ಕಚ್ಚಿದರೆ ಮನುಷ್ಯನಿಗೆ ದೊಡ್ಡಮಟ್ಟದ ನೋವು ಉಂಟಾಗುತ್ತದೆ ಮತ್ತು ಕೆಲವು ಸಂದರ್ಭಗಳಲ್ಲಿ ಪ್ರಾಣಹಾನಿಯೂ ಆದದ್ದು ಇದೆ. ಸಮುದ್ರಪಕ್ಷಿಗಳು, ಕಡಲ ಆಮೆ ಮತ್ತು ಇತರ ಮೀನುಗಳ ಆಹಾರವಾಗಿರುವ ಜೆಲ್ಲಿ ಮೀನುಗಳು ಸಾಗರದ ಆರೋಗ್ಯ ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ನೀರಿನಲ್ಲಿರುವ ತ್ಯಾಜ್ಯವನ್ನು ಹೀರಿ ತೆಗೆಯುವ ಜೆಲ್ಲಿ ಮೀನುಗಳು ಇತರ ಸಾಗರಜೀವಿಗಳ ಸಂಖ್ಯೆಯನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವಾಯುಗುಣ ಬದಲಾವಣೆ, ಅನಿಯಂತ್ರಿತ ಮೀನುಗಾರಿಕೆ ಮತ್ತು ಸಾಗರ ಮಾಲಿನ್ಯವು ಜೆಲ್ಲಿ ಮೀನುಗಳ ಸಂತತಿ ವೃದ್ಧಿಗೆ ಕಂಟಕಪ್ರಾಯ ಎನಿಸಿವೆ. ತಮ್ಮ ದೇಹದಿಂದ ಹೊಮ್ಮುವ ಬೆಳಕಿನಿಂದ ಶತ್ರುಗಳನ್ನು ಎದುರಿಸಿ ಬದುಕುವ ಕಲೆ ಜೆಲ್ಲಿ ಮೀನುಗಳಿಗೆ ಸಿದ್ಧಿಸಿದೆ.

ಕೆಲವು ದಿನಗಳಿಂದ ಹಿಡಿದು ಗರಿಷ್ಠ ಎರಡು ವರ್ಷಗಳವರೆಗಿನ ಜೀವಿತಾವಧಿ ಇರುವ ಜೆಲ್ಲಿ ಮೀನುಗಳ ದೇಹದಲ್ಲಿ ಶೇಕಡ 95ರಷ್ಟು ನೀರೇ ಇದೆ. ಮೈಯೆಲ್ಲಾ ಕಣ್ಣಾಗಿರುವ, ಅಂದರೆ 24 ಕಣ್ಣುಗಳಿರುವ ‘ಬಾಕ್ಸ್ ಜೆಲ್ಲಿ ಮೀನು’ಗಳನ್ನು ತಜ್ಞರು ಪತ್ತೆ ಮಾಡಿದ್ದಾರೆ. ಕೆಲವು ಜೆಲ್ಲಿ ಮೀನುಗಳು ತಮಗೆ ವಯಸ್ಸಾಗುವುದನ್ನು ತಡೆಯುವ ಗುಣ ಪಡೆದಿವೆ ಎನ್ನುವ ತಜ್ಞರು, ಇದನ್ನು ಮನುಷ್ಯನಿಗೆ ವಯಸ್ಸಾಗುವುದನ್ನು ನಿಯಂತ್ರಿಸಲು ಬಳಸಬಹುದೇ ಎಂದು ಪರೀಕ್ಷಿಸುತ್ತಿದ್ದಾರೆ.

ಗಂಟೆಗೆ ಎಂಟು ಕಿಲೊಮೀಟರ್ ದೂರ ಈಜುವ ಜೆಲ್ಲಿ ಮೀನುಗಳಲ್ಲಿ ಕೆಲವು ಬಣ್ಣವಿರದಂತೆ ಕಂಡುಬಂದರೆ (ಪಾರದರ್ಶಕ) ಇನ್ನೂ ಹಲವು ಗಾಢ ಗುಲಾಬಿ, ನೀಲಿ, ಹಳದಿ ಮತ್ತು ನೇರಳೆ ಬಣ್ಣಗಳಿಂದ ಕಂಗೊಳಿಸುತ್ತವೆ. ಹತ್ತು ಸಾವಿರಕ್ಕೂ ಹೆಚ್ಚು ಪ್ರಭೇದಗಳನ್ನು ಹೊಂದಿರುವ ಜೆಲ್ಲಿ ಮೀನುಗಳು ಸಮುದ್ರ ನೀರಿನ ಉಷ್ಣಾಂಶ ಹೆಚ್ಚಿದಾಗ ತಮ್ಮ ಸಂಖ್ಯೆಯನ್ನು ದ್ವಿಗುಣಗೊಳಿಸಿಕೊಳ್ಳುತ್ತವೆ. ಉಷ್ಣ ಸ್ಥಾವರಗಳ ಬಿಸಿಯನ್ನು ಕಡಿಮೆ ಮಾಡಲು ಕೊಳವೆಗಳಲ್ಲಿ ಹಾಯಿಸುವ ಸಮುದ್ರದ ನೀರಿನಲ್ಲಿ ಸೇರಿಕೊಂಡು ನೀರಿನ ಸರಾಗ ಹರಿವಿಗೆ ಬಹಳ ದೊಡ್ಡ ತೊಂದರೆ ಉಂಟು ಮಾಡುತ್ತವೆ.

ವಾಚಕರ ವಾಣಿ

ಮನೆಯಲ್ಲಿ ಇರಲಿ ಕನ್ನಡದ ವಾತಾವರಣ

ಇಂದು (ನ. 1) ಹಿರಿಕಿರಿ ಪುಢಾರಿಗಳೆಲ್ಲ ಗರಿಗರಿ ಬಟ್ಟೆ ಧರಿಸಿ, ಬಾವುಟ ಹಿಡಿದು ಮೆರವಣಿಗೆ ಮಾಡಿ, ಧ್ವಜಾರೋಹಣ ನಡೆಸಿ ಅಲ್ಲಿಗೆ ರಾಜ್ಯೋತ್ಸವವನ್ನು ಮುಗಿಸಿಬಿಡುತ್ತಾರೆ. ರಾಜ್ಯೋತ್ಸವ ಎನ್ನುವುದು ಒಂದು ವಾರ್ಷಿಕ ಜಾತ್ರೆಯಂತೆ ಆಗಿರುವುದು ವಿಪರ್ಯಾಸ. ನವೆಂಬರ್ ಮುಗಿದ ಬಳಿಕ ಕನ್ನಡ ನಾಡು, ನುಡಿಯ ಬಗ್ಗೆ ನಾವ್ಯಾರೂ ತಲೆಕೆಡಿಸಿಕೊಳ್ಳಲು ಹೋಗದಿರುವುದು ದುರದೃಷ್ಟಕರ. ಕನ್ನಡ ನಾಡು- ನುಡಿ ಕುರಿತ ಎಚ್ಚರ ಒಂದು ತಿಂಗಳಿಗೆ ಮಾತ್ರ ಸೀಮಿತವಾಗದಿರಲಿ. ಕನ್ನಡ ಕುರಿತ ಕಾಳಜಿ, ಕಳವಳ ನಿರಂತರವಾಗಿ ನಮ್ಮೆದೆಯೊಳಗಿದ್ದರೆ ನಮ್ಮ ನಾಡು- ನುಡಿಗೆ ದೈನೇಸಿ ಸ್ಥಿತಿ ಒದಗುವ ಸಾಧ್ಯತೆ ಇರುವುದಿಲ್ಲ.

‘ಕನ್ನಡವ ಕಾಪಾಡು ಕನ್ನಡದ ಕಂದಾ, ಕನ್ನಡವ ಕಾಪಾಡು ನನ್ನ ಆನಂದ’ ಎನ್ನುವ ಕವಿವಾಣಿ ನಮ್ಮಲ್ಲಿ ಸದಾ ಜಾಗೃತವಾಗಿರುವಂತೆ ನೋಡಿಕೊಳ್ಳಬೇಕು. ಮನೆಯಲ್ಲಿ ಕನ್ನಡದ ವಾತಾವರಣವನ್ನು ಉಳಿಸಿಕೊಳ್ಳಬೇಕು. ಮಕ್ಕಳು ಯಾವ ಅಳುಕು, ಕೀಳರಿಮೆಯೂ ಇಲ್ಲದೆ ಕನ್ನಡವನ್ನು ಸಹಜವಾಗಿ ಬಳಸುವ ಮನೋಭಾವವನ್ನು ರೂಢಿಸಿಕೊಳ್ಳಲು ಮನೆಯಲ್ಲಿ ಪೂರಕವಾದ ವಾತಾವರಣ ಇರುವಂತೆ ನೋಡಿಕೊಳ್ಳಬೇಕು.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

ಅತಿರೇಕದ ವರ್ತನೆ ತರವೇ?

ಕೊಲೆ ಆರೋಪದ ಮೇಲೆ ಜೈಲುಪಾಲಾಗಿದ್ದ ನಟ ದರ್ಶನ್ ಬುಧವಾರ ನಿರ್ದಿಷ್ಟ ಕಾಲಾವಧಿಯ ಜಾಮೀನಿನ ಮೇಲೆ ಹೊರಬಂದಿದ್ದಾರೆ. ಇದನ್ನೇ ದೃಶ್ಯ ಮಾಧ್ಯಮಗಳು ಕ್ಷಣಕ್ಷಣಕ್ಕೂ ಆತ ಎಲ್ಲಿದ್ದರು, ಯಾವ ರಸ್ತೆಯಲ್ಲಿ ಬರುತ್ತಿದ್ದರು, ಯಾವ ಮನೆಗೆ ಹೋಗುತ್ತಾರೆ, ಯಾವ ಆಸ್ಪತ್ರೆ ಸೇರುತ್ತಾರೆ ಎಂದೆಲ್ಲ ಬಹುತೇಕ ನೇರಪ್ರಸಾರವನ್ನೇ ಮಾಡಿದವು. ಇದನ್ನು ಒಂದು ಸುದ್ದಿಯಾಗಿ ಪ್ರಸಾರ ಮಾಡಿದರೆ ಸಾಕಲ್ಲವೇ? ಈ ಪರಿಯಲ್ಲಿ ಅನಗತ್ಯ ವೈಭವೀಕರಣ ಬೇಕೇ? ಇದನ್ನು ನೋಡಿದ ಅಭಿಮಾನಿಗಳು ಆತ ಬರುವ ಸ್ಥಳದಲ್ಲಿ ಕಿಕ್ಕಿರಿದರೆ ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗುವುದಿಲ್ಲವೇ?

ಅವರೇನೂ ದೇಶಭಕ್ತರಾಗಿ ಬ್ರಿಟಿಷರಿಂದ ಬಂಧಿತರಾಗಿದ್ದು ಹೊರಬಂದವರಲ್ಲ. ನಟನೆ ಅವರ ವೃತ್ತಿ. ಚಿತ್ರ ಚೆನ್ನಾಗಿದ್ದರೆ ನೋಡಬೇಕು, ಒಳ್ಳೆಯ ವಿಚಾರ ಇದ್ದಲ್ಲಿ ಅಳವಡಿಸಿಕೊಳ್ಳಬೇಕು. ಅದು ಬಿಟ್ಟು ಜಾಮೀನಿನ ಮೇಲೆ ಹೊರ ಬಂದವರ ಪರವಾಗಿ ಪಟಾಕಿ ಹೊಡೆದು ಸಂಭ್ರಮಿಸುವುದು ಅತಿರೇಕದ ವರ್ತನೆಯೇ ಹೌದು. ರಾಜ್ಯೋತ್ಸವದ ಮಾಸ ಇದಾಗಿರುವುದರಿಂದ, ಕನ್ನಡದ ಪರವಾಗಿ ಕೆಲಸ ಮಾಡಿದ, ನಾಡನ್ನು ಕಟ್ಟಿದ, ನಾಡಿನ ಜನರಿಗಾಗಿ ಪ್ರಾಣತ್ಯಾಗ ಮಾಡಿದವರ ಸಾಧನೆಗಳನ್ನು ತೋರಿಸಿದರೆ ಇಂದಿನ ಯುವಕರಿಗೆ ಸ್ಫೂರ್ತಿ ಆದೀತು. ಅದು ಬಿಟ್ಟು ಬರೀ ಟಿಆರ್‌ಪಿಗಾಗಿ ಇಂತಹವನ್ನು ತೋರಿಸಿದರೆ ಸಮಾಜಕ್ಕೆ ಕಿಂಚಿತ್ತೂ ಉಪಯೋಗವಿಲ್ಲ. ಇಂತಹ ಸೂಕ್ಷ್ಮ ಸಂಗತಿಗಳನ್ನು ದೃಶ್ಯ ಮಾಧ್ಯಮಗಳು ಅರಿಯಬೇಕು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬೆಳೆನಷ್ಟ: ರೈತರ ಆತಂಕ ಮಾತ್ರವಲ್ಲ

ಬಾಗಲಕೋಟೆ, ಗದಗ, ಧಾರವಾಡ ಜಿಲ್ಲೆಗಳಲ್ಲಿ ಸಾವಿರಾರು ಹೆಕ್ಟೇರ್‌ನಲ್ಲಿ ಬೆಳೆದಿದ್ದ ಈರುಳ್ಳಿ ಫಸಲು ಮಳೆಯಿಂದ ನಾಶವಾಗಿರುವ ಕುರಿತ ವರದಿ (ಪ್ರ.ವಾ., ಅ. 30) ಓದಿ ಮನಸ್ಸಿಗೆ ಬಹಳ ನೋವಾಯಿತು. ರೈತ ತಾನು ಬೆಳೆದ ಉತ್ಪನ್ನವನ್ನು ಮಾರಿದಾಗ ಉತ್ತಮವಾದ ದರ ಸಿಕ್ಕಿದರೆ ಖುಷಿಯಾಗುತ್ತಾನೆ. ಇಲ್ಲದಿದ್ದರೆ ಸಂಕಷ್ಟಕ್ಕೆ ಈಡಾಗುತ್ತಾನೆ. ನಿರಂತರವಾಗಿ ಬೆಳೆ ನಷ್ಟವಾದರೆ ಸಾಲದಿಂದ ಆತ ಹೈರಾಣಾಗುತ್ತಾನೆ. ಇದು ರೈತರಷ್ಟೇ ಆತಂಕಪಡುವ ವಿಚಾರವಲ್ಲ. ಆಹಾರ ಸೇವಿಸುವವರೆಲ್ಲರೂ ಈ ಬಗ್ಗೆ ಯೋಚಿಸಬೇಕಾಗಿದೆ. ರೈತರ ಬವಣೆ ತಪ್ಪಿಸಲು ಮುಂದಡಿ ಇಡಬೇಕಾಗಿದೆ.

ಕುಂದೂರು ಮಂಜಪ್ಪ, ಹೊಳೆ ಸಿರಿಗೆರೆ, ಹರಿಹರ

ಧನಕನಕದ ಹೊರೆ ಮತ್ತು ಪ್ರಶಸ್ತಿಯ ನಿಜಮೌಲ್ಯ

ರಾಜ್ಯೋತ್ಸವ ಪ್ರಶಸ್ತಿಗಳು ಪ್ರಕಟವಾಗಿವೆ. ಹಲವಾರು ಅನಾಮಧೇಯ ಹಿರಿಯ ಜೀವಿಗಳನ್ನು ಗುರುತಿಸಿ ಗೌರವಿಸುತ್ತಿರುವುದು ಸಮಾಧಾನಕರ. ಸಾಮಾಜಿಕ ನ್ಯಾಯ, ಪ್ರಾದೇಶಿಕ ಪ್ರಾತಿನಿಧ್ಯ, ರಾಜಕೀಯ, ಒತ್ತಡಗಳು, ಆಕಾಂಕ್ಷಿಗಳ ದಂಡು… ಈ ಎಲ್ಲವುಗಳ ಮಧ್ಯೆ ಆಯ್ಕೆಯ ಕಸರತ್ತು ಸಾಹಸವೇ ಸರಿ. ಈ ಹಿಂದೆ ಆಯ್ಕೆಯಾದಾಗ ‘ನನಗೆ ಪ್ರಶಸ್ತಿ ಬೇಡ, ಹೆಚ್ಚು ಯೋಗ್ಯ ಇರುವ ಇತರರಿಗೆ ಕೊಡಿ’ ಎಂದವರು, ತಾತ್ವಿಕ, ನೈತಿಕ ಕಾರಣಗಳಿಗಾಗಿ ರಾಜ್ಯೋತ್ಸವ ಪ್ರಶಸ್ತಿ ಬೇಡ ಎಂದವರ ಉದಾಹರಣೆಗಳೂ ಇವೆ. ಅಂತಹ ನಿರಾಕರಣೆಗಳು ಈಗ ಅಪರೂಪ. ಈಗ ಏನಿದ್ದರೂ ಅರ್ಜಿ ಸಲ್ಲಿಸದವರಿಗಿಂತ, ಪ್ರಶಸ್ತಿ ಬಾಚಿಕೊಳ್ಳಲು ಅರ್ಜಿ ಸಲ್ಲಿಸಿ ಪ್ರತ್ಯಕ್ಷ ಪರೋಕ್ಷ ಒತ್ತಡಗಳನ್ನು ಹೇರುವವರೇ ಹೆಚ್ಚು. ಐದು ಲಕ್ಷ ರೂಪಾಯಿ ಪ್ರಶಸ್ತಿ ಮೊತ್ತ ಮತ್ತು ಇಪ್ಪತ್ತೈದು ಗ್ರಾಂ ಚಿನ್ನದ ಪದಕವು ಪ್ರಶಸ್ತಿಯ ಹಣಕಾಸಿನ ಮೌಲ್ಯವನ್ನೇನೋ ಹೆಚ್ಚಿಸಬಹುದು. ಕೆಲವು ಪ್ರಶಸ್ತಿ ಪುರಸ್ಕೃತರಿಗೆ ಅಂತಹ ಅಗತ್ಯವೂ ಇರಬಹುದು. ಪ್ರಶಸ್ತಿ ಪುರಸ್ಕೃತರ ಸೇವೆ, ಅರ್ಹತೆಯನ್ನು ಸರ್ಕಾರ ಗುರುತಿಸಿ ಗೌರವಿಸುವುದು ಪ್ರಶಸ್ತಿಯ ಧನಕನಕದ ಮೌಲ್ಯಕ್ಕಿಂತ ಹೆಚ್ಚಿನದು. ಧನಕನಕ ಒಳಗೊಂಡ ಪ್ರಶಸ್ತಿ ಪ್ರದಾನ, ಅದರ ಎಳೆತ, ಸೆಳೆತ ಕೆಲವೊಮ್ಮೆ ಪ್ರಶಸ್ತಿಯ ಅರ್ಹತೆಯನ್ನೇ ಮರೆಮಾಚುತ್ತವೆ. ಪ್ರಶಸ್ತಿಗಳು ಕೆಲವರಿಗೆ ಭಾರವೆನಿಸುತ್ತವೆ. ಅಂತೆಯೇ ನೊಬೆಲ್ ಪ್ರಶಸ್ತಿ ತಿರಸ್ಕರಿಸಿದವರೂ ಉಂಟು. ಪ್ರಶಸ್ತಿಯ ಧನಕನಕದ ಭಾರ ಕಡಿಮೆಯಾದಷ್ಟೂ ಪ್ರಶಸ್ತಿಯ ನಿಜಮೌಲ್ಯ ಹೆಚ್ಚುತ್ತದೆ.

ರಾಜ್ಯೋತ್ಸವ ಪ್ರಶಸ್ತಿಯೊಂದಿಗೆ ನೂರು ಜನರಿಗೆ ಸುವರ್ಣ ಮಹೋತ್ಸವ ಪ್ರಶಸ್ತಿಗಳನ್ನು ಘೋಷಿಸಿ ಗೌರವಿಸುತ್ತಿರುವುದು ಸರಿ. ಆದರೆ ಸದರಿ ಪ್ರಶಸ್ತಿ ಪುರಸ್ಕೃತರಿಗೆ ಫಲಕದೊಂದಿಗೆ ₹ 50 ಸಾವಿರ ನಗದು ನೀಡುತ್ತಿರುವುದು ತಾರತಮ್ಯವೆನಿಸಿದರೂ, ಧನಕನಕದ ಹೆಚ್ಚಿನ ಭಾರವಿಲ್ಲದ ಸುವರ್ಣ ಮಹೋತ್ಸವದ ವಿಶೇಷ ಪ್ರಶಸ್ತಿಯು ರಾಜ್ಯೋತ್ಸವ ಪ್ರಶಸ್ತಿಯಷ್ಟೇ ಗೌರವಾರ್ಹವಾದುದು.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಷೇರುಪೇಟೆ ವಹಿವಾಟು

553



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,340
ಇಂದಿನ ಅಂತ್ಯ	24,205
▼	135
ದಿನದ ಕನಿಷ್ಠ	24,172

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹307-521

ದ್ವಿತಳಿ (ಬಿ.ವಿ) ₹311-605

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹177

ಆರ್‌ಎಸ್‌ಎಸ್-5 ₹172

ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹168

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹18000
ಎಸಿ	₹11390
ಆರ್‌ಪಿ	₹19000
ಆರ್‌ಸಿ	₹10140

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1315 (1310)
ಸೂರ್ಯಕಾಂತಿ (ರಿಫೈನ್ಡ್)	₹1335 (1330)
ಪಾಮೋಲಿನ್	₹1315 (1310)

ವಿನಿಮಯ ದರ

$	ಡಾಲರ್	84.07
£	ಪೌಂಡ್	109.14
€	ಯುರೊ	91.37
¥	ಯೆನ್ (100ಕ್ಕೆ)	55

ಪಂಜಾಬ್, ಹರಿಯಾಣದಲ್ಲಿ 245 ಲಕ್ಷ ಟನ್ ಸಂಗ್ರಹ ಗುರಿ

ಭತ್ತ ಖರೀದಿ ಸುಗಮ

ನವದೆಹಲಿ (ಪಿಟಿಐ): ಹರಿಯಾಣ ಮತ್ತು ಪಂಜಾಬ್‌ನಲ್ಲಿ ಭತ್ತ ಖರೀದಿ ಪ್ರಕ್ರಿಯೆಯು ಸುಗಮವಾಗಿ ನಡೆಯುತ್ತಿದ್ದು, ಬುಧವಾರದವರೆಗೆ 112 ಲಕ್ಷ ಟನ್ ಖರೀದಿಸಲಾಗಿದೆ ಎಂದು ಕೇಂದ್ರ ಆಹಾರ ಸಚಿವಾಲಯ ತಿಳಿಸಿದೆ.

ಅತಿಹೆಚ್ಚು ಭತ್ತ ಬೆಳೆಯುವ ಹರಿಯಾಣದ ಕೈತಾಲ್ ಮತ್ತು ಕುರುಕ್ಷೇತ್ರ ಜಿಲ್ಲೆಯಲ್ಲಿ ಕಳೆದ ವರ್ಷದಲ್ಲಿ ಖರೀದಿಸಿದಷ್ಟೇ ಭತ್ತವನ್ನು ಖರೀದಿಸಲಾಗುವುದು ಎಂದು ತಿಳಿಸಿದೆ.

ಇಲ್ಲಿಯವರೆಗೆ ಪಂಜಾಬ್‌ನ 3.5 ಲಕ್ಷ ರೈತರಿಗೆ ₹13,211 ಕೋಟಿ ಹಾಗೂ ಹರಿಯಾಣದ 2.75 ಲಕ್ಷ ರೈತರಿಗೆ ₹10,529 ಕೋಟಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದೆ.

2024–25ನೇ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್–ಸೆಪ್ಟೆಂಬರ್) ಕನಿಷ್ಠ ಬೆಂಬಲ ಬೆಲೆಯಲ್ಲಿ ಭತ್ತ ಮಾರಾಟಕ್ಕೆ ಪಂಜಾಬ್‌ನಲ್ಲಿ 10 ಲಕ್ಷ ಹಾಗೂ ಹರಿಯಾಣದಲ್ಲಿ 4.06 ಲಕ್ಷ ರೈತರು ಹೆಸರು ನೋಂದಾಯಿಸಿದ್ದಾರೆ ಎಂದು ವಿವರಿಸಿದೆ.

ಈ ಎರಡೂ ರಾಜ್ಯಗಳಲ್ಲಿ ಕ್ರಮವಾಗಿ 185 ಲಕ್ಷ ಟನ್ ಹಾಗೂ 60 ಲಕ್ಷ ಟನ್ ಭತ್ತ ಖರೀದಿಸಲು ನಿರ್ಧರಿಸಲಾಗಿದೆ. ಹರಿಯಾಣದಲ್ಲಿ ನವೆಂಬರ್ 15ಕ್ಕೆ ಖರೀದಿ ಪ್ರಕ್ರಿಯೆ ಪೂರ್ಣಗೊಂಡರೆ, ಪಂಜಾಬ್‌ನಲ್ಲಿ ನವೆಂಬರ್ 30ಕ್ಕೆ ಮುಕ್ತಾಯವಾಗಲಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಪಂಜಾಬ್‌ನಲ್ಲಿ ಶೇ 20.3ರಷ್ಟು (67 ಲಕ್ಷ ಟನ್) ಹಾಗೂ ಹರಿಯಾಣದಲ್ಲಿ ಶೇ 13.46ರಷ್ಟು (45 ಲಕ್ಷ ಟನ್) ಖರೀದಿ ಪ್ರಮಾಣ ಕಡಿಮೆಯಾಗಿದೆ. ಪ್ರತಿದಿನ ಈ ರಾಜ್ಯಗಳಿಂದ ಕ್ರಮವಾಗಿ 4 ಲಕ್ಷ ಟನ್ ಹಾಗೂ 1.5 ಲಕ್ಷ ಟನ್‌ನಷ್ಟು ಭತ್ತವನ್ನು ಮಂಡಿಗಳಿಂದ ಹೊರಗೆ ಸಾಗಿಸಲಾಗುತ್ತಿದೆ.

ಎಂಎಸ್‌ಪಿ ಎಷ್ಟು?

ಕೇಂದ್ರ ಸರ್ಕಾರವು 2024–25ನೇ ಮಾರುಕಟ್ಟೆ ವರ್ಷಕ್ಕೆ 'ಎ' ಗ್ರೇಡ್ ಭತ್ತಕ್ಕೆ ಪ್ರತಿ ಕ್ವಿಂಟಲ್‌ಗೆ ₹2,320 ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸಿದೆ. ಸಾಮಾನ್ಯ ಭತ್ತಕ್ಕೆ ಪ್ರತಿ ಕ್ವಿಂಟಲ್‌ಗೆ ₹2,300 ದರ ನಿಗದಿಪಡಿಸಿದೆ. ಖರೀದಿ ಮಾಡಿದ 48 ಗಂಟೆಯೊಳಗೆ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಜಮೆ ಮಾಡಲಾಗುತ್ತದೆ ಎಂದು ಸರ್ಕಾರ ತಿಳಿಸಿದೆ.

ತೇವಾಂಶ ಹೆಚ್ಚಳ

ಸೆಪ್ಟೆಂಬರ್‌ನಲ್ಲಿ ಸುರಿದ ಮಳೆಯಿಂದಾಗಿ ವಾತಾವರಣದಲ್ಲಿ ತೇವಾಂಶ ಹೆಚ್ಚಳವಾಗಿತ್ತು. ಇದರಿಂದ ಭತ್ತದಲ್ಲಿಯೂ ತೇವಾಂಶ ಪ್ರಮಾಣ ಹೆಚ್ಚಿತ್ತು. ಹಾಗಾಗಿ, ಕಟಾವು ಮತ್ತು ಖರೀದಿಗೆ ವಿಳಂಬವಾಗಿತ್ತು. ಅಕ್ಟೋಬರ್ 1ರಿಂದ ಸರ್ಕಾರವು ರೈತರಿಂದ ಭತ್ತ ಖರೀದಿ ಆರಂಭಿಸಿದೆ.

ಆ್ಯಪ್ ಸೇವೆ

ಅಕ್ಕಿ ಗಿರಣಿದಾರರ ಕುಂದುಕೊರತೆ ಆಲಿಸಲು ಭಾರತೀಯ ಆಹಾರ ನಿಗಮವು (ಎಫ್‌ಸಿಐ) ಆ್ಯಪ್ ಆಧಾರಿತ ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ರೂಪಿಸಿದೆ. ನಿಗದಿತ ಕಾಲಮಿತಿಯೊಳಗೆ ಪಾರದರ್ಶಕವಾಗಿ ಸಮಸ್ಯೆ ಆಲಿಸಲು ಇದು ಸಹಕಾರಿಯಾಗಿದೆ ಎಂದು ಎಫ್‌ಸಿಐ ತಿಳಿಸಿದೆ.

ಜಿಎಸ್‌ಟಿ ಬಾಕಿ: ಎಲ್‌ಐಸಿಗೆ ನೋಟಿಸ್

ನವದೆಹಲಿ (ಪಿಟಿಐ): 2017–18ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ₹65 ಕೋಟಿ ಬಾಕಿ ತೆರಿಗೆ ಪಾವತಿಸುವಂತೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಲಾಖೆಯಿಂದ ನೋಟಿಸ್ ಸ್ವೀಕರಿಸಲಾಗಿದೆ ಎಂದು ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ತಿಳಿಸಿದೆ.

ಈ ಬಾಕಿ ಮೊತ್ತದಲ್ಲಿ ದಂಡ ಹಾಗೂ ಬಡ್ಡಿ ಮೊತ್ತ ₹6.5 ಕೋಟಿಯೂ ಸೇರಿದೆ. ಜಾರ್ಖಂಡ್‌ನ ಜಿಎಸ್‌ಟಿ ವಿಭಾಗವು ನೋಟಿಸ್ ನೀಡಿದೆ. ಇದು ನಿಗಮದ ಹಣಕಾಸು ವಹಿವಾಟು ಹಾಗೂ ಇತರೆ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಎಲ್‌ಐಸಿ ತಿಳಿಸಿದೆ.

ಬಿಪಿಎಲ್ ಸಂಸ್ಥಾಪಕ ಟಿಪಿಜಿ ನಂಬಿಯಾರ್ ಇನ್ನಿಲ್ಲ

ಬೆಂಗಳೂರು (ಪಿಟಿಐ): ದೇಶದ ಪ್ರಮುಖ ಎಲೆಕ್ಟ್ರಾನಿಕ್ ಕಂಪನಿಯಾದ ಬಿಪಿಎಲ್ ಸಂಸ್ಥಾಪಕ ಹಾಗೂ ಅಧ್ಯಕ್ಷ ಟಿ.ಪಿ. ಗೋಪಾಲನ್ ನಂಬಿಯಾರ್ (94) ಅವರು, ನಗರದ ಸ್ವಗೃಹದಲ್ಲಿ ಗುರುವಾರ ನಿಧನರಾದರು.

'ಟಿಪಿಜಿ' ಎಂದೇ ಪ್ರಸಿದ್ಧರಾಗಿದ್ದ ಅವರು, ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಅವರಿಗೆ ಪತ್ನಿ ತಂಕಮ್, ಪುತ್ರ ಅಜಿತ್, ಪುತ್ರಿ ಅಂಜು ಇದ್ದಾರೆ. ಬಿಜೆಪಿ ಮುಖಂಡ ರಾಜೀವ್ ಚಂದ್ರಶೇಖರ್‌ಗೆ, 'ಟಿಪಿಜಿ' ಅವರು ಮಾವ ಆಗಿದ್ದಾರೆ.

ಕೇರಳದ ಪಾಲಕ್ಕಾಡ್‌ನಲ್ಲಿ ಜನಿಸಿದ ಅವರು, ರಕ್ಷಣಾ ದಳಕ್ಕೆ ಉಪಕರಣ ಪೂರೈಕೆ ಮಾಡಲು ಬ್ರಿಟಿಷ್ ಫಿಸಿಕಲ್ ಲ್ಯಾಬೊರೇಟರೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅನ್ನು (ಬಿಪಿಎಲ್) 1963ರಲ್ಲಿ ಸ್ಥಾಪಿಸಿದರು. 70 ಮತ್ತು 80ರ ದಶಕದಲ್ಲಿ ಈ ಉತ್ಪನ್ನಗಳ ತಯಾರಿಕೆಯನ್ನು ಬ್ರಿಟನ್ ಮತ್ತು ಅಮೆರಿಕಕ್ಕೂ ವಿಸ್ತರಿಸಿದರು. ಗುಣಮಟ್ಟದ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ತಯಾರಿಕೆಯಿಂದಾಗಿ ಕಂಪನಿಯ ಹೆಸರು ಮನೆ ಮಾತಾಯಿತು.

ವಲೆನ್ಸಿಯಾದಲ್ಲಿ ಪ್ರವಾಹದಿಂದಾಗಿ ರೈಲು ಹಳಿಗಳ ಮೇಲೆ ಸಿಲುಕಿಕೊಂಡಿರುವ ಕಾರುಗಳು – ಎಎಫ್‌ಪಿ ಚಿತ್ರ

ಸ್ಪೇನ್‌ನಲ್ಲಿ ಭಾರಿ ಪ್ರವಾಹ ಮೃತರ ಸಂಖ್ಯೆ 158ಕ್ಕೆ ಏರಿಕೆ

ವಲೆನ್ಸಿಯಾ, ಬರಿಯೋ ಡಿ ಲಾ ಟೊರ್ರೆ (ಎಎಫ್‌ಪಿ, ಎಪಿ): ಭಾರಿ ಮಳೆಯಿಂದಾಗಿ ಸ್ಪೇನ್‌ನಲ್ಲಿ ಭೀಕರ ಪ್ರವಾಹ ಸಂಭವಿಸಿದ್ದು, ಸಾವಿಗೀಡಾದವರ ಸಂಖ್ಯೆ 158ಕ್ಕೇರಿದೆ.

ನಾಪತ್ತೆಯಾದವರ ಶೋಧಕ್ಕಾಗಿ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆಯಿದೆ. ಸ್ಪೇನ್‌ನಲ್ಲಿ ಈ ಶತಮಾನದಲ್ಲಿ ಸಂಭವಿಸಿದ ಭೀಕರ ದುರಂತ ಇದಾಗಿದೆ.

ನೂರಾರು ಕಾರುಗಳು ಮಣ್ಣಿನಡಿ ಸಿಲುಕಿದ್ದು, ಅದರೊಳಗೆ ಸಿಲುಕಿರುವ ಮೃತದೇಹಗಳನ್ನು ಹೊರತೆಗೆಯಲಾಗುತ್ತಿದೆ.

ನೂರಾರು ವಾಹನಗಳು ನೀರಿನಲ್ಲಿ ಕೊಚ್ಚಿಹೋಗಿದ್ದು, ಮರಗಳು ಬೇರುಸಹಿತ ಬುಡಮೇಲಾಗಿವೆ. ವಲೆನ್ಸಿಯಾದಲ್ಲಿ ಭಾರಿ ಹಾನಿಯಾಗಿದೆ. ರಸ್ತೆಗಳು ಹಾನಿಗೊಂಡಿದ್ದು, ಹಲವು ಪ್ರದೇಶಗಳು ಜಲಾವೃತಗೊಂಡಿವೆ.

ಸಂಕ್ಷಿಪ್ತ ಸುದ್ದಿ

ಎಸ್‌ಬಿಐ ಕ್ರೆಡಿಟ್ ಕಾರ್ಡ್ ಶುಲ್ಕ ಪರಿಷ್ಕರಣೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) ತನ್ನ ಕ್ರೆಡಿಟ್ ಕಾರ್ಡ್ ಶುಲ್ಕವನ್ನು ಪರಿಷ್ಕರಿಸಿದ್ದು, ಶುಕ್ರವಾರದಿಂದ ಈ ಹೊಸ ಶುಲ್ಕವು ಜಾರಿಗೆ ಬರಲಿದೆ.

ಹಣಕಾಸಿನ ಭದ್ರತೆ ಇಲ್ಲದ (ಅನ್ ಸೆಕ್ಯೂರ್ಡ್) ಕಾರ್ಡ್‌ಗಳ ಮೇಲಿನ ಮಾಸಿಕ ಫೈನಾನ್ಸ್ ಶುಲ್ಕವನ್ನು (ಬಡ್ಡಿದರ) ಶೇ 3.75ಕ್ಕೆ ಹೆಚ್ಚಿಸಲಾಗಿದೆ. ಇದು ಶೌರ್ಯ ಹಾಗೂ ಡಿಫೆನ್ಸ್ ಕಾರ್ಡ್‌ಗೆ ಅನ್ವಯಿಸುವುದಿಲ್ಲ ಎಂದು ಎಸ್‌ಬಿಐ ಕಾರ್ಡ್ ವೆಬ್‌ಸೈಟ್ ತಿಳಿಸಿದೆ.

ಡಿಸೆಂಬರ್ 1ರಿಂದ ಜಾರಿ: ಅಧಿಕ ಮೊತ್ತದ ಯುಟಿಲಿಟಿ ಬಿಲ್ ಪಾವತಿಸಿದರೆ ಅದರ ಮೇಲೆ ಶೇ 1ರಷ್ಟು ಹೆಚ್ಚುವರಿ ಶುಲ್ಕ (ಸರ್‌ಚಾರ್ಜ್) ವಿಧಿಸಲಾಗುತ್ತದೆ. ಪಾವತಿ ಮೊತ್ತವು ₹50 ಸಾವಿರ ಮೀರಿದರೆ ಸರ್‌ಚಾರ್ಜ್ ಹಾಕಲಾಗುತ್ತದೆ. ವಿದ್ಯುತ್, ಅಡುಗೆ ಅನಿಲ ಸಿಲಿಂಡರ್ ಮತ್ತು ನೀರಿನ ಬಿಲ್ ಇತ್ಯಾದಿ ಯುಟಿಲಿಟಿ ಪಾವತಿಗಳಿಗೆ ಈ ಶುಲ್ಕ ಅನ್ವಯವಾಗಲಿದೆ.

ಈ ಹೊಸ ಶುಲ್ಕವು ಡಿಸೆಂಬರ್ 1ರಿಂದ ಜಾರಿಗೆ ಬರಲಿದೆ.

ಬೆಳ್ಳಿ ದರ ಕೆ.ಜಿಗೆ ₹1,500 ಇಳಿಕೆ

ನವದೆಹಲಿ (ಪಿಟಿಐ): ಸತತ ಐದು ದಿನದ ವಹಿವಾಟಿನಲ್ಲಿ ಗಳಿಕೆ ಕಂಡಿದ್ದ ಬೆಳ್ಳಿ ಧಾರಣೆಯು, ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಇಳಿಕೆಯಾಗಿದೆ.

ಬೆಳ್ಳಿ ದರ ಕೆ.ಜಿಗೆ ₹1,500 ಕಡಿಮೆಯಾಗಿ, ₹99,500ರಂತೆ ಮಾರಾಟವಾಗಿದೆ. ಚಿನ್ನದ ದರವು ಸ್ಥಿರವಾಗಿದ್ದು, 10 ಗ್ರಾಂಗೆ ₹82,400 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಶುಕ್ರವಾರ ಅಮೆರಿಕದ ಕಾರ್ಮಿಕ ಇಲಾಖೆಯಿಂದ ಉದ್ಯೋಗ ಕುರಿತ ಮಾಸಿಕ ವರದಿ ಮತ್ತು ಐಎಸ್‌ಎಂ ಮ್ಯಾನುಫ್ಯಾಕ್ಚರಿಂಗ್ ಸೂಚ್ಯಂಕದ ವರದಿ ಬಿಡುಗಡೆಯಾಗಲಿದೆ. ಇದು ಅಲ್ಲಿನ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ಹಣಕಾಸು ನೀತಿ ಸಮಿತಿ ಸಭೆಯ ನಿರ್ಣಯದ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ, ಹಳದಿ ಲೋಹದ ಖರೀದಿ ಸ್ಥಿರವಾಗಿದೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕರಡಿ ಕುಣಿತ ಅಬಾಧಿತ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಗುರುವಾರವೂ ಷೇರುಪೇಟೆಯಲ್ಲಿ ಕರಡಿ ಕುಣಿತ ಜೋರಾಯಿತು. ಇದರಿಂದ ಸೂಚ್ಯಂಕಗಳು ಕುಸಿತ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 553 ಅಂಶ ಇಳಿಕೆ ಕಂಡು, 79,389 ಅಂಶಗಳಲ್ಲಿ ಅಂತ್ಯಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 135 ಅಂಶ ಇಳಿಕೆ ಕಂಡು 24,205 ಅಂಶಗಳಲ್ಲಿ ಸ್ಥಿರಗೊಂಡಿತು.

'ಹವಾಮಾನ ಬದಲಾವಣೆ: ಜಿಡಿಪಿ ಪ್ರಗತಿಗೆ ಪೆಟ್ಟು'

ನವದೆಹಲಿ (ಪಿಟಿಐ): ಹವಾಮಾನ ಬದಲಾವಣೆಯಿಂದಾಗಿ 2070ರ ವೇಳೆಗೆ ಏಷ್ಯಾ ಮತ್ತು ಪೆಸಿಫಿಕ್ ಪ್ರದೇಶವು ತನ್ನ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 16.9ರಷ್ಟು ನಷ್ಟ ಕಾಣಲಿದೆ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ತಿಳಿಸಿದೆ.

ಇದೇ ವೇಳೆಗೆ ಭಾರತ ಕೂಡ ತನ್ನ ಜಿಡಿಪಿಯ ಶೇ 24.8ರಷ್ಟು ನಷ್ಟ ಅನುಭವಿಸಲಿದೆ ಎಂದು ಗುರುವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ಸಮುದ್ರ ಮಟ್ಟದಲ್ಲಿನ ಏರಿಕೆ ಮತ್ತು ಕಾರ್ಮಿಕ ವಲಯದ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುತ್ತಿದೆ. ಇದೇ ನಷ್ಟ ಹೆಚ್ಚಳಕ್ಕೆ ಕಾರಣ ಎಂದು ಹೇಳಿದೆ.

ಈ ಹವಾಮಾನ ಬಿಕ್ಕಟ್ಟು ಮುಂದುವರಿದರೆ ಏಷ್ಯಾ–ಪೆಸಿಫಿಕ್ ವ್ಯಾಪ್ತಿಯ ಕರಾವಳಿ ಪ್ರದೇಶದಲ್ಲಿನ ಸುಮಾರು 30 ಕೋಟಿ ಜನರು ಪ್ರವಾಹದಿಂದ ಅಪಾಯಕ್ಕೆ ಸಿಲುಕಲಿದ್ದಾರೆ ಎಂದು ಹೇಳಿದೆ.

ನ.5ರಂದು ಅಮೆರಿಕ ಅಧ್ಯಕ್ಷೀಯ ಚುನಾವಣೆ: ವಾಕ್ಸಮರ ಜೋರು

ಕಮಲಾ, ಟ್ರಂಪ್ ಸಮಬಲದ ಹಣಾಹಣಿ

ವಾಷಿಂಗ್ಟನ್/ ಫಿಲಿಡೆಲ್ಫಿಯಾ (ಪಿಟಿಐ): ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಇನ್ನು ಐದು ದಿನಗಳು ಬಾಕಿ ಇದ್ದು, ದೇಶದಾದ್ಯಂತ ಚುನಾವಣೆ ಕಾವು ಪಡೆದಿದೆ.

ಡೆಮಾಕ್ರಟಿಕ್ ಪಕ್ಷದ ಕಮಲಾ ಹ್ಯಾರಿಸ್ ಮತ್ತು ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ವಿಸ್ಕಾನ್ಸಿನ್‌ನಲ್ಲಿ ಇಬ್ಬರೂ ತುರುಸಿನ ಪೈಪೋಟಿಯ ರ‍್ಯಾಲಿಗಳನ್ನು ನಡೆಸಿದರು.ಇಬ್ಬರ ನಡುವೆ ವಾಕ್ಸಮರವೂ ಜೋರಾಗಿದೆ.

ಚುನಾವಣೆ ನವೆಂಬರ್ 5ರಂದು ನಡೆಯಲಿದೆ. ಬುಧವಾರದ ವೇಳೆಗೆ ಸುಮಾರು 6 ಕೋಟಿ ಮತದಾರರು ಇ-ಮೇಲ್ ಮೂಲಕ ಅಥವಾ ನೇರ ಮತದಾನದ ಮೂಲಕ ಮತ ಚಲಾವಣೆ ಮಾಡಿದ್ದಾರೆ. ಏಕಕಾಲದಲ್ಲಿ ಚುನಾವಣಾ ಪ್ರಚಾರ ಮತ್ತು ಮತದಾನ ಪ್ರಕ್ರಿಯೆ ನಡೆಯುವುದು ಅಮೆರಿಕ ಪ್ರಜಾಪ್ರಭುತ್ವದ ವೈಶಿಷ್ಟ್ಯವೆನಿಸಿದೆ.

ಶ್ವೇತಭವನದ ಗದ್ದುಗೆ ಏರಲು ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಮತ್ತು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಡುವೆ ಸಮಬಲದ ಹಣಾಹಣಿ ಏರ್ಪಟ್ಟಿರುವುದನ್ನು ಇತ್ತೀಚಿನ ಸಮೀಕ್ಷೆಗಳು ತೆರೆದಿಟ್ಟಿವೆ.

ಸಿಎನ್‌ಎನ್ ನಡೆಸಿರುವ ಇತ್ತೀಚಿನ ಸಮೀಕ್ಷೆಗಳು, ಹ್ಯಾರಿಸ್ ಅವರಿಗೆ ಮಿಷಿಗನ್ ಮತ್ತು ವಿಸ್ಕಾನ್ಸಿನ್‌ನಲ್ಲಿ ಪರಿಸ್ಥಿತಿ ಕೊಂಚ ಅನುಕೂಲಕರವಾಗಿದೆ. ಆದರೆ, ಪೆನ್ಸಿಲ್ವೇನಿಯಾದಲ್ಲಿ ಇಬ್ಬರೂ ಸಮಬಲ ಸಾಧಿಸಿದ್ದಾರೆ ಎಂದು ಹೇಳಿವೆ.

ಮಿಷಿಗನ್‌ನಲ್ಲಿ ಹ್ಯಾರಿಸ್ (ಶೇ 48) ಅವರು ಟ್ರಂಪ್ (ಶೇ 43) ಅವರಿಗಿಂತ ಹೆಚ್ಚು ಮತದಾರರ ಬೆಂಬಲ ಹೊಂದಿದ್ದಾರೆ. ಅಲ್ಲದೆ, ವಿಸ್ಕಾನ್ಸಿನ್‌ನಲ್ಲಿ ಹ್ಯಾರಿಸ್ ಅವರಿಗೆ ಶೇ 51ರಷ್ಟು ಮತ್ತು ಟ್ರಂಪ್ ಅವರಿಗೆ ಶೇ 45 ರಷ್ಟು ಮತದಾರರ ಬೆಂಬಲವಿದೆ. ಪೆನ್ಸಿಲ್ವೇನಿಯಾದಲ್ಲಿ ಇಬ್ಬರಿಗೂ ಶೇ 48 ರಷ್ಟು ಮತದಾರರ ಬೆಂಬಲ ವ್ಯಕ್ತವಾಗಿದೆ ಎಂದು ಇತ್ತೀಚಿನ ಮಾಹಿತಿಗಳು ಹೇಳಿವೆ.

'ಫಾಕ್ಸ್' ಸಮೀಕ್ಷೆ ಪ್ರಕಾರ, ಟ್ರಂಪ್ ಅವರು ಪೆನ್ಸಿಲ್ವೇನಿಯಾ ಮತ್ತು ನಾರ್ತ್ ಕರೋಲಿನಾದಲ್ಲಿ ಕಮಲಾ ಅವರಿಗಿಂತ ಕೇವಲ ಶೇ 1ರಷ್ಟು ಮತಗಳಿಂದ ಮುನ್ನಡೆಯಲ್ಲಿದ್ದಾರೆ. ಮಿಷಿಗನ್‌ನಲ್ಲಿ ಇಬ್ಬರೂ ಸಮಬಲ ಸಾಧಿಸಿದ್ದಾರೆ.

ಕಮಲಾ ಅವರು ಮಿಷಿಗನ್, ವಿಸ್ಕಾನ್ಸಿನ್ ಮತ್ತು ನೆವಡಾದಲ್ಲಿ ಮುಂದಿದ್ದಾರೆ ಎಂದು 'ವಾಷಿಂಗ್ಟನ್ ಪೋಸ್ಟ್' ಬುಧವಾರ ಹೇಳಿದೆ. ಇದೇ ವೇಳೆ, ಪೆನ್ಸಿಲ್ವೇನಿಯಾದಲ್ಲಿ ಅವರ ಮುನ್ನಡೆ ಕಳೆದ ವಾರದಿಂದ ಕುಸಿತ ಕಂಡಿದೆ. ಅರಿಜೋನಾ, ಜಾರ್ಜಿಯಾ ಮತ್ತು ನಾರ್ತ್ ಕರೋಲಿನಾದಲ್ಲಿ ಟ್ರಂಪ್ ಮುನ್ನಡೆ ಕಾಯ್ದುಕೊಂಡಿದ್ದಾರೆ ಎಂದು ಅದು ತಿಳಿಸಿದೆ.

ಶ್ವೇತಭವನದ ಗದ್ದುಗೆ ಹಿಡಿಯಲು ವಿಜಯಿ ಅಭ್ಯರ್ಥಿಯು 538 ಎಲೆಕ್ಟೋರಲ್ ಮತಗಳಲ್ಲಿ 270 ಎಲೆಕ್ಟೋರಲ್ ಮತಗಳನ್ನು ಪಡೆಯಬೇಕು. ಚುನಾವಣಾ ಫಲಿತಾಂಶಗಳನ್ನು ನಿರ್ಧರಿಸಲು ಜಾರ್ಜಿಯಾ, ಮಿಷಿಗನ್, ಅರಿಝೋನಾ, ಪೆನ್ಸಿಲ್ವೇನಿಯಾ, ನಾರ್ತ್ ಕೆರೊಲಿನಾ, ವಿಸ್ಕಾನ್ಸಿನ್ ಮತ್ತು ನೆವಾಡಾ ಈ ಏಳು ರಾಜ್ಯಗಳು ನಿರ್ಣಾಯಕ ಎನಿಸಿವೆ.

ಕಸ ಸಾಗಣೆ ಟ್ರಕ್ ಏರಿದ ಡೊನಾಲ್ಡ್ ಟ್ರಂಪ್

ವಿಸ್ಕಾನ್ಸಿನ್ ಗ್ರೀನ್‌ಬೇ ಪ್ರದೇಶದ ಚುನಾವಣಾ ರ‍್ಯಾಲಿಗೆ ಕಸ ಸಂಗ್ರಹಕಾರರ ಉಡುಪು ಧರಿಸಿ ಬಂದ ಡೊನಾಲ್ಡ್ ಟ್ರಂಪ್ ಅವರು 'ಕಮಲಾ ಹ್ಯಾರಿಸ್ ಅಧ್ಯಕ್ಷರಾಗಲು ಯೋಗ್ಯರಲ್ಲ' ಎಂದು ಹರಿಹಾಯ್ದರು.

ಟ್ರಂಪ್ ಬೆಂಬಲಿಗರನ್ನು ಕಸಕ್ಕೆ ಹೋಲಿಸಿ ಅಧ್ಯಕ್ಷ ಜೋ ಬೈಡನ್ ನೀಡಿರುವ ಹೇಳಿಕೆಗೆ ಪ್ರತಿಯಾಗಿ ಟ್ರಂಪ್ ಅವರು ಹ್ಯಾರಿಸ್ ವಿರುದ್ಧ ತೀಕ್ಷ್ಣವಾಗ್ದಾಳಿ ನಡೆಸಿದರು.

ಚುನಾವಣಾ ರ‍್ಯಾಲಿಗೂ ಮುನ್ನ ಮಾತನಾಡಿದ ಅವರು, 'ಅಮೆರಿಕದ ಜನತೆಯನ್ನು ನೀವು ಪ್ರೀತಿಸದಿದ್ದರೆ ದೇಶವನ್ನು ಮುನ್ನಡೆಸಲು ಸಾಧ್ಯವಿಲ್ಲ. ಇದು ಸತ್ಯ, ಅಮೆರಿಕದ ಪ್ರಜೆಗಳನ್ನು ದ್ವೇಷಿಸಿದರೆ ನೀವು ಅಧ್ಯಕ್ಷರಾಗಲೂ ಸಾಧ್ಯವಿಲ್ಲ' ಎಂದರು.

'ಅಧ್ಯಕ್ಷೀಯ ಚುನಾವಣೆಯಲ್ಲಿ ನೀವು ಈಗಾಗಲೇ ಜನರಿಂದ ತಿರಸ್ಕೃತಗೊಂಡಿದ್ದೀರಿ' ಎಂದು ಕಮಲಾ ಅವರ ವಿರುದ್ಧ ಟ್ರಂಪ್ ಗುಡುಗಿದರು.

ಕಸ ಸಂಗ್ರಹಿಸುವ ಲಾರಿಯಲ್ಲಿ ಡೊನಾಲ್ಡ್ ಟ್ರಂಪ್! ಎಪಿ/ಪಿಟಿಐ ಚಿತ್ರ

ಫ್ಯಾಕ್ಟ್ ಚೆಕ್

ಪಿವಿ

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ರಷ್ಯಾದ ಕಜಾನ್‌ನಲ್ಲಿ ಇತ್ತೀಚೆಗೆ ನಡೆದ ಬ್ರಿಕ್ಸ್ ರಾಷ್ಟ್ರಗಳ 16ನೇ ಶೃಂಗಸಭೆಯಲ್ಲಿ ಸದಸ್ಯ ರಾಷ್ಟ್ರಗಳ ಮುಖ್ಯಸ್ಥರು ಒಟ್ಟಾಗಿರುವ ಫೋಟೊದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಾಣಿಸುತ್ತಿಲ್ಲ. 2012ರಲ್ಲಿ ನಡೆದಿದ್ದ ಶೃಂಗಸಭೆಯ ಅಧಿಕೃತ ಗ್ರೂಪ್ ಫೋಟೊದಲ್ಲಿ ಅಂದಿನ ಪ್ರಧಾನಿ ಮನಮೋಹನ್‌ಸಿಂಗ್ ಅವರು ಕಾಣಿಸಿಕೊಂಡಿದ್ದರು ಎಂದು ಪ್ರತಿಪಾದಿಸುವ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪ್ರಧಾನಿ ಮೋದಿ ಅವರ ಅನುಪಸ್ಥಿತಿಯನ್ನು ಟೀಕಿಸಿ ಕೇರಳ ಕಾಂಗ್ರೆಸ್ ಸೇರಿದಂತೆ ಸಾಮಾಜಿಕ ಬಳಕೆದಾರರು ತಮ್ಮ 'ಎಕ್ಸ್' ಮತ್ತು ಫೇಸ್‌ಬುಕ್ ಖಾತೆಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆದರೆ ಇದು ಸುಳ್ಳು.

ಪ್ರಧಾನಿ ಮೋದಿ ಅವರು ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲು ರಷ್ಯಾಕ್ಕೆ ತೆರಳಿದ್ದರು. ಅ.22 ಮತ್ತು 23ರಂದು ಅವರು ಅಲ್ಲಿದ್ದು ಶೃಂಗಸಭೆಯಲ್ಲಿ ಭಾಗವಹಿಸಿದ್ದಲ್ಲದೇ, ಚೀನಾದ ಅಧ್ಯಕ್ಷ ಷಿ ಜಿಂಗ್‌ಪಿಂಗ್, ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಸೇರಿದಂತೆ ವಿವಿಧ ರಾಷ್ಟ್ರಗಳ ಮುಖಂಡರೊಂದಿಗೆ ಮಾತುಕತೆ ನಡೆಸಿದ್ದರು. ಅ.23ರಂದು ತೆಗೆಯಲಾಗಿದ್ದ ಎಲ್ಲ ರಾಷ್ಟ್ರಗಳ ಮುಖಂಡರ ಗ್ರೂಪ್ ಫೋಟೊದಲ್ಲಿ ಮೋದಿ ಅವರೂ ಇದ್ದರು. ಜಾಲತಾಣಗಳಲ್ಲಿ ಹರಿದಾಡುತ್ತಿರುವ 46 ಸೆಕೆಂಡುಗಳ ವಿಡಿಯೊದಲ್ಲಿರುವ ಫೋಟೊ ಶೃಂಗಸಭೆಯ ಕೊನೆಯ ದಿನ ತೆಗೆಯಲಾಗಿದ್ದು, ಅಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಪಾಲ್ಗೊಂಡಿದ್ದರು. ವಿಡಿಯೊದಲ್ಲಿದ್ದ ಎಎನ್‌ಐ ಲಾಂಛನವನ್ನು ಆಧಾರವಾಗಿಟ್ಟುಕೊಂಡು ಅಂತರಜಾಲದಲ್ಲಿ ಹುಡುಕಾಡಿದಾಗ ಎಎನ್‌ಐ ಸುದ್ದಿ ಸಂಸ್ಥೆ ಈ ಬಗ್ಗೆ ವರದಿ ಮಾಡಿರುವ ಮೂಲ ವಿಡಿಯೊ ಸಿಕ್ಕಿತು. ವಿಡಿಯೊಕ್ಕೆ ನೀಡಲಾದ ಅಡಿಬರಹದಲ್ಲಿ ಎಸ್.ಜೈಶಂಕರ್ ಅವರು ಭಾಗವಹಿಸಿದ್ದರ ಬಗ್ಗೆ ನಮೂದಿಸಲಾಗಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ರಾಶಿ ಮೇಲೆ ಭವಿಷ್ಯ ಇಲ್ಲ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

57

ನಾವು ನಮ್ಮ ರಾಶಿಯ ಮೇಲೆ ನಮ್ಮ ಭವಿಷ್ಯ ನಿರ್ಮಾಣ ಆಗತ್ತೈತಿ ಅಂತ ತಿಳಕೊಂಡೇವಿ. ರಾಶಿ ಮೇಲೆ ನಮ್ಮ ಭವಿಷ್ಯ ನಿರ್ಮಾಣ ಆಗಲ್ಲ, ನಾವು ಮಾಡುವ ಕಾರ್ಯಗಳ ಮೇಲೆ ನಮ್ಮ ಭವಿಷ್ಯ ನಿಂತೈತಿ. ಒಳ್ಳೆಯ ಕೆಲಸ ಮಾಡಿದ್ದರೆ ಒಳ್ಳೆಯ ಫಲ ಸಿಗತೈತಿ. ಕೆಟ್ಟ ಕೆಲಸ ಮಾಡಿದರೆ ಕೆಟ್ಟ ಫಲ ಸಿಗತೈತಿ. ರಾಶಿ ಮೇಲೆ ಭವಿಷ್ಯ ನಿರ್ಮಾಣ ಆಗೋದಾದರೆ ರಾಮನ ರಾಶಿಯೂ ಒಂದೇ ಆಗಿತ್ತು. ರಾವಣನ ರಾಶಿಯೂ ಅದೇ ಆಗಿತ್ತು. ಆದರೆ ರಾಮ ಹಿತನಾದ ರಾವಣ ಹತನಾದ. ವಿಶ್ವೇಶ್ವರಯ್ಯ ಮತ್ತು ವೀರಪ್ಪನ್ ಇಬ್ಬರ ರಾಶಿಯೂ ಒಂದೇ ಆಗಿತ್ತು. ವಿಶ್ವೇಶ್ವರಯ್ಯ ದಿವಾನ ಆದರು. ವೀರಪ್ಪನ್ ದಿವಾನಾ ಆದ. ವಿಶ್ವೇಶ್ವರಯ್ಯ ಚೇರ್‌ಮನ್ ಆದರು. ವೀರಪ್ಪನ್ ಚೋರ್ ಮನ್ ಆದ.

ಕೆಲವರು ಒಳ್ಳೆಯ ಕೆಲಸ ಯಾಕೆ ಮಾಡಬೇಕು? ನಾವು ನಮ್ಮ ಮನೆಯಲ್ಲಿ ಉಂಡು ತಿಂದ್ಕೊಂಡು ಅರಾಂ ಇದೀವಿ. ಬೇರೆಯವರ ಉಸಾಬರಿ ನಮಗ್ಯಾಕೆ ಅಂತಾರ. ಒಮ್ಮೆ ಯೋಚನೆ ಮಾಡಿ. ಈ ದೇಹಕ್ಕೆ ಶಕ್ತಿ ಬಂದಿದ್ದು ಎಲ್ಲಿಂದ? ಅನ್ನದಿಂದ ಶಕ್ತಿ ಬಂದೈತಿ. ಗಾಳಿ, ಬೆಳಕು ಶಕ್ತಿ ಕೊಟ್ಟೈತಿ. ನಾವು ದಿನನಿತ್ಯ ಚೈತನ್ಯದಿಂದ ಬದುಕಲು ಶಕ್ತಿ ಬಂದಿದ್ದು ಭೂಮಿ ಬೆಳೆದು ಕೊಟ್ಟ ಅನ್ನದಿಂದ. ಸೂರ್ಯನ ಬೆಳಕಿನಿಂದ. ಗಾಳಿಯಿಂದ ಮತ್ತು ನದಿಯ ನೀರಿನಿಂದ. ಈ ನಿಸರ್ಗ ಅನ್ನ, ಗಾಳಿ, ಬೆಳಕು, ನೀರು ಎಲ್ಲವನ್ನೂ ಕೊಟ್ಟೈತಿ. ನಾವು ನಿಸರ್ಗಕ್ಕೆ ಏನು ಕೊಟ್ಟೇವಿ? ಭೂಮಿ ತಾಯಿ ಬೆಳೆದುಕೊಟ್ಟ ಹಣ್ಣನ್ನು ಮಾರಾಟ ಮಾಡಿ ನಾವು ಬದುಕತೀವಿ. ಆದರೆ ಹಣ್ಣುಕೊಟ್ಟ ಭೂಮಿತಾಯಿ ಏನಾದರೂ ತಗೋತಾಳೇನು? ಪುಕ್ಕಟೆಯಾಗಿ ಕೊಡತಾಳ ಅವಳು. ಅವಳಿಗೆ ನಾವು ಏನು ಕೊಟ್ಟೇವಿ? ಮನುಷ್ಯ ಯಾಕೆ ಒಳ್ಳೆಯ ಕೆಲಸ ಮಾಡಬೇಕು ಅಂದರ ನಾವೆಲ್ಲ ನೆಲೆಸಿರೋದು ಬಾಡಿಗೆ ಮನೆಯಲ್ಲಿ. ದೇವರ ಮನೆ ಇದು. ಜೀವಿಗಳೆಲ್ಲ ಬಾಡಿಗೆದಾರರು. ಒಳ್ಳೆಯ ಕೆಲಸ ಮಾಡೋದು ಅಂದರ ಬಾಡಿಗೆ ಕಟ್ಟೋದು ಅಷ್ಟೆ. ಸಂಪತ್ತು ಇದ್ದರೆ ಸಂಪತ್ತು ಹಂಚು.

ಬಂಗಾರದ ಬಳೆ, ವಾಚು ಕಟ್ಟಿಕೊಂಡ ಕೈಗಳಿಗಿಂತ ಹಸಿದ ಹೊಟ್ಟೆಗೆ ತುತ್ತು ಅನ್ನ ನೀಡುವ ಕೈಗಳು ಬಹಳ ಶ್ರೇಷ್ಠ. ದುಡ್ಡಿದ್ದವರಷ್ಟೇ ದೊಡ್ಡವರಲ್ಲ. ದುಡ್ಡಿತ್ತು ದಾನ ಮಾಡು. ಶಕ್ತಿ ಇತ್ತು ಸೇವಾ ಮಾಡು. ದೇವರ ಗುಡಿಗೆ ಬಂಗಾರದ ಕಳಶ ನಿರ್ಮಿಸಿಕೊಟ್ಟವನಿಗಿಂತ ದೇವರ ಗುಡಿ ಮುಂದಿನ ಕಸ ಹೊಡೆದವನ ಭಕ್ತಿ ಬಹಳ ದೊಡ್ಡದು.

ಒಬ್ಬ ದಾರಿಯಲ್ಲಿ ಹೋಗುತ್ತಿದ್ದ. ಹತ್ತಿರದಲ್ಲೇ ಮಾವಿನ ಮರವೊಂದು ಆತನ ಕಣ್ಣಿಗೆ ಬಿತ್ತು. ಹೋಗಿ ಮಾವಿನ ಹಣ್ಣು ಹರಿದ. ಆ ಮರದ ಮಾಲೀಕ ಬಂದು ಈತನ ಬೆನ್ನಿಗೆ ಬಾರಿಸಿದ. ಹಣ್ಣನ್ನು ನೋಡಿದ್ದು ಕಣ್ಣು, ಮಾವಿನ ಮರದ ಹತ್ತಿರಕ್ಕೆ ಹೋಗಿದ್ದು ಕಾಲು. ಹಣ್ಣು ಹರಿದಿದ್ದು ಕೈಗಳು. ಏಟು ತಿಂದಿದ್ದು ಬೆನ್ನು. ಆದರೆ, ನೋವಾಗಿ ನೀರು ಬಂದಿದ್ದು ಕಣ್ಣಾಗ. ನೋಡಿದ ಕಣ್ಣಿಗೇ ಶಿಕ್ಷೆ ಆತು. ಅಂದರ ಇಲ್ಲಿ ನಾವು ಮಾಡಿದ ಕೆಲಸಕ್ಕೆ ಇಲ್ಲಿಯೇ ಫಲವೂ ಸಿಗುತ್ತೈತಿ. ಕೆಟ್ಟ ಕೆಲಸ ಮಾಡಿದರೆ ಕೆಟ್ಟ ಫಲ. ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯ ಫಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ನವೆಂಬರ್ 1, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿಜ ಕೃಷ್ಣ ಅಮಾವಾಸ್ಯೆ ಗಂ. 18-17 ನಕ್ಷತ್ರ: ಸ್ವಾತಿ ಗಂ. 27-31 ಯೋಗ: ಪ್ರೀತಿ ಗಂ. 10-41 ಕರಣ: ನಾಗ ಗಂ. 18-17, ತುಲಾ ಮಾಸದ 15 ನೇ ದಿನ, ಮಳೆನಕ್ಷತ್ರ: ಸ್ವಾತಿ 3.

ರಾಹುಕಾಲ : ಬೆಳಿಗ್ಗೆ 10-30 – 12-00

ಸೂರ್ಯೋದಯ : 06-28 ಸೂರ್ಯಾಸ್ತ : 06-00

ಮುಸ್ಲಿಂ ದಿನಾಂಕ : 28 ರಬಿಯುಸ್ಸಾನಿ

ದಿನ ವಿಶೇಷ : ಕನ್ನಡ ರಾಜ್ಯೋತ್ಸವ, ಅದೃಷ್ಟ ಸಂಖ್ಯೆ : 5, 8

ಮೇಷ: ಬಂಧುಮಿತ್ರರೊಡನೆ ಸಂತೋಷದ ಕ್ಷಣಗಳನ್ನು ಹಂಚಿಕೊಳ್ಳುವ ಅವಕಾಶ ಸಿಗಲಿದೆ. ಪಾತ್ರೆ ಮಾರಾಟ ಮಾಡುವವರಿಗೆ, ಅದರಲ್ಲೂ ತಾಮ್ರ, ಹಿತ್ತಾಳೆಯ ದೇವರ ಪೂಜಾ ಪಾತ್ರೆಯ ಮಾರಾಟಗಾರರಿಗೆ ಅಧಿಕ ಲಾಭ.

ವೃಷಭ: ವೈಯಕ್ತಿಕವಾಗಿ ಎಷ್ಟು ಹಣ ಗಳಿಸಬಹುದೆಂದು ಲೆಕ್ಕಾಚಾರ ಹಾಕುವುದಕ್ಕಿಂತ ಬಂಡವಾಳ ಕಾಯ್ದುಕೊಳ್ಳುವುದರತ್ತ ಗಮನ ಹರಿಸಿ. ಎಂಜಿನಿಯರಿಂಗ್ ವ್ಯಾಸಂಗ ಮಾಡುವವರಿಗೆ ಉತ್ತೇಜನ ದೊರೆಯುವುದು.

ಮಿಥುನ: ಸಂಬಂಧದಲ್ಲಿ ವ್ಯವಹಾರ ಮಾಡುವುದರಿಂದ ವ್ಯವಹಾರದಲ್ಲಿಯೂ ಮೋಸ, ಸಂಬಂಧದಲ್ಲಿಯೂ ವ್ಯತ್ಯಾಸಗಳಾಗಬಹುದು. ಮಕ್ಕಳ ಆರೋಗ್ಯದ ವಿಚಾರದಲ್ಲಿ ಬೆಳವಣಿಗೆಗೆ ಬೇಕಾದ ಪೌಷ್ಟಿಕಾಂಶ ಆಹಾರದ ಕೊರತೆ ಕಾಣುತ್ತದೆ.

ಕರ್ಕಾಟಕ: ಮನೆಯ ಮಂಗಳ ಕಾರ್ಯಗಳಿಗೆ ಅಡ್ಡಿ ಉಂಟುಮಾಡುವ ಪ್ರಯತ್ನವು ನೆರೆಯವರಿಂದ ನಡೆಯಬಹುದು. ದೈಹಿಕವಾಗಿ ಬಲಾಢ್ಯರಾಗಿರುವ ನಿಮಗೆ ಮಾನಸಿಕವಾಗಿ ಬಹಳ ದೊಡ್ಡ ಹೊಡೆತಬೀಳುವ ಸಂಭವವಿದೆ.

ಸಿಂಹ: ನಿಮ್ಮ ಹಾವಾಭಾವ, ಸ್ನೇಹಪರವಾದಂಥ ಸ್ವಭಾವವು ಇತರರ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಲಿದೆ. ಉತ್ತಮ ದೈವಾನುಗ್ರಹದಿಂದ ಕೆಲಸಗಳೆಲ್ಲವೂ ನಿರಾಳವಾಗಿ ನೆರವೇರುವುದು.

ಕನ್ಯಾ: ಗುರುಗಳು ನೀಡಿದ ಉಪದೇಶದ ವಾಣಿಗಳಿಂದ ಅಥವಾ ಸಮಾಧಾನದ ನುಡಿಯಿಂದ ಇಂದಿನ ಜೀವನದಲ್ಲಿ ನೆಮ್ಮದಿ ದೊರಕುವುದು. ಕಾರ್ಖಾನೆಯಲ್ಲಿ ರಾತ್ರಿ ಪಾಳಿ ಕೆಲಸವನ್ನು ಬದಲಾಯಿಸಿಕೊಳ್ಳುವ ಪ್ರಯತ್ನವನ್ನು ನಡೆಸಬಹುದು.

ತುಲಾ: ವಿವೇಕಯುಕ್ತ ನಡವಳಿಕೆಯು ಪ್ರಯೋಜನಗಳನ್ನು ನೀಡುತ್ತದೆ. ಯತ್ನಿಸಿದ ಕಾರ್ಯಗಳೆಲ್ಲ ಸಿದ್ಧಿಸುವುದರಿಂದ ಸಂತೋಷ ಇರಲಿದೆ. ದುರ್ಘಟನೆಗಳಿಂದ ವಿಚಲಿತರಾಗದೆ ಸಂಯಮದಿಂದ ಕಾರ್ಯ ನಿರ್ವಹಿಸಿ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ಆಲಸ್ಯದ ಪರ್ವತ ಎದುರಾಗುವುದರಿಂದ ವಿದ್ಯಾರ್ಜನೆಯಲ್ಲಿ ಸ್ವಲ್ಪ ಹಿನ್ನಡೆ. ವ್ಯಾಪಾರ ವಾಣಿಜ್ಯ ಸಂಬಂಧಗಳನ್ನು ಹೆಚ್ಚಿಸಿಕೊಳ್ಳಲು ಪ್ರಯಾಣ ಬೆಳೆಸುವಿರಿ. ರೇಷ್ಮೆ ಬೆಳಗಾರರಿಗೆ ಲಾಭ ಆಗುತ್ತದೆ.

ಧನು: ಖರೀದಿಯಲ್ಲಿ ಎಚ್ಚರವಿರಲಿ, ಮೋಸ ಹೋಗುವ ಸಂಭವವಿದೆ. ನಿವೃತ್ತಿಯ ಹಣದಲ್ಲಿ ಮಕ್ಕಳ ಹೆಸರಿಗೆ ಮನೆ ಕೊಳ್ಳುವ ಯೋಗ ಅಥವಾ ಭೂಮಿ ಖರೀದಿಯ ಯೋಗವಿದೆ. ಆರ್ಥಿಕ ಕಷ್ಟ ನಿವಾರಣೆಯಾಗಲಿದೆ.

ಮಕರ: ಯಾತ್ರಿಗಳಿಗೆ ಪ್ರಯಾಣದಲ್ಲಿ ಸುಖ, ನಿರ್ಭಯದ ವಾತಾವರಣ ಉಂಟಾಗುವುದು. ನಿವೇಶನದ ಅಥವಾ ಜಮೀನಿನ ಖರೀದಿ ವಿಷಯದಲ್ಲಿ ದಾಖಲೆ ಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸುವುದು ಲೇಸು.

ಕುಂಭ: ಅಡಿಕೆ ಮತ್ತು ರಬ್ಬರ್ ಪದಾರ್ಥದ ವ್ಯಾಪಾರಿಗಳಿಗೆ ನೂತನ ವ್ಯಕ್ತಿಯ ಪರಿಚಯವು ಉತ್ತಮ ವ್ಯವಹಾರ ನಡೆಸಲು ಉಪಯೋಗವಾಗುವುದು. ವಾಹನ ಕೊಳ್ಳುವುದನ್ನು ಸ್ವಲ್ಪ ದಿನಗಳ ಮಟ್ಟಿಗೆ ಮುಂದೂಡಿ.

ಮೀನ: ಜೀವನದಲ್ಲಿ ಅಧಿಕ ಶ್ರಮದಿಂದ ದೀರ್ಘಕಾಲಿಕ ಕಾರ್ಯಗಳು ಚಾಲನೆಗೊಂಡು ಸಂತಸ ವೃದ್ಧಿ. ಜವಾಬ್ದಾರಿಯ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸಿದ ತೃಪ್ತಿ ಬರಲಿದೆ.

ಪದಬಂಧ 5849

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ದೇಹ ನೋಡಿದಾಗಲೇ ಈ ಶಂಕೆ! (3)
5.ಈತ ವ್ಯಾಕರಣವನ್ನು ತಿಳಿದವನು (5)
7.ತಾಯಿಯ ತಾಯಿ (4)
8.ಕೊಬ್ಬು ಇಲ್ಲಿದೆ (2)
10.ಪಾಶವೀವೃತ್ತಿಯುಳ್ಳವ ಹಿಡಿದಿರುವ ನೇಣು (2)
12.ಪಿಚಕಾರಿಯನ್ನು ಹೀಗೂ ಹೇಳುತ್ತಾರೆ (4)
14.ಬಾಣವನ್ನು ಬಿಲ್ಲಿಗೆ ಹೂಡುವುದು (5)
15.ಒಂದು ಬಗೆಯ ಚರ್ಮವಾದ್ಯ (3)

ಮೇಲಿಂದ ಕೆಳಕ್ಕೆ

1.ಋತುಗಳ ರಾಜ (3)
2.ಖನಿಜಗಳ ನೆಲೆ (2)
4.ಹರನ ಸ್ತುತಿಸುತ್ತಾ ಹೂಡಿದ ಸಂಪು (4)
5.ದಾಂಪತ್ಯಜೀವನವನ್ನು ಹೀಗೆನ್ನಿ (7)
6.ಸಾಗಿಸುವಿಕೆಗೊಂದು ಪರ್ಯಾಯ ಪದ (3)
9.ಭ್ರಾಮಕ ಸ್ವಪ್ನ (4)
11.ಶರದೊಳಗಿರುವ ಕಾಯ (3)
13.ಕಣ್ಣು ಕಾಣದಿರುವಿಕೆ (3)
14.ನಿರ್ದಿಷ್ಟವಾದ ಕಾಲದಿಂದ ಆರಂಭಿಸುವ ಕಾಲಗಣನೆ (2)



5848ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಸಾರಿಗೆ 4.ಅತ್ತರು
5.ನವಿರು 7.ವೆಗ್ಗಳ
8.ವರ್ತಮಾನಪತ್ರಿಕೆ 10.ಅನುಜ
12.ವಾಸನೆ 14.ತಪ್ಪಲೆ
15.ಅಧ್ವಾನ

ಮೇಲಿಂದ ಕೆಳಕ್ಕೆ:
1.ಸ್ವಸ್ಥಾನ 2.ಉಗುರು
3.ಸಾರುವೆ
4.ಅರಿಸಿನಕಾಮಾಲೆ 6.ವಿಭವ
9.ಕೆಲಸ 11.ಜತನ
12.ವಾರ್ಧಕ್ಯ 13.ನೆರಳು

ಸುಡೊಕು 6234

3	2			8		9		1
							6	
	4		9			3		8
6								9
	5		7	6	9		8	
8						6		
9			2			7		6
	6			9	7		3	
		7				4		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6233 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

‘ನಮ್ಮಿಂದ ಇಂಡಸ್ಟ್ರಿಯಲ್ಲ, ಇಂಡಸ್ಟ್ರಿಗೆ ನಾವು’

ವಿನಾಯಕ ಕೆ.ಎಸ್

‘ಉಗ್ರಂ’ ಖ್ಯಾತಿಯ ಶ್ರೀಮುರಳಿ, ರುಕ್ಮಿಣಿ ವಸಂತ್ ಜೋಡಿಯಾಗಿ ನಟಿಸಿರುವ ‘ಬಘೀರ’ ಚಿತ್ರ ಅ.31ರಂದು ತೆರೆ ಕಂಡಿದೆ. ಈ ಸಿನಿಮಾ ಮತ್ತು ಚಿತ್ರೋದ್ಯಮದ ಕುರಿತು ಶ್ರೀಮುರಳಿ ಹಂಚಿಕೊಂಡ ಒಂದಷ್ಟು ಅನಿಸಿಕೆ, ಅನುಭವಗಳು ಇಲ್ಲಿವೆ...

1 ಒಳ್ಳೆಯವರನ್ನು ಪರೀಕ್ಷೆ ಮಾಡಬಾರದು. ಕೆಟ್ಟವರನ್ನು ತಿದ್ದುತ್ತೇನೆ ಎಂದು ಹೋಗಬಾರದು. ಎರಡೂ ಸಮಯ ವ್ಯರ್ಥದ ಕೆಲಸ. ಅದನ್ನೇ ‘ಬಘೀರ’ ಕಥೆಯಲ್ಲಿ ಹೇಳಿದ್ದೇವೆ.

2 ನಾನು ನನ್ನ ಎಲ್ಲ ಸಿನಿಮಾಗಳಿಗೂ ಒಂದೇ ರೀತಿ ಕೆಲಸ ಮಾಡಿದ್ದೇನೆ. ಇಂಡಸ್ಟ್ರಿ ಎಂಬುದು ಎಲ್ಲರಿಗೂ ಒಂದೇ. ಇಲ್ಲಿ ಸಣ್ಣ ಮತ್ತು ದೊಡ್ಡ ಸಿನಿಮಾಗಳೆಂದಿಲ್ಲ. ನಮ್ಮಿಂದ ಇಂಡಸ್ಟ್ರಿಯಲ್ಲ. ಇಂಡಸ್ಟ್ರಿಗೆ ನಾವು ಅಷ್ಟೆ. ಇಲ್ಲಿ ಸಾಕಷ್ಟು ಜನ ಬರುತ್ತಾರೆ, ಹೋಗುತ್ತಾರೆ. ಎಷ್ಟು ಜನ ಉಳಿದುಕೊಳ್ಳುತ್ತಾರೆ, ಎಷ್ಟು ಜನ ಹೊರ ಹೋಗುತ್ತಾರೆ ಎಂಬುದನ್ನು ಇಂಡಸ್ಟ್ರಿ ನಿರ್ಧಾರ ಮಾಡುತ್ತದೆ.

3 ಮುರಳಿಗೆ ರುಕ್ಮಿಣಿ ಅಂತ ನಿರ್ಧಾರ ಮಾಡಿದ್ದು ನಿರ್ದೇಶಕ ಸೂರಿ. ನಿರ್ದೇಶಕರು ಅವರ ಚಿತ್ರ ತೋರಿಸಿದಾಗ ನಾನು ನನ್ನದೇ ವರ್ಕೌಟ್ ಪ್ರಂಪಚದಲ್ಲಿದ್ದೆ. ಅವರ ಬಗ್ಗೆ ಹೆಚ್ಚು ಗೊತ್ತಿರಲಿಲ್ಲ. ಸೆಟ್‌ಗೆ ಕಾಲಿಟ್ಟಾಗ ಅವರು ಒಳ್ಳೆಯ ನಟಿ ಎಂಬುದು ಅವರ ನಟನೆಯಿಂದ ತಿಳಿಯಿತು.

4 ಸಾಕಷ್ಟು ಹೊಸಬರ ಜೊತೆ ಕೆಲಸ ಮಾಡಿದ್ದೇನೆ. ನನಗೆ ಹೊಸಬರು, ಹಳಬರು ಎನ್ನುವುದಕ್ಕಿಂತ ತಂಡ ಬಹಳ ಮುಖ್ಯವಾಗುತ್ತದೆ. ನಿರ್ಮಾಣ ಸಂಸ್ಥೆ ಕೂಡ ಮುಖ್ಯವಾಗುತ್ತದೆ. ನಿರ್ಮಾಣ ಸಂಸ್ಥೆ ಚಿತ್ರಕ್ಕೆ ಬೇಕಾಗಿದ್ದನ್ನೆಲ್ಲ ನೀಡಿದರೆ ಮಾತ್ರ ಚಿತ್ರ ಉತ್ತಮವಾಗಲು ಸಾಧ್ಯ. ಇಲ್ಲವಾದರೆ ನಮ್ಮೆಲ್ಲರ ಶ್ರಮ ವ್ಯರ್ಥವಾಗುತ್ತದೆ. ನನ್ನ ಅದೃಷ್ಟಕ್ಕೆ ಒಳ್ಳೊಳ್ಳೆ ನಿರ್ಮಾಪಕರು ಸಿಕ್ಕಿದ್ದಾರೆ.

5 ಪ್ರಶಾಂತ್ ನೀಲ್ ಅವರ ಬಗ್ಗೆ ಎಷ್ಟು ಮಾತಾಡಿದರೂ ಕಡಿಮೆಯೇ. ಅವರು ‘ಉಗ್ರಂ’ ಮಾಡಿದ್ದು ನನಗಾಗಿಯೇ. ನನಗಿಂತ ಹೆಚ್ಚಾಗಿ ನನ್ನ ಪತ್ನಿಗಾಗಿ. ಆ ಚಿತ್ರದಲ್ಲಿ ಇಬ್ಬರೂ ಒಬ್ಬರಿಗೊಬ್ಬರು ಜೊತೆಯಾಗಿ ನಿಂತೆವು. ‘ಉಗ್ರಂ’ನಿಂದ ಒಬ್ಬ ಅದ್ಭುತ ತಂತ್ರಜ್ಞನಾಗಿ ಅವರು ಹೊರಬಂದರು. ಆಮೇಲೆ ಎರಡು ‘ಕೆಜಿಎಫ್’ ಆಯ್ತು, ಒಂದು ‘ಸಲಾರ್’ ಆಯ್ತು. ಅದು ತುಂಬ ಖುಷಿ ಕೊಡುತ್ತದೆ. ನಾನು ಈ ಪಯಣದ ಭಾಗ ಎಂಬುದು ಹೆಮ್ಮೆ ಎನಿಸುತ್ತದೆ. ನಾನು ಮಾಡಿದೆ, ಅವರು ಮಾಡಿದರು ಎನ್ನುವುದಕ್ಕಿಂತ ನಾವೆಲ್ಲ ಸೇರಿ ಒಂದು ಸಿನಿಮಾ ಮಾಡಿದೆವು.

6 ನಾನು ಈವರೆಗೂ ಮಾಡಿರದ ಸ್ಟಂಟ್ಸ್ ಈ ಚಿತ್ರದಲ್ಲಿ ಮಾಡಿದ್ದೇನೆ. ನನಗೆ ನನ್ನನ್ನು ನೋಡಿಕೊಂಡಾಗ ಪರವಾಗಿಲ್ಲ ಈ ರೇಂಜಿಗೆ ಸ್ಟಂಟ್ಸ್ ಮಾಡಿದ್ದೇನೆ ಎನ್ನಿಸಿತು ಈ ಸಿನಿಮಾದಿಂದ. ಈ ಸಿನಿಮಾದಲ್ಲಿ ಬೇರೆ ರೀತಿ ಕಾಣಿಸುತ್ತೇನೆ. ಈ ಲುಕ್‌ಗಾಗಿ ಮೂರು ವರ್ಷ ಒಂದು ರೀತಿ ನರಕಯಾತ್ರೆ ತೋರಿಸಿದ್ದರು. ಏನೂ ತಿನ್ನಲು, ಊಟ ಮಾಡಲು ಕೊಡುತ್ತಿರಲಿಲ್ಲ. ಕಟ್ಟುನಿಟ್ಟಿನ ಡಯಟ್ ಇತ್ತು. ಊಟ ಮಾಡುವ ಸಂಭ್ರಮವೇ ಮರೆತು ಹೋದಂತಾಗಿತ್ತು.

ಸೂರಿ ಹೇಳಿದ್ದು

‘ಬಘೀರ’ ಎಂದರೆ ಕರಿ ಚಿರತೆ. ಸೂಪರ್ ಹೀರೊವನ್ನು ಇಷ್ಟಪಡುವ ಹುಡುಗನೊಬ್ಬ ಜೀವನದಲ್ಲಿ ತಾನೇ ಸೂಪರ್ ಹೀರೊ ಆಗುವ ಕಥೆಯಿದು. ಶ್ರೀಮುರಳಿ ಜೊತೆ ಹಲವು ಕಥೆಗಳನ್ನು ಚರ್ಚಿಸಿದ್ದೆ. ಆದರೆ ಯಾವ ಕಥೆಗಳೂ ಇಬ್ಬರಿಗೂ ಹೊಂದಾಣಿಕೆ ಆಗುತ್ತಿರಲಿಲ್ಲ. ಆಗ ಪ್ರಶಾಂತ್ ನೀಲ್ ಈ ಕಥೆ ಕೊಟ್ಟರು. ಇಬ್ಬರಿಗೂ ಇಷ್ಟವಾಯ್ತು. ವೈಯಕ್ತಿಕವಾಗಿ ನನಗೆ ಈ ರೀತಿ ಸೂಪರ್ ಹೀರೊ ಕಥೆಗಳು ಇಷ್ಟ. ಹಾಗಂತ ಇದು ಬರಿ ಆ್ಯಕ್ಷನ್ ಸಿನಿಮಾ ಅಲ್ಲ, ಫ್ಯಾಮಿಲಿ ಆಡಿಯನ್ಸ್‌ಗೂ ಇಷ್ಟವಾಗುವ ಕಥೆಯಿದು.

ಶ್ರೀಮುರಳಿ

ಶೀಘ್ರದಲ್ಲಿ ...ಭಾಗ್ಯಲಕ್ಷ್ಮಿ ತೆರೆಗೆ

ಬೃಂದಾ ಆಚಾರ್ಯ

ದೀಕ್ಷಿತ್ ಶೆಟ್ಟಿ ಮತ್ತು ಬೃಂದಾ ಆಚಾರ್ಯ ಜೋಡಿಯಾಗಿ ನಟಿಸಿರುವ ‘ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ’ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ‘ಚಾರ್ಲಿ’ ಸೇರಿದಂತೆ ಕನ್ನಡದ ಪ್ರಮುಖ ಚಿತ್ರಗಳಿಗೆ ವಿಎಫ್‌ಎಕ್ಸ್ ಮಾಡಿರುವ ಅಭಿಷೇಕ್ ಎಂ. ಚೊಚ್ಚಲ ನಿರ್ದೇಶನದ ಈ ಚಿತ್ರ ಡಿಸೆಂಬರ್‌ನಲ್ಲಿ ತೆರೆಗೆ ಬರುವ ನಿರೀಕ್ಷೆಯಿದೆ.

‘ಬ್ಯಾಂಕ್ ದರೋಡೆಗೆ ಸಂಬಂಧಿಸಿದ ಹಾಸ್ಯಮಯ ಕಥೆ ಇದೆ. ಇದೊಂದು ಥ್ರಿಲ್ಲರ್ ಜಾನರ್‌ನ ಸಿನಿಮಾ. ಚಿತ್ರೀಕರಣ ಮುಕ್ತಾಯಗೊಂಡಿದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸ ಪ್ರಗತಿಯಲ್ಲಿದೆ. ಬೆಂಗಳೂರು, ತುಮಕೂರು ಸುತ್ತಮುತ್ತ 60 ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೇವೆ. ಶೀಘ್ರದಲ್ಲಿ ಚಿತ್ರದ ಟೀಸರ್ ಬಿಡುಗಡೆ ಮಾಡುವ ಆಲೋಚನೆಯಿದೆ’ ಎನ್ನುತ್ತಾರೆ ನಿರ್ದೇಶಕ ಅಭಿಷೇಕ್.

ಯುವಕರ ತಂಡವೊಂದು ವಿವಿಧ ಬ್ಯಾಂಕ್‌ಗಳನ್ನು ಲೂಟಿ ಮಾಡುವ ಹಾಸ್ಯಮಯ ಕಥೆ ಹೊಂದಿರುವ ಚಿತ್ರ ಪೋಸ್ಟರ್‌ನಿಂದಲೇ ಗಮನ ಸೆಳೆದಿತ್ತು. ‘ರಂಗಿ ತರಂಗ’, ‘ಅವನೇ ಶ್ರೀಮನ್ನಾರಾಯಣ’ದಂತಹ ಚಿತ್ರಗಳನ್ನು ನೀಡಿದ್ದ ನಿರ್ಮಾಪಕ ಎಚ್.ಕೆ ಪ್ರಕಾಶ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಜ್ಯೂಡಾ ಸ್ಯಾಂಡಿ ಸಂಗೀತ ನಿರ್ದೇಶನ, ಅಭಿಷೇಕ್ ಜಿ ಕಾಸರಗೋಡು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಅಚ್ಯುತ್ ಕುಮಾರ್, ಸಾಧು ಕೋಕಿಲ, ಅಶ್ವಿನ್ ರಾವ್ ಪಲ್ಲಕ್ಕಿ ಮೊದಲಾದವರು ಚಿತ್ರದಲ್ಲಿದ್ದಾರೆ.

ಚಿತ್ರತಂಡದೊಂದಿಗೆ ವಿಜಯ್

ಭಗತ್ ರಾಯ್‌ಗೆ ವಿಜಯ್ ಸಾಥ್

ಬಹುತೇಕ ಹೊಸಬರಿಂದಲೇ ಕೂಡಿರುವ ‘ಧೀರ ಭಗತ್ ರಾಯ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ದುನಿಯಾ ವಿಜಯ್ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಕರ್ಣನ್ ಅವರ ಚೊಚ್ಚಲ ನಿರ್ದೇಶನದ ಚಿತ್ರವಿದು.

‘ಸಮಾನತೆಗೆ ಒತ್ತು ಕೊಡುವ ಚಿತ್ರವಿದು. ಸಮಾನತೆ ಎಂದರೆ ನನಗೆ ಹೆಮ್ಮೆ. ಹೋರಾಟಗಾರರ ಕಥೆ ಅಂದ್ರೆ ನನಗೆ ಇಷ್ಟ. ಹೋರಾಟದ ಕಥೆಗಳಲ್ಲಿ ಕಿಚ್ಚು ಇರುತ್ತದೆ. ನ್ಯಾಯ, ನೀತಿಗೆ ಜಾಗವಿರುತ್ತದೆ. ಹೀಗಾಗಿ ನಾನು ಈ ಚಿತ್ರ ತಂಡದ ಜೊತೆ ನಿಂತಿದ್ದೇನೆ. ಹೊಸ ತಂಡ, ಹೊಸಬರು ಮಾಡುವಂತಹ ಕಥೆಗಳು ವಿಭಿನ್ನವಾಗಿರುತ್ತವೆ. ನಾವು ಸಿನಿಮಾ ಮಾಡುವಾಗಲೇ ತುಂಬಾ ಕಷ್ಟ ಇತ್ತು. ಆದರೆ ಈಗ ಇನ್ನೂ ಕಷ್ಟ ಜಾಸ್ತಿ ಇದೆ. ಒಂದು ಚಿತ್ರ ಮಾಡುವುದೆಂದರೆ ಏಳೆಂಟು ಜನ್ಮ ಎತ್ತಿದ ಹಾಗೆ. ನೀವೆಲ್ಲರೂ, ನಾವೆಲ್ಲರೂ ಕಥೆಯನ್ನು ಆರಾಧಿಸೋಣ. ಕಥೆ ಗೆದ್ದರೆ ನಾವು ಗೆಲ್ಲುತ್ತೇವೆ. ನಮ್ಮನ್ನು ನಾವು ಆರಾಧಿಸಿಕೊಳ್ಳುವುದು ಬೇಡ’ ಎಂದರು ವಿಜಯ್.

ಭೂ ಸುಧಾರಣೆ ಕಾಯ್ದೆ ಹಿನ್ನೆಲೆಯ ಕಥೆಯನ್ನು ಹೊಂದಿರುವ ಚಿತ್ರ ಡಿಸೆಂಬರ್‌ನಲ್ಲಿ ತೆರೆಗೆ ಬರಲಿದೆ. ರಾಕೇಶ್ ದಳವಾಯಿ ಚಿತ್ರದ ನಾಯಕ. ಸುಚರಿತಾ ಎಂಬ ಯುವನಟಿ ಈ ಚಿತ್ರದ ಮೂಲಕ ನಾಯಕಿಯಾಗಿ ಸ್ಯಾಂಡಲ್‌ವುಡ್‌ಗೆ ಕಾಲಿಡುತ್ತಿದ್ದಾರೆ. ಶರತ್ ಲೋಹಿತಾಶ್ವ, ನೀನಾಸಂ ಅಶ್ವಥ್ ಮುಂತಾದವರು ಚಿತ್ರದಲ್ಲಿದ್ದಾರೆ.

ವೈಟ್ ಲೋಟಸ್ ಎಂಟರ್‌ಟೈನ್‌ಮೆಂಟ್ ಮತ್ತು ಶ್ರೀ ಓಂ ಸಿನಿ ಎಂಟರ್‌ಟೈನರ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜಿಸಿದ್ದು, ಸೆಲ್ವಂ ಜಾನ್ ಛಾಯಾಚಿತ್ರಗ್ರಹಣ ಮಾಡಿದ್ದಾರೆ. ಎನ್.ಎಂ ವಿಶ್ವ ಸಂಕಲನವಿದೆ.

GEETHA PICTURES
PREQUEL TO ಮಫ್ತಿ
Anand AUDIO
ಕನ್ನಡ ರಾಜ್ಯೋತ್ಸವದ
ಶುಭಾಶಯಗಳು
ಕರುನಾಡ ಚಕ್ರವರ್ತಿ
ಡಾ. ಶಿವರಾಜ್‌ಕುಮಾರ್
BHAIRATHI
ರಣಗಲ್
KANNADA - TAMIL - TELUGU - MALAYALAM - HINDI
ನಿರ್ಮಾಪಕರು ಗೀತಾ ಶಿವರಾಜ್‌ಕುಮಾರ್
ರಚನೆ ಮತ್ತು ನಿರ್ದೇಶನ ನರ್ತನ್
ನವೀನ್ ಕುಮಾರ್ ಐ ರವಿ ಬಸ್ರೂರ್ ಗುಣ ದಿಲೀಪ್ ಸುಬ್ಬರಾಯನ್ ಚೇತನ್ ಡಿ'ಸೋಜಾ
ಆಕಾಶ್ ಹಿರೇಮಠ್, ರತ್ನಾತನಯ್ ಪಾಟೀಲ್, ಪ್ರಶಾಂತ್ ವೆಂಕಿ, ಧೀರ, ಆನಂದ್ ವೈ ಎಸ್, ಭರತ್ ಸಾಗರ್, ಗಣೇಶ್, ಸುಧೀಂದ್ರ ಹೊಸಳ್ಳಿ, ಚಂದನ್ ಗೌಡ, ಸುಧೀಂದ್ರ ವೆಂಕಟೇಶ್
RELEASING ON NOVEMBER 15
ವಿಶಾಲ ಕರ್ನಾಟಕಕ್ಕೆ ಹಂಚಿಕೆ : ಜಗದೀಶ್ ಫಿಲಂಸ್
JAGADEESH FILMS

ಕರ್ನಾಟಕ ಚಿನ್ನದ ಹೊಳಪು

1. ಹೆಸರಾಯಿತು ಕರ್ನಾಟಕ: 'ಕರ್ನಾಟಕದ ಪ್ರಾಣೋಪಾಸಕರು' ಕಂಡರಿಸಿದ ಕನಸು 1973ರ ನವೆಂಬರ್ 1ರಂದು ನನಸಾಗಿ ಮೈಸೂರು ರಾಜ್ಯ, ಕರ್ನಾಟಕವೆಂಬ ನಾಮಧೇಯವನ್ನು ಪಡೆಯಿತು. ಮದ್ರಾಸ್, ಬಾಂಬೆ, ಹೈದರಾಬಾದ್ ಪ್ರಾಂತ್ಯಗಳ ಕನ್ನಡ ಮಾತನಾಡುವ ಪ್ರದೇಶಗಳು ವಿಲೀನಗೊಂಡು ಮೈಸೂರು ರಾಜ್ಯ 1956ರ ನವೆಂಬರ್ 1ರಂದೇ ಉದಯವಾದರೂ ಇಡೀ ನಾಡನ್ನು ಪ್ರತಿನಿಧಿಸುವಂತಹ ಹೆಸರು ಪಡೆಯಲು ಮತ್ತೆ 17 ವರ್ಷ ಕಾಯಬೇಕಾಯಿತು. ಕನ್ನಡ ನಾಡಿಗೆ ಕರ್ನಾಟಕ ಎಂಬುದಾಗಿ ನಾಮಕರಣ ಮಾಡಿದ್ದು ದೇವರಾಜ ಅರಸು ನೇತೃತ್ವದ ಸರ್ಕಾರ. ಅಂದಾನಪ್ಪ ದೊಡ್ಡಮೇಟಿ, ಕೆ.ಎಚ್.ಪಾಟೀಲ, ಶಾಂತವೇರಿ ಗೋಪಾಲಗೌಡ ಅವರಂತಹ ನಾಯಕರ ಒತ್ತಾಸೆಯೂ ನಮ್ಮ ನಾಡು ಕರ್ನಾಟಕ ಎಂಬ ಹೆಸರು ಪಡೆಯುವಲ್ಲಿ ಮಹತ್ವದ ಪಾತ್ರ ವಹಿಸಿತ್ತು. ಆಲೂರು ವೆಂಕಟರಾಯರಂತಹ ಹಿರಿಯರು ಬದುಕಿನುದ್ದಕ್ಕೂ 'ಕರ್ನಾಟಕ'ಕ್ಕಾಗಿ ಅವಿರತ ಹೋರಾಟ ನಡೆಸಿದ್ದೂ ಸ್ಮರಣೀಯ

2. ಹುಲಿ ಸಂರಕ್ಷಣೆಗೆ ಮಾದರಿ: ಅಳಿವಿನಂಚಿಗೆ ಸಾಗಿದ್ದ ಹುಲಿಗಳ ಸಂತತಿ ರಕ್ಷಣೆಯಲ್ಲಿ ಹೊಸ ಭಾಷ್ಯ ಬರೆದಿದ್ದು 1973ರ ನ.16ರಂದು ಉದ್ಘಾಟನೆಯಾದ ಬಂಡೀಪುರ ಹುಲಿ ಯೋಜನೆ

3. ಜಾಗತಿಕ ಮಟ್ಟದ ಬಿ-ಸ್ಕೂಲ್: 1973ರಲ್ಲಿ ಬೆಂಗಳೂರಿನಲ್ಲಿ ಆರಂಭಗೊಂಡ ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆ (ಐಐಎಂಬಿ) ಜಾಗತಿಕ ಮಟ್ಟದಲ್ಲೂ ಹೆಸರು ಮಾಡಿದ ಬಿ-ಸ್ಕೂಲ್

4. ರಾಷ್ಟ್ರದ ಕ್ರಿಕೆಟ್ ಸಾರ್ವಭೌಮ: 15 ಸಲ ರಣಜಿ ಟ್ರೋಫಿ ಜಯಿಸಿದ್ದ ಮುಂಬೈ ತಂಡವನ್ನು 1973-74ರಲ್ಲಿ ಸೆಮಿ ಫೈನಲ್‌ನಲ್ಲಿ ಮಣಿಸಿ ಫೈನಲ್‌ನಲ್ಲಿ ರಾಜಸ್ಥಾನವನ್ನು ಸೋಲಿಸಿ ಕರ್ನಾಟಕ ಮೊದಲ ಬಾರಿ ರಣಜಿ ಟ್ರೋಫಿ ತನ್ನದಾಗಿಸಿತು

1970ರ ದಶಕ

5. ಸಿನಿಮಾದ ಹೊಸ ಅಲೆ: ಎನ್. ಲಕ್ಷ್ಮೀನಾರಾಯಣ್ ನಿರ್ದೇಶನದ 'ನಾಂದಿ' (1964) 'ಹೊಸ ಅಲೆ'ಗೆ ಮುನ್ನುಡಿ ಬರೆಯಿತು. ಆ ಅಲೆ ಸ್ಪಷ್ಟವಾಗಿ ಪ್ರಕಟಗೊಂಡ ಸಿನಿಮಾ ಯು.ಆರ್. ಅನಂತಮೂರ್ತಿ ಕಥೆ ಆಧರಿಸಿ ಪಟ್ಟಾಭಿರಾಮ ರೆಡ್ಡಿ ನಿರ್ದೇಶಿಸಿದ 'ಸಂಸ್ಕಾರ' (1970). ಕನ್ನಡದ ಮೊದಲ ಸ್ವರ್ಣಕಮಲ ಪುರಸ್ಕೃತ ಚಿತ್ರವಿದು

6. ಕನ್ನಡ ಚಳವಳಿ: ಅರವತ್ತು ಎಪ್ಪತ್ತರ ದಶಕದ ಕನ್ನಡ ಚಳವಳಿ ಕರ್ನಾಟಕ-ಕನ್ನಡದ ಸಾಂಸ್ಕೃತಿಕ ಅಸ್ಮಿತೆಯನ್ನು ಬಲಪಡಿಸಿತು. ಡಬ್ಬಿಂಗ್ ವಿರೋಧಿ ಚಳವಳಿ ಕನ್ನಡ ಸಿನಿಮಾದ ಬೆನ್ನುಮೂಳೆ ಗಟ್ಟಿಗೊಳಿಸಿತು. ಬೆಂಗಳೂರು ಕನ್ನಡಿಗರ ಅಳುಕು ಆತ್ಮವಿಶ್ವಾಸವಾಗಿ ಬದಲಾಗಿ, ಕಾರ್ಖಾನೆಗಳಲ್ಲಿ ಕನ್ನಡಿಗರ ಸೊಲ್ಲು ಕೇಳುವಂತಾಯಿತು. ಅನಕೃ, ಮ. ರಾಮಮೂರ್ತಿ, ಎಂ.ಚಿದಾನಂದಮೂರ್ತಿ, ವಾಟಾಳ್ ನಾಗರಾಜ್, ಜಿ.ನಾರಾಯಣಕುಮಾರ್ ಮತ್ತಿತರ ನಾಯಕರು ಕನ್ನಡ ಚಳವಳಿಗೆ ಜೀವ ತುಂಬಿದರು

7. ನವ್ಯ, ದಲಿತ, ಬಂಡಾಯ ಸಾಹಿತ್ಯ: ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ, ದಲಿತ, ಬಂಡಾಯ ಎಂದು 20ನೆಯ ಶತಮಾನದ ಸಾಹಿತ್ಯ ಚಳವಳಿಗಳನ್ನು ವಿಮರ್ಶಕರು ಗುರುತಿಸಿದ್ದಾರೆ. ಇವೆಲ್ಲವೂ ಒಂದಕ್ಕೊಂದು ಪ್ರತಿಕ್ರಿಯಾತ್ಮಕವಾಗಿ ಹುಟ್ಟಿದ ಪ್ರಕಾರಗಳು. ಬಿ.ಎಂ. ಶ್ರೀಕಂಠಯ್ಯನವರು ರಚಿಸಿದ ಕಾವ್ಯದಿಂದ 'ನವೋದಯ' ರಚನೆ ಆರಂಭವಾಯಿತು. ಕುವೆಂಪು, ದ.ರಾ. ಬೇಂದ್ರೆ ಅವರೂ ಅದೇ ಮಾರ್ಗದಲ್ಲಿ ಸಾಹಿತ್ಯ ರಚಿಸಿದರು. ನವ್ಯಕಾವ್ಯವು ಈ ಕಟ್ಟನ್ನು ಒಡೆದು, ಹಾಡುವಂತಹ ಕಾವ್ಯವೇ ಬೇಕಿಲ್ಲ ಎನ್ನುವುದನ್ನು ಪ್ರತಿಪಾದಿಸಿತು. ದೇವನೂರ ಮಹಾದೇವ, ಸಿದ್ದಲಿಂಗಯ್ಯ ಅವರಂತಹವರು ರಚಿಸಿದ ಸಾಮಾಜಿಕ ಹೊಣೆಗಾರಿಕೆಯ ಸಾಹಿತ್ಯವು ದಲಿತ ಹಾಗೂ ದಲಿತ ಬಂಡಾಯ ಪ್ರಕಾರಕ್ಕೆ ಕೆಲವು ಉದಾಹರಣೆಗಳು

8. ಜಯದೇವ ಆಸ್ಪತ್ರೆ-ಆರೋಗ್ಯ ಕ್ಷೇತ್ರದ ಹೆಗ್ಗುರುತು: 'ಚಿಕಿತ್ಸೆ ಮೊದಲು-ಪಾವತಿ ನಂತರ' ಎಂಬ ಪರಿಕಲ್ಪನೆಯ ಅಡಿಯಲ್ಲಿ 1972ರಲ್ಲಿ ಸ್ಥಾಪನೆಯಾದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ರಾಜ್ಯಕ್ಕೊಂದು ಮುಕುಟಮಣಿ

9. ಬಂಗಾರದ ಮನುಷ್ಯ: ಸಿದ್ದಲಿಂಗಯ್ಯ ನಿರ್ದೇಶನದ 'ಬಂಗಾರದ ಮನುಷ್ಯ' ಆಧುನಿಕ ಕರ್ನಾಟಕದ ಆಶೋತ್ತರಗಳನ್ನು ಪ್ರತಿನಿಧಿಸಿದ ಹಾಗೂ ನಾಡಿನ ಮೇಲೆ ಗಾಢ ಪರಿಣಾಮ ಬೀರಿದ ಮುಖ್ಯವಾಹಿನಿಯ ಪ್ರಮುಖ ಸಿನಿಮಾ. 1972-1973ರಲ್ಲಿ, ಒಟ್ಟು 104 ವಾರಗಳ ದಾಖಲೆ ಪ್ರದರ್ಶನದ ಮೂಲಕ ಚಿತ್ರೋದ್ಯಮದ ಸ್ಥಿರತೆಗೆ ಕಾರಣವಾಯಿತು

13. ತುಳಿತಕ್ಕೊಳಗಾದವರ ಧ್ವನಿ ದಸಂಸ

ಶತಮಾನಗಳಿಂದ ತುಳಿತಕ್ಕೆ ಒಳಗಾದವರ ಕೊರಳ ದನಿಯಾಗಿ, ಎದೆಯುಬ್ಬಿಸಿ ನಿಲ್ಲುವ ಕಾಲಿಗೆ ಬಲವಾಗಿ ರೂಪುಗೊಂಡಿದ್ದೇ ಕರ್ನಾಟಕ ದಲಿತ ಸಂಘರ್ಷ ಸಮಿತಿ. ಶಾಸಕರಾಗಿದ್ದ ಬಸವಲಿಂಗಪ್ಪ, ಬಿ.ಎಂ.ತಿಪ್ಪೇಸ್ವಾಮಿ, ಪ್ರೊ.ಬಿ. ಕೃಷ್ಣಪ್ಪ, ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಕೋಟಗಾನಹಳ್ಳಿ ರಾಮಯ್ಯ, ಎನ್. ವೆಂಕಟೇಶ್ ಅವರ ಪ್ರೇರಣೆ ಇದರ ಹಿಂದಿತ್ತು. ನಾಡಿನ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವಲಯದಲ್ಲಿ ಸಂಚಲನ ಮೂಡಿಸಿದ ಈ ಚಳವಳಿ, ದಲಿತರಲ್ಲಿ ಸ್ವಾಭಿಮಾನದ ಕಿಚ್ಚು ಹತ್ತಿಸಿ ಬದಲಾವಣೆಯ ಹರಿಕಾರನಾಯಿತು

14. ಭೂ ಕ್ರಾಂತಿಗೆ ದಿಟ್ಟ ಹೆಜ್ಜೆ



ಕಾಗೋಡು ಚಳವಳಿಯ ಪರಿಣಾಮವಾಗಿ ಉಳುವವನೆ ಹೊಲದೊಡೆಯ ಆಶಯದ ಮೇರೆಗೆ ಜಾರಿಗೊಳಿಸಿದ ಈ ಶಾಸನ ಗೇಣಿದಾರರಿಗೆ ಭೂಮಿ, ಕೃಷಿ ಭೂಮಿಗೆ ಮಿತಿ ಹಾಕಿದ ಕ್ರಾಂತಿಕಾರಕ ಹೆಜ್ಜೆ. 1961ರ ಕಾಯ್ದೆಗೆ ಬಲವಾದ ತಿದ್ದುಪಡಿ ತಂದಿದ್ದು ದೇವರಾಜ ಅರಸರು. ಭೂಮಾಲೀಕರ ಬಳಿ ಇದ್ದ ಜಮೀನು, ಉಳುಮೆ ಮಾಡುತ್ತಿದ್ದವರಿಗೆ ದಕ್ಕುವಂತಾಗಿ ಕೃಷಿ ಕ್ಷೇತ್ರದಲ್ಲಿ ದೊಡ್ಡಮಟ್ಟದ ಬದಲಾವಣೆ ತಂದ ಕಾಯ್ದೆ ಇದು. ಬಳಿಕ ದೇಶವ್ಯಾಪಿ ಜಾರಿಗೊಳಿಸಲಾಯಿತು

ಪ್ರಜಾವಾಣಿ

ಇಂದಿನಿಂದ ನಮ್ಮ ರಾಜ್ಯ ಕರ್ನಾಟಕ

ನನಸಾದ ಕನಸು

ಬಂದ ದಾರಿ ಸುಗಮ ಇರಲಿಲ್ಲ; ಆ ದಿನ ಕೊನೆಗೂ ಬಂತು

15. ದೇವದಾಸಿ ಪದ್ಧತಿ ನಿಷೇಧ: ದೇವರ ಹೆಸರಿನಲ್ಲಿ ಹೆಣ್ಣುಮಕ್ಕಳನ್ನು ದೇವದಾಸಿಯರನ್ನಾಗಿ ಮಾಡಿ, ಬಳಿಕ ಅವರನ್ನು ಮೇಲ್ವರ್ಗದ ಪುರುಷರು ತಮ್ಮ ಕಾಮತೃಷೆಗಾಗಿ ಶೋಷಿಸುತ್ತಿದ್ದರು. ಶೇ 96.1ರಷ್ಟು ಎಸ್‌ಸಿ ಎಸ್‌ಟಿ ಮಹಿಳೆಯರೇ ಈ ಅನಿಷ್ಟ ಪದ್ಧತಿಗೆ ಬಲಿಯಾಗಿದ್ದಾರೆ. ಇಂಥ ಕೆಟ್ಟ ಪದ್ಧತಿ ತಡೆಗಟ್ಟಲು ಕರ್ನಾಟಕ ಸರ್ಕಾರ, 'ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಕಾಯ್ದೆ- 1982ರಲ್ಲಿ ಜಾರಿಗೆ ತಂದಿತು

16. ಹಸಿರು ಉಳಿಸಿದ 'ಅಪ್ಪಿಕೋ ಚಳವಳಿ': 1983ರ ಸೆ.8 ರಂದು ಶಿರಸಿ ತಾಲ್ಲೂಕಿನ ಕೆಳಾಸೆ ಕುದ್ರಗೋಡ ಅರಣ್ಯದಲ್ಲಿ ಆರಂಭಗೊಂಡ ಅಪ್ಪಿಕೋ ಚಳವಳಿ ಮಲೆನಾಡು ಪೂರ್ತಿ ವ್ಯಾಪಿಸಿತು. ಸರ್ಕಾರ ಈ ಹೋರಾಟಕ್ಕೆ ಮಣಿದು ಅರಣ್ಯ ನೀತಿಯಲ್ಲಿ ಪರಿವರ್ತನೆ ಮಾಡಿದ್ದಲ್ಲದೇ, ಮರ ಕಡಿಯುವುದನ್ನು ನಿಷೇಧಿಸಿತು

17. ಬಡವರಿಗೆ ಬ್ಯಾಂಕ್ ಬಾಗಿಲು ತೆರೆದ ಸಾಲಮೇಳ: ರಾಷ್ಟ್ರೀಕರಣದ ಬಳಿಕವೂ ಬಡವರು ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಆಗುತ್ತಿರಲಿಲ್ಲ. ಕೇಂದ್ರದಲ್ಲಿ ಹಣಕಾಸು ರಾಜ್ಯ ಸಚಿವರಾಗಿದ್ದ ಬಿ. ಜನಾರ್ದನ ಪೂಜಾರಿ ನೇತೃತ್ವದಲ್ಲಿ 1983ರಲ್ಲಿ ದೇಶದಾದ್ಯಂತ ಸಾಲ ಮೇಳ ಆರಂಭಿಸಲಾಯಿತು

18. ವಿಶ್ವ ಕನ್ನಡ ಸಮ್ಮೇಳನ: ಜಗತ್ತಿನಾದ್ಯಂತ ಹರಡಿರುವ ಕನ್ನಡಿಗರನ್ನು ಒಂದೇ ವೇದಿಕೆಗೆ ತಂದು, ಕನ್ನಡ ನಾಡು ನುಡಿಯ ಬಗ್ಗೆ ಚರ್ಚಿಸುವ ಆಶಯದೊಂದಿಗೆ ಆರಂಭಗೊಂಡಿದ್ದು ವಿಶ್ವ ಕನ್ನಡ ಸಮ್ಮೇಳನ. 1985ರಲ್ಲಿ ಮೊದಲ ಸಮ್ಮೇಳನ ಮೈಸೂರಿನಲ್ಲಿ ನಡೆಯಿತು

10. ಗಟ್ಟಿ ಚಿಂತನೆಗೆ ದಾರಿಯಾದ 'ಬೂಸಾ' ಹೇಳಿಕೆ: ಅರಸು ಸಂಪುಟದಲ್ಲಿ (1974) ಸಚಿವರಾಗಿದ್ದ ಬಿ.ಬಸವಲಿಂಗಪ್ಪ ಕನ್ನಡ ಸಾಹಿತ್ಯದ ಬಗ್ಗೆ ಹೇಳಿದ ಮಾತು ತೀವ್ರ ಪರ-ವಿರೋಧದ ಪ್ರತಿಭಟನೆಗಳಿಗೆ ಕಾರಣವಾಗಿ ಅವರು ಸಚಿವ ಪದವಿಗೆ ರಾಜೀನಾಮೆ ನೀಡಬೇಕಾಗಿ ಬಂತು. ಈ ಹೇಳಿಕೆ ಮತ್ತು ಅದರ ನಂತರದ ಪರಿಣಾಮಗಳು ಕನ್ನಡ ಸಾಹಿತ್ಯ-ಸಂಸ್ಕೃತಿಯ ಮೌಲ್ಯನಿರ್ಣಯಕ್ಕೆ ಹೊಸ ಆಯಾಮ ನೀಡಿದವು

ಕನ್ನಡನಾಡು, ಕರ್ನಾಟಕವೆಂದು ನಾಮಾಂಕಿತಗೊಂಡು 50 ವರುಷಗಳು ಪೂರ್ಣಗೊಂಡಿವೆ. ಈ ಅವಧಿಯಲ್ಲಿ ನಾಡು ಹಲವು ಕ್ಷೇತ್ರಗಳಲ್ಲಿ 'ಸುವರ್ಣ' ಸಾಧನೆಯನ್ನೇ ಮಾಡಿದ್ದರೆ, ಕೆಲವು ಕೊರಗುಗಳು ಇನ್ನೂ ಹಾಗೇ ಉಳಿದುಕೊಂಡಿವೆ. ಐವತ್ತು ವರ್ಷಗಳಲ್ಲಿ ಕನ್ನಡದ ಅಸ್ಮಿತೆಯನ್ನು ಗಟ್ಟಿಗೊಳಿಸಿದ ಸಂಗತಿಗಳು ಯಾವುವು? ನಾಡಿನ ಚಹರೆಯನ್ನು ರೂಪಿಸಿದ ಸಂದರ್ಭಗಳು ಎಂಥವು? ಕರ್ನಾಟಕ, ಮಾದರಿ ರಾಜ್ಯ ಎನಿಸಿಕೊಂಡು ಬೆಳೆಯಲು ಕಾರಣವಾದ ಅಂಶಗಳೇನು? ಸುವರ್ಣ ಸಂಭ್ರಮದ ಹಿಟ್ಟತ್ತಿ ತಿರುಗಿ ನೋಡಿದಾಗ ಕಂಡ ಈ ಐವತ್ತು ಮೈಲಿಗಲ್ಲುಗಳು ಮೇಲಿನ ಪ್ರಶ್ನೆಗಳಿಗೆ ಉತ್ತರ ರೂಪದಂತಿವೆ...

11. ಹಾಲಿನ ಹೊಳೆ ಹರಿಸಿದ ಕೆಎಂಎಫ್

ಗುಜರಾತ್‌ನ ಅಮುಲ್ ಮಾದರಿಯಲ್ಲಿ ಆರಂಭವಾದ ಕರ್ನಾಟಕ ಹಾಲು ಮಹಾಮಂಡಳವು (ಕೆಎಂಎಫ್) ರಾಜ್ಯದಲ್ಲಿ ಕ್ಷೀರ ಕ್ರಾಂತಿಯನ್ನೇ ಮಾಡಿದೆ. ಸಹಕಾರ ತತ್ವದ ಆಧಾರದಲ್ಲಿ ಹಳ್ಳಿ ಮಟ್ಟದಲ್ಲಿ ಕಾರ್ಯಾರಂಭ ಮಾಡಿದ ಹಾಲು ಉತ್ಪಾದಕರ ಸಹಕಾರ ಸಂಘಗಳು ರೈತರ ಜೀವನಾಡಿಯಾದವು. 15 ಒಕ್ಕೂಟಗಳೊಂದಿಗೆ, ಹಾಲಿನ ಸಂಗ್ರಹ ಮತ್ತು ಮಾರಾಟದಲ್ಲಿ ಭಾರತದಲ್ಲಿ ಎರಡನೇ ಸ್ಥಾನ, ದಕ್ಷಿಣದಲ್ಲಿ ಮೊದಲ ಸ್ಥಾನ ಪಡೆದಿರುವ ಕೆಎಂಎಫ್, ರೈತರ ಉಪಕಸುಬನ್ನೇ ಒಂದು ಉದ್ಯಮವನ್ನಾಗಿ ಪರಿವರ್ತಿಸಿದೆ

12. ಹಾವನೂರು ವರದಿ ಜಾರಿ: 'ಹಿಂದುಳಿದ ವರ್ಗಗಳ ಬೈಬಲ್'. ದೇವರಾಜ ಅರಸು ಈ ವರದಿಯನ್ನು ಹಾಗಂತ ಬಣ್ಣಿಸಿದ್ದರು. ಹಿಂದುಳಿದ ವರ್ಗಗಳಿಗೆ ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ 1972ರ ಆಗಸ್ಟ್‌ನಲ್ಲಿ ಎಲ್. ಜಿ. ಹಾವನೂರು ನೇತೃತ್ವದಲ್ಲಿ ಆಯೋಗ ರಚಿಸಲಾಯಿತು. ಆಳವಾಗಿ ಅಧ್ಯಯನ ನಡೆಸಿ, ಸೂಕ್ತ ಶಿಫಾರಸುಗಳೊಂದಿಗೆ 1975ರ ನವೆಂಬರ್‌ನಲ್ಲಿ ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿತು. ಕೆಲವು ಮಾರ್ಪಾಡುಗಳೊಂದಿಗೆ 1977ರ ಫೆಬ್ರುವರಿಯಲ್ಲಿ ಅರಸು ನೇತೃತ್ವದ ಸರ್ಕಾರ ಈ ವರದಿಯನ್ನು ಜಾರಿಗೆ ತಂದಿತು

1980ರ ದಶಕ

19. ಕಾಂಗ್ರೆಸ್ಸೇತರ ಮೊದಲ ಸರ್ಕಾರ ಗುಂಡೂರಾವ್ ನೇತೃತ್ವದ ಸರ್ಕಾರದ ಜನ ವಿರೋಧಿ ನೀತಿಯಿಂದಾಗಿ ರಾಜ್ಯದಲ್ಲಿ ಹರಳುಗಟ್ಟಿದ್ದ ಕಾಂಗ್ರೆಸ್ ವಿರುದ್ಧದ ಆಕ್ರೋಶ, ಎಚ್.ಡಿ. ದೇವೇಗೌಡ-ಎಸ್.ಆರ್. ಬೊಮ್ಮಾಯಿಯವರ ಜನತಾಪಕ್ಷ ಹಾಗೂ ಎಸ್. ಬಂಗಾರಪ್ಪನವರ ಕ್ರಾಂತಿರಂಗದ ಸಂಘಟಿತ ಹೋರಾಟದ ಫಲವಾಗಿ 1983ರಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ದೇಶದಲ್ಲೇ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂತು

20. ಕಂಪ್ಯೂಟರ್‌ನಲ್ಲಿ ಕನ್ನಡ

ಕಂಪ್ಯೂಟರ್ ಪ್ರವರ್ಧಮಾನಕ್ಕೆ ಬರುವ ಹೊತ್ತಿನಲ್ಲೇ ತಂತ್ರಜ್ಞ ಕೆ.ಪಿ. ರಾವ್ 1981ರಲ್ಲಿ ಸೇಡಿಯಾಪು ಕನ್ನಡ ತಂತ್ರಾಂಶ ಅಭಿವೃದ್ಧಿ ಪಡಿಸಿದರು. ಕನ್ನಡಕ್ಕೆ ಸಂಬಂಧಿಸಿದ ಮೊದಲ ತಂತ್ರಾಂಶ. 1998ರಲ್ಲಿ ಬರಹ ಕನ್ನಡ, 2001ರಲ್ಲಿ ಸರ್ಕಾರದ ನುಡಿ ತಂತ್ರಾಂಶ ಬಳಕೆಗೆ ಬಂತು

21. ರೈತರ ಕಸುವಿಗೆ ವೇದಿಕೆ

ಅನ್ನದಾತರಿಗೂ ಸ್ವಾಭಿಮಾನದ ಬದುಕು ಇದೆ ಎಂದು ತೋರಿಸಿಕೊಟ್ಟಿದ್ದೇ ಕರ್ನಾಟಕ ರಾಜ್ಯ ರೈತ ಸಂಘ. ಪ್ರೊ.ಎಂ.ಡಿ. ನಂಜುಂಡಸ್ವಾಮಿ, ಎಚ್.ಎಸ್.ರುದ್ರಪ್ಪ ಹಾಗೂ ಎನ್.ಡಿ. ಸುಂದರೇಶ್ ಅವರು ಮುಂಚೂಣಿಯಲ್ಲಿದ್ದು ಸ್ಥಾಪಿಸಿದ್ದ ರೈತಸಂಘ, ದೇಶ-ವಿದೇಶದಲ್ಲೂ ರೈತ ಹೋರಾಟವನ್ನು ಹರಡಿತ್ತು. ಮಾನ್ಸೆಂಟೋ, ಕಾರ್ಗಿಲ್ ಹಾಗೂ ಕೆಂಟುಕಿ ಫ್ರೈಡ್ ಚಿಕನ್ ಕಂಪನಿ ಮೇಲೆ ದಾಳಿ ನಡೆಸಿದ್ದರಿಂದಾಗಿ ಸಂಘ ಇಡೀ ಜಗತ್ತಿನಲ್ಲಿ ಸುದ್ದಿಯಾಗಿತ್ತು

22. ಪ್ರಕಾಶಿಸಿದ ಪಡುಕೋಣೆ: ಭಾರತದ ಬ್ಯಾಡ್ಮಿಂ ಟನ್ ಕ್ಷೇತ್ರದ ದಿಗ್ಗಜ ಪ್ರಕಾಶ್ ಪಡುಕೋಣೆ. 1980ರಲ್ಲಿ ವಿಶ್ವದ ಅಗ್ರ ಕ್ರಮಾಂಕಕ್ಕೆ ಏರಿದ ದೇಶದ ಮೊದಲ ಆಟಗಾರ ಅವರು. ಅದೇ ವರ್ಷ ಪ್ರತಿಷ್ಠಿತ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಗೆದ್ದ ಭಾರತದ ಮೊದಲ ಆಟಗಾರ ಎಂಬ ಹೆಗ್ಗಳಿಕೆ ಅವರದಾಯಿತು

23. ಕನ್ನಡ ಪ್ರಜ್ಞೆ ಬಡಿದೆಬ್ಬಿಸಿದ ಚಳವಳಿ: ಶಿಕ್ಷಣದಲ್ಲಿ ಕನ್ನಡದ ಸ್ಥಾನಮಾನ ಹೇಗಿರಬೇಕು ಎನ್ನುವುದನ್ನು ಅಧ್ಯಯನ ಮಾಡಿ ವಿ.ಕೃ.ಗೋಕಾಕ್ ನೇತೃತ್ವದ ಸಮಿತಿ ನೀಡಿದ್ದ ವರದಿ ಜಾರಿಗಾಗಿ ನಡೆದ ಹೋರಾಟ ಐತಿಹಾಸಿಕ. ಸಾಹಿತಿಗಳು, ಹೋರಾಟಗಾರರು ಆರಂಭಿಸಿದ ಈ ಚಳವಳಿ ವರನಟ ರಾಜ್‌ಕುಮಾರ್ ಪ್ರವೇಶದಿಂದ ಬಿರುಸು ಪಡೆದಿತ್ತು. ಸರ್ಕಾರ ಕನ್ನಡಿಗರ ಒಕ್ಕೊರಲ ಧ್ವನಿಗೆ ಮಣಿಯಲೇಬೇಕಾಯಿತು. ಭಾಷೆಯ ಉಳಿವಿಗಾಗಿ ಹೋರಾಡಬೇಕಾದ ಪ್ರಜ್ಞೆಯನ್ನು ಕನ್ನಡಿಗರಲ್ಲಿ ರೂಪಿಸಿದ್ದು ಗೋಕಾಕ್ ಚಳವಳಿ



24. ಲೋಕಾಯುಕ್ತ ಸ್ಥಾಪನೆ: ಭ್ರಷ್ಟಾಚಾರ ಮತ್ತು ದುರಾಡಳಿತದ ನಿಯಂತ್ರಣಕ್ಕಾಗಿ ರಾಜ್ಯ ಆಡಳಿತ ಸುಧಾರಣಾ ಆಯೋಗದ ಶಿಫಾರಸಿನಂತೆ ಕರ್ನಾಟಕ ಲೋಕಾ ಯುಕ್ತ ಕಾಯ್ದೆ 1984 ರಲ್ಲಿ ಸಿದ್ಧವಾ ದರೂ, 1986 ರಲ್ಲಿ ಲೋಕಾಯುಕ್ತ ಅಸ್ತಿತ್ವಕ್ಕೆ ಬಂತು

25. ರಂಗಾಯಣ: 1989ರಲ್ಲಿ ಸ್ಥಾಪನೆಯಾದ, ಬಿ.ವಿ.ಕಾರಂತರ ಕನಸಿನ ಕೂಸಾದ 'ರಂಗಾಯಣ'ವು ದಕ್ಷಿಣ ಭಾರತದ ಮೊದಲ ರಂಗತರಬೇತಿ ಶಾಲೆಯಾಗಿ ನೂರಾರು ನಾಟಕ ಪ್ರಯೋಗಗಳನ್ನು ಮಾಡಿದೆ

26. ಬೆತ್ತಲೆ ಸೇವೆ ನಿಷೇಧ: ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಚಂದ್ರಗುತ್ತಿಯಲ್ಲಿ ಗ್ರಾಮದೇವತೆ ರೇಣುಕಾ ಎಲ್ಲಮ್ಮನ ಹೆಸರಿನಲ್ಲಿ ಹೆಣ್ಣು, ಗಂಡು ಇಬ್ಬರೂ ಮಾಡುತ್ತಿದ್ದ 'ಬೆತ್ತಲೆ ಸೇವೆ' ಎಂಬ ಅನಿಷ್ಟ ಪದ್ಧತಿ ವಿರುದ್ಧದ ಹೋರಾಟದ ಫಲವಾಗಿ ಜೆ.ಎಚ್. ಪಟೇಲ್ ಸರ್ಕಾರವು ಚನ್ನವೀರಪ್ಪ ಆಯೋಗವನ್ನು ರಚಿಸಿ, 1987ರ ಫೆ. 27ರಂದು ಬೆತ್ತಲೆ ಸೇವೆಯನ್ನು ನಿಷೇಧಿಸಿತು. 'ಕರ್ನಾಟಕ ಮೌಢ್ಯ ನಿಷೇಧ ಕಾಯ್ದೆ-2017' ಕೂಡಾ ಬೆತ್ತಲೆ ಸೇವೆ ನಿಷೇಧವನ್ನು ಪುನರುಚ್ಚರಿಸಿದೆ

27. ಜಿಲ್ಲೆಗಳ ವಿಭಜನೆ: ರಾಜ್ಯ ಉದಯವಾದ ನಂತರ ಮೊದಲ ಬಾರಿಗೆ 1986ರಲ್ಲಿ ಬೆಂಗಳೂರು ಜಿಲ್ಲೆಯನ್ನು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಾಗಿ ವಿಭಾಗಿಸಲಾಗಿತ್ತು. ನಂತರ 1997ರಲ್ಲಿ ಬಾಗಲಕೋಟೆ, ದಾವಣಗೆರೆ, ಕೊಪ್ಪಳ, ಗದಗ, ಹಾವೇರಿ, ಚಾಮರಾಜನಗರ ಜಿಲ್ಲೆಗಳು ರಚನೆಯಾದವು

28. ಕನ್ನಡ ವಿ.ವಿ.

ಕನ್ನಡ ಭಾಷೆಯ ಸಂಶೋಧನೆಗೆಂದೇ ವಿಶ್ವವಿದ್ಯಾಲಯ ಬೇಕು ಎಂಬ ಪರಿಕಲ್ಪನೆಯಲ್ಲಿ 1991ರಲ್ಲಿ ಸ್ಥಾಪನೆಗೊಂಡಿದ್ದು ಹಂಪಿ ಕನ್ನಡ ವಿಶ್ವವಿದ್ಯಾಲಯ

1990ರ ದಶಕ



29. ಬೊಮ್ಮಾಯಿ ಪ್ರಕರಣದ ಚಾರಿತ್ರಿಕ ತೀರ್ಪು: ಸಂವಿಧಾನ 356ನೇ ವಿಧಿಯ ದುರ್ಬಳಕೆ ವ್ಯಾಪಕವಾಗಿದ್ದ ಕಾಲಘಟ್ಟದಲ್ಲಿ, ಅದಕ್ಕೆ ಮೂಗುದಾರ ಹಾಕಿದ್ದು ಸುಪ್ರೀಂ ಕೋರ್ಟ್. ಜನರ ಆಯ್ಕೆಯ ಸರ್ಕಾರಕ್ಕೆ ಬಹುಮತ ಇದೆಯೇ ಇಲ್ಲವೇ ಎಂಬ ತೀರ್ಮಾನವು ವಿಧಾನಸಭೆಯಲ್ಲೇ ಆಗಬೇಕು; ಇನ್ನೆಲ್ಲೂ ಅಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದ್ದು ಎಸ್.ಆರ್. ಬೊಮ್ಮಾಯಿ ಪ್ರಕರಣದಲ್ಲಿ. ಭಾರತದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ತೀರ್ಪು ಚರಿತ್ರಾರ್ಹ. ಸುಪ್ರೀಂ ಕೋರ್ಟ್ ನೀಡಿರುವ ಅತ್ಯಂತ ಮಹತ್ವದ ತೀರ್ಪುಗಳ ಪೈಕಿ ಇದೂ ಒಂದು. ಈ ತೀರ್ಪು ಬರುವುದಕ್ಕೆ ಕಾರಣವಾದ ಅರ್ಜಿಯನ್ನು ಸಲ್ಲಿಸಿದ್ದು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಎಸ್.ಆರ್.ಬೊಮ್ಮಾಯಿ

30. ತಾಂತ್ರಿಕ ಶಿಕ್ಷಣಕ್ಕೊಂದು ವಿವಿ ಉನ್ನತ ತಾಂತ್ರಿಕ ಶಿಕ್ಷಣಕ್ಕಾಗಿಯೇ ಬೆಳಗಾವಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು 1998ರ ಏಪ್ರಿಲ್ 1ರಂದು ಉದ್ಘಾಟಿಸಲಾಯಿತು. ರಾಜ್ಯದೆಲ್ಲೆಡೆ 200ಕ್ಕೂ ಹೆಚ್ಚು ತಾಂತ್ರಿಕ ಶಿಕ್ಷಣ ಕಾಲೇಜು, ನಾಲ್ಕು ಅಧ್ಯಯನ ಕೇಂದ್ರಗಳು, ಎರಡು ಕೌಶಲ ಅಭಿವೃದ್ಧಿ ಕೇಂದ್ರಗಳು ಇದರ ವ್ಯಾಪ್ತಿಗೆ ಬರುತ್ತವೆ

31. ಸಿಲಿಕಾನ್ ವ್ಯಾಲಿ ಮುಕುಟ

90ರ ದಶಕದಲ್ಲಿ ಇಡೀ ದೇಶಕ್ಕೆ ಮಾದರಿಯಾದ ಐ.ಟಿ ಮತ್ತು ಬಿ.ಟಿ ನೀತಿ ರೂಪಿಸಿದ್ದು ರಾಜ್ಯದ ಹಿರಿಮೆ. ಸಾಫ್ಟ್‌ವೇರ್ ರಫ್ತಿನಲ್ಲಿ ಕರ್ನಾಟಕದ ಪಾಲು ಶೇ 42ರಷ್ಟಿದೆ. ಪ್ರಮುಖ ಐ.ಟಿ ಕಂಪನಿಗಳಾದ ವಿಪ್ರೊ ಮತ್ತು ಇನ್ಫೊಸಿಸ್ ನಾಡಿನ ಸಾಫ್ಟ್ ವೇರ್ ಉದ್ಯಮದ ದ್ಯೋತಕಗಳಾಗಿವೆ. ಬೆಂಗಳೂರಿಗೆ 'ಸಿಲಿಕಾನ್ ವ್ಯಾಲಿ' ಪಟ್ಟ ದಕ್ಕಿಸಿಕೊಡುವಲ್ಲಿ ಇವುಗಳ ಕೊಡುಗೆ ಹೆಚ್ಚಿದೆ

32. ಕರ್ನಾಟಕ ರತ್ನ ಪುರಸ್ಕಾರ: ರಾಜ್ಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಸಾಮಾನ್ಯ ಸೇವೆ ಸಲ್ಲಿಸಿದವರು, ಸಾಧಕರನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಎಸ್.ಬಂಗಾರಪ್ಪ ನೇತೃತ್ವದ ಸರ್ಕಾರ 1992ರಲ್ಲಿ 'ಕರ್ನಾಟಕ ರತ್ನ' ಎಂಬ ರಾಜ್ಯದ ಅತ್ಯುನ್ನತ ನಾಗರಿಕ ಪುರಸ್ಕಾರ ನೀಡುವ ನಿರ್ಧಾರ ಕೈಗೊಂಡಿತು

33. ಗ್ರಾಮ ಸ್ವರಾಜ್ಯದತ್ತ ದಿಟ್ಟ ಹೆಜ್ಜೆ: ಪ್ರಬಲವಾದ ಗ್ರಾಮ ಸ್ವರಾಜ್ ಕಾಯ್ದೆಯೊಂದಿಗೆ 3 ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು 1993ರಲ್ಲಿ ಅಸ್ತಿತ್ವಕ್ಕೆ ತರಲಾಯಿತು

34. ದೇಶಕ್ಕೇ ಮಾದರಿಯಾಗಿದ್ದ ಸಿಇಟಿ: ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್ ಪ್ರವೇಶದ ವಿಚಾರದಲ್ಲಿನ ಗೊಂದಲ ನಿವಾರಿಸಿ, ಪಾರದರ್ಶಕ ವ್ಯವಸ್ಥೆ ರೂಪಿಸುವ ಸಲುವಾಗಿ ವೀರಪ್ಪ ಮೊಯಿಲಿ ಅವರ ಸರ್ಕಾರ ಸಿಇಟಿ ಜಾರಿಗೊಳಿಸಿತು. ಇದು ದೇಶದಲ್ಲೇ ಮಾದರಿ ವ್ಯವಸ್ಥೆ ಎಂದು ಮೆಚ್ಚುಗೆ ಪಡೆಯಿತು

35. ನಂಜುಂಡಪ್ಪ ವರದಿ

ಪ್ರಾದೇಶಿಕ ಅಸಮತೋಲನ ನಿವಾರಿಸುವ ಉದ್ದೇಶದಿಂದ ಅರ್ಥಶಾಸ್ತ್ರಜ್ಞ ಡಿ.ಎಂ.ನಂಜುಂಡಪ್ಪ ನೇತೃತ್ವದಲ್ಲಿ ಉನ್ನತಾಧಿಕಾರ ಸಮಿತಿಯನ್ನು ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ 2000ದಲ್ಲಿ ರಚಿಸಲಾಯಿತು. ರಾಜ್ಯದಲ್ಲಿನ ಆಗಿನ 175 ತಾಲ್ಲೂಕುಗಳ ಪೈಕಿ 114 ತಾಲ್ಲೂಕುಗಳು ಹಿಂದುಳಿದಿವೆ ಎಂದು ಸಮಿತಿ ಗುರುತಿಸಿತು. ಈ ತಾಲ್ಲೂಕುಗಳ ಅಭಿವೃದ್ಧಿಗೆ ನಿರ್ದಿಷ್ಟ ಅವಧಿಗೆ ವಿಶೇಷ ಅನುದಾನ ಒದಗಿಸಬೇಕು ಎಂದೂ ಶಿಫಾರಸು ಮಾಡಿತು

36. ಪೌಷ್ಟಿಕಾಂಶಯುಕ್ತ ಬಿಸಿಯೂಟ

ಮಕ್ಕಳಲ್ಲಿ ಪೌಷ್ಟಿಕತೆ ಹೆಚ್ಚಿಸಲು, ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೆಳೆಯುವ ಉದ್ದೇಶದಿಂದ 2002-03ರಲ್ಲಿ ಅನುಷ್ಠಾನಕ್ಕೆ ಬಂದಿದ್ದ ಮಧ್ಯಾಹ್ನದ ಬಿಸಿಯೂಟ ಯೋಜನೆ, ಬಡ ಕುಟುಂಬಗಳ ಮಕ್ಕಳ ಪಾಲಿಗೆ ವರವಾಗಿದೆ. ಸದ್ಯ 58 ಲಕ್ಷ ಮಕ್ಕಳು ಇದರ ಲಾಭ ಪಡೆದುಕೊಳ್ಳುತ್ತಿದ್ದಾರೆ

37.ಮಹಿಳೆಯರಿಗಾಗಿಯೇ ವಿ.ವಿ.

ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ.ನಂಜುಂಡಪ್ಪ ವರದಿ ಆಧರಿಸಿ, ಉತ್ತರ ಕರ್ನಾಟಕ ಭಾಗದ ಮಹಿಳೆಯರಿಗೆ ಉನ್ನತ ಮತ್ತು ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ವಿಜಯಪುರದಲ್ಲಿ 2003ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಮೈಲಿಗಲ್ಲು

38. ವಿಧಾನಸೌಧದ 'ಹೊರೆ' ಇಳಿಸಿದ ವಿಕಾಸಸೌಧ: ವಿಧಾನಸೌಧ ಕೆಂಗಲ್ ಹನುಮಂತಯ್ಯ ಅವರ ಕಾಲದಲ್ಲಿ ನಿರ್ಮಾಣವಾದರೆ, ಅದನ್ನೇ ಹೋಲುವ ವಿಕಾಸಸೌಧ ನಿರ್ಮಾಣವಾಗಿದ್ದು ಎಸ್. ಎಂ.ಕೃಷ್ಣ ಅವರ ಅವಧಿಯಲ್ಲಿ. ಇದರಲ್ಲಿ ಕೆಲವು ಸಚಿವರು ಹಾಗೂ ಶಾಸನಸಭೆಯ ಅಧಿಕಾರಿಗಳ ಕಚೇರಿಗಳಿವೆ. ರಾಜ್ಯದ 'ಶಕ್ತಿಕೇಂದ್ರ'ವಾದ ವಿಧಾನಸೌಧವು ತನ್ನ ಹಿರಿಮೆಗೆ ತಕ್ಕಂತೆ ಭವ್ಯ ವಾಸ್ತುಶಿಲ್ಪ ಹೊಂದಿದ್ದರೆ, ವಿಕಾಸಸೌಧವು ಅದರ ತದ್ರೂಪಿಯಂತಿದೆ

39. ಬೆಳಗಾವಿಯಲ್ಲಿ ಅಧಿವೇಶನ

ಬೆಳಗಾವಿ ತನ್ನದು ಎಂಬ ಮಹಾರಾಷ್ಟ್ರದ ಪ್ರತಿಪಾದನೆಯ ವಿರುದ್ಧ ಪ್ರಬಲವಾದ ಸಂದೇಶ ರವಾನಿಸುವುದಕ್ಕಾಗಿ 2006ರಲ್ಲಿ ಜೆಡಿಎಸ್- ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರವು ಬೆಳಗಾವಿಯಲ್ಲಿ ವಿಧಾನಮಂಡಲದ ಅಧಿವೇಶನ ನಡೆಸಿತು. ಆರಂಭದ ಕೆಲವು ವರ್ಷಗಳಲ್ಲಿ ಕೆಎಲ್‌ಇ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಅಧಿವೇಶನ ನಡೆಸಲಾಯಿತು. ನಂತರ ಭವ್ಯವಾದ ಸುವರ್ಣ ವಿಧಾನಸೌಧ ನಿರ್ಮಾಣ ಕಾಮಗಾರಿ ಆರಂಭಿಸಲಾಯಿತು. 2012ರಲ್ಲಿ ಸುವರ್ಣ ವಿಧಾನಸೌಧ ಉದ್ಘಾಟನೆಯಾಯಿತು

40. ಬಿಬಿಎಂಪಿ ರಚನೆ: ಅಭಿವೃದ್ಧಿಯ ನಾಗಾಲೋಟದಲ್ಲಿರುವ ಬೆಂಗಳೂರಿನ ಆಡಳಿತ ನಿರ್ವಹಣೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ದೃಷ್ಟಿಯಿಂದ ನಗರದ ವ್ಯಾಪ್ತಿಯನ್ನು ವಿಸ್ತರಿಸಿ, ಬೆಂಗಳೂರು ನಗರ ಪಾಲಿಕೆಯನ್ನು 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ' (ಬಿಬಿಎಂಪಿ) ಎಂದು 2007ರಲ್ಲಿ ಮರುನಾಮಕರಣ ಮಾಡಲಾಯಿತು. ದೇಶದಲ್ಲೇ 4ನೇ ಅತಿ ದೊಡ್ಡ ಮಹಾ ನಗರ ಪಾಲಿಕೆ ಎಂಬ ಹೆಗ್ಗಳಿಕೆ ಬಿಬಿಎಂಪಿಯದ್ದು

41. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ: ಮೂರು ವರ್ಷಗಳ ನಿರಂತರ ಹೋರಾಟದಿಂದಾಗಿ ಕನ್ನಡ ಭಾಷೆಗೆ 2008ರ ನ.1ರಂದು ಶಾಸ್ತ್ರೀಯ ಸ್ಥಾನಮಾನವನ್ನು ಕೇಂದ್ರ ಸರ್ಕಾರ ಪ್ರಕಟಿಸಿತು.

42. ಜಾಗತಿಕ ಸಂಪರ್ಕದ ಕೊಂಡಿ: ಬೆಂಗಳೂರಿನ ಬಳಿಯ ದೇವನಹಳ್ಳಿಯಲ್ಲಿ ಸರ್ಕಾರಿ -ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣಗೊಂಡಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎಎಲ್) ಐಟಿ-ಬಿಟಿ, ಸ್ಟಾರ್ಟ್‌ಅಪ್ ನಗರ ಮತ್ತು ಜಗತ್ತಿನ ಬಹುತೇಕ ರಾಷ್ಟ್ರಗಳಿಗೆ ನೇರವಾಗಿ ಸಂಪರ್ಕ ಬೆಸೆಯುವ ಕೊಂಡಿ. 2008ರಲ್ಲಿ ಬಳಕೆಗೆ ಮುಕ್ತವಾದ ಈ ವಿಮಾನ ನಿಲ್ದಾಣ, ಅತಿ ಹೆಚ್ಚು ವಿಮಾನಗಳು ಕಾರ್ಯಾಚರಿಸುವ ದೇಶದ ಮೂರನೇ ವಿಮಾನ ನಿಲ್ದಾಣ. ಇದರ ಟರ್ಮಿನಲ್-2ರ ವಿನ್ಯಾಸ ಜಾಗತಿಕ ಮಟ್ಟದಲ್ಲಿ ಗಮನಸೆಳೆದಿದೆ

2000ದ ದಶಕ

2010ರ ದಶಕ

43. ಗ್ರಾಮೀಣ ಮಹಿಳೆಯರ 'ಬಲ'

ಗ್ರಾಮೀಣ ಪ್ರದೇಶಗಳಲ್ಲಿ ಬಡತನ ನಿರ್ಮೂಲನೆ, ಸ್ವಂ ಉದ್ಯೋಗಕ್ಕೆ ಪ್ರೋತ್ಸಾಹಿಸಲು ರೂಪುಗೊಂಡ 'ಸ್ವಸಹಾಯ ಸಂಘ'ದ ಪರಿಕಲ್ಪನೆ ರಾಜ್ಯದ ಗ್ರಾಮೀಣ ಪ್ರದೇಶದ ಬಡವರು ಅದರಲ್ಲೂ ವಿಶೇಷವಾಗಿ ಮಹಿಳೆಯರು ಆರ್ಥಿಕವಾಗಿ ಸಬಲರನ್ನಾಗಿಸುವ ನಿಟ್ಟನಲ್ಲಿ ಮಹತ್ವದ್ದು. 2011ರಲ್ಲಿ 'ಸಂಜೀವಿನಿ' ಸೊಸೈಟಿ ಅಡಿಯಲ್ಲಿ ಈ ಯೋಜನೆ ಅನುಷ್ಠಾನಗೊಂಡಿದೆ. ಸದ್ಯ 2.50 ಲಕ್ಷಕ್ಕೂ ಹೆಚ್ಚು ಸಂಘಗಳು ಕಾರ್ಯಾಚರಿಸುತ್ತಿದ್ದು 55 ಲಕ್ಷಕ್ಕೂ ಹೆಚ್ಚು ಸದಸ್ಯರಿದ್ದಾರೆ

44. ಮೆಟ್ರೊ ಸಾರಿಗೆ ಕ್ರಾಂತಿ: 'ನಮ್ಮ ಮೆಟ್ರೊ' ಬೆಂಗಳೂರಿನ ಸಂಚಾರ ವ್ಯವಸ್ಥೆಯಲ್ಲಿ ಹೊಸ ಕ್ರಾಂತಿಯನ್ನೇ ಮಾಡಿದೆ. ಸಂಚಾರ ದಟ್ಟಣೆಯ ವಿಚಾರದಲ್ಲಿ ಜಾಗತಿಕ ಮಟ್ಟದಲ್ಲಿ ಅಪಖ್ಯಾತಿ ಗಳಿಸಿರುವ ಉದ್ಯಾನ ನಗರಿಯ ಜನರ ಮಟ್ಟಿಗೆ ಮೆಟ್ರೊ ರೈಲು ಒಂದು ಆಶಾಕಿರಣವಾಗಿದೆ

2020ರ ದಶಕ

45. ನ್ಯಾಯದಾನ ಇನ್ನಷ್ಟು ಹತ್ತಿರ: ಕೋರ್ಟ್ ಕೆಲಸಕ್ಕೆ ದೂರದ ರಾಜಧಾನಿಗೆ ಅಲೆದಾಡುವುದನ್ನು ತಪ್ಪಿಸಲು ಉತ್ತರ ಕರ್ನಾಟಕ ಮತ್ತು ಈಶಾನ್ಯ ಕರ್ನಾಟಕ ಭಾಗದಲ್ಲಿ ಪ್ರತ್ಯೇಕ ಪೀಠ ಸ್ಥಾಪನೆಯಾಗಬೇಕೆಂಬ ಕೂಗು 2000ದ ದಶಕದಲ್ಲಿ ಬಲವಾಗಿತ್ತು. ಕೊನೆಗೂ 2013ರ ಆಗಸ್ಟ್ 24ರಂದು ಧಾರವಾಡದಲ್ಲಿ ಮತ್ತು ಕಲಬುರಗಿಯಲ್ಲಿ ಹೈಕೋರ್ಟ್ ಕಾಯಂ ಪೀಠಗಳ ಸ್ಥಾಪನೆಯಾಯಿತು

46. 'ಕಲ್ಯಾಣ'ದ ಬಾಳು ಬೆಳಗಿದ 371 (ಜೆ)

ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದ ಕಲ್ಯಾಣ ಕರ್ನಾಟಕದ ಜನತೆಯ 'ಶಾಪ' ವಿಮೋಚನೆಯಂತೆ ಒದಗಿ ಬಂದಿದ್ದು 371 (ಜೆ) ವಿಧಿ ಕಾಯ್ದೆಯ ಜಾರಿ. 2013ರಲ್ಲಿ ಯುಪಿಎ ಸರ್ಕಾರವು ಕಾಯ್ದೆ ಜಾರಿ ಮಾಡುವ ಮೂಲಕ ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ಶಿಕ್ಷಣ ಹಾಗೂ ನೇಮಕಾತಿಯಲ್ಲಿ ವಿಶೇಷ ಮೀಸಲಾತಿ ಕೊಡಲು ಸಾಧ್ಯವಾಗಿದೆ

47. ನವೋದ್ಯಮದ ತವರು: ನಾವೀನ್ಯ ವಲಯಕ್ಕೆ ನವೋದ್ಯಮಗಳೇ ಜೀವನಾಡಿ. ಅವುಗಳಿಗೆ ಪೂರಕ ವಾತಾವರಣ ಸೃಷ್ಟಿಸಿರುವುದು ಕರುನಾಡಿನ ಹೆಗ್ಗಳಿಕೆ. ಹಾಗಾಗಿಯೇ, ಇಡೀ ದೇಶದಲ್ಲಿಯೇ ನವೋದ್ಯಮಗಳ ಶ್ರೇಯಾಂಕದಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ ದಕ್ಕಿದೆ. 15 ಸಾವಿರಕ್ಕೂ ಹೆಚ್ಚು ನವೋದ್ಯಮಗಳು ಇಲ್ಲಿವೆ. ದೇಶದಲ್ಲಿರುವ ಯೂನಿಕಾರ್ನ್‌ಗಳ ಸಂಖ್ಯೆ 112. ಈ ಪೈಕಿ 45 ಇಲ್ಲಿರುವುದೇ ರಾಜ್ಯದ ಅಗ್ಗಳಿಕೆ

48. ಧಾರವಾಡದ ಐಐಐಟಿ: ಶಿಕ್ಷಣ ಕಾಶಿ ಧಾರವಾಡದ ಹೊಸ ಹೆಗ್ಗರುತು ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಟಿ). ರಾಜ್ಯದ ಮೊದಲ ಐಐಐಟಿಯೂ ಹೌದು. 2016ರಲ್ಲಿ ಆರಂಭಗೊಂಡಿರುವ ಸಂಸ್ಥೆ 470 ಎಕರೆ ಪ್ರದೇಶದಲ್ಲಿ ಹರಡಿದೆ

49. ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ

'ಹೈದರಾಬಾದ್ ಕರ್ನಾಟಕ' ಎಂದು ಕರೆಯಲಾಗುತ್ತಿದ್ದ ಈಶಾನ್ಯ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳನ್ನೊಳಗೊಂಡ ಪ್ರದೇಶಕ್ಕೆ 2019ರ ಸೆ.7ರಂದು 'ಕಲ್ಯಾಣ ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು. ಇದೇ ಮಾದರಿಯಲ್ಲಿ, 'ಮುಂಬೈ ಕರ್ನಾಟಕ' ಎಂದು ಕರೆಯಲಾಗುತ್ತಿದ್ದ ಪ್ರದೇಶಕ್ಕೆ 2021ರ ಅ.23ರಂದು ಕಿತ್ತೂರು ಕರ್ನಾಟಕ ಎಂದು ನಾಮಕಾರಣ ಮಾಡಲಾಯಿತು

50. ಬಿಕ್ಕಟ್ಟಿನ ಕಾಲದ ಸಮಾನತೆಯ 'ರಾಯಭಾರಿ'



12ನೇ ಶತಮಾನದಲ್ಲಿಯೇ ಸಮಾನತೆಯ ಸಂದೇಶದೊಂದಿಗೆ ವಿವಿಧ ಜಾತಿ, ವೃತ್ತಿಗಳ ಜನರನ್ನು ಸಂಘಟಿಸಿ ಶರಣ ಚಳವಳಿ ರೂಪಿಸಿದವರು ಬಸವಣ್ಣ; ಸಾಮಾಜಿಕ ನ್ಯಾಯದ ಆಶಯಗಳನ್ನು ತಮ್ಮ ವಚನ ಹಾಗೂ ಕ್ರಿಯೆಗಳ ಮೂಲಕ ನಾಡಿನಲ್ಲಿ ಹರಡಿದವರು. ಜಾಗತಿಕ ಮಹತ್ವದ ಸಾಂಸ್ಕೃತಿಕ ಚಳವಳಿಯ ಮುಂದಾಳಾಗಿದ್ದ ಬಸವಣ್ಣ ಅವರನ್ನು ಹಾಲಿ ರಾಜ್ಯ ಸರ್ಕಾರ ಈ ವರ್ಷ(2024) 'ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ' ಎಂದು ಘೋಷಿಸಿರುವುದು ಬಿಕ್ಕಟ್ಟಿನ ಕಾಲದಲ್ಲಿ ಸಂವಿಧಾನದ ಮೌಲ್ಯಗಳ ಪ್ರಸಾರಕ್ಕೆ ಸೂಕ್ತ ಕಾರ್ಯ

‘ನಗರ ನಕ್ಸಲರ ಗುರುತಿಸಿ, ಮುಖವಾಡ ಕಳಚಿ’

ಸಂವಿಧಾನ, ಪ್ರಜಾಪ್ರಭುತ್ವ ಕುರಿತು ಮಾತನಾಡುತ್ತಾರೆ, ಸಮಾಜ ಒಡೆಯುತ್ತಾರೆ: ಪ್ರಧಾನಿ ಮೋದಿ

ಏಕ್ತಾನಗರ್ (ಗುಜರಾತ್) (ಪಿಟಿಐ): ‘ಅರಣ್ಯ ಪ್ರದೇಶಗಳಲ್ಲಿ ಈಗ ನಕ್ಸಲರ ಕೃತ್ಯ ಅಂತ್ಯವಾಗುತ್ತಿದೆ. 10 ವರ್ಷಗಳ ನಿರಂತರ ಯತ್ನದ ಪರಿಣಾಮ ನಕ್ಸಲ್ ಪಿಡುಗು ಕೊನೆಗಾಣುತ್ತಿದೆ. ಆದರೆ, ನಗರ ನಕ್ಸಲರ ರೂಪದಲ್ಲಿ ಹೊಸದಾಗಿ ತಲೆಎತ್ತುತ್ತಿದೆ. ದೇಶ ವಿಭಜನೆಯ ಕನಸು ಕಾಣುತ್ತಿರುವ ‘ನಗರ ನಕ್ಸಲ’ರ ವ್ಯವಸ್ಥಿತವಾದ ಸಂಪರ್ಕ ಜಾಲವನ್ನು ಜನರೇ ಗುರುತಿಸಿ, ಅವರ ವಿರುದ್ಧ ಹೋರಾಡಬೇಕು ಹಾಗೂ ಅವರ ಮುಖವಾಡಗಳನ್ನು ಕಳಚಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಇಲ್ಲಿ ಕರೆ ನೀಡಿದರು.

‘ದೇಶವನ್ನು ಅಸ್ಥಿರಗೊಳಿಸಲು ಹಾಗೂ ಜಾಗತಿಕ ಮಟ್ಟದಲ್ಲಿ ಕೆಟ್ಟದ್ದಾಗಿ ಬಿಂಬಿಸಲು ದೇಶದ ಕೆಲ ಆಂತರಿಕ ಹಾಗೂ ಬಾಹ್ಯ ಶಕ್ತಿಗಳು ಯತ್ನಿಸುತ್ತಿವೆ’ ಎಂದು ಆರೋಪಿಸಿದರು.

ಯಾರ ಹೆಸರೂ ಉಲ್ಲೇಖಿಸದ ಪ್ರಧಾನಿ, ‘ಈ ಜನರು’ ಜಾತಿ ಆಧಾರದಲ್ಲಿ ದೇಶ ವಿಭಜಿಸಲು ಈಗ ಯತ್ನಿಸುತ್ತಿದ್ದಾರೆ. ಅವರ ಏಕೈಕ ಗುರಿ ಸಮಾಜವನ್ನು ದುರ್ಬಲಗೊಳಿಸುವುದು ಹಾಗೂ ಜನರ ಒಗ್ಗಟ್ಟಿಗೆ ಧಕ್ಕೆ ಉಂಟುಮಾಡುವುದು ಎಂದರು.

ಇಲ್ಲಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಬೃಹತ್ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಅ. 31 ಸರ್ದಾರ್ ಪಟೇಲರ ಜನ್ಮದಿನ, 2014ರಿಂದಲೂ ಈ ದಿನವನ್ನು ‘ರಾಷ್ಟ್ರೀಯ ಏಕತಾ ದಿನ’ವಾಗಿ ಆಚರಿಸಲಾಗುತ್ತಿದೆ.

‘ಕೆಲವು ಆಂತರಿಕ ಮತ್ತು ಬಾಹ್ಯ ಶಕ್ತಿಗಳು ದೇಶವನ್ನು ಅಸ್ಥಿರಗೊಳಿಸಲು ಹಾಗೂ ಅರಾಜಕತೆ ಮೂಡಿಸಲು ಯತ್ನಿಸುತ್ತಿವೆ. ದೇಶದ ಆರ್ಥಿಕ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುವುದೇ ಇಂತಹ ಶಕ್ತಿಗಳ ಉದ್ದೇಶ. ಈ ಮೂಲಕ ವಿದೇಶಿ ಹೂಡಿಕೆದಾರರಿಗೆ ತಪ್ಪು ಸಂದೇಶ ರವಾನಿಸಲೂ ಯತ್ನಿಸುತ್ತಿವೆ’ ಎಂದು ಆರೋಪಿಸಿದರು.

ಇಂತಹ ಶಕ್ತಿಗಳು ಎಲ್ಲ ಕಾಲದಲ್ಲಿಯೂ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಕುರಿತೇ ಮಾತನಾಡುತ್ತವೆ. ಆದರೆ, ವಾಸ್ತವವಾಗಿ ದೇಶವನ್ನು ವಿಭಜಿಸುವ ಕೃತ್ಯದಲ್ಲಿ ತೊಡಗಿವೆ ಎಂದು ತರಾಟೆಗೆ ತೆಗೆದುಕೊಂಡರು.

> **ಅಭಿವೃದ್ಧಿ ಹೊಂದಿದ ದೇಶ ನೋಡಲು ಅವರು ಬಯಸುವುದಿಲ್ಲ. ಅವರಿಗೆ ಬೇಕಿರುವುದು ದುರ್ಬಲ ದೇಶ. ಇಂಥ ‘ಕೀಳು ರಾಜಕಾರಣ’ ಐದು ದಶಕ ಇತ್ತು**
> **ನರೇಂದ್ರ ಮೋದಿ,** ಪ್ರಧಾನಮಂತ್ರಿ

ಪ್ರಧಾನಿ ನರೇಂದ್ರ ಮೋದಿ ಗುರುವಾರ ಗುಜರಾತ್ ಜಿಲ್ಲೆಯ ಕಚ್‌ನಲ್ಲಿ ಯೋಧರಿಗೆ ಸಿಹಿ ತಿನ್ನಿಸುವ ಮೂಲಕ ದೀಪಾವಳಿ ಹಬ್ಬ ಆಚರಿಸಿದರು –ಪಿಟಿಐ

ಯುಸಿಸಿ ಜಾರಿಗೆ ಕ್ರಮ: ಮೋದಿ

ಜಿಎಸ್‌ಟಿಯಿಂದ ‘ಒಂದು ರಾಷ್ಟ್ರ, ಒಂದೇ ರೀತಿ ತೆರಿಗೆ’ ಜಾರಿಗೆ ಬಂದಿದೆ. ಈಗ ‘ಒಂದು ರಾಷ್ಟ್ರ, ಒಂದೇ ಚುನಾವಣೆ’ ಜಾರಿಗೆ ಬರಲಿದೆ. ಮುಂದೆ ‘ಒಂದು ರಾಷ್ಟ್ರ, ಒಂದೇ ನಾಗರಿಕ ಸಂಹಿತೆ’ (ಯುಸಿಸಿ) ಜಾರಿಗೆ ತರಲು ಕ್ರಮವಹಿಸುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಇಲ್ಲಿ ಹೇಳಿದರು.

ಕೇಂದ್ರ ಸರ್ಕಾರದ ಪ್ರತಿ ಯೋಜನೆ ಏಕತೆಯನ್ನೇ ಬಿಂಬಿಸಲಿದೆ ಎಂದರು. ಹರ್ ಘರ್ ಜಲ್, ಆಯುಷ್ಮಾನ್ ಭಾರತ್, ಆವಾಸ್ ಯೋಜನೆಗಳ ಮೂಲಕ ತಾರತಮ್ಯವಿಲ್ಲದೆ ಎಲ್ಲರಿಗೂ ಸೌಲಭ್ಯ ಒದಗಿಸಲಾಗುತ್ತಿದೆ ಎಂದರು.

‘ಗಡಿ: ರಾಜಿ ಇಲ್ಲ’

ಭುಜ್ (ಪಿಟಿಐ): ‘ಭಾರತ ತನ್ನ ಗಡಿಯ ಒಂದು ಇಂಚೂ ಭೂಮಿ ವಿಷಯದಲ್ಲೂ ರಾಜಿ ಆಗುವುದಿಲ್ಲ’ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಇಲ್ಲಿ ಹೇಳಿದರು.

‘ಸೇನೆಯು ದೇಶದ ಗಡಿ ರಕ್ಷಿಸಲಿದೆ ಎಂದು ಜನರು ವಿಶ್ವಾಸ ಹೊಂದಿದ್ದಾರೆ’ ಎಂದರು. ಗಡಿಯ ಕಛ್ ವಲಯದಲ್ಲಿ ಯೋಧರ ಜೊತೆಗೆ ದೀಪಾವಳಿ ಆಚರಿಸಿ ಮಾತನಾಡಿದ ಸಂದರ್ಭದಲ್ಲಿ ಈ ಮಾತು ಹೇಳಿದರು.

‘ಭಾರತ ಇಂದು ಗಡಿ ವಿಷಯದಲ್ಲಿ ರಾಜಿ ಆಗುವ ಪ್ರಶ್ನೆಯೇ ಇಲ್ಲ. ನಮ್ಮ ಯೋಧರ ಬದ್ಧತೆ ಮೇಲೆ ನಮಗೆ ವಿಶ್ವಾಸವಿದೆ. ಇಂದು ದೇಶದ ಜನರು ಸುರಕ್ಷಿತವಾಗಿ ಇದ್ದಾರೆಂದರೆ ಅದಕ್ಕೆ ಯೋಧರೇ ಕಾರಣ’ ಎಂದು ಹೇಳಿದರು.

‘ಯೋಧರಿಗೆ ಸಿಹಿಯನ್ನು ಹಂಚಿ ಹಬ್ಬ ಆಚರಿಸಿದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕಾಂಗ್ರೆಸ್‌ನಿಂದ ಪಟೇಲರ ಸ್ಮರಣೆ

ನವದೆಹಲಿ (ಪಿಟಿಐ): ‘ಸಂವಿಧಾನವನ್ನು ಟೀಕಿಸಿದವರು ಮತ್ತು ಕ್ವಿಟ್ ಇಂಡಿಯಾ ಚಳವಳಿ ವಿರೋಧಿಸಿದ್ದವರನ್ನು ‘ಸೈದ್ಧಾಂತಿಕ ಗುರು’ವಾಗಿ ಒಪ್ಪಿರುವವರೇ ಇಂದು, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪರಂಪರೆಯನ್ನು ತಮ್ಮದಾಗಿಸಿಕೊಳ್ಳಲು ನಿರಂತರವಾಗಿ ಯತ್ನಿಸುತ್ತಿದ್ದಾರೆ’ ಎಂದು ಕಾಂಗ್ರೆಸ್ ಪಕ್ಷ ಗುರುವಾರ ತರಾಟೆಗೆ ತೆಗೆದುಕೊಂಡಿದೆ.

‘ಎಕ್ಸ್’ನಲ್ಲಿ ಈ ಕುರಿತು ಅಭಿಪ್ರಾಯ ಹಂಚಿಕೊಂಡಿರುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ಪಟೇಲ್ ಅವರು ಕಾಂಗ್ರೆಸ್‌ನ ದಿಗ್ಗಜ. ಕ್ವಿಟ್ ಇಂಡಿಯಾ ಚಳವಳಿ ಸಂದರ್ಭದಲ್ಲಿ ಮೂರು ವರ್ಷ ಸೆರೆವಾಸ ಅನುಭವಿಸಿದ್ದರು’ ಎಂದು ಸ್ಮರಿಸಿದರು.

ಪಟೇಲ್ ಅವರ ಮೂರ್ತಿಯನ್ನು ಗೋಧ್ರಾದಲ್ಲಿ ಮೊದಲಿಗೆ 1949ರ ಫೆಬ್ರುವರಿ 13ರಂದು ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಉದ್ಘಾಟಿಸಿದ್ದರು. ಪ್ರತಿಮೆ ಜೊತೆಗಿರುವ ನಾಮಫಲಕದಲ್ಲಿ ಈ ವಿವರ ಸ್ಪಷ್ಟವಾಗಿದೆ. ಸ್ಥಳೀಯ ಕಾಂಗ್ರೆಸ್ಸಿಗರು ಪ್ರತಿಮೆ ಸ್ಥಾಪಿಸಿದ್ದರು. ಪಟೇಲ್ ಅವರು ಗೋಧ್ರಾದಲ್ಲಿಯೇ ವಕೀಲಿಕೆ ಶುರು ಮಾಡಿದ್ದರು’ ಎಂದು ಹೇಳಿದ್ದಾರೆ.

ಪಟೇಲ್ ಅವರ ಜನ್ಮದಿನಾರಣೆಯ ದಿನವಾದ ಗುರುವಾರ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ಪಕ್ಷದ ಹಲವು ಮುಖಂಡರು ಗೌರವ ಸಲ್ಲಿಸಿದ್ದಾರೆ.

‘ದೇಶದ ಮೊದಲ ಉಪ ಪ್ರಧಾನಿ ಆಗಿದ್ದ ಪಟೇಲ್ ಅವರು ನಮಗೆ ಮಾದರಿ. ಅವರು ಸ್ವತಂತ್ರ ಭಾರತವನ್ನು ಪರಿಪೂರ್ಣ ದೇಶವಾಗಿಸಿದರು’ ಎಂದು ಖರ್ಗೆ ಸ್ಮರಿಸಿದ್ದಾರೆ.

ಕಾಂಗ್ರೆಸ್ ವಕ್ತಾರ ಪವನ್ ಖೇರಾ ಅವರು, ‘ಪಟೇಲರು ಸಂಘಿಗಳಿಗೆ ಕಡಿವಾಣ ಹಾಕಿದ್ದರು. ಜೀವನವಿಡೀ ಕಾಂಗ್ರೆಸ್ಸಿಗರಾಗಿದ್ದ ಅವರಿಗೆ ಇಂದು ಎಲ್ಲ ಸಂಘಿಗಳು ನಮಿಸುತ್ತಿದ್ದಾರೆ. ಇದೇ ಸಂಘಿಗಳು ಈ ಹಿಂದೆ ಪಟೇಲರ ವಿರುದ್ಧ ಪುಸ್ತಕ ಮುದ್ರಿಸಿ, ಹಂಚಿದ್ದರು’ ಎಂದಿದ್ದಾರೆ.

ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ದೇಶವನ್ನು ಏಕತೆ ಮತ್ತು ಸೌಹಾರ್ದ ಭಾವದಿಂದ ಪಟೇಲ್ ಒಗ್ಗೂಡಿಸಿದರು ಎಂದು ಹೇಳಿದ್ದಾರೆ.

ಪ್ರಿಯಾಂಕಾ ಗಾಂಧಿ ಅವರು ತಮ್ಮ ಪೋಸ್ಟ್‌ನಲ್ಲಿ, ‘ಪಟೇಲ್ ಅವರು ಆಧುನಿಕ ಭಾರತದ ಶಿಲ್ಪಿ. ಅವರ ಕೊಡುಗೆಗಳು ದೇಶಕ್ಕೆ ಸಲ್ಲಿಸಿದ ಸೇವೆ, ಬದ್ಧತೆಗೆ ನಿದರ್ಶನ’ ಎಂದಿದ್ದಾರೆ.

ಇಂದಿರಾ ಗಾಂಧಿಗೆ ‘ಕೈ’ ನಾಯಕರ ನಮನ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಪುಣ್ಯ ಸ್ಮರಣೆ ದಿನವಾದ ಗುರುವಾರ ಕಾಂಗ್ರೆಸ್ ನಾಯಕರು ಇಂದಿರಾ ಅವರ ಕೊಡುಗೆಗಳನ್ನು ಸ್ಮರಿಸುವ ಮೂಲಕ ನಮನ ಸಲ್ಲಿಸಿದರು.

ದೇಶದ ಮೊದಲ ಮಹಿಳಾ ಪ್ರಧಾನಿಯಾದ ಇಂದಿರಾ ಗಾಂಧಿ ಅವರನ್ನು ಅವರ ಅಂಗರಕ್ಷಕರೇ 1984ರ ಅಕ್ಟೋಬರ್ 31ರಂದು ಹತ್ಯೆ ಮಾಡಿದ್ದರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಇಂದಿರಾ ಅವರ ಸಮಾಧಿಯಿರುವ ‘ಶಕ್ತಿ ಸ್ಥಳ’ಕ್ಕೆ ಹೋಗಿ ಪುಷ್ಪ ಅರ್ಪಿಸಿ ನಮಿಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ದಿವಂಗತ ಮಾಜಿ ಪ್ರಧಾನಿಗೆ ಗೌರವ ಅರ್ಪಿಸಿದರು.

ಇಂದಿರಾ ಅವರ ಮೊಮ್ಮಗ ರಾಹುಲ್ ಅವರು ‘ಎಕ್ಸ್’ನಲ್ಲಿ, ‘ಅಜ್ಜಿ, ದೇಶದ ಏಕತೆ ಮತ್ತು ಸಮಗ್ರತೆಗೆ ನಿಮ್ಮ ತ್ಯಾಗವು ಸಾರ್ವಜನಿಕ ಸೇವೆಯ ಹಾದಿಯಲ್ಲಿ ನಮ್ಮೆಲ್ಲರಿಗೂ ಪ್ರೇರಣೆಯಾಗಿದೆ’ ಎಂದು ಸ್ಮರಿಸಿದ್ದಾರೆ. ಇದೇ ವೇಳೆ ಅವರು ಇಂದಿರಾ ಅವರ ಕೊಡುಗೆಗಳ ಕುರಿತ ವಿಡಿಯೊ ಹಂಚಿಕೊಂಡಿದ್ದಾರೆ.

ಇಂದಿರಾ ಅವರ ಮೊಮ್ಮಗಳು, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ‘ದೇಶಕ್ಕಾಗಿ ನೀವು ಬದ್ಧತೆ ತೋರಿ, ತ್ಯಾಗ ಮಾಡಿದ್ದೀರಿ. ನಿಮ್ಮಿಂದ ಕಲಿತ ಪಾಠಗಳು ಮತ್ತು ಮೌಲ್ಯಗಳು ನಮಗೆ ಸದಾ ಮಾರ್ಗದರ್ಶಿ. ದೇಶಕ್ಕಾಗಿ ಹುತಾತ್ಮರಾದ ನಿಮಗೆ ನಮನಗಳು’ ಎಂದಿದ್ದಾರೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಪುಣ್ಯ ಸ್ಮರಣೆ ದಿನವಾದ ಗುರುವಾರ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನವದೆಹಲಿಯ ‘ಶಕ್ತಿ ಸ್ಥಳ’ದಲ್ಲಿ ಇಂದಿರಾ ಗಾಂಧಿ ಅವರ ಸಮಾಧಿಗೆ ಪುಷ್ಪ ನಮನ ಸಲ್ಲಿಸಿದರು
ಪಿಟಿಐ ಚಿತ್ರ

‘ನಾಲ್ವರು ಬಾಲಕಿಯರ ಮೇಲೆ ವರ್ಷದಿಂದ ಅತ್ಯಾಚಾರ’

ಪ್ರಜಾವಾಣಿ ವಾರ್ತೆ/ಪಿಟಿಐ

ಅಹಮದಾಬಾದ್: ನಾಲ್ವರು ಬಾಲಕಿಯರ ಮೇಲೆ ಒಂದು ವರ್ಷಗಳವರೆಗೆ ಅತ್ಯಾಚಾರ ನಡೆಸಿದ 54 ವರ್ಷದ ಚಂದ್ರಕಾಂತ್ ಪಾಟೀಲ್ ಎಂಬ ವ್ಯಕ್ತಿಯ ಮೊಬೈಲ್‌ನಲ್ಲಿ ಕೃತ್ಯದ 30–40 ವಿಡಿಯೊಗಳು ದೊರೆತಿವೆ ಎಂದು ಪೊಲೀಸರು ತಿಳಿಸಿದರು.

‘ತನಗೆ ಆಗುತ್ತಿರುವ ನೋವಿನ ಕುರಿತು ಒಬ್ಬ ಬಾಲಕಿ ತನ್ನ ತಾಯಿಯಲ್ಲಿ ಇತ್ತೀಚೆಗೆ ಹೇಳಿಕೊಂಡಿದ್ದಳು. ಈ ಬಾಲಕಿಯ ತಾಯಿ ಚಂದ್ರಕಾಂತ್ ವಿರುದ್ಧ ದೂರು ನೀಡಿದ್ದರು. ಈತನ ವಿರುದ್ಧ ಪೋಕ್ಸೊ ಕಾಯ್ದೆಯ ಅಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು ವಿವರಿಸಿದರು.

ಮನೆಯಲ್ಲಿ ಒಬ್ಬರೇ ಇರುತ್ತಿದ್ದ ಚಿತ್ರಕಾರ ಚಂದ್ರಕಾಂತ್, ತಮ್ಮ ಮನೆಯ ಸುತ್ತಮುತ್ತ ಇರುವ 4ರಿಂದ 11 ವರ್ಷದ ನಾಲ್ವರು ಬಾಲಕಿಯರಿಗೆ ಚಾಕೊಲೇಟ್, ಬಿಸ್ಕೆಟ್ ಹಾಗೂ ಐಸ್ ಕ್ರೀಂಗಳ ಆಸೆ ತೋರಿಸಿ ಅತ್ಯಾಚಾರ ನಡೆಸುತ್ತಿದ್ದ. ಅ.13ರಂದು ಆತನನ್ನು ಪೊಲೀಸರು ಬಂಧಿಸಿದ್ದರು.

‘ಅತ್ಯಾಚಾರ ನಡೆಸುತ್ತಿದ್ದ ಈತ ಕೃತ್ಯದ ವಿಡಿಯೊಗಳನ್ನು ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದ. ಈ ವಿಡಿಯೊಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಹಲವು ಮಾಡೆಲ್ ಹಾಗೂ ನಟಿಯರ ಜೊತೆಯಲ್ಲಿ ಆತ ನಿಂತುಕೊಂಡಿರುವಂತೆ ಎಡಿಟ್ ಮಾಡಿದ ಫೋಟೊಗಳೂ ಈತನ ಮೊಬೈಲ್‌ನಲ್ಲಿ ದೊರೆತಿವೆ’ ಎಂದರು.

ಕೇಶವ್ ಮಹಾರಾಜ್‌ಗೆ ಐದು ವಿಕೆಟ್ ಗೊಂಚಲು • ಸರಣಿ 2–0 ಕ್ಲೀನ್‌ಸ್ವೀಪ್

ಬಾಂಗ್ಲಾ ವಿರುದ್ಧ ದಕ್ಷಿಣ ಆಫ್ರಿಕಾಕ್ಕೆ ಇನಿಂಗ್ಸ್ ಜಯ

ಚಿತ್ತಗಾಂಗ್ (ಎಎಫ್‌ಪಿ): ಎಡಗೈ ಸ್ಪಿನ್ನರ್ ಕೇಶವ್ ಮಹಾರಾಜ್ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ದಕ್ಷಿಣ ಆಫ್ರಿಕಾ ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ಮೂರೇ ದಿನಗಳಲ್ಲಿ ಬಾಂಗ್ಲಾದೇಶ ತಂಡವನ್ನು ಇನಿಂಗ್ಸ್ ಮತ್ತು 273 ರನ್‌ಗಳಿಂದ ಪರಾಭವಗೊಳಿಸಿತು. ಪ್ರವಾಸಿ ತಂಡ ಸರಣಿಯನ್ನು 2–0 ಯಿಂದ ಸ್ವೀಪ್ ಮಾಡಿತು.

ಇದು ಬಾಂಗ್ಲಾದೇಶ ಟೆಸ್ಟ್ ಪಂದ್ಯ ಒಂದರಲ್ಲಿ ಗಳಿಸಿದ ಅತಿ ದೊಡ್ಡ ಅಂತರದ ಗೆಲುವು. ಈ ಹಿಂದೆ, 2017ರಲ್ಲಿ ತವರಿನಲ್ಲಿ ಬಾಂಗ್ಲಾ ವಿರುದ್ಧ ಇನಿಂಗ್ಸ್ ಮತ್ತು 254 ರನ್ ಅಂತರದ ಜಯ ಇದುವರೆಗಿನ ಅತಿ ದೊಡ್ಡ ಜಯವಾಗಿತ್ತು.

ಬುಧವಾರ, ಎರಡನೇ ದಿನ ದಕ್ಷಿಣ ಆಫ್ರಿಕಾ ತಂಡದ 575 (6 ವಿಕೆಟ್‌ಗೆ ಡಿಕ್ಲೇರ್) ರನ್‌ಗಳಿಗೆ ಉತ್ತರವಾಗಿ ದಿನದ ಕೊನೆಗೆ 38 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿದ್ದ ಬಾಂಗ್ಲಾದೇಶ 159 ರನ್‌ಗಳಿಗೆ ಪತನಗೊಂಡಿತು. ಮೊಮಿನುಲ್ ಹಕ್ (82, 112ಎ, 4x8, 2x6) ಬಿಟ್ಟರೆ ಬೇರಾರೂ ಬೇರೂರಲಿಲ್ಲ. ಕಗಿಸೊ ರಬಾಡ 9 ಓವರುಗಳಲ್ಲಿ 37 ರನ್ನಿಗೆ 5 ವಿಕೆಟ್ ಬಾಚಿದರು.

ಫಾಲೊ ಆನ್‌ಗೆ ಒಳಗಾದ ಬಾಂಗ್ಲಾದೇಶ ಎರಡನೇ ಇನಿಂಗ್ಸ್‌ನಲ್ಲಿ ಸ್ಪಿನ್ ದಾಳಿಗೆ ಸಿಲುಕಿ 143 ರನ್‌ಗಳಿಗೆ ಕುಸಿಯಿತು. ಮಹಾರಾಜ್‌ಗೆ ಬೆಂಬಲ ನೀಡಿದ ಇನ್ನೊಬ್ಬ ಎಡಗೈ ಸ್ಪಿನ್ನರ್ ಸೆನುರಾನ್ ಮುತ್ತುಸಾಮಿ 4 ವಿಕೆಟ್ ಗಳಿಸಿದರು.

ವಿಕೆಟ್ ಪಡೆದ ಖುಷಿಯಲ್ಲಿ ಕೇಶವ್ ಮಹಾರಾಜ್
ಎಎಫ್‌ಪಿ ಚಿತ್ರ

ದಕ್ಷಿಣ ಆಫ್ರಿಕಾ ವಿರುದ್ಧ ಈವರೆಗೆ 16 ಟೆಸ್ಟ್‌ಗಳನ್ನು ಆಡಿರುವ ಬಾಂಗ್ಲಾ ಒಂದರಲ್ಲೂ ಗೆದ್ದಿಲ್ಲ.

ಸ್ಕೋರುಗಳು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 6 ವಿಕೆಟ್‌ಗೆ 575 ಡಿ; ಬಾಂಗ್ಲಾದೇಶ: 45.2 ಓವರುಗಳಲ್ಲಿ 159 (ಮೊಮಿನುಲ್ ಹಕ್ 82, ತೈಜುಲ್ ಇಸ್ಲಾಂ 30; ಕಗಿಸೊ ರಬಾಡ 37ಕ್ಕೆ5, ಡೇನ್ ಪೀಟರ್ಸನ್ 31ಕ್ಕೆ2, ಕೇಶವ್ ಮಹಾರಾಜ್ 57ಕ್ಕೆ2) ಮತ್ತು (ಫಾಲೊಆನ್): 43.4 ಓವರುಗಳಲ್ಲಿ 143 (ನಜ್ಮುಲ್ ಹುಸೇನ್ ಶಾಂತೊ 36, ಮಹಿದುಲ್ ಇಸ್ಲಾಂ ಅಂಕೊನ್ 29, ಹಸನ್ ಮಹಮುದ್ ಔಟಾಗದೇ 38; ಸೆನುರಾನ್ ಮುತ್ತುಸಾಮಿ 45ಕ್ಕೆ4, ಕೇಶವ್ ಮಹಾರಾಜ್ 59ಕ್ಕೆ5). ಪಂದ್ಯದ ಆಟಗಾರ: ಟೋನಿ ಡಿ ಝೋರ್ಜಿ (177), ಸರಣಿಯ ಆಟಗಾರ: ಕಗಿಸೊ ರಬಾಡ (14 ವಿಕೆಟ್)

ತಂಡಕ್ಕೆ ಮರಳಿದ ಮಿಲ್ಲರ್, ಕ್ಲಾಸೆನ್

ಜೊಹಾನೆಸ್‌ಬರ್ಗ್ (ಎಎಫ್‌ಪಿ): ಬ್ಯಾಟಿಂಗ್ ತಾರೆಗಳಾದ ಡೇವಿಡ್ ಮಿಲ್ಲರ್ ಮತ್ತು ಹೆನ್ರಿಚ್ ಕ್ಲಾಸೆನ್ ಅವರು ಪ್ರವಾಸಿ ಭಾರತ ವಿರುದ್ಧ ನವೆಂಬರ್ ಎರಡನೇ ವಾರದಿಂದ ನಡೆಯುವ ನಾಲ್ಕು ಪಂದ್ಯಗಳ ಟಿ20 ಸರಣಿ ಆಡಲಿರುವ ದಕ್ಷಿಣ ಆಫ್ರಿಕಾ ತಂಡದಲ್ಲಿ ಮರಳಿ ಸ್ಥಾನ ಪಡೆದಿದ್ದಾರೆ.

ಸರಣಿಯ ಮೊದಲ ಪಂದ್ಯ ಡರ್ಬನ್‌ನಲ್ಲಿ ನವೆಂಬರ್ 8ರಂದು ನಡೆಯಲಿದೆ. ಜೂನ್‌ನಲ್ಲಿ ಆತಿಥೇಯ ಭಾರತ ಕೈಲಿ ವಿಶ್ವಕಪ್ ಫೈನಲ್‌ನಲ್ಲಿ ಅನುಭವಿಸಿದ ಏಳು ರನ್ ಸೋಲಿಗೆ ಸೇಡುತೀರಿಸಲು ಹರಿಣಗಳ ಪಡೆಗೆ ಇದು ಅವಕಾಶ ಒದಗಿಸಿದೆ.

ಎಡಗೈ ವೇಗದ ಬೌಲರ್ ಮಾರ್ಕೊ ಯಾನ್ಸೆನ್ ಮತ್ತು ಎಡಗೈ ಸ್ಪಿನ್ನರ್ ಕೇಶವ ಮಹರಾಜ್ ಅವರೂ ತಂಡಕ್ಕೆ ವಾಪಸಾಗಿದ್ದಾರೆ. ಈ ನಾಲ್ಕು ಮಂದಿ ಐರ್ಲೆಂಡ್ ವಿರುದ್ಧ ನಡೆದ ಸರಣಿಯಲ್ಲಿ ಆಡಿರಲಿಲ್ಲ. ಇವರು ಆ ವೇಳೆ ವಿವಿಧೆಡೆ ಫ್ರಾಂಚೈಸಿ ಲೀಗ್‌ನಲ್ಲಿ ಆಡುತ್ತಿದ್ದರು.

ಈ ಸರಣಿಯ ನಂತರ ನಾಲ್ಕು ಟೆಸ್ಟ್‌ಗಳ ಸರಣಿಯನ್ನು ದಕ್ಷಿಣ ಆಫ್ರಿಕಾ ಆಡಲಿರುವ ಕಾರಣ, ಕಗಿಸೊ ರಬಾಡ ಅವರಿಗೆ ಟಿ20 ಸರಣಿಗೆ ವಿಶ್ರಾಂತಿ ನೀಡಲಾಗಿದೆ. ಕ್ವಿಂಟನ್ ಡಿಕಾಕ್ ಮತ್ತು ಆ್ಯನ್ರಿಚ್ ನಾಕಿಯಾ, ತಬ್ರೇಜ್ ಸಂಶಿ ಅವರೂ ಈ ತಂಡದಲ್ಲಿಲ್ಲ.

ತಂಡ ಹೀಗಿದೆ: ಏಯ್ಡನ್ ಮರ್ಕರಂ (ನಾಯಕ), ಒಟ್ನೀಲ್ ಬಾರ್ತ್‌ಮ್ಯಾನ್, ಜೆರಾಲ್ಡ್ ಕೋಝಿ, ಡೊನಾವನ್ ಫೆರೀರಾ, ರೀಝಾ ಹೆಂಡ್ರಿಕ್ಸ್, ಮಾರ್ಕೊ ಯಾನ್ಸೆನ್, ಹೆನ್ರಿಚ್ ಕ್ಲಾಸೆನ್, ಪ್ಯಾಟ್ರಿಕ್ ಕ್ರುಜೆರ್, ಕೇಶವ ಮಹಾರಾಜ್, ಡೇವಿಡ್ ಮಿಲ್ಲರ್, ಮಿಹ್ಲಾಲಿ ಪೊಂಗ್ವಾನಾ, ಎನ್‌ಕ್ವೆಬಾ ಪೀಟರ್, ರಯಾನ್ ರಿಕೆಲ್ಟನ್, ಆ್ಯಂಡಿಲೆ ಸಿಮೆಲೇನ್, ಲುಥೊ ಸಿಪಮ್ಲಾ (ಮೂರು ಮತ್ತು ನಾಲ್ಕನೇ ಪಂದ್ಯಕ್ಕೆ) ಮತ್ತು ಟ್ರಿಸ್ಟನ್ ಸ್ಟಬ್ಸ್.

ವೇಳಾಪಟ್ಟಿ	
ನವೆಂಬರ್ 8	ಡರ್ಬನ್
ನವೆಂಬರ್ 10	ಗೆಬೆರ್ಹಾ
ನವೆಂಬರ್ 13	ಸೆಂಚೂರಿಯನ್
ನವೆಂಬರ್ 15	ಜೊಹಾನೆಸ್‌ಬರ್ಗ್

ಬ್ಯಾಡ್ಮಿಂಟನ್: ಎಂಟರ ಘಟ್ಟಕ್ಕೆ ಭಾರತದ ನಾಲ್ವರು

ಸಾರ್‌ಬ್ರೂಕನ್ (ಜರ್ಮನಿ), (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ರಕ್ಷಿತಾಶ್ರೀ ಸಂತೋಷ್ ರಾಮರಾಜ್, ಹೈಲೊ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ವಿಶ್ವದ 25ನೇ ಕ್ರಮಾಂಕದ ಆಟಗಾರ್ತಿ ಕ್ರಿಸ್ಟಿ ಗಿಲ್ಮರ್ ಅವರಿಗೆ ಆಘಾತ ನೀಡಿ ಕ್ವಾರ್ಟರ್‌ಫೈನಲ್ ತಲುಪಿದರು.

ಗುರುವಾರ ನಡೆದ ಪಂದ್ಯದಲ್ಲಿ, 17 ವರ್ಷ ವಯಸ್ಸಿನ ರಕ್ಷಿತಾಶ್ರೀ 21–14, 21–12ರಲ್ಲಿ ಎರಡನೇ ಶ್ರೇಯಾಂಕದ ಆಟಗಾರ್ತಿಯ ಮೇಲೆ ನೇರ ಆಟಗಳ ಜಯ ಸಾಧಿಸಿದರು. ಪಂದ್ಯ ಗೆಲ್ಲಲು ರಕ್ಷಿತಾಶ್ರೀ ಕೇವಲ 36 ನಿಮಿಷ ತೆಗೆದುಕೊಂಡರು. ಭಾರತ ಮಾಳವಿಕಾ ಬನ್ಸೋಡ್, ಆಯುಷ್ ಶೆಟ್ಟಿ ಮತ್ತು ಸತೀಶ್ ಕುಮಾರ್ ಕರುಣಾಕರನ್ ಕೂಡ ಎಂಟರ ಘಟ್ಟ ತಲುಪಿದರು.

ರಕ್ಷಿತಾ ಮುಂದಿನ ಸುತ್ತಿನಲ್ಲಿ ಡೆನ್ಮಾರ್ಕ್‌ನ ಜೂಲಿ ದವಲ್ ಜಾಕೊಬ್‌ಸನ್ ವಿರುದ್ಧ ಆಡುವರು.

ಆರನೇ ಶ್ರೇಯಾಂಕದ ಪಡೆದಿರುವ, ವಿಶ್ವದ 34ನೇ ಕ್ರಮಾಂಕದ ಆಟಗಾರ್ತಿ ಮಾಳವಿಕಾ 21–13, 21–16ರಲ್ಲಿ ಡೆನ್ಮಾರ್ಕ್‌ನ ಐರಿನಾ ಅಮೇಲಿ ಆ್ಯಂಡರ್ಸನ್ ವಿರುದ್ಧ ನೇರ ಆಟಗಳ ಗೆಲುವು ಸಾಧಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಆಯುಷ್ 21–13, 21–9 ರಿಂದ ಇಟಲಿಯ ಗಿಯೊವನಿ ಟೊಟೊ ಅವರನ್ನು ಕೇವಲ 33 ನಿಮಿಷಗಳಲ್ಲಿ ಸೋಲಿಸಿದರು. ಏಳನೇ ಶ್ರೇಯಾಂಕದ ಸತೀಶ್ ಕುಮಾರ್ 21–12, 21–15 ರಲ್ಲಿ ಇಂಗ್ಲೆಂಡ್‌ನ ಹ್ಯಾರಿ ಹುವಾಂಗ್ ವಿರುದ್ಧ ಗೆಲುವು ಸಾಧಿಸಿದರು.

ನಿಮ್ಮ ವರಮಾನ ಮೂಲ ಯಾವುದು: ವೈದ್ಯರಿಗೆ ಸಚಿವ ಪ್ರಶ್ನೆ

ಕೋಲ್ಕತ್ತ (ಪಿಟಿಐ): ‘ಎರಡು ತಿಂಗಳಿನಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿರುವ ನಿಮ್ಮ ಆರ್ಥಿಕ ಸಂಪನ್ಮೂಲದ ಮೂಲ ಯಾವುದು’ ಎಂದು ಪಶ್ಚಿಮ ಬಂಗಾಳದ ಸಚಿವರೊಬ್ಬರು, ಪ್ರತಿಭಟನೆ ನಡೆಸುತ್ತಿರುವ ಕಿರಿಯ ವೈದ್ಯರನ್ನು ಗುರುವಾರ ಪ್ರಶ್ನಿಸಿದ್ದಾರೆ.

ಖಡದಹ ಕ್ಷೇತ್ರದಲ್ಲಿ ನಡೆದ ದುರ್ಗಾಪೂಜೆ ಸಂದರ್ಭದಲ್ಲಿ, ಕ್ಷೇತ್ರದ ಶಾಸಕರೂ ಆದ ಕೃಷಿ ಸಚಿವ ಸೋವನ್‌ದೇಬ್ ಚಟ್ಟೋಪಾಧ್ಯಾಯ ಹೀಗೆ ಪ್ರಶ್ನಿಸಿದ್ದಾರೆ. ಸಚಿವರ ಭಾಷಣವುಳ್ಳ ವಿಡಿಯೊ, ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದ್ದು, ಅವರ ಮಾತಿಗೆ ತೀವ್ರ ಆಕ್ರೋಶ ವ್ಯಕ್ತವಾಗಿದೆ.

‘ನೀವು ಏಕೆ, ಯಾವ ಕಾರಣಕ್ಕೆ ಪ್ರತಿಭಟಿಸುತ್ತಿದ್ದೀರಿ? ಸರ್ಕಾರವನ್ನೇ ಗುರಿಯಾಗಿಸಿ ಆಕ್ರೋಶ ಏಕೆ? ನಿಮ್ಮ ಸಂಪನ್ಮೂಲದ ಮೂಲ ಯಾವುದು? ಇಷ್ಟೊಂದು ದುಡ್ಡು ನಿಮಗೆ ಎಲ್ಲಿಂದ ಬರುತ್ತಿದೆ’ ಎಂದು ಸಚಿವರು ಪ್ರಶ್ನೆ ಮಾಡಿದ್ದಾರೆ.

ಸಚಿವರ ಹೇಳಿಕೆಗೆ ಕಟುವಾಗಿ ಪ್ರತಿಕ್ರಿಯೆ ನೀಡಿರುವ ಹಿರಿಯ ವೈದ್ಯ, ಸುಬರ್ಣ ಗೋಸ್ವಾಮಿ ಅವರು, ಆರೋಗ್ಯ ಕ್ಷೇತ್ರದ ಸಮಸ್ಯೆಗಳ ಕುರಿತು ಕಿರಿಯ ವೈದ್ಯರು ಪ್ರತಿಭಟಿಸಿದರೆ ಸರ್ಕಾರ ಈ ಮೂಲಕ ಅಸಮಾಧಾನ ಹೊರಹಾಕುತ್ತಿದೆ ಎಂದಿದ್ದಾರೆ.

‘ಆರ್‌.ಜಿ.ಕರ್ ಆಸ್ಪತ್ರೆಯಲ್ಲಿ ಆ. 9ರಂದು ಅತ್ಯಾಚಾರ ಮತ್ತು ಕೊಲೆಗೀಡಾದ ಕಿರಿಯ ವೈದ್ಯೆಗೆ ನ್ಯಾಯ ಕೋರಿ ಪ್ರತಿಭಟಿಸುತ್ತಿದ್ದೇವೆ’ ಎಂದು ಪ್ರತಿಭಟನೆಯ ನೇತೃತ್ವ ವಹಿಸಿರುವ ಸಂಘದ ಸದಸ್ಯ ಸ್ವರ್ಣಾಂಬ ಘೋಷ್ ಪ್ರತಿಕ್ರಿಯಿಸಿದ್ದಾರೆ.

ಈ ಹಿಂದೆ ಕೂಡ ಟಿಎಂಸಿ ನಾಯಕರಾದ ಸಂಸದ ಕಲ್ಯಾಣ ಬಂಡೋಪಾಧ್ಯಾಯ, ಶಾಸಕರಾದ ಸೌಕತ್ ಮೊಲ್ಲಾ, ತಪಸ್ ಚಟರ್ಜಿ ಅವರು, ವೈದ್ಯರ ಮುಷ್ಕರ ರಾಜಕೀಯ ಕಾರ್ಯಸೂಚಿ ಒಳಗೊಂಡಿದೆ ಎಂದು ಟೀಕಿಸಿದ್ದರು.

ಹಬ್ಬದ ದಿನಗಳಲ್ಲಿ ವಿಶೇಷ ಸಸ್ಯಾಹಾರಗಳು

Freedom Healthy Cooking Oils presents ಕರುನಾಡ ಸವಿಯೂಟ ಆವೃತ್ತಿ 3 Powered by Sri Krishna

ಪ್ರಸಿದ್ಧ ಬಾಣಸಿಗ ಆದರ್ಶ್ ತತ್ಪತಿ ಅವರು ಈ ವಾರ ವಿಶೇಷವಾದ ಎರಡು ಸಸ್ಯಹಾರ ಪಾಕವಿಧಾನಗಳನ್ನು ಮಾಡಿ ತೋರಿಸಲಿದ್ದಾರೆ. ಒಂದು ‘ಬೀಟ್‌ರೂಟ್ ಸೋಯಾಬೀನ್ ವೆಜಿಟೇಬಲ್ ಪುಲಾವ್’ ಮತ್ತೊಂದು ‘ರಾ ಬನಾನ ಕರಿ ’. ‘ಕರುನಾಡ ಸವಿಯೂಟ ಸೀಸನ್–3’ರ ಪಾಕ ಪದ್ಧತಿಯಲ್ಲಿ ಪ್ರದರ್ಶನಗೊಳ್ಳಲಿರುವ ಈ ಅಡುಗೆಗಳನ್ನು ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ ಪ್ರಸ್ತುತಪಡಿಸಲಿದೆ. ಶ್ರೀ ಕೃಷ್ಣ ಹಸುವಿನ ತುಪ್ಪ (ಶ್ರೀ ಕೃಷ್ಣ ಶುದ್ಧ ಹಳ್ಳಿ ತುಪ್ಪ) ಸಹಯೋಗ ನೀಡಲಿದೆ.

ಬೀಟ್‌ರೂಟ್ ಸೋಯಾಬೀನ್ ವೆಜಿಟೇಬಲ್ ಪುಲಾವ್

ಬೇಕಾದ ಪದಾರ್ಥಗಳು:
ಒಂದು ಕಪ್ ಬಾಸ್ಮತಿ ಅಕ್ಕಿ, 2 ಕಪ್ ನೀರು, ಸಿಪ್ಪೆ ತೆಗೆದು ಕತ್ತರಿಸಿದ ಬೀಟ್‌ರೂಟ್ 1 ಕಪ್, ಬೇಯಿಸಿಟ್ಟ ಸೋಯಾಬೀನ್ ಒಂದು ಕಪ್ , ಈರುಳ್ಳಿ ಒಂದು, ಎರಡು ಎಸಳು ಬೆಳ್ಳುಳ್ಳಿ, ತುರಿದ ಕ್ಯಾರೆಟ್ ಒಂದು, ಮಿಶ್ರ ತರಕಾರಿ (ಬಟಾಣಿ, ಜೋಳ, ಬೆಲ್ ಪೆಪ್ಪರ್) 1 ಕಪ್, ಒಂದು ಚಮಚ ಜೀರಿಗೆ, ಒಂದು ಚಮಚ ದನಿಯಾ ಪುಡಿ, ಉಪ್ಪು ರುಚಿಗೆ ತಕ್ಕಷ್ಟು, 2 ಚಮಚ ತುಪ್ಪ ಅಥವಾ ಎಣ್ಣೆ ಮತ್ತು ಕೊತ್ತಂಬರಿ ಸೊಪ್ಪು.

ಮಾಡುವ ವಿಧಾನ: ಒಂದು ಕಡಾಯಿಯಲ್ಲಿ ತುಪ್ಪ/ಎಣ್ಣೆ ಹಾಕಿ ಬಿಸಿಯಾದ ನಂತರ ಜೀರಿಗೆ, ಕತ್ತರಿಸಿಟ್ಟ ಈರುಳ್ಳಿ, ಬೆಳ್ಳುಳ್ಳಿ ಹಾಕಿ ಮೆತ್ತಗಾಗುವವರೆಗೆ ಬಾಡಿಸಿ. ಬೀಟ್‌ರೂಟ್, ಕ್ಯಾರೆಟ್, ಮಿಶ್ರ ತರಕಾರಿಗಳು ಸೇರಿಸಿ ಹದವಾಗಿ ಬೇಯಲು ಬಿಡಿ. ನಂತರ ಬೇಯಿಸಿಟ್ಟ ಸೋಯಾಬೀನ್, ದನಿಯಾ ಪುಡಿ, ಉಪ್ಪನ್ನು ಹಾಕಿ ಚೆನ್ನಾಗಿ ಕಲೆಸಿ. ಅದಕ್ಕೆ ಅಕ್ಕಿ, ನೀರು ಹಾಕಿ ಮಿಕ್ಸ್ ಮಾಡಿ, ಕುದಿಯಲು ಬಿಡಿ. ನಂತರ ಸ್ಟೌವ್ ಸಿಮ್‌ನಲ್ಲಿಟ್ಟು ಮುಚ್ಚಳ ಮುಚ್ಚಿ. ಬೆಂದ ಪುಲಾವ್ ಉದುರು, ಉದುರಾಗಿರುವಂತಿರಲಿ. ನಂತರ ಕೊತ್ತಂಬರಿ ಸೊಪ್ಪು ಕತ್ತರಿಸಿ ಅಲಂಕರಿಸಿದರೆ ಸುವಾಸನೆಯುಳ್ಳ ಪೌಷ್ಟಿಕ ಮತ್ತು ಆರೋಗ್ಯಕರ ಪುಲಾವ್ ತಿನ್ನಲು ರೆಡಿ. ಬಿಸಿ ಬಿಸಿ ಪುಲಾವ್ ಜತೆಗೆ ಮೊಸರುಬಜ್ಜಿ (ರಾಯಿತ) ಇದ್ದರೆ ಮತ್ತಷ್ಟು ರುಚಿಕರ.

ಉಪ್ಪಿನಂಗಡಿ ವಿಶೇಷ ರಾ ಬನಾನ ಕರಿ

ಬೇಕಾದ ಪದಾರ್ಥಗಳು: ದೊಡ್ಡ ಗಾತ್ರದ 2 ಬಾಳೆಕಾಯಿಗಳು (ಸಿಪ್ಪೆ ಸುಲಿದು, ಸಣ್ಣ ತುಂಡುಗಳಾಗಿ ಕತ್ತರಿಸಿಡಿ) , ಈರುಳ್ಳಿ 2, ಸ್ವಲ್ಪ ಬೆಳ್ಳುಳ್ಳಿ ಎಸಳು, ಒಂದು ಮಧ್ಯಮ ಗಾತ್ರದ ಟೊಮೆಟೊ, 1 ಚಮಚ ಜೀರಿಗೆ, 1 ಚಮಚ ಸಾಸಿವೆ, ಅರ್ಧ ಚಮಚ ಅರಿಶಿನ ಪುಡಿ, ಅರ್ಧ ಚಮಚ ಕೆಂಪು ಮೆಣಸಿನಪುಡಿ, ಅರ್ಧ ಚಮಚ ಗರಂ ಮಸಾಲ, ಅರ್ಧ ಕಪ್ ತೆಂಗಿನಕಾಯಿ ಹಾಲು, ರುಚಿಗೆ ತಕ್ಕಷ್ಟು ಉಪ್ಪು, 2 ಚಮಚ ಎಣ್ಣೆ, ಕರಿಬೇವು ಸ್ವಲ್ಪ ಮತ್ತು ಕೊತ್ತಂಬರಿ ಸೊಪ್ಪು.

ಮಾಡುವ ವಿಧಾನ : ಒಂದು ಕಡಾಯಿ ತೆಗೆದುಕೊಂಡು ಸ್ವಲ್ಪ ಎಣ್ಣೆ ಹಾಕಿ, ಬಿಸಿಯಾದ ಮೇಲೆ ಜೀರಿಗೆ, ಸಾಸಿವೆ ಸಿಡಿದ ಮೇಲೆ ಕರಿಬೇವು ಹಾಕಿ ನಂತರ ಕತ್ತರಿಸಿಟ್ಟ ಈರುಳ್ಳಿ ಸೇರಿಸಿ ಚೆನ್ನಾಗಿ ಬಾಡಿಸಿ. ಅದಕ್ಕೆ ಜಜ್ಜಿದ ಬೆಳ್ಳುಳ್ಳಿ ಹಾಗೂ ಪೇಸ್ಟ್ ಮಾಡಿರುವ ಟೊಮೆಟೊ, ಜತೆಗೆ ಅರಿಶಿನ, ಒಣಮೆಣಸಿನ ಪುಡಿ

ಮತ್ತು ಗರಂ ಮಸಾಲ ಪುಡಿ ಹಾಕಿ ಎಣ್ಣೆ ತೇಲುವವರಗೆ ಬೇಯಿಸಿ. ಬೆಂದ ಮಸಾಲೆ ಪದಾರ್ಥಗಳಲ್ಲಿ ಕತ್ತರಿಸಿದ ಬಾಳೆ ತುಂಡುಗಳನ್ನು ಹಾಕಿ ಚೆನ್ನಾಗಿ ಕಲೆಸಿ. ಬಾಳೆಕಾಯಿ ತುಂಡುಗಳು ಮುಳುಗುವಷ್ಟು ನೀರನ್ನು ಸೇರಿಸಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕುದಿಯಲು ಬಿಡಿ. ಕುದಿ ಬಂದ ನಂತರ ಕಡಿಮೆ ಉರಿಯಲ್ಲಿ ಮತ್ತೆ 15–20



ನಿಮಿಷ ಹದವಾಗಿ ಬೇಯಿಸಿ. ಇದಕ್ಕೆ ತೆಂಗಿನ ಹಾಲು ಸೇರಿಸಿ ಪುನಃ 5 ನಿಮಿಷ ಅತಿಸಣ್ಣ ಉರಿಯಲ್ಲಿ ಇಡಿ. ಅದರ ಮೇಲೆ ಕೊತ್ತಂಬರಿ ಸೊಪ್ಪನ್ನು ಉದುರಿಸಿದರೆ ರಾ ಬನಾನ ಕರಿ ತಯಾರು. ಅನ್ನ ಅಥವಾ ರೊಟ್ಟಿಗೆ ಉತ್ತಮ ಸಂಯೋಜನೆ.

ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

LPG Partner: Indane | Hygiene Partner: EXO | Special Partner: KSDA | Associate Sponsors: Philips, Preethi, SSP Hing, Vencobb | Rice Partner: India Gate Basmati Rice | Supported by: Sujay Water Saving Irrigation Systems

ಐಪಿಎಲ್ ಆಟಗಾರರ ಉಳಿಕೆ ಪ್ರಕ್ರಿಯೆ: ನಾಲ್ವರು ನಾಯಕರ ಬಿಡುಗಡೆ; ಕ್ಲಾಸನ್‌ಗೆ ಹೆಚ್ಚು ಮೌಲ್ಯ

ಆರ್‌ಸಿಬಿಯಲ್ಲಿ ಉಳಿದ ಮೂವರು

ನವದೆಹಲಿ (ಪಿಟಿಐ): ತಾರಾ ವರ್ಚಸ್ಸಿನ ಬ್ಯಾಟರ್ ವಿರಾಟ್ ಕೊಹ್ಲಿ, ರಜತ್ ಪಾಟೀದಾರ್ ಮತ್ತು ಯಶ್ ದಯಾಳ್ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಉಳಿಸಿಕೊಂಡಿದೆ.

ವಿರಾಟ್ ಅವರಿಗೆ ₹21 ಕೋಟಿ ಮೌಲ್ಯ ನೀಡಿ ಉಳಿಸಿಕೊಂಡಿದೆ. ರಜತ್ ಮತ್ತು ಯಶ್ ಕ್ರಮವಾಗಿ ₹11 ಕೋಟಿ ಮತ್ತು ₹5 ಕೋಟಿ ಪಡೆದಿದ್ದಾರೆ.

ಐಪಿಎಲ್ ತಂಡಗಳು ತಮ್ಮ ಆಟಗಾರರನ್ನು ಉಳಿಸಿಕೊಳ್ಳುವ ಪ್ರಕ್ರಿಯೆಯನ್ನು ಗುರುವಾರ ಅಂತಿಮಗೊಳಿಸಿವೆ. ಈ ಬಾರಿ ಅಪಾರ ಕುತೂಹಲ ಕೆರಳಿಸಿದ್ದ ರಿಟೇನಿಂಗ್ ಪ್ರಕ್ರಿಯೆಯಲ್ಲಿ ಐದು ತಂಡಗಳ ನಾಯಕರು ಹೊರಬಿದ್ದಿದ್ದಾರೆ. ಹಲವು ಪ್ರಮುಖರೂ ತಂಡದಿಂದ ಬಿಡುಗಡೆ ಹೊಂದಿದ್ದು ಮುಂಬರುವ ಮೆಗಾ ಹರಾಜು ಪ್ರಕ್ರಿಯೆಯ ಮೂಲಕ ಆಯ್ಕೆಗೆ ಲಭ್ಯರಿದ್ದಾರೆ.

ನಾಲ್ವರು ನಾಯಕರು ಬಿಡುಗಡೆ: ಈ ಬಾರಿ ನಾಲ್ವರು ನಾಯಕರನ್ನು ತಂಡಗಳು ಬಿಡುಗಡೆಗೊಳಿಸಿವೆ. ಅದರಲ್ಲಿ ಆರ್‌ಸಿಬಿಯ ಫಫ್ ಡುಪ್ಲೆಸಿ, ಒಂಬತ್ತು ವರ್ಷಗಳಿಂದ ಡೆಲ್ಲಿ ಕ್ಯಾಪಿಟಲ್ಸ್‌ನಲ್ಲಿದ್ದ ರಿಷಭ್ ಪಂತ್, ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಶ್ರೇಯಸ್ ಅಯ್ಯರ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡದ ಕೆ.ಎಲ್. ರಾಹುಲ್ ಅವರನ್ನು ಬಿಡುಗಡೆಗೊಳಿಸಲಾಗಿದೆ.

ವಿರಾಟ್ ಹಿಂದಿಕ್ಕಿದ ಕ್ಲಾಸನ್: ಆರ್‌ಸಿಬಿ ತಂಡವು ವಿರಾಟ್ ಅವರನ್ನು ₹21 ಕೋಟಿ ಕೊಟ್ಟು ಉಳಿಸಿಕೊಂಡಿದೆ. ಆದರೆ ರಿಟೇನಿಂಗ್ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಮೌಲ್ಯ ಪಡೆದ ಭಾರತೀಯ ಆಟಗಾರನಾಗಿದ್ದಾರೆ. ಆದರೆ, ದಕ್ಷಿಣ ಆಫ್ರಿಕಾದ ಬ್ಯಾಟರ್ ಹೆನ್ರಿಚ್ ಕ್ಲಾಸನ್ (ಕೋಲ್ಕತ್ತ ನೈಟ್ ರೈಡರ್ಸ್) ₹23 ಕೋಟಿ ಗಿಟ್ಟಿಸುವ ಮೂಲಕ ಕೊಹ್ಲಿಯನ್ನು ಹಿಂದಿಕ್ಕಿದ್ದಾರೆ. ಇಡೀ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಮೌಲ್ಯ ಪಡೆದ ಆಟಗಾರನಾಗಿದ್ದಾರೆ.

ಪ್ರಮುಖರನ್ನು ಉಳಿಸಿಕೊಂಡ ಕೋಲ್ಕತ್ತ: ಕಳೆದ ಬಾರಿ ಚಾಂಪಿಯನ್ ಕೋಲ್ಕತ್ತ ತಂಡದ ನಾಯಕ ಶ್ರೇಯಸ್ ಅಯ್ಯರ್ ಅವರು (₹12.25 ಕೋಟಿ) ರಿಟೇನ್ ಆಗಲು ಬಯಸದೇ ಹೊರನಡೆದಿದ್ದಾರೆನ್ನಲಾಗಿದೆ. ತಮ್ಮ ನಾಯಕತ್ವದ ತಂಡವು ಚಾಂಪಿಯನ್ ಆದ ನಂತರ ಬಹುಶಃ ತಮ್ಮ ಮೌಲ್ಯ ಹೆಚ್ಚಿಸಿಕೊಳ್ಳುವ ಇಂಗಿತ ಅವರದ್ದಾಗಿರಬಹುದು. ತಂಡವು ತನ್ನ ಪ್ರಮುಖ ಆಟಗಾರರಾದ ರಿಂಕು ಸಿಂಗ್, ಸುನಿಲ್ ನಾರಾಯಣ, ಆ್ಯಂಡ್ರೆ ರಸೆಲ್, ಹರ್ಷಿತ್ ರಾಣಾ ಮತ್ತು ವರುಣ್ ಚಕ್ರವರ್ತಿ ಅವರನ್ನು ಉಳಿಸಿಕೊಂಡಿತು.

ಧೋನಿಗೆ ₹4 ಕೋಟಿ: ಚೆನ್ನೈ ಸೂಪರ್ ಕಿಂಗ್ಸ್ ತಂಡವು ನಾಯಕ ಋತುರಾಜ್ ಗಾಯಕವಾಡ್ ಸೇರಿದಂತೆ ಐವರನ್ನು ಉಳಿಸಿಕೊಂಡಿದೆ. ಅದರಲ್ಲಿ ಮಹೇಂದ್ರಸಿಂಗ್ ಧೋನಿ ಅವರು ₹4 ಕೋಟಿಗೆ ರಿಟೇನ್ ಆಗಿದ್ದಾರೆ.

ಬಟ್ಲರ್, ಅಶ್ವಿನ್ ಔಟ್: ರಾಜಸ್ಥಾನ ರಾಯಲ್ಸ್ ತಂಡವು ತನ್ನ ಸ್ಪಿನ್ ಜೋಡಿ ಆರ್. ಅಶ್ವಿನ್, ಯಜುವೇಂದ್ರ ಚಾಹಲ್ ಮತ್ತು ಬ್ಯಾಟರ್ ಜೋಸ್ ಬಟ್ಲರ್ ಅವರನ್ನು ಕೈಬಿಟ್ಟಿದೆ. ನಾಯಕ ಸಂಜು ಸ್ಯಾಮ್ಸನ್, ಯಶಸ್ವಿ ಜೈಸ್ವಾಲ್, ರಿಯಾನ್ ಪರಾಗ್ ಅವರನ್ನು ಉಳಿಸಿಕೊಂಡಿದೆ.

ರಶೀದ್‌ಗೆ ಹೆಚ್ಚು ಮೌಲ್ಯ: ಗುಜರಾತ್ ಟೈಟನ್ಸ್ ತಂಡವು ಅಫ್ಗಾನಿಸ್ತಾನ ಸ್ಪಿನ್ನರ್ ರಶೀದ್ ಖಾನ್ ಅವರಿಗೆ ₹18 ಕೋಟಿ ನೀಡಿ ಉಳಿಸಿಕೊಂಡಿದೆ. ಅವರು ತಮ್ಮ ತಂಡದ ನಾಯಕ ಶುಭಮನ್ ಗಿಲ್ (₹16.5 ಕೋಟಿ) ಅವರಿಗಿಂತ ಹೆಚ್ಚು ಮೌಲ್ಯ ಪಡೆದಿದ್ದಾರೆ.

ವಿರಾಟ್ ಕೊಹ್ಲಿ

ಕೆ.ಎಲ್. ರಾಹುಲ್
ಹೆನ್ರಿಚ್ ಕ್ಲಾಸನ್

ಕರ್ನಾಟಕದ ಆಟಗಾರರು ಬಿಡ್‌ಗೆ

ವಿವಿಧ ತಂಡಗಳಲ್ಲಿದ್ದ ಕರ್ನಾಟಕದ ಎಲ್ಲ ಆಟಗಾರರೂ ಬಿಡುಗಡೆಯಾಗಿದ್ದಾರೆ. ರಾಹುಲ್, ಮನೀಷ್ ಪಾಂಡೆ, ಮಯಂಕ್ ಅಗರವಾಲ್, ಕೆ.ಗೌತಮ್, ಅಭಿನವ್ ಮನೋಹರ್ ಅದರಲ್ಲಿ ಪ್ರಮುಖರಾಗಿದ್ದಾರೆ. ಇವರೆಲ್ಲರೂ ಈಗ ಬಿಡ್‌ನಲ್ಲಿ ಭಾಗವಹಿಸುವರು.

ಈ ಬಾರಿಯ ಬಿಡ್‌ನಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಅವರನ್ನು ಆರ್‌ಸಿಬಿ ತಂಡವು ಸೇರ್ಪಡೆ ಮಾಡಿಕೊಳ್ಳಲಿದೆ ಎಂದು ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶ ಹಾಕುತ್ತಿದ್ದಾರೆ.

ಐಪಿಎಲ್ ತಂಡಗಳು ಉಳಿಸಿಕೊಂಡ ಆಟಗಾರರು

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಆಟಗಾರ	ಮೊತ್ತ (₹ ಕೋಟಿ)
ವಿರಾಟ್ ಕೊಹ್ಲಿ	21
ರಜತ್ ಪಾಟೀದಾರ್	11
ಯಶ್ ದಯಾಳ್	5
ಪರ್ಸ್ ಮೌಲ್ಯ ₹ 83 ಕೋಟಿ	
ಆರ್‌ಟಿಎಂ ಆಯ್ಕೆ 3	

ಮುಂಬೈ ಇಂಡಿಯನ್ಸ್

ಜಸ್‌ಪ್ರೀತ್ ಬೂಮ್ರಾ	18
ಸೂರ್ಯಕುಮಾರ್ ಯಾದವ್	16.35
ಹಾರ್ದಿಕ್ ಪಾಂಡ್ಯ	16.35
ರೋಹಿತ್ ಶರ್ಮಾ	16.30
ತಿಲಕ್ ವರ್ಮಾ	8
ಪರ್ಸ್ ₹ 45 ಕೋಟಿ.	
ಆರ್‌ಟಿಎಂ 1	

ಸನ್‌ರೈಸರ್ಸ್ ಹೈದರಾಬಾದ್

ಹೆನ್ರಿಚ್ ಕ್ಲಾಸನ್	23
ಪ್ಯಾಟ್ ಕಮಿನ್ಸ್	18
ಅಭಿಷೇಕ್ ಶರ್ಮಾ	14
ಟ್ರಾವಿಸ್ ಹೆಡ್	14
ನಿತೀಶ್ ಕುಮಾರ್ ರೆಡ್ಡಿ	6
ಪರ್ಸ್ ₹ 45 ಕೋಟಿ	
ಆರ್‌ಟಿಎಂ 1	

ಚೆನ್ನೈ ಸೂಪರ್ ಕಿಂಗ್ಸ್

ಋತುರಾಜ್ ಗಾಯಕವಾಡ	18
ರವೀಂದ್ರ ಜಡೇಜ	18
ಮಥೀಷ ಪಥಿರಾಣಾ	13
ಶಿವಂ ದುಬೆ	12
ಎಂ.ಎಸ್. ಧೋನಿ	4
ಪರ್ಸ್ ₹ 55 ಕೋಟಿ	
ಆರ್‌ಟಿಎಂ 1	

ಡೆಲ್ಲಿ ಕ್ಯಾಪಿಟಲ್ಸ್

ಅಕ್ಷರ್ ಪಟೇಲ್	16.50
ಕುಲದೀಪ್ ಯಾದವ್	13.25
ಟ್ರಿಸ್ಟನ್ ಸ್ಟಬ್ಸ್	10
ಅಭಿಷೇಕ್ ಪೊರೆಲ್	4
ಪರ್ಸ್: ₹ 73 ಕೋಟಿ	
ಆರ್‌ಟಿಎಂ: 2	

ಕೋಲ್ಕತ್ತ ನೈಟ್ ರೈಡರ್ಸ್

ರಿಂಕು ಸಿಂಗ್	13
ವರುಣ ಚಕ್ರವರ್ತಿ	12
ಸುನೀಲ್ ನಾರಾಯಣ	12
ಆ್ಯಂಡ್ರೆ ರಸೆಲ್	12
ಹರ್ಷಿತ್ ರಾಣಾ	4
ರಮಣದೀಪ್ ಸಿಂಗ್	4
ಪರ್ಸ್: ₹ 63 ಕೋಟಿ	

ರಾಜಸ್ಥಾನ ರಾಯಲ್ಸ್

ಸಂಜು ಸ್ಯಾಮ್ಸನ್	18
ಯಶಸ್ವಿ ಜೈಸ್ವಾಲ್	18
ರಿಯಾನ್ ಪರಾಗ್	14
ಧ್ರುವ ಜುರೇಲ್	14
ಶಿಮ್ರನ್ ಹೆಟ್ಮೆಯರ್	11
ಸಂದೀಪ್ ಶರ್ಮಾ	4
ಪರ್ಸ್: ₹ 41 ಕೋಟಿ	
ಆರ್‌ಟಿಎಂ: ಇಲ್ಲ	

ಗುಜರಾತ್ ಟೈಟನ್ಸ್

ರಶೀದ್ ಖಾನ್	18
ಶುಭಮನ್ ಗಿಲ್	16.50
ಸಾಯಿ ಸುದರ್ಶನ್	8.50
ರಾಹುಲ್ ತೆವಾಟಿಯಾ	4
ಶಾರೂಕ್ ಖಾನ್	4
ಪರ್ಸ್: ₹ 69 ಕೋಟಿ	
ಆರ್‌ಟಿಎಂ: 1	

ಲಖನೌ ಸೂಪರ್ ಜೈಂಟ್ಸ್

ನಿಕೊಲಸ್ ಪೂರನ್	21
ರವಿ ಬಿಷ್ಣೋಯಿ	11
ಮಯಂಕ್ ಯಾದವ್	11
ಮೊಹಸೀನ್ ಖಾನ್	4
ಆಯುಷ್ ಬಡೋಣಿ	4
ಪರ್ಸ್: 69 ಕೋಟಿ	
ಆರ್‌ಟಿಎಂ 1	

ಪಂಜಾಬ್ ಕಿಂಗ್ಸ್

ಶಶಾಂಕ್ ಸಿಂಗ್	5.5
ಪ್ರಭಸಿಮ್ರನ್ ಸಿಂಗ್	4
ಪರ್ಸ್: ₹ 110.5 ಕೋಟಿ	
ಆರ್‌ಟಿಎಂ 4	

ಆರ್‌ಟಿಎಂ: ರೈಟ್ ಟು ಮ್ಯಾಚ್
ಪ್ರತಿಯೊಂದು ತಂಡದ ಪರ್ಸ್ ಮೌಲ್ಯ ಒಟ್ಟು ₹ 120 ಕೋಟಿ

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ, ಆಕಾಶ್ ದೀಪ್ ಹಾಗೂ ಜಸ್‌ಪ್ರೀತ್ ಬೂಮ್ರಾ ಅಭ್ಯಾಸ ನಡೆಸಿದರು ಪಿಟಿಐ ಚಿತ್ರ

ಕ್ಲೀನ್‌ಸ್ವೀಪ್ ತಪ್ಪಿಸಿಕೊಳ್ಳುವ ಸವಾಲು

ನ್ಯೂಜಿಲೆಂಡ್ ವಿರುದ್ಧ ಅಂತಿಮ ಟೆಸ್ಟ್ ಪಂದ್ಯ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮುಂಬೈ: ಭಾರತ ಕ್ರಿಕೆಟ್ ತಂಡಕ್ಕೆ ತನ್ನ ತವರಿನಲ್ಲಿ ಟೆಸ್ಟ್ ಪಂದ್ಯಗಳನ್ನು ಸೋಲುವ ರೂಢಿ ಇರಲಿಲ್ಲ. ಆದರೆ ನ್ಯೂಜಿಲೆಂಡ್ ತಂಡವು ಬೆಂಗಳೂರಿನಲ್ಲಿ ಭಾರತಕ್ಕೆ ಸೋಲಿನ ರುಚಿ ತೋರಿಸಿತು.

ಹಾಗೆಯೇ ಭಾರತ ತಂಡಕ್ಕೆ ಸ್ವದೇಶದಲ್ಲಿ 12 ವರ್ಷಗಳಿಂದ ಟೆಸ್ಟ್ ಸರಣಿ ಸೋತು ಗೊತ್ತೇ ಇರಲಿಲ್ಲ. ಸತತ 18 ಸರಣಿಗಳನ್ನು ಜಯಿಸಿದ್ದ ತಂಡದ ಓಟಕ್ಕೂ ಕಿವೀಸ್ ಕಡಿವಾಣ ಹಾಕಿತು. ಈ ಹಿಂದೆ ಸರಣಿಗಳಲ್ಲಿ ತಂಡವು ಕ್ಲೀನ್‌ಸ್ವೀಪ್ ಸೋಲುಂಡ ರೂಢಿಯೂ ಇಲ್ಲ. ಈ ಬಾರಿ ಅದನ್ನೂ ತೋರಿಸಿ ಹೋಗುವ ಛಲದಲ್ಲಿ ಟಾಮ್ ಲೇಥಮ್ ಬಳಗವಿದೆ. ಭಾರತವು ಒಂದು ಬಾರಿ ಮಾತ್ರ ಸರಣಿಯೊಂದರ ಎಲ್ಲ ಪಂದ್ಯಗಳನ್ನು ಸೋತ ಉದಾಹರಣೆ ಇದೆ. 1999–2000ರಲ್ಲಿ ದಕ್ಷಿಣ ಆಫ್ರಿಕಾ ತಂಡವು ಸರಣಿಯ ಎರಡೂ ಪಂದ್ಯಗಳನ್ನು ಗೆದ್ದಿತ್ತು.

ಶುಕ್ರವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಉಭಯ ತಂಡಗಳು ಸರಣಿಯ ಕೊನೆಯ ಮತ್ತು ಮೂರನೇ ಟೆಸ್ಟ್‌ನಲ್ಲಿ ಮುಖಾಮುಖಿಯಾಗಲಿವೆ. ಈ ಪಂದ್ಯದಲ್ಲಿ ಗೆದ್ದು ಕ್ಲೀನ್‌ಸ್ವೀಪ್ ತಪ್ಪಿಸಿಕೊಳ್ಳುವ ಒತ್ತಡದಲ್ಲಿ ಆತಿಥೇಯ ಬಳಗವಿದೆ. ಭಾರತವು ಈ ಹಿಂದಿನ ಪಂದ್ಯಗಳಲ್ಲಿ ಆದಂತೆ ಅವಧಿಯಿಂದ, ಅವಧಿಗೆ ಕುಸಿಯುತ್ತ ಹೋದರೆ 0–3ರ ಸೋಲು ಕಟ್ಟಿಟ್ಟ ಬುತ್ತಿಯಾಗಲಿದೆ. ಆದರೆ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಹೋರಾಟ ಮಾಡಿದರೆ ಮಾತ್ರ ಸೋಲು ತಪ್ಪಿಸಿಕೊಳ್ಳಲು ಅವಕಾಶವಿದೆ.

ಕಿವೀಸ್ ಪಡೆಯು ಭಾರತಕ್ಕೆ ಬಂದಿಳಿಯುವ ಮುನ್ನ ಯಾರೂ ಇಂತಹ ಫಲಿತಾಂಶವನ್ನು ನಿರೀಕ್ಷಿಸಿರಲಿಲ್ಲ. ಎರಡು ಗೆಲುವುಗಳೊಂದಿಗೆ ಈಗ ಪ್ರವಾಸಿ ತಂಡ ಆತ್ಮವಿಶ್ವಾಸದ ಉತ್ತುಂಗದಲ್ಲಿದೆ.

ಇಂತಹ ಪರಿಸ್ಥಿತಿಯನ್ನು ರೋಹಿತ್ ಬಳಗವು ಈ ಹಿಂದೆ ಎಂದೂ ಎದುರಿಸಿಲ್ಲ. ಅದರಿಂದಾಗಿ ಈ ಸೋಲಿನಿಂದ ಮೈಮನ ಮುದುಡಿಕೊಂಡರೆ ಹಿನ್ನಡೆಯ ಅಪಾಯವಿದೆ. ಈ ನಕಾರಾತ್ಮಕ ಸಮಯವನ್ನು ಮೆಟ್ಟಿ ನಿಲ್ಲುವ ಅಗತ್ಯ ಈಗ ಇದೆ.

ಪ್ರವಾಸಿ ತಂಡಗಳು ಭಾರತಕ್ಕೆ ಆಗಮಿಸುವಾಗ ಇಲ್ಲಿ ಗೆಲ್ಲುವುದು ಕಷ್ಟ ಎಂಬ ಯೋಚನೆಗಳೊಂದಿಗೆ ಬರುವುದೇ ಹೆಚ್ಚು. ಆದ್ದರಿಂದ ಭಾರತ ಪ್ರವಾಸವೊಂದು ಅನುಭವ ಮತ್ತು ಪಾಠ ಎಂದುಕೊಳ್ಳುತ್ತಾರೆ. ಆದರೆ ಈ ಸರಣಿಯಲ್ಲಿ ನ್ಯೂಜಿಲೆಂಡ್ ತಂಡವು ಈಗಿನ ಭಾರತ ತಂಡಕ್ಕೆ ಬೇರೆ ರೀತಿಯ ಪಾಠ ಕಲಿಸಿದೆ. ಟೆಸ್ಟ್ ಪಂದ್ಯ ಜಯಿಸುವ ಮಾಸ್ಟರ್‌ಕ್ಲಾಸ್ ತೋರಿಸಿಕೊಟ್ಟಿದ್ದಾರೆ.

ಭಾರತದಂತೆಯೇ ಅವರೂ ಕೂಡ ಆಕ್ರಮಣಶೀಲ ಕ್ರಿಕೆಟ್ ಶೈಲಿಯನ್ನು ಅನುಸರಿಸುತ್ತಿದ್ದಾರೆ. ಆದರೆ ಆತಿಥೇಯ ತಂಡವು ಆಕ್ರಮಣ ಶೈಲಿಯು ಬಿಳಿ ಚೆಂಡಿನ ಶೈಲಿಯೇ ಎಂಬ ಗೊಂದಲದಲ್ಲಿದೆ. ಇದರಿಂದಾಗಿ ಬ್ಯಾಟರ್‌ಗಳು ಸರಣಿಯುದ್ದಕ್ಕೂ ನಿರಾಶೆ ಮೂಡಿಸಿದರು. ಬೌಲರ್‌ಗಳು ದಣಿದರು.

ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ತಂತ್ರಗಾರಿಕೆಯಲ್ಲಿ ಈ ರೀತಿಯ ಯೋಜನೆ ಖಂಡಿತವಾಗಿಯೂ ಇರುವುದಿಲ್ಲ. ತಂಡವು ಸಂಕ್ರಮಣ ಕಾಲದಲ್ಲಿ ಹಾದು ಹೋಗುತ್ತಿರುವುದರಿಂದ ಇಂತಹ ಏರುಪೇರುಗಳು ಕಂಡು ಬರುತ್ತಿರುವುದು ಸುಳ್ಳಲ್ಲ.

ಈ ಎಲ್ಲ ಅಡೆತಡೆಗಳನ್ನೂ ನಿವಾರಿಸಿಕೊಂಡು, ಕಣಕ್ಕಿಳಿಯುವ ಸವಾಲು ರೋಹಿತ್ ಪಡೆಯ ಮುಂದಿದೆ. ಮುಂಬರುವ ಆಸ್ಟ್ರೇಲಿಯಾ ಪ್ರವಾಸಕ್ಕೂ ಮುನ್ನ ವಿಶ್ವಾಸ ಹೆಚ್ಚಿಸುವ ಒಂದು ಗೆಲುವಿನ ಅವಶ್ಯಕತೆ ತಂಡಕ್ಕೂ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

‘ಸೋಲಿನ ಹೊಣೆ ಬರೀ ಬ್ಯಾಟರ್‌ಗಳದ್ದಲ್ಲ’

ಮುಂಬೈ: ‘ನಮಗೆ ನಿರೀಕ್ಷಿತ ಫಲಿತಾಂಶ ಬರದ ಸಂದರ್ಭದಲ್ಲಿ ಟೀಕೆಗಳು ಬರುವುದು ಸಹಜ. ಆದರೆ ಇಲ್ಲಿ ನಾನು ಇದಕ್ಕೆ ಬ್ಯಾಟರ್‌ಗಳ ಅಥವಾ ಬೌಲರ್‌ಗಳ ವೈಫಲ್ಯ ಎಂದು ಪ್ರತ್ಯೇಕವಾಗಿ ಹೇಳುವುದಿಲ್ಲ. ಇದು ತಂಡದ ಆಟ. ಎಲ್ಲವೂ ಒಂದಾಗಿ ಉತ್ತಮ ಪ್ರಯೋಗ ನಡೆದಾಗಲಷ್ಟೇ ಫಲಿತಾಂಶ ಸಾಧ್ಯ’ ಎಂದು ಭಾರತ ತಂಡದ ಪ್ರಧಾನ ಕೋಚ್ ಗೌತಮ್ ಗಂಭೀರ್ ಹೇಳಿದರು.

‘ಸೋಲನ್ನು ಮರೆಮಾಚುವ ಪ್ರಯತ್ನವನ್ನು ನಾನು ಮಾಡುವುದಿಲ್ಲ. ಸೋಲು ಯಾತನೆ ನೀಡಬೇಕು. ಮನೆಯಂಗಳದಲ್ಲಿ ಸೋಲುವುದು ಸಣ್ಣ ನೋವಲ್ಲ. ಆದರೆ ಅದನ್ನು ಸಹಿಸಿಕೊಳ್ಳಬೇಕು. ಅದರಿಂದ ಹೊರಬರಲು ಪ್ರಯತ್ನಿಸಬೇಕು. ಆಗಲೇ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ’ ಎಂದರು.

ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಸೋತಿದೆ.

ವಿಶ್ವ ಕುಸ್ತಿ: ಮಾನಸಿಗೆ ಒಲಿದ ಕಂಚು

ಟಿರಾನಾ (ಅಲ್ಬೇನಿಯಾ), (ಪಿಟಿಐ): ಭಾರತದ ಮಾನಸಿ ಅಹ್ಲಾವತ್ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಆದರೆ ಪುರುಷರ ಫ್ರೀಸ್ಟೈಲ್ ಮತ್ತು ಗ್ರೀಕೊ ರೋಮನ್ ಕುಸ್ತಿಪಟುಗಳು ನಿರಾಸೆ ಮೂಡಿಸಿ ಬರಿಗೈಲಿ ಮರಳುವಂತಾಯಿತು.

ಮಾನಸಿ

ಮಹಿಳೆಯರ 59 ಕೆ.ಜಿ ವಿಭಾಗದಲ್ಲಿ ಕಣಕ್ಕಿಳಿದ ಮಾನಸಿ, ಕಂಚಿನ ಪದಕಕ್ಕಾಗಿ ನಡೆದ ಹಣಾಹಣಿಯಲ್ಲಿ ಕೆನಡಾದ ಲಾರೆನ್ಸ್ ಬಿಯುರ್‌ಗಾರ್ಡ್ ಅವರನ್ನು 5–0 ಯಿಂದ ಸೋಲಿಸಿದರು. ಮಾನಸಿ ಅವರು ಸರ್ ಚೋಟುರಾಮ್ ಅಖಾಡದಲ್ಲಿ ಮನದೀಪ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

ಇದಕ್ಕೆ ಮೊದಲು ಅವರು ಬುಧವಾರ ನಡೆದ ಸೆಮಿಫೈನಲ್‌ನಲ್ಲಿ 1–4ರಲ್ಲಿ ಮಂಗೋಲಿಯಾದ ಸುಖೀ ಸೆರೆನ್‌ಚಿಮೆಡ್ ಎದುರು ಸೋಲನುಭವಿಸಿದ್ದರು.

ಮನಿಷಾ ಭಾನವಾಲಾ ಅವರು 65 ಕೆ.ಜಿ. ವಿಭಾಗದಲ್ಲಿ ಪದಕದ ಸನಿಹ ಬಂದಿದ್ದರು. ಆದರೆ ಕಂಚಿನ ಪದಕಕ್ಕೆ ನಡೆದ ಸ್ಪರ್ಧೆಯಲ್ಲಿ ಜಪಾನ್‌ನ ಮಿವಾ ಮೊರಿಕಾವಾ ಎದುರು 2–8 ರಲ್ಲಿ ಸೋಲನುಭವಿಸಿದರು. ಮನಿಷಾ, ರೆಪೆಷಾಜ್ ಸುತ್ತಿನಲ್ಲಿ 7–2 ರಿಂದ ಮಂಗೋಲಿಯಾದ ಎನ್ಕ್‌ಜಿನ್ ಅವರನ್ನು ಮಣಿಸಿ ಪದಕದ ಸುತ್ತಿಗೆ ತಲುಪಿದ್ದರು.

ಪುರುಷರ ಫ್ರೀಸ್ಟೈಲ್‌ನಲ್ಲಿ ಸಂದೀಪ್ ಮಾನ್ (92 ಕೆ.ಜಿ) ರೆಪೆಷಾಜ್ ಸುತ್ತಿಗೆ ತಲುಪಿದರೂ, ತಾಂತ್ರಿಕ ಕೌಶಲದ ಆಧಾರದಲ್ಲಿ ಸ್ಲೊವಾಕಿಯಾದ ಟಿರ್ಬೆಕ್ ಸಾಕುಲೊವ್ ಅವರೆದುರು ಸೋತರು. 61 ಕೆ.ಜಿ. ಸ್ಪರ್ಧೆಯಲ್ಲಿ ಉದಿತ್, 70 ಕೆ.ಜಿ. ವಿಭಾಗದಲ್ಲಿ ಮನಿಷ್ ಗೋಸ್ವಾಮಿ, 79 ಕೆ.ಜಿ. ವಿಭಾಗದಲ್ಲಿ ಪರ್ವಿಂದರ್ ಸಿಂಗ್ ಅವರು ಪದಕ ಸುತ್ತಿಗೆ ತಲುಪಲು ವಿಫಲರಾದರು.

ಗ್ರೀಕೊ ರೋಮನ್ ವಿಭಾಗದಲ್ಲೂ ಭಾರತದ ಮಲ್ಲರು ನಿರಾಸೆ ಮೂಡಿಸಿದರು.

ಬೌನ್ಸಿ ಪಿಚ್‌ನಲ್ಲಿ ಪರದಾಡಿದ ಭಾರತ

ಮಮ್ಯಾಕೆ (ಆಸ್ಟ್ರೇಲಿಯಾ), (ಪಿಟಿಐ): ವೇಗದ ಬೌಲರ್ ಬ್ರೆಂಡನ್ ಡೊಗೆಟ್ ಅವರ ಪರಿಣಾಮಕಾರಿ ಬೌಲಿಂಗ್ ದಾಳಿಗೆ ಕುಸಿದ ಭಾರತ ‘ಎ’ ತಂಡವು ಗುರುವಾರ ಆಸ್ಟ್ರೇಲಿಯಾ ‘ಎ’ ತಂಡದ ವಿರುದ್ಧ ಆರಂಭವಾದ ಮೊದಲ ‘ಟೆಸ್ಟ್’ನಲ್ಲಿ ಕೇವಲ 107 ರನ್‌ಗಳಿಗೆ ಕುಸಿಯಿತು.

ದಿನದಾಟದ ಕೊನೆಗೆ ಆತಿಥೇಯ ತಂಡ 4 ವಿಕೆಟ್‌ಗೆ 99 ರನ್ ಗಳಿಸಿತು. ಮುಕೇಶ್ ಕುಮಾರ್ ಮತ್ತು ಪ್ರಸಿದ್ಧ ಕೃಷ್ಣ ತಲಾ ಎರಡು ವಿಕೆಟ್ ಪಡೆದರು.

ಡೊಗೆಟ್ ಅವರು 11 ಓವರುಗಳ ದಾಳಿಯಲ್ಲಿ ಕೇವಲ 15 ರನ್ನಿತ್ತು 6 ವಿಕೆಟ್ ಪಡೆದು ಜೀವನಶ್ರೇಷ್ಠ ಬೌಲಿಂಗ್ ಪ್ರದರ್ಶಿಸಿದರು. ಚೆಂಡಿಗೆ ಪುಟಿತ ನೀಡುತ್ತಿದ್ದ ಪಿಚ್‌ನಲ್ಲಿ ಅವರನ್ನು ಎದುರಿಸಲು ಭಾರತದ ಆಟಗಾರರು ಪರದಾಡಿದರು. ಕೇವಲ ಮೂವರು ಎರಡಂಕಿ ಮೊತ್ತ ಗಳಿಸಿದರು.

ಆರಂಭ ಆಟಗಾರರಾದ ಅಭಿಮನ್ಯ ಈಶ್ವರನ್ (7, 30ಎ) ಮತ್ತು ಋತುರಾಜ್ ಗಾಯಕವಾಡ (0) ಅವರು ವೇಗದ ಬೌಲರ್ ಜೋರ್ಡನ್ ಬಕ್ಕಿಂಗಮ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್‌ಗೆ ಕ್ಯಾಚಿತ್ತರು. ಅದರಲ್ಲೂ ಗಾಯಕವಾಡ ಅವರ ಕ್ಯಾಚನ್ನು ಕೀಪರ್ ಜೋಶ್ ಫಿಲಿಪ್ ಅವರು ಎಡಕ್ಕೆ ಜಿಗಿದು ಡೈವ್ ಮಾಡಿ ಹಿಡಿದ ರೀತಿ ಅಮೋಘವಾಗಿತ್ತು. ಅವರು ಒಟ್ಟು ಐದು ಕ್ಯಾಚ್‌ಗಳನ್ನು ಹಿಡಿದರು.

ಜೋರ್ಡನ್ ಆರಂಭದಲ್ಲಿ ಹೊಡೆತ ನೀಡಿದ ನಂತರ ಡೊಜೆಟ್ ಬ್ಯಾಟಿಂಗ್ ಬೆನ್ನೆಲುಬು ಮುರಿದರು.

ಈಶ್ವರನ್ ಮತ್ತು ನಿತೀಶ್ ಕುಮಾರ್ ರೆಡ್ಡಿ ಮೇಲೆ ಹೆಚ್ಚಿನ ಗಮನ ಇಡಲಾಗಿತ್ತು. ಇವರಿಬ್ಬರು ಬಾರ್ಡರ್‌– ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಆಡುವ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ. ಈ ಸರಣಿ 22 ರಂದು ಪರ್ತ್‌ನಲ್ಲಿ ಆರಂಭವಾಗಲಿದೆ. ಈಶ್ವರನ್ ಅವರು ಚೆಂಡಿಗೆ ಬೌನ್ಸ್ ನೀಡುವ ಪಿಚ್‌ನಲ್ಲಿ ಆಡಲು ಪರದಾಡುತ್ತಾರೆಂಬ ಮಾತು ನಿಜವಾಯಿತು. ಬೌಲಿಂಗ್ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರಿಗೂ ಸರಾಗವಾಗಿ ಆಡಲಾಗಲಿಲ್ಲ.

ಸಾಯಿ ಸುದರ್ಶನ್ (21) ಮತ್ತು ದೇವದತ್ತ ಪಡಿಕ್ಕಲ್ (36, 77ಎ, 4x2) ಸ್ವಲ್ಪ ಭರವಸೆ ಮೂಡಿಸಿದರೂ, ದೊಡ್ಡ ಮೊತ್ತ ಗಳಿಸಲಾಗಲಿಲ್ಲ. ಇವರಿಬ್ಬರನ್ನು ಬಿಟ್ಟರೆ ನವದೀಪ್ ಸೈನಿ (23) ಮಾತ್ರ ಡಬಲ್ ಡಿಜಿಟ್ ಮೊತ್ತ ಗಳಿಸಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಭಾರತ ಎ: 47.4 ಓವರುಗಳಲ್ಲಿ 107 (ಸಾಯಿ ಸುದರ್ಶನ್ 21, ದೇವದತ್ತ ಪಡಿಕ್ಕಲ್ 36, ನವದೀಪ್ ಸೈನಿ 23; ಜೋರ್ಡನ್ ಬಕ್ಕಿಂಗಮ್ 18ಕ್ಕೆ2, ಬ್ರೆಂಡನ್ ಡೊಗೆಟ್ 15ಕ್ಕೆ6); ಆಸ್ಟ್ರೇಲಿಯಾ ಎ: 39 ಓವರುಗಳಲ್ಲಿ 4 ವಿಕೆಟ್‌ಗೆ 99 (ನಥಾನ್ ಮ್ಯಾಕ್‌ಸ್ವೀನಿ ಔಟಾಗದೇ 29, ಬ್ಯು ವೆಬ್‌ಸ್ಟರ್ 33; ಮುಕೇಶ್ ಕುಮಾರ್ 30ಕ್ಕೆ2, ಪ್ರಸಿದ್ಧ ಕೃಷ್ಣ 18ಕ್ಕೆ2).

ದೇವಾಂಕ್, ಆಯಾನ್ ಸೂಪರ್ ಟೆನ್ ಸಾಹಸಕ್ಕೆ ಒಲಿದ ಗೆಲುವು

ಪೈರೇಟ್ಸ್‌ಗೆ ಮಣಿದ ದಬಾಂಗ್ ದಿಲ್ಲಿ

ಹೈದರಾಬಾದ್: ಎರಡು ಬಾರಿ ಆಲೌಟ್ ಜತೆಗೆ ಸೂಪರ್ ಟ್ಯಾಕಲ್‌ನಲ್ಲಿ ಮಿಂಚಿದ ಪಟ್ನಾ ಪೈರೇಟ್ಸ್ ತಂಡ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಪಂದ್ಯದಲ್ಲಿ ದಬಾಂಗ್ ದಿಲ್ಲಿ ತಂಡವನ್ನು 14 ಅಂಕಗಳಿಂದ ಪರಾಭವಗೊಳಿಸಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಮೊದಲ ಪಂದ್ಯದಲ್ಲಿ ಮೂರು ಬಾರಿಯ ಚಾಂಪಿಯನ್ಸ್ ಪಟ್ನಾ 44-30 ಅಂಕಗಳಿಂದ ದಬಾಂಗ್ ಡೆಲ್ಲಿ ತಂಡಕ್ಕೆ ಸೋಲುಣಿಸಿತು. ಇದರೊಂದಿಗೆ ಪಟನಾ ಪೈರೇಟ್ಸ್ ಹಾಲಿ ಲೀಗ್‌ನಲ್ಲಿ ಎರಡನೇ ಜಯ ದಾಖಲಿಸಿತು.

ಹಿಂದಿನ ಪಂದ್ಯದಲ್ಲಿ ತೆಲುಗು ಟೈಟನ್ಸ್ ವಿರುದ್ಧ ಕೇವಲ ಎರಡು ಅಂಕಗಳಿಂದ ವೀರೋಚಿತ ಸೋಲನುಭವಿಸಿದ್ದ ಪೈರೇಟ್ಸ್ ಡೆಲ್ಲಿ ವಿರುದ್ಧ ಅಮೋಘ ಪ್ರದರ್ಶನ ನೀಡಿತು. ಪಂದ್ಯದ ಉಭಯ ಅವಧಿಗಳಲ್ಲಿ ಪುಟಿದೇಳುವಲ್ಲಿ ವಿಫಲವಾದ ದಬಾಂಗ್ ದಿಲ್ಲಿ ಹ್ಯಾಟ್ರಿಕ್ ಸೋಲಿಗೆ ಗುರಿಯಾಯಿತು.

ಪೈರೇಟ್ಸ್ ಪರ ದೇವಾಂಕ್ (12 ಅಂಕ), ಆಯಾನ್ (12 ಅಂಕ) ಸೂಪರ್ 10 ಸಾಹಸ ಮಾಡಿದರೆ, ದಬಾಂಗ್ ದಿಲ್ಲಿ ಪರ ಅಶು ಮಲಿಕ್ (10 ಅಂಕ) ಮತ್ತು ವಿನಯ್ (10 ಅಂಕ) ವೈಯಕ್ತಿಕ ಗರಿಷ್ಠ ಅಂಕ ಗಳಿಸಿದರು. 20 ರಿಂದ 30 ನಿಮಿಷಗಳ ಅವಧಿಯಲ್ಲಿ ಸಾಂಘಿಕ ಹೋರಾಟ ನೀಡಿದ ಡೆಲ್ಲಿ ಆಟಗಾರರು ಪಟ್ನಾ ದಾಳಿಯನ್ನು ಸಮರ್ಥವಾಗಿ ನಿಭಾಯಿಸಿದರಲ್ಲದೆ, ಹಿನ್ನಡೆಯನ್ನು 24-31ಕ್ಕೆ ತಗ್ಗಿಸಿದರು. ಆದರೆ ದ್ವಿತೀಯಾರ್ಧದಲ್ಲಿ ದೇವಾಂಕ್ ಪ್ರಬಲ ದಾಳಿ ನಡೆಸಿದ ಪರಿಣಾಮ ಪಟ್ನಾ ತಂಡ ಮೇಲುಗೈ ಸಾಧಿಸಿತು.

ಟೂರ್ನಿಗೆ ನವೆಂಬರ್ 1ರಂದು ವಿರಾಮ ದಿನವಾಗಿದ್ದು, 2ರಿಂದ ಪಂದ್ಯಗಳು ಪುನರಾರಂಭವಾಗಲಿವೆ.

ಯು ಮುಂಬಾಗೆ ರೋಚಕ ಜಯ: ಯು ಮುಂಬಾ ತಂಡವು ಇಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಗುರುವಾರ ಜೈಪುರ ಪಿಂಕ್ ಪ್ಯಾಂಥರ್ಸ್ ವಿರುದ್ಧ ಎರಡು ಅಂಕಗಳ ರೋಚಕ ಜಯ ಸಾಧಿಸಿತು.

ಮುಂಬಾ ತಂಡವು 39–37ರಿಂದ ಜೈಪುರ ತಂಡದ ಎದುರು ಗೆದ್ದಿತು.

ದಬಾಂಗ್ ಡೆಲ್ಲಿ ತಂಡದ ಆಟಗಾರರು ರೇಡ್ ಮಾಡಿದ ಪಟ್ನಾ ಪೈರೇಟ್ಸ್ ತಂಡದ ಆಟಗಾರನನ್ನು ಹಿಡಿದೆಳೆದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

ಕೆಲಸಆದ ನಂತರ ಕಾಣಿಕೆ ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಧನವಶ, ಜನವಶ, ಭೂಮಿ ವಶ, ಶತ್ರುನಾಶ, ಇನ್ನೂ ನಿಮ್ಮ ಸಮಸ್ಯೆ ಏನೇಯಿದ್ದರೂ ಕಾಮಾಕ್ಯಕ್ಷೇತ್ರದ ಅಥರ್ವಣ ಆಳಂದಿಭೈರವಿ ತಾಂತ್ರಿಕವಿದ್ಯೆಯಿಂದ ಕೇವಲ 11ಗಂಟೆಯಲ್ಲಿ ಫೋನಿನ ಮೂಲಕ 100%ಶಾಶ್ವತ ಪರಿಹಾರ. ಕರೆಮಾಡಿ: 9686168466.

ಪ್ರವಾಸ

Travel

ತತ್ವಮಸಿ ಟೂರ್ಸ್ ದೀಪಾವಳಿ ಪ್ರಯುಕ್ತ ವಿಶೇಷ ರಿಯಾಯಿತಿ ಪಡೆದುಕೊಳ್ಳಿ, ಕೆಲವೇ ಸೀಟುಗಳು ಲಭ್ಯ 08.11.2024 ರಿಂದ 11 ದಿನಗಳ ಸಂಪೂರ್ಣ ಮಧ್ಯಪ್ರದೇಶ ಹಾಗು ಜ್ಯೋತಿರ್ಲಿಂಗದರ್ಶನ 09.11.2024 ರಿಂದ 6 ದಿನಗಳ ಅಯೋಧ್ಯ,ಕಾಶಿ ಪ್ರಯಾಗ್‌ರಾಜ್ ಗಯಾ. ಸಂಪರ್ಕಿಸಿ 7349228006 7795787484

ಶ್ರೀರಾಜರಾಜೇಶ್ವರಿ ಟೂರ್ಸ್ 8.11.2024, 5.12.24 3ದಿನ ಅಹೋಬಿಲಂ ನವನಾರಸಿಂಹ. 23.11.2024 5ದಿನ ಕಾಶಿ, ಅಯೋಧ್ಯ, ಪ್ರಯಾಗ್ ರಾಜ್. ಸಂಪರ್ಕಿಸಿ: 9739618243.

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 04.12.2024 13.12.2024 ರಿಂದ 8/11/17 ದಿನಗಳ ಗುಜರಾತ್ ರಾಜಸ್ಥಾನ್. 12.12.2024 28.02.2025 ರಿಂದ 8 ದಿನಗಳ ಕಾಶಿ,ಗಯಾ,ಅಯೋಧ್ಯಾ. 22.12.2024 ರಿಂದ 7 ದಿನಗಳ ತಮಿಳುನಾಡು ಕೇರಳ. 23.12.2024 ರಿಂದ 7 ದಿನಗಳ ಹೈದ್ರಾಬಾದ್ ಮಂತ್ರಾಲಯ ಶ್ರೀಶೈಲ. 12.12.2024 17.02.2025 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 17.01.2025 25.01.2025 ರಿಂದ 6 ದಿನಗಳ ದುಬೈ,ಅಬುದಾಬಿ,ಶಾರ್ಜಾ. 17.01.2025 ರಿಂದ 10 ದಿನಗಳ ಕಾಂಬೋಡಿಯ, ವಿಯೆಟ್ನಂ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

18.11.2024 ರಿಂದ 7 ದಿನಗಳ ಉತ್ತರಭಾರತ ಪ್ರವಾಸ ಲಕ್ನೋ,ನೈಮಿಶಾರಣ್ಯ ಅಯೋಧ್ಯ,ಪ್ರಯಾಗ್‌ರಾಜ್ ಚಿತ್ರಕೂಟ ಕಾಶಿ. ವಿದೇಶ ಪ್ರವಾಸ ದುಬೈ ಶಾಪಿಂಗ್ ಫೆಸ್ಟಿವಲ್ 2025, 5 ರಾತ್ರಿ 6 ಹಗಲು 09.01.2025 15.01.2025 ಮತ್ತು 24.01.2025. ಸಂಪರ್ಕಿಸಿ: ಅನಿತಾ ಟ್ರಾವೆಲ್ಸ್ ಶೇಷಾದ್ರಿಪುರ ಬೆಂಗಳೂರು-20. 9448602641 7760884305.

ಪ್ರವಾಸ 17/12/2024 ಗುಜರಾತ್ ಸೋಮನಾಥ, ನಾಗೇಶ್ವರ, ಮಾತೃಗಯ, ಪಟೇಲ್ ಪ್ರತಿಮೆ 7 ದಿನಗಳು 30/12/2024 ಕಲ್ಕತ್ತಾ, ಪುರಿ ಜಗನ್ನಾಥ 6 ದಿನ. 31/12/2024 ಶಿರಡಿ, ಮೂರು ಜ್ಯೋತಿರ್ಲಿಂಗ 4 ದಿನ. ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

LG
ಪೈ ಇಂಟರ್‌ನ್ಯಾಶನಲ್
India ka Celebration
This Diwali, celebrations will be brighter nationwide with exciting offers on select LG products
Win LG Dream Home Package
EVERY DAY
(Side-by-Side Refrigerator, Front Load Washing Machine, Microwave Oven, Water Purifier, Air Conditioner & OLED)
Grab Assured Gifts
Up to ₹51* CRORES
To participate, send an SMS <"First Name" "Last Name" GTM Code> to 7835073507
LIFES GOOD OFFERS*
Up to 26%* Cashback (On Select Debit/Credit Cards) Max. up to ₹26000 (On Select Models)
₹1* Down Payment (Rest in EMIs) (On Select Models)
Fixed EMI ₹888* Onwards (On Select Models)
ಮೆಗಾ ಫೆಸ್ಟಿವಲ್ ಸೇಲ್
ಗೆಲ್ಲಿರಿ 15 ಕೋಟಿ ವರೆಗೂ ಪೈ ಲಾಯಲ್ಟಿ ಪಾಯಿಂಟ್ಸ್*
ಗೆಲ್ಲಿರಿ 20 ಕಾರುಗಳು
ಗೆಲ್ಲಿರಿ ₹30 ಲಕ್ಷದ ವರೆಗೂ ಉಚಿತ ಶಾಪಿಂಗ್*
5-YEAR GUARANTEED New Smart Platform Experience
LG OLED evo AI The Next Generation of LG AI TV
OLED CIRCLE Get benefits up to ₹50000*
3 YEAR WARRANTY
EMI STARTS FROM: ₹1,999
LG QNED AI
UP TO 30% OFF ON LG SOUNDBAR* (With Select LG TVs)
FIXED EMI STARTING FROM ₹1999*
1 EMI FREE (Limited XBOOM Models)
EMI STARTS FROM: ₹1,999
LG NanoCell AI
UP TO 30% OFF ON LG SOUNDBAR* (With Select 4K TVs)
FIXED EMI STARTING FROM ₹1999*
1 EMI FREE (On Select Paper Finance)
• Nano Color / a5 AI Processor 4K Gen 6
• AI Picture Pro, AI Sound Pro (Virtual 5.1.2 Up-mix)
EMI STARTS FROM: ₹1,999
LG UHD AI
UP TO 30% OFF ON LG SOUNDBAR* (With Select 4K TVs)
FIXED EMI STARTING FROM ₹999*
1 EMI FREE (On Select Paper Finance)
• Real 4K Display / a5 AI Processor 4K Gen 7
• 4K Upscaling, Dynamic Tone Mapping, AI Brightness Control, Local Dimming
EMI STARTS FROM: ₹999
SIDE-BY-SIDE REFRIGERATOR
LG InstaView Door-in-Door™
FREE* MINI REFRIGERATOR Worth up to ₹11999* (On Selected Models)
FIXED EMI STARTING FROM ₹4999*
FREE* 8 PIECE BOROSIL GLASS LOCK KIT Worth ₹5000 (On Select Models)
EMI STARTS FROM: ₹4,999
DOUBLE DOOR REFRIGERATOR
AI ThinQ | DoorCooling+™ | Wi-Fi Convertible
FIXED EMI STARTING FROM ₹1499*
EMI STARTS FROM: ₹1,499
MICROWAVE
WiFi Enabled LG Microwave Ovens SCAN TO COOK with Stylish Look
88% Less Oil Diet Fry
FREE* GLASS BOWL SET (On Select Models)
EMI STARTING FROM ₹1499* ₹1999* (On Select Models)
EMI STARTS FROM: ₹1,499
LG WASHER DRYER
The New Way of Washing & Drying
AI DD | Steam™ | LG ThinQ™ | MOTION DD | TurboWash™
FIXED EMI STARTING FROM ₹3999* (On Select Models)
10Kg & Above
EMI STARTS FROM: ₹3,999
TOP LOAD WASHING MACHINE
AI DD | Steam™ | LG ThinQ™ | MOTION DD | TurboWash™
CONSUMER FINANCE EMI 1499 (On 10 Kg and Above Models)
EMI STARTS FROM: ₹1,499
DISHWASHER
10 YEAR* WARRANTY ON INVERTER DIRECT DRIVE
FIXED EMI STARTING FROM ₹2999*
EMI STARTS FROM: ₹2,999
LG HOT & COLD AIR CONDITIONERS
You Decide Your Season
DualCool | Hot & Cold | 5 Star Series
Dual Inverter Compressor
FIXED EMI STARTING FROM ₹1999* (Offer on 5 Star / Hot and Cold ACs)
EMI STARTS FROM: ₹1,999
*T&C Apply.
AMERICAN EXPRESS
AU SMALL FINANCE BANK
AXIS BANK
BOBCARD
DBS
FEDERAL BANK
HDFC BANK
ICICI Bank
IDFC FIRST Bank
IndusInd Bank
J&K Bank
kotak
RBL BANK
SBI card
PRODUCT & SERVICE RELATED ENQUIRIES +91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY FOR REFRIGERATORS, WASHING MACHINES, LED TV'S
24 HOURS DELIVERY CHALLENGE*
GET 100% ADDITIONAL LUCKY DRAW COUPON* IF NOT DELIVERED WITHIN 24 HOURS (Within City Limits)
WE ARE CELEBRATING 220+ OUTLETS
STORE LOCATOR

Upto ₹11,000 CASHBACK
FREE BT Headset Worth ₹1,799
ಪೂರ್ವಿಕಾ
ನಮ್ಮ ಮನೆ ದೀಪಾವಳಿ
Upto 10% CASHBACK TVS CREDIT
CELEBRATING 20 YEARS OF POORVIKA
ವಿಶ್ವದ ಆಪಿಗಳ ರಾಣಿ, ಅಮೃತ ಉಣಿಸುವ ಮಣಿ,
ಮಂತ್ರಾಕ್ಷತೆಯ ಭರಣಿ...!
ಗಂಧದ ಗುಡಿ, ಚಂದದ ನುಡಿ,
ಕನ್ನಡಕ್ಕಾಗಿ ನೀ ಮಿಡಿ...!
ಕನ್ನಡ ನಾಡಿನ ಸಮಸ್ತ ಜನತೆಗೆ ಪೂರ್ವಿಕಾ ವತಿಯಿಂದ
"ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು"
WIN GOLD VOUCHER ₹1,00,000
WIN GIFT VOUCHER ₹5,000
Buy Above ₹5,000 & Get a chance to WIN
Buy Smartphone Below ₹12,000 Just Pay ₹499 & Get True Wireless Worth ₹3,499
Buy Smartphone Between ₹12,001 to ₹25,000 Just Pay ₹799 & Get Calling Smartwatch Worth ₹5,299
ಸ್ಪೆಷಲ್ ಸೇಲ್ ಕಂಟಿನ್ಯೂಸ್
Buy Smartphone Between ₹25,001 to ₹40,000 Just Pay ₹999 & Get Calling Smartwatch Worth ₹7,999
Buy Smartphone Above ₹40,000 Just Pay ₹7,999 & Get Robot Vacuum Worth ₹24,999
SAMSUNG Galaxy Z Fold 6 5G Upto ₹20,000 Discount 24 Month No Cost EMI EMI ₹6,042
SAMSUNG Galaxy S24FE 5G EMI ₹5,500 Upto 12 Months No Cost EMI
SAMSUNG Galaxy S24 Ultra 5G Upto ₹8,000 Discount 24 Month No Cost EMI EMI ₹5,417
SAMSUNG Galaxy A16 5G Upto ₹1,000 Cashback EMI ₹1,583
SAMSUNG Galaxy A35 5G 8+128 GB ₹30,999 ₹25,999 12 Month No Cost EMI EMI ₹2,167
iPhone 16 (128 GB) MRP ₹79,900 Effective Price ₹46,900 PER DAY EMI ₹107
iPhone 16 Plus (128 GB) MRP ₹89,900 Effective Price ₹56,900 PER DAY EMI ₹121
iPhone 15 (128 GB) MRP ₹79,900 Effective Price ₹37,900 PER DAY EMI ₹94
Buy iPhone & Get FREE Apple 20W USB-C Power Adapter Worth ₹1,900
Protect your iphone Start @ ₹1,999 Upto 50% OFF Accidental Damage & Liquid Damage Protection
iPad Wifi 10th Gen 10.9 inch (A14 +64GB) ₹3,000 Instant Cashback 24 Month No Cost EMI EMI ₹1,454
Upto ₹5,000 Instant Cashback on Credit Cards of ICICI Bank SBI card kotak *Effective Price after Store Discount, Exchange Value Exchange Bonus & Bank Cashback
NOTHING CMF Phone 1 / Phone (2a) Phone (2a) Plus Starts @ ₹12,999 Upto ₹3,000 ICICI Bank Instant Cashback Upto ₹3,000 Discount
vivo Y300 Plus 5G (8+128GB) ₹23,999 Effective Price ₹21,999 Upto 85% OFF on Calling Smartwatch Worth ₹5,299
vivo V40 5G (8+128GB) ₹34,999 Effective Price ₹31,499 Upto 85% OFF on Calling Smartwatch Worth ₹7,999
OPPO Reno 12 5G (8+256GB) ₹32,999 Effective Price ₹30,999 Upto 85% OFF on Calling Smartwatch Worth ₹7,999
OPPO A3 Pro 5G (8+128GB) ₹17,999 Effective Price ₹15,999 Upto 85% OFF on Calling Smartwatch Worth ₹5,299
ONEPLUS Nord CE4 Lite 5G (8+256GB) ₹22,999 Effective Price ₹19,999 EMI ₹1,749
SAMSUNG Galaxy F15 5G (4+128GB) Upto ₹1,000 DISCOUNT 1 RUPEE DOWN PAYMENT EMI @ ₹2,167
Xiaomi 14 Civi 5G (8+256GB) ₹42,999 Effective Price ₹40,999 Upto 65% OFF Vacuum Cleaner Worth ₹24,999
Redmi Note 13 5G (6+128GB) ₹16,999 Effective Price ₹14,999 Upto 85% OFF ON TWS Worth ₹3,499
itel A50 (4+64GB) ₹7,399 ₹5,999 Upto 85% OFF ON TWS Worth ₹3,499
TECNO Spark 20 Pro 5G (8+256GB) ₹21,999 ₹13,999 FREE Calling Smartwatch Worth ₹5,299
realme C65 5G (8+128GB) Upto 7.5% Instant Cashback Upto 85% OFF on Calling Smartwatch Worth ₹5,299
realme 13 5G (8+128GB) ₹17,999 Effective Price ₹14,399 Upto 85% OFF on Calling Smartwatch Worth ₹5,299
XIAOMI Smart TV A Series 32" EMI ₹1,444 Upto 7.5% Instant Cashback
XIAOMI Smart TV X Series 43" EMI ₹2,417 Upto 12% Instant Cashback
*T&C Apply For Selected Brands & Models
LAPTOP Starts @ ₹20,990
hp VICTUS GAMING EMI @ ₹4,886 FREE Laptop Bag Keyboard & Mouse Combo Worth ₹3,478 • AMD Ryzen 5 processor • AMD Radeon RX 6500M Graphics • 8GB+512GB SSD
DELL INSPIRON 3530 EMI @ ₹4,797 FREE Laptop Bag Keyboard & Mouse Combo Worth ₹3,478 • 13th Generation Intel Core i5-1334U Processor • Intel UHD Graphics • 16GB+512GB SSD
ZEBRONICS Zeb-Yoga 2 BT Headset 50% Discount ₹799
conekt Slay Pro Smartwatch 80% Discount ₹1,699
conekt Cadence Plus 80% Discount ₹799
Personal Fan STARTS@ ₹499
YARR Type C Earphone 65% Discount ₹499
FIRE-BOLTT Metal Matrix Smartwatch 85% Discount ₹1,999
HDFC BANK Upto 12% INSTANT DISCOUNT On Credit card & Debit card EMIs
ICICI Bank 7.5% INSTANT DISCOUNT on Credit & Debit Cards Offer Valid from 24th Oct 2024 to 01st Nov 2024.
BAJAJ FINSERV ONE INDIA ONE FINANCER #EMI Anywere
24 Month No Cost EMI
FREE ONE TIME SCREEN REPLACEMENT
SCAN QR CODE TO CHAT ONLINE
Upto 12% INSTANT DISCOUNT On CREDIT CARDS
Customer Helpline : 99406 88855
Shop online @ www.poorvika.com
POORVIKA